
ಗಂಧ

# ಅಭಿನಯ

ಉಷಾ ನವರತ್ನರಾಮ್

ವರ್ಧಮಾನ ಪ್ರಕಾಶನ
ಬೆಂಗಳೂರು

**ABHINAYA**

by Usha NavarathnaRam, Published by Vardhamana Prakashana, 443, 1st Main, 44th Cross, 8th Block Jayanagar, Bangalore-82

First Edition—1985

Copyright Author

Design P. S Kumar

Made & Printed in India by
ASHWATH PRINTERS
Bangalore

# ಮುನ್ನುಡಿ

ಜೀವನವೊಂದು ನಾಟಕ ರಂಗ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಬದುಕಿನ ರಂಗದಲ್ಲಿ ಅಭಿನಯಿಸಲೇಬೇಕಾಗುತ್ತದೆ ಮೇಲೆ ತೋರುವ ವ್ಯಕ್ತಿಯೊಂದು ಬಗೆಯಾದರೆ ಒಳಗಿನ ಅಂತರಾತ್ಮದ ವ್ಯಕ್ತಿಯೇ ಬೇರೆ ಈ ಸೋಗಿನ ಬಲೆಯಲ್ಲಿ ಪ್ರತಿಯೊಬ್ಬನೂ ಸಿಲುಕಿ ತಳಮಳಿಸುತ್ತಾನೆ

ನನ್ನ ಅನೇಕ ಸಣ್ಣಕತೆಗಳನ್ನು ಒಂದು ಹೊತ್ತಿಗೆಯಲ್ಲಿ ತರಲು ಆಸಕ್ತಿ ವಹಿಸಿ ಈ 'ಅಭಿನಯ'ದ ಸಣ್ಣಸಂಕಲನವನ್ನು ವರ್ಧಮಾನ ಪ್ರಕಾಶನದವರು ನಿಮ್ಮ ಮುಂದಿಡುತ್ತಿದ್ದಾರೆ ನನ್ನ ಬರವಣಿಗೆಯಲ್ಲಿ ಅತ್ಯಂತ ಆಸಕ್ತಿ ವಹಿಸಿ, ಈ ಪುಸ್ತಕವನ್ನು ನಿಮ್ಮ ಮುಂದಿಟ್ಟಿದ್ದಕ್ಕಾಗಿ ನನ್ನ ವಂದನೆಗಳು ಸುಂದರವಾಗಿ ಮುಖಪುಟ ಚಿತ್ರಿಸಿರುವ ಕಲಾವಿದರಿಗೂ, ಅಂದವಾಗಿ ಮುದ್ರಿಸಿದ ಅಶ್ವಥ್ ಪ್ರಿಂಟರ್ಸ್‌ರವರಿಗೂ ನನ್ನ ವಂದನೆಗಳು

7-2-85

—ಉಷಾ ನವರತ್ನರಾಮ್

# ದೈವಚಿತ್ತ

ಆಚಾರ್ಯರು ದೇವಸ್ಥಾನದ ಬಾಗಿಲು ತೆರೆದು ಅಮ್ಮನವರಿಗೆ ದೂರದಿಂದಲೇ ಕೈ ಮುಗಿದು, ಮಿಂದು ಮಡಿಯುಟ್ಟು ಬರಲು ಗರುಡಗಂಬ ದಾಟಿದಾಗ ಬೆಳಕು ಇನ್ನೂ ನಿರುತ್ಸಾಹದಿಂದ ಪಸರಿಸುತ್ತಿತ್ತು. ಅಲ್ಲಲ್ಲಿ ಎಲ್ಲೋ ಒಂದೊಂದು ನಿದ್ರೆಯಿಂದ ಎಚ್ಚೆತ್ತ ಪಕ್ಷಿಯ ಇಂಚರ, ದೇವಸ್ಥಾನದ ಮುಂದಿದ್ದ ಪುಷ್ಕರಣಿಯತ್ತ ಆಚಾರ್ಯರು ಹೆಜ್ಜೆ ಹಾಕಿದರು. ಕೊರೆಯುತ್ತಿದ್ದ ನೀರಿನಲ್ಲಿ ಮೂಗು ಹಿಡಿದು ಮೂರು ಮುಳುಗು ಹಾಕಿ ಬರಿಯ ಕೈಯಿಂದಲೇ ಮೈಯನ್ನು ಗಸಗಸನೆ ತಿಕ್ಕಿ ಮತ್ತೆ ಮೂರು ಮುಳುಗು ಹಾಕಿದಾಗ ಮೈಗಂಟಿದ್ದ ಚಳಿ ಕೊಂಚ ಬಿಟ್ಟಿತು. ಪೂರ್ವ ದಿಕ್ಕಿನತ್ತ ಕೈಮುಗಿದು, ಬೊಗಸೆಯಲ್ಲಿ ನೀರು ಹಿಡಿದು ಇನ್ನೂ ಕಣ್ತೆರೆಯದ ಅರುಣದೇವನಿಗೆ ಅರ್ಘ್ಯ ಬಿಟ್ಟು ಸರಸರನೆ ಉಟ್ಟ ಒದ್ದೆ ಬಟ್ಟೆಯಲ್ಲೇ ದೇವಸ್ಥಾನದತ್ತ ಹೆಜ್ಜೆ ಹಾಕಿದರು. ಇಂದು ಮಾಘ ಹುಣ್ಣಿಮೆ–ಅಮ್ಮನವರ ಪೂಜೆ ಬಿಸಿಲೇರುವ ಮುನ್ನವೇ ಆಗಬೇಕು. ಅಮ್ಮನವರ ವಿಗ್ರಹಕ್ಕೆ ಹೂವಿನ ಅಲಂಕಾರವಾಗಬೇಕು. ದೇವಸ್ಥಾನ ಕಟ್ಟಿಸಿರುವ ದೊಡ್ಡ ಸೆಟ್ಟರು, ಅವರ ಸಂಸಾರ ಪೂಜೆಯ ಹೊತ್ತಿಗೆ ಬಂದರೆ ಕುಂಕುಮಾರ್ಚನೆಯಾಗಬೇಕು , ಐದು ಬಗೆಯ ವ್ರತದಲ್ಲಿ ಮಾಡುವ ನೈವೇದ್ಯವಾಗಬೇಕು, ತಾನು ಕೆಲಸ ಮುಗಿಸಿ ಸೆಟ್ಟರ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಹೋಗಬೇಕು. ತಮಗೆ ಎಲ್ಲವೂ ಅವಸರದ ಕೆಲಸವೇ.

"ತಾಯೀ, ಅಮ್ಮಾ ಭಗವತೀ" ದೇವಸ್ಥಾನದ ಹೊರವಲಯದಲ್ಲಿ ನಿಂತಲ್ಲೇ ಕೈಮುಗಿದರು. ಗರ್ಭಗುಡಿಯತ್ತ ಹೆಜ್ಜೆ ಹಾಕಿದಾಗ ನಂದಾದೀಪದ ಮಂದ ಬೆಳಕಿನಲ್ಲಿ ಅಮ್ಮನವರ ವಿಗ್ರಹ ಮಸಕು ಮಸಕಾಗಿ ಕಾಣುತ್ತಿತ್ತು. ಹಿಂದಿನ ಸಂಜೆಯ ಪೂಜೆಗೆ ಸರಸ್ವತಮ್ಮನ

ಮನೆಯಿಂದ ಬಂದಿದ್ದ ಮಲ್ಲಿಗೆ ಕನಕಾಂಬರದ ಹಾರ ವಿಗ್ರಹದ ಮೇಲೆ ಅರಳಿ ಸುಗಂಧ ಬೀರಿತ್ತು. ಧೂಪ, ಕುಂಕುಮ, ಗಂಧ, ಪಚ್ಚ ಕರ್ಪೂರದ ಪರಿಮಳ ಎಲ್ಲೆಡೆ ಪಸರಿಸಿದ್ದು ಆಚಾರ್ಯರ ಉದ್ವಿಗ್ನ ಮನಸ್ಸು ಅರಳಿದ ಹೂವಿನಷ್ಟೇ ಹಗುರವಾದಂತಾಯಿತು. ತಮ್ಮ ತಾಪತ್ರಯಗಳನ್ನೆಲ್ಲ ಮರೆತಂತಾಗಿತ್ತು. ಅಮ್ಮನವರ ವಿಗ್ರಹಕ್ಕೆ ಅಡ್ಡಬಿದ್ದರು.

ನಮಸ್ಕರಿಸಿ ಎದ್ದು ನಂದಾದೀಪ ದೊಡ್ಡದು ಮಾಡಿ ಗರ್ಭಗುಡಿಯ ಎಡಮೂಲೆಯಲ್ಲಿ ಒಣಗಿ ಹಾಕಿದ್ದ ಮಡಿಯನ್ನುಟ್ಟು, ಒದ್ದೆ ಮಡಿಯನ್ನು ಕೈಗೆತ್ತಿಕೊಂಡು ಹಿಂದೆ ಒಣಗಿ ಹಾಕುವ ಸಲುವಾಗಿ ಮತ್ತೆ ಹೊರಬಂದರು. ಹೊರಗೆ ಬೀಸುತ್ತಿದ್ದ ತಣ್ಣನೆಯ ಗಾಳಿ ಮೈಗೆ ತಗುಲಿದಾಗ "ಅಮ್ಮಾ ಭಗವತೀ" ಎಂದು ಸಣ್ಣಗೆ ನಡುಗಿದರು. ಅವರ ಧ್ವನಿಯೇ ಪ್ರತಿಧ್ವನಿಸಿದಂತಾಗಿ ಎಲ್ಲೋ ಮೂಲೆಯಲ್ಲಿ ಏನೋ ಸರಿದಾಡಿದಂತಾಯಿತು. ಮಂದ ಬೆಳಕಿನಲ್ಲಿ ಕಣ್ಣು ಕಿರಿದು ಮಾಡಿ ಆಚಾರ್ಯರು ಸುತ್ತ ದೃಷ್ಟಿ ಹೊರಳಿಸಿದರು.

"ಯಾರು ? ಯಾರಲ್ಲಿ ?"

ಅವರಿಗುತ್ತರವಾಗಿ ಕೇಳಿಸಿದ್ದು ಎಚ್ಚರಗೊಂಡು ಹಾರಾಡುತ್ತಿದ್ದ ಪಕ್ಷಿಗಳ ಕಲರವವೊಂದೇ.

"ಯಾರೋ ಯಾರೋ ? ಇಷ್ಟೊತ್ತನಲ್ಲಿ ದೇವಸ್ಥಾನದೊಳಗೆ ಬಂದಿರೋರೂ ?" ಆಚಾರ್ಯರು ಧ್ವನಿಯೇರಿಸಿದರು. ದೀಪ ಹಾಕಿ ನೋಡೋಣವೆಂದರೆ ಅವರ ನಿತ್ಯಕರ್ಮಕ್ಕೆ ಧಕ್ಕೆ ಬಂದಂತಾಗುತ್ತದೆ. ಒದ್ದೆ ಮಡಿ ಹಾಕಿ ಅಮ್ಮನವರಿಗೆ ಕರ್ಪೂರದ ಮಂಗಳಾರತಿ ಮಾಡಿದ ನಂತರವೇ ಅವರು ದೇವಸ್ಥಾನದ ವಿದ್ಯುದ್ದೀಪ ಹೊತ್ತಿಸುತ್ತಿದ್ದುದು. ಇಂದು ತಮ್ಮಲ್ಲಿ ಏಕೋ ಮೂಡಿ ಬಂದ ಭಯಕ್ಕಾಗಿ ಆ ನಿಯಮದ ಉಲ್ಲಂಘನೆ ಮಾಡಲು ಇಚ್ಛಿಸಲಿಲ್ಲ. ತಾಯಿ ಭಗವತಿಯಿರುವಾಗ ತಮಗೇತರ ಭಯ !

ಮತ್ತೆ ಸರಿದಾಡಿದ ಸದ್ದು. "ಯಾರದು ?. ಇತ್ಲಾಗೆ ಬರ್ರಿದ್ರೆ ಊರಿನೋರ್ನ ಕರ್ರೊಂಡ್ಬರ್ಬೇಕಾಗುತ್ತೆ."

ಮಂದ ಬೆಳಕಿನಲ್ಲಿ ಆಚಾರ್ಯರು ಕಂಡದ್ದು ಅಸ್ಪಷ್ಟವಾಗಿ ಮೂಲೆಯಲ್ಲಿ ಅಡಗಿದ್ದ ಬಿಳಿಯ ಹೊದಿಕೆಯ ಮುದ್ದೆಯೊಂದನ್ನು. "ಯಾರಯ್ಯ ?" ಆಚಾರ್ಯರು ಅದರತ್ತ ಸರಿದಾಗ ಮೆಲ್ಲನೆದ್ದು ನಿಂತಿತು, ಹೊದಿಕೆಯಲ್ಲಿ

ವೈಯುಡಗಿಸಿದ ನಾಲ್ಕಡಿಯ ವಾಮನಾವತಾರವೊಂದು, ಮುಖ ಸರಿಯಾಗಿ ಕಾಣವಿದ್ದರೂ ಎದುರಿಗಿದ್ದ ವ್ಯಕ್ತಿ ಪುಟ್ಟ ವಾಲಕನೆಂದು ಅವರಿಗೆ ಅರಿವಾಯಿತು

"ಯಾರಪ್ಪಾ ನೀನು ? ಇಷ್ಟೊತ್ನಲ್ಲಿ ದೇವಸ್ಥಾನದೊಳ್ಗ ಯಾಕ್ಬಂದೆ ? ಯಾರನ್ನ ಕೇಳಿ ಬಂದ ?" ಆಚಾರ್ಯರು ಬೇಡವೆಂದುಕೊಂಡರೂ ಅವರ ಧ್ವನಿ ಕೊಂಚ ಗಡುಸಾಗಿತ್ತು

ಬೇರೆ ಊರ್ನಿಂದ ನಡಿರಾತ್ರೀಲಿ ಬಂದೆ ಎಲ್ಲೂ ಇಳ್ಕೊಳ್ಳೋಕೆ ಸ್ಥಳ ಇರ್ಲಿಲ್ಲ ಇಲ್ಲೇ ಗರುಡಗಂಬದ ಮರೇಲಿ ಮಲ್ಗಿದ್ದೆ ನೀವು ದೇವಸ್ಥಾನದ ಬಾಗಿಲು ತೆಗ್ಯೋತೂ ಚಳಿ ಆಗ್ತಾ ಇದ್ದಿದ್ರಿಂದ ಒಳ್ಗ ಬಂದು ಮುದುರ್ಕೊಂಡು ಕುಳಿತೆ "

ಆ ಧ್ವನಿಯಲ್ಲಿ ಭಯವಾಗಲಿ, ನಡುಕವಾಗಲಿ ಇರದೆ ಧೀಮಂತವಾಗಿತ್ತು ಧ್ವನಿಯನ್ನು ಗಮನಿಸಿದಾಗ ಆಚಾರ್ಯರು ಆ ಹುಡುಗನಿಗೆ ಹತ್ತು ಹನ್ನೆರಡು ವರ್ಷವಿರಬಹುದೆಂದುಕೊಂಡರು

"ನಿನ್ನ ಹೆಸರೇನು ?"

"ಮಾಧೂ "

"ಯಾವ್ಜನ ?" ಆಚಾರ್ಯರ ನಾಲಿಗೆ ತಪ್ಪಿ ಆ ಮಾತು ಹೊರಬಿತ್ತು ಯಾವ ಜನವಾದರೇನು ? ಅಮ್ಮನವರಿಗೆ ಎಲ್ಲರೂ ಒಂದೇ

"ವೈದಿಕ ಬ್ರಾಹ್ಮಣರು "

"ಸರಿ, ಅಲ್ಲೇ ಮಲ್ಗಿರು ಇನ್ನು ಸ್ವಲ್ಪ ಹೊತ್ಗೆ ದೇವಸ್ಥಾನ ಗುಡಿಸೋಕೆ ರಂಗಮ್ಮ ಬರ್ತಾಳೆ ಅಷ್ಟೊತ್ಗ ಎದ್ದು ಹೋಗು "

ಆಚಾರ್ಯರು ಅಲ್ಲಿಂದ ಮುಂಬಾಗಿಲತ್ತ ಧಾವಿಸಿದರು ಸಮಯ ಹಾಳು ಮಾಡಿದಷ್ಟೂ ತನಗೇ ನಷ್ಟ ಒದ್ದೆ ಮಡಿಯ ನೀರು ಹಿಂಡಿದಾಗ ಅವರ ಮನಸ್ಸು ಕೊಂಚ ಕಲಕಿತ್ತು ಪಾಪ, ಚಿಕ್ಕ ಹುಡುಗ ಯಾವೂರಿನಿಂದ ಬಂದನೋ ! ಅವರ ಅಂತಃಕರಣ ಕೊಂಚ ಮೆದುವಾಯಿತು ಪಾಪ, ಮಲಗಿರಲಿ, ಎಷ್ಟಾದರೂ ಇದು ಅಮ್ಮನವರ ಗುಡಿ ಆಕೆ ಎಲ್ಲರಿಗೂ ತಾಯಿ ಭಗವತೀ ವಾತ್ಸಲ್ಯಮಯಿ..

ಬಟ್ಟೆ ಹಿಂಡಿ ಕೊಡವಿ ಹಿಂತಿರುಗಿದಾಗ ಬಾಲಕನನ್ನು ಮತ್ತೆ

ಮಾತನಾಡಿಸುವ ಮನಸ್ಸಾಯಿತು "ಮಾಧೂ.. ಎಲ್ಲಿದ್ದೀಯೋ?" "ಇಲ್ಲಿದ್ದೀನಿ'

ಕ್ಷೀಣ ಧ್ವನಿ ಬಂದತ್ತ ತಿರುಗಿದರು ಮುದುರಿ ಕುಳಿತಿದ್ದ ಆ ಪುಟ್ಟ ಆಕೃತಿಯನ್ನು ಕಂಡು ಹತ್ತಿರ ಕರೆದು ತಲೆತಡವಿ ತಕ್ಕೈಸಿಕೊಳ್ಳುವ ಮನಸ್ಸಾಯಿತು

"ಐನೋರೆ ಅಡ್ಬಿದ್ದೆ...ಇದೇನು ಈವೊತ್ತು ಇಷ್ಟೊತ್ತಾದ್ರೂ ದೀಪ ಆಕ್ಲಿಲ್ಲ ಈಗ್ಲೇ ಕಸ ತೆಗೀಲಾ ಬ್ಯಾಡ್ವಾ ?"

ಹೊರಗೆ ರಂಗವ್ವನ ಧ್ವನಿ ಕೇಳಿ ಬೆಚ್ಚಿದರು. ತನಗೇನು ಬಂತು ಇಂದು! ಎಂದಿನಂತೆ ಸ್ನಾನ ಮಾಡಿ ಮುಗಿಸುತ್ತಲೇ ಅಮ್ಮನವರ ಮಂತ್ರ ಪ್ರಾರಂಭಿಸುತ್ತಿದ್ದ ತಾವು ಇಂದೇಕೆ ಹೀಗೆ! ಬೇಕೆಂತಲೇ ಧ್ವನಿಯೇರಿಸಿ ಮಂತ್ರಪಠನ ಪ್ರಾರಂಭಿಸಿದರು.

"ಪದ್ಮನಾಭಂ, ಪ್ರಿಯಾಂ ದೇವೀಂ, ಪದ್ಮಾಕ್ಷೀಂ, ಪದ್ಮಾವಾಸಿನೀಂ, ಪದ್ಮವಕ್ತ್ರಾಂ, ಪದ್ಮಹಸ್ತಾಂ, ವಂದೇ ಪದ್ಮಾಮಹರ್ನಿಶಂ "

ಅವರಿಂದ ಉತ್ತರ ಬಾರದಿದ್ದರಿಂದ ರಂಗವ್ವ ಪೊರಕೆ ಹಿಡಿದು ಹೊರಗೆ ನಿಂತಳು. ಆಚಾರ್ಯರು ಮಡಿ ಒಣಗಿ ಹಾಕಿ ಕರ್ಪೂರದ ಮಂಗಳಾರತಿಯೆತ್ತಿ 'ಪೂರ್ಣೇಂದುಬಿಂಬವದನಾಂ, ರತ್ನಾಭರಣ ಭೂಷಿತಾಂ-ವ ರ ದಾ ಭ ಯ ಹಸ್ತಾಭ್ಯಾಂಧ್ಯಾಯೇಚಂದ್ರ ಸಹೋದರೀಂ..." ಕೈಮುಗಿದು ಗರ್ಭಗುಡಿಯ ವಿದ್ಯುದ್ದೀಪ ಹತ್ತಿಸಿದರು. ಹೊರಗಿನ ದೀಪವನ್ನೂ ಹಾಕಲೆಂದು ಹೊರಗೆ ಬಂದಾಗ ರಂಗವ್ವನತ್ತ ತಿರುಗಿದರು

"ಕಸ ಗುಡಿಸಿಕೋ ರಂಗವ್ವಾ......ಆಗ್ಲೇ ಹೊತ್ತಾಗೋಯ್ತು ಇವೊತ್ತು"

ರಂಗವ್ವ ಪೊರಕೆ ಹಿಡಿದು ಒಳಗೆ ಬಂದಾಗ ಕಂಡಿದ್ದು ಮೂಲೆಯಲ್ಲಿದ್ದ ಹುಡುಗನನ್ನು,

"ಲೇ...ಏಳಾಲೇ ಮ್ಯಾಲ್ಕೇ....ಭಿಕ್ಷುಕ ಮುಂಡೇವೂ...ಇವಕ್ಕೆ ಅಮ್ಮನವರ ಗುಡೀನೇ ಮನ್ಗಕೆ ಬೇಕೂ....ಬ್ಯಾರೆ ಯಾವ ತಾವಾನೂ ಇದೆಲ್ಲಾ ನಡ್ಯಾಕಿಲ್ಲ."

ರಂಗವ್ಮನ ಕೈಲಿದ್ದ ಪೊರಕೆ, ಅವಳ ರೌದ್ರಾವತಾರ ಕಂಡು ಬಾಲಕ ನಡುಗುತ್ತಾ ಎದ್ದು ನಿಂತ.

"ಮಲ್ಗಿರ್ಲಿ ಬಿಡು ರಂಗವ್ಮ, ಪಾಪ ಚಿಕ್ಕ ಹುಡುಗ. ಬೇರೆ ಊರ್‍ನಿಂದ ರಾತ್ರಿ ಹೊತ್ತಲ್ಲಿ ಹೊತ್ನಲ್ಲಿ ಬಂದ್ನಂತೆ. ಚೆನ್ನಾಗಿ ಬೆಳಕು ಹರೀತೂ ಹೊರಟುಹೋಗ್ತಾನೆ" ಆಚಾರ್ಯರು ಅವ್ಮನವರ ವಿಗ್ರಹದಿಂದ ತೆಗೆದು ಹಾಕಿದ ನಿರ್ಮಾಲ್ಯವನ್ನು ಹತ್ತಿರದಲ್ಲಿದ್ದ ಬುಟ್ಟಿಗೆ ಹಾಕಿದರು.

"ಏನೋರಾ, ನೀವು ಸುಮ್ಕಿರಿ, ನಿಮ್ಗೆ ಇದೆಲ್ಲಾ ತಿಳ್ಯಾಕಿಲ್ಲ. ಈ ಬಿಕಾರಿ ಮುಂಡೇವು ಇಲ್ಲಿಗೆ ಇಂಗೇ ಒರಾದೂ. ನಾಕ್ದಿನ ಇಂಗ್ಬಂದು ಅಂಗೇ ಎಲ್ಲಾ ಯೆತ್ಕೊಂಡು ಓಡಾಗಾದೂ.. ನಡ್ಯೋ ಒರ್ಗೆ ಊರಿನ ಸತ್ರ ಇಲ್ವಾ ಅಲ್ಲಿ ಮಲಿಕ್ಕೋ ಓಗೋ. ಯಾವೋನ್ನೇಳ್ಕಂಡು ಒಳಗ್ಬಂದೇ. ಇದೇನು ನಿಮ್ಮಪ್ಪನ ಮನೇನಾ . ನಿಮ್ಮಪ್ಪ ಕಟ್ಸಿದ್ದಾ ?"

ಹುಡುಗ ಆಚಾರ್ಯರತ್ತ ದೃಷ್ಟಿ ಹರಿಸಿ ಮೆಲ್ಲನೆ ಹೊರಗಡಿಯಿಟ್ಟ. ಆಚಾರ್ಯರಿಗದೇಕೋ ಗಂಟಲುಬ್ಬಿ ಬಂತು. ಬೆಳಕಿನಲ್ಲಿ ದೈನ್ಯವಾದ ಆ ಮುಖವನ್ನು ನೋಡಿದರು. ಸೌಮ್ಯವಾದ ಮುಖ, ದೊಡ್ಡ ಬೊಗಸೆ ಕಣ್ಣುಗಳು ತಿಳಿಗೊಳದಂತಿದ್ದವು. ಮುಗ್ಧತೆಯುಕ್ಕಿ ಹರಿಯುತ್ತಿದ್ದ ತಾವರೆಯ ಮೊಗ್ಗಿನಂತಹ ಮುಖ, ವಾತ್ಸಲ್ಯವುಕ್ಕಿ ಬಂತು. ಎಲ್ಲೋ ಕಂಡಂತಿದೆ ಮುಖ, ನೆನಪಿನ ಹಳೆಯ ಜಾಡೊಂದನ್ನು ಅರಸಿಹೋಗಲು ತವಕಿಸಿತು ಅವರ ಮನಸ್ಸು. ಅವನನ್ನು ಕಂಡರೆ ಎದೆಗಪ್ಪಿ ತಕ್ಕೈಸುವ ಹಂಬಲ ತನಗೇಕೆ ?

"ಮಾಧೂ ಹೊರ್ಗೆ ಹೋಗಿ ಆ ತೋಟದ ಮೂಲೇಲಿರೋ ಮನೆ ಜಗ್ಲೀಲಿ ಮಲಕ್ಕೊ ಹೋಗೂ .." ಆಚಾರ್ಯರು ತಡವರಿಸದೆ ಉತ್ತರಿಸಿದರು. ಬಾಲಕ ತಲೆಯಲ್ಲಾಡಿಸಿ ಹೊರಗೆ ಕಾಲಿಟ್ಟಾಗ ರಂಗವ್ಮ ಕೈಲಿದ್ದ ಪೊರಕೆ ಯನ್ನು ಹಿಡಿದು ನಿಂತಲ್ಲೇ ನಿಂತಳು.

"ಅಲ್ಲಾ . ಏನೋರೇ ..ಈ ಉಡ್ಗಾ ನಿಮ್ಗೇನಾದ್ರೂ ಗೊತ್ತೆ? ನಿಮ್ಮಕಡೇವ್ನೂಂತ ಯೇಳ್ಬಾರ್ದಿತ್ತಾ? ಸುಮ್ಕೆ ನನ್ ಕೈಲಿ ಅವ್ನ ಅನ್ನಿಸ್ಕಳಾಂಗೆ ಮಾಡಿದ್ರಿ..."

ಆಚಾರ್ಯರಿಗೆ ಅವಳ ಮಾತಿನತ್ತ ಗಮನವಿರಲಿಲ್ಲ. ತಾವು ಬೇಗ ಬೇಗ ಕಲಾಪಗಳನ್ನು ಮುಗಿಸಬೇಕು. ಬೆಳಗ್ಗೆ ಎದ್ದಾಗಿನಿಂದ ಏನೋ

ಪಂಚಾಯಿತಿ–ತನ್ನ ಏಕಾಗ್ರತೆಯ ಭಂಗ... ಈ ಹುಡುಗ ಇಂದೇಕೆ ಬಂದ! ಇವಳು ಇನ್ನೂ ಸ್ನಾನ ಮಾಡಿ ಮುಗಿಸಿದಳೋ ಇಲ್ಲವೋ ಕೊಡಗಳಲ್ಲಿನ್ನೂ ಮಡಿನೀರು ತಂದಿಲ್ಲ ಅಮ್ಮನವರಿಗಿನ್ನೂ ಉದಕಾಭಿಷೇಕವಾಗಬೇಕು ಶೆಟ್ಟರ ಮನೆಯಿಂದ ಹಾಲು, ಮೊಸರು, ಜೇನುತುಪ್ಪ, ಬಾಳೇಹಣ್ಣು, ಹೂವು ಬಂದಿಲ್ಲ ತೋಟದಿಂದ ಹೂವು ಕಿತ್ತು ಮಾಲೆ ಕಟ್ಟಲು ರಾಜೀಬಾಯಿ ಇನ್ನೂ ಬಂದಿಲ್ಲ ಎಲ್ಲರೂ ತಡಮಾಡಿ ತಮಗೆ ಆತಂಕಪಡಿಸುತ್ತಾರ ನಿಂತಲ್ಲಿಂದಲೇ ಕೂಗಿದರು "ರಂಗಮ್ಮಾ, ಮನೆಗೆ ಹೋಗಿ ನಮ್ಮ ಹೆಂಗಸರಿಗೆ ಹೇಳು, ಬೇಗ ಮಡಿನೀರು ತರ್ಬೇಕಂತೆ ಅಂತ "

ಆಚಾರ್ಯರು ಗರ್ಭಗುಡಿಯ ಬಾಗಿಲನ್ನು ಓರೆ ಮಾಡಿದರು ಅಮ್ಮನವರ ಅಭಿಷೇಕಕ್ಕಾಗಿ, ವಿಗ್ರಹದ ಮೇಲಿದ್ದ ವಸ್ತ್ರಾಭರಣಗಳನ್ನು ಕಳಚ ತೊಡಗಿದರು. ಅವರಿಗೆ ಅಮ್ಮನವರ ಪೂಜೆ, ಅಭಿಷೇಕಕ್ಕಿಂತ ಆ ಹುಡುಗನೇ ಮೈ ಮನವೆಲ್ಲಾ ಆವರಿಸಿದ್ದ ಎಲ್ಲೋ ನೋಡಿದ ನೆನಪು

"ನೀರಿಟ್ಟಿದ್ದೀನಿ . ತೊಗೊಳ್ಳಿ " ಆಚಾರ್ಯರ ಪತ್ನಿ ಸಾವಿತ್ರಮ್ಮ ಮಡಿಯುಟ್ಟು ಬಂದು ನೀರಿನ ಕೊಡಗಳನ್ನು ಗರ್ಭಗುಡಿಯ ಬಾಗಿಲ ಮುಂದೆ ಇಟ್ಟರು ಆಚಾರ್ಯರು ಒಳಗಿನಿಂದಲೇ ಗುಡುಗಿದರು

"ಯಾಕಿಷ್ಟು ಹೊತ್ತು ಮಾಡ್ದೆ? ನಿಂಗೆ ಕಾಯ್ತಾ ನಿಂತಿರ್‍ಲಾ ?"

"ಮನೇಮುಂದೆ ಯಾವೋನೋ ಭಿಕಾರಿ ಹುಡ್ಗ ಬಂದು ಮಲ್ಗಿದ್ದಾನೆ. ಮನೇಲಿ ಮಕ್ಳು ಮಲ್ಗಿದ್ದಾರೆ ಅದಕ್ಕೇ ಬೇಗ ಹಾಕ್ಕೊಂಡು ನೀರು ತಂದೆ" ಸಾವಿತ್ರಮ್ಮನೂ ಕೊಂಚ ಗಡುಸಾಗೇ ಉತ್ತರಿಸಿದರು.

ಮತ್ತೆ ಆ ಹುಡುಗ! ಹೆಂಡತಿಯ ಮುಂದೆ ಮತ್ತೆ ಆ ಮಾತೆತ್ತಿದ್ದರೆ ಕೆಲಸಕ್ಕೆ ವಿಘ್ನ

"ಸರಿ, ಅಭಿಷೇಕ ಮುಗಿಸೋ ಹೊತ್ಗೇ ನೈವೇದ್ಯನಾದ್ರೂ ಮುಗಿಸಿ ತೊಗೊಂಡ್ಬಾ ಬೇಗ ಆಚಾರ್ಯರು ಕೊಡಗಳನ್ನು ಒಳಗೆಳೆದುಕೊಳ್ಳುತ್ತಾ ಹೇಳಿದರು.

ಆಚಾರ್ಯರು ಕೈಲಿದ್ದ ಕೊಡದಿಂದ ಅಮ್ಮನವರ ವಿಗ್ರಹದ ಮೇಲೆ ಮಡಿನೀರನ್ನು ಸುರಿದರು

"ಏನೋರೀ ಸೆಟ್ರ ಮನೇಂದ ಸಾಮಾನು ಬಂದೈತೆ" ಎಂದು ರಂಗಮ್ಮ ಹೊರಗಿನಿಂದ ಕೂಗು ಹಾಕಿದಳು

"ಅಲ್ಲೀ ಬಾಗ್ಲ ಹತ್ರ ಇಟ್ಹೋಗೂಂತ ಹೇಳು" ಆಚಾರ್ಯರ ತಾಳ್ಮೆ ಕೆಡಹತ್ತಿತ್ತು "ಪೂಜೆ ಮಾಡೋದಕ್ಕೆ ನೂರು ವಿಘ್ನಗಳಾಯ್ತು ಇವೊತ್ತು" ಗೊಣಗಿದರು

ಯಾಂತ್ರಿಕವಾಗಿ ಹಾಲು, ಮೊಸರು, ಜೇನುತುಪ್ಪ, ಬಾಳೆಹಣ್ಣು, ಹೂವುಗಳನ್ನು ಗರ್ಭಗುಡಿಯೊಳಗೆ ತೆಗೆದಿಟ್ಟುಕೊಂಡು ಬಾಗಿಲು ಮುಚ್ಚಿಕೊಂಡರು

ಪಂಚಾಮೃತಾಭಿಷೇಕ ಮಾಡುವಾಗ ಅಮ್ಮನವರ ಎಡಪಾದದ ಬಳಿ ಯಿಡುತ್ತಿದ್ದ ಪಾತ್ರೆಯನ್ನು ಇಡುವುದನ್ನು ಮರೆತರು ಹಾಲು, ಮೊಸರು ನೆಲಕ್ಕೆ ಸುರಿದಾಗ ಬಚ್ಚಿ ಪಾತ್ರೆಯನ್ನು ಹಿಡಿದರು "ನನಗೇನಾಗಿದೆ ಇವೊತ್ತು ? ಅನ್ಯಾಯ ಒಂದು ಪಂಚಪಾತ್ರೆಯಷ್ಟು ಪಂಚಾಮೃತ ನೆಲದ ಪಾಲಾಯಿತು ಆಚಾರ್ಯರು ವಿಮನಸ್ಕರಾಗಿ ತಮಗೆ ತಾವೇ ಹೇಳಿಕೊಂಡರು.

ಪಂಚಾಮೃತಾಭಿಷೇಕ ಮಾಡಿ ಮುಗಿಸಿ ಮತ್ತೆ ಶುದ್ಧೋದಕ ಸ್ನಾನ ಮಾಡಿಸಿ ಅಮ್ಮನವರಿಗೆ ವಸ್ತ್ರಾಭರಣಗಳನ್ನೇರಿಸಿ ಹಣೆಗೆ ಕುಂಕುಮವಿಟ್ಟು ಕೈಮುಗಿದು ನಿಂತರು ಎಂದಿನಂತೆ ತಾವು ಮಾಡುತ್ತಿದ್ದ ಅಷ್ಟೋತ್ತರ ಮಾಡುವ ಮುನ್ನ ಗರ್ಭಗುಡಿಯ ಬಾಗಿಲು ತೆರೆದರು. ಹೊರಗೆ ಬೆಳಕು ಬೆಳ್ಳಗೆ ಹರಡಿತ್ತು. ಅಷ್ಟೋತ್ತರ ಪ್ರಾರಂಭಿಸೋಣವೆಂದರೆ ರಾಜೀಬಾಯಿ ಇನ್ನೂ ಹೂ ಕೊಯ್ದು ತಂದಿರಲಿಲ್ಲ ಶೆಟ್ಟರ ಮನೆಯಿಂದ ಬಂದಿದ್ದ ನೇವಂತಿಗೆಯ ಮಾಲೆಯಿಂದ ಹೂವನ್ನು ಕಿತ್ತು ತಟ್ಟೆಯನ್ನು ತುಂಬಿಸಿಕೊಂಡರು ತಾನು ಇಲ್ಲಿಗೆ ಬಂದ ಹನ್ನೊಂದು ವರ್ಷಗಳಿಂದ ಒಂದು ದಿನವೂ ಹೀಗೆ ಅಸಡ್ಡೆಯಿಂದ ಅಮ್ಮನವರಿಗೆ ಪೂಜೆ ಮಾಡಿರಲಿಲ್ಲ ಅವರ ಬಾಯಲ್ಲಿ ಮಂತ್ರಗಳೇ ಹೊರಡದೆ ತಬ್ಬಿಬ್ಬಾದರು ಪಾಪ ಹುಡುಗನಾದರೂ ಇಲ್ಲಿದ್ದಿದ್ದರೆ ಅವನಿಗೆ ಪುಷ್ಕರಣಿಯಲ್ಲಿ ಮಿಂದು ಹೂ ಕೊಯ್ದು ತಾರೆಂದು ಹೇಳಬಹುದಿತ್ತು.ವೈದಿಕನೆಂದು ಹೇಳಿದ್ದ...

ಸಾವಿತ್ರಮ್ಮ ಥಳಥಳನೆ ಹೊಳೆಯುತ್ತಿದ್ದ ಹರಿವಾಣಗಳಲ್ಲಿ ನೈವೇದ್ಯಗಳನ್ನೆತ್ತಿಕೊಂಡು ಬಂದರು. ಪತಿ ಇನ್ನೂ ಹೂಗಳನ್ನು ಕಿತ್ತು ಎದುರಿಗಿದ್ದ

ತಟ್ಟೆಗೆ ಹಾಕುತ್ತಿರುವುದನ್ನು ಕಂಡು ಅವಾಕ್ಕಾದರೂ "ಇದೇನು ಇನ್ನೂ ಅಷ್ಟೋತ್ತರ ಮಾಡಿಲ್ವೇ? ಇನ್ನೇನು ಶೆಟ್ಟರು ಬರೋ ಹೊತ್ತು ಆ ಹೂಮಾಲೆ ಯಾಕೆ ಕೀಳ್ತಾ ಇದ್ದೀರಿ?"

ಆಚಾರ್ಯರು ಕತ್ತೆತ್ತದೆ ಉತ್ತರಿಸಿದರು "ಯಾಕೋ ಬೆಳಗಿನಿಂದ ಮೈ ಚೆನ್ನಾಗಿಲ್ಲ ನೋಡು ನೀರಲ್ಲಿ ಮುಳುಗು ಹಾಕಿದಾಗ ಮೈಗೆ ಚಳಿ ಹಿಡಿದು ಬಿಟ್ಟಿದೆ. ಆ ರಾಜೀಬಾಯಿ ಹೂ ಕೀಳಲು ಬರಲೇ ಇಲ್ಲ" ತಾವು ಅಮ್ಮನವರ ಮುಂದೆ ಹೀಗೆ ಸುಳ್ಳೇಕೆ ನುಡಿಯುತ್ತಿದ್ದೇನೆ ಎಂದುಕೊಂಡರು

"ನೀವು ಅಷ್ಟೋತ್ತರ ಮಾಡಿ. ನಾನು ಹೂ ಕಿತ್ತು ತರ್ತೀನೆ ರಾಜೀಬಾಯಿ ಒಳಗಿದ್ದಾಳೋ ಇಲ್ವೋ. ಇಲ್ದಿದ್ರೆ ಇಷ್ಟೊತ್ತಿಗೆ ಬರ್ತಾ ಇದ್ಲು...ಅಂದ್ಹಾಗೆ ಆ ಹುಡ್ಗ ಯಾರೊ ಜಗ್ಲೀ ಮೇಲೆ ಕೂತಿದ್ದಾನೆ ನೀವು ಕಳ್ಸಿದ್ರಾ? ರಂಗಮ್ಮ ಹೇಳಿದ್ಲು.

ಆಚಾರ್ಯರು ಕೈ ಸನ್ನೆ ಮಾಡಿ ಹೆಂಡತಿಯನ್ನು ತಡೆದರು "ನಾನು ಶಾಂತವಾಗಿ ಪೂಜೆ ಮಾಡಿ ಮುಗಿಸುವವರೆಗೆ ಸುಮ್ಮನಿರಬಾರದೆ" ಆ ಹುಡುಗನ ವಿಚಾರ ಮತ್ತೆ ತಮ್ಮ ಮನ ಕದಲಿಸದಿದ್ದರೆ ಸಾಕು, ಬೇಕೆಂತಲೇ ಧ್ವನಿಯೇರಿಸಿ ಅಷ್ಟೋತ್ತರ ಪ್ರಾರಂಭಿಸಿದರು. "ಓಂ ಪ್ರಕೃತ್ಯೈ ನಮಃ ವಿಕೃತ್ಯೈ ನಮಃ, ವಿದಾಯ್ಯೈ ನಮಃ, ಸರ್ವ ಭೂತಹಿತಪ್ರದಾಯೈ ನಮಃ ಶ್ರದ್ಧಾಯ್ಯೈ ನಮಃ"

ಹೊರಗಡೆ ಶೆಟ್ಟರ ಮನೆಯವರ ಆಗಮನವಾಯಿತು ಜರಿ ಪಂಚೆ, ಶಲ್ಯ, ಹಣೆಗೆ ಕುಂಕುಮವಿಟ್ಟು ಪತ್ನೀ ಸಮೇತರಾಗಿ ಬಂದ ಸೆಟ್ಟರು 'ಮಹಾ ತಾಯಿ, ಮಹಾಲಕ್ಷ್ಮಿ ಭಗವತಿ" ಎಂದು ಅಮ್ಮನವರ ವಿಗ್ರಹಕ್ಕ ಅಡ್ಡಬಿದ್ದು ಕೈಮುಗಿದು ನಿಂತರು. ಅವರ ಪತಿ ಬೆಳ್ಳಿಯ ತಟ್ಟೆಯಲ್ಲಿ ತಂದಿದ್ದ ಫಲಪುಷ್ಪಗಳನ್ನು ಹೊಸ್ತಿಲ ಮೇಲಿಟ್ಟು ಕೈಮುಗಿದು ನಿಂತರು ಆಚಾರ್ಯರಿಗೆ ಎದೆಯ ಬಡಿತ ಜೋರಾದರೂ ತೋರಗೊಡದೆ ಅಷ್ಟೋತ್ತರ ಮುಂದುವರಿಸಿದರು "ಧನಾಯ್ಯೈ ನಮಃ, ಹಿರಣ್ಮಯ್ಯೈ ನಮಃ, ಲಕ್ಷ್ಮ್ಯೈ ನಮಃ" ಅಷ್ಟೋತ್ತರ ಸಂಪೂರ್ಣವಾದ ಮೇಲೆ ಕೈ ಮುಗಿದು ಕರ್ಪೂರದ ಆರತಿ ಎತ್ತಿ ಮಂಗಳಾರತಿ ತಂದಾಗ ಶೆಟ್ಟರು ಆಚಾರ್ಯರ ಮುಖ ತೀಕ್ಷ್ಣವಾಗಿ ನೋಡಿದರು

"ಯಾಕೆ ಇವೊತ್ತು ಪೂಜೆ ... ಮುಖ-ತಾನು ನೂರಾರು ಬಾರಿ ಕಳಿಸಿದ ಸೇವಂತಿಗೆ ಮಾಲೆ ಅಮ್ಮ... ರು ತನ್ನ ಮನೆಗೆ ಉಪಯೋಗಿಸಿಕೊಂಡುಬಿಟ್ಟರಿ ?"

ಗಕ್ಕೆ ಕದ್ದು

ಹಿಂದಿನಿಂದ ಹೂವಿನ ಬುಟ್ಟಿಯೊಡನೆ ಬಂದ ಸಾವಿತ್ರಿ ... ಯಲ್ಲಿರುವ ಬದಲಾಗಿ ಉತ್ತರಿಸಿದರು

ಮಾಡಲಿ ?"

"ಇಂದು ಅವರಿಗೇಕೋ ಮೈ ಚೆನ್ನಾಗಿಲ್ಲ . ಅಲ್ದೇ ರಾಜ... ನಗೆ ಆಗಲೇ ಬರ್ಲಿಲ್ಲ ಮಾಲೆ ಅಮ್ಮನವರ ವಿಗ್ರಹ ಅಲಂಕರಿಸಿದರೇನು, ಪ... ರ್ವವಿರಲಿಲ್ಲ ಇದ್ದರೇನು ಎಲ್ಲ ಒಂದೇ ಅಲ್ಲವೆ ?

ಕೊಂಡು

ಆಚಾರ್ಯರು ಹೆಂಡತಿಯ ಮನಸ್ಸಿನಲ್ಲೇ ವಂದಿಸಿದರು

ಕ್ಕಿಂತ

"ಪಾಪ ಆಚಾರ್ಯರು ಸ್ವಲ್ಪ ಸುಧಾರಿಸಿಕೊಂಡರು ಕೆಲಸಕ್ಕೆ ... ದ ಇವೊತ್ತು, ಆಗದಿದ್ದರ ಬರುವುದು ಬೇಡ ಮಾಘ ಮಾಸದಲ್ಲಿ ದಿನಾ ತಣ್ಣೀರ ಸ್ನಾನ ಪಾಪ ."

ಆಚಾರ್ಯರು ಕೆಮ್ಮಿ ಗಂಟಲು ಸರಿಮಾಡಿಕೊಂಡು "ಹಿ . ಹಿ .. ಇರ್ಲಿ ಸುಧಾರಿಸಿಕೊಂಡು ಬರುತ್ತೇನೆ ಗಂಟಲುನೋವು ಕೊಂಚ ಅಷ್ಟೆ " ಒಂದು ದಿನ ಹೋಗದಿದ್ದರೆ ಒಂದು ದಿನದ ಲೆಕ್ಕ ಬರೆಯುವ ದುಡ್ಡು ಹೋಗುತ್ತದೆ

"ಹಾಗೇ ಮಾಡಿ " ಶೆಟ್ಟರು ಕೈಮುಗಿದು ನಿಂತರು ನೈವೇದ್ಯ ಮತ್ತು ಮಂಗಳಾರತಿ ಆದ ಮೇಲೆ ಶೆಟ್ಟರ ಮನೆ ಫಲಪುಷ್ಪಗಳನ್ನು ಅಮ್ಮನವರಿಗೆ ಅರ್ಪಿಸಿ ಪಂಚಾಮೃತದ ಒಟ್ಟಲು, ತಟ್ಟೆ ನೀಡಿದಾಗ ಶೆಟ್ಟರು ಆತಂಕದಿಂದ ಹೇಳಿದರು

"ಆಯಾಸ ಮಾಡಿಕೋಬೇಡಿ ಡಾಕ್ಟರ ಹತ್ತಿರ ಏನಾದ್ರೂ ಔಷಧ ತೆಗೆದುಕೊಳ್ಳಿ " ಮಂಗಳಾರತಿ ತಟ್ಟೆಗೆ ಒಂದು ರೂಪಾಯಿಯ ನೋಟೊಂದನ್ನು ಹಾಕಿ ಹೊರಬಿದರು ಅವರ ಹಿಂದೆ ಶೆಟ್ಟರ ಪತ್ನಿಯೊಡನೆ ಮಾತಾಡುತ್ತಾ ಸಾವಿತ್ರಮ್ಮನವರೂ ಹೊರಬಿದ್ದರು

ಪೂಜೆಗಾಗಿ, ಪ್ರಸಾದಕ್ಕಾಗಿ ಜನಗಳು ಬರಹತ್ತಿದ್ದರಿಂದ ಆಚಾರ್ಯರು ದೇವಸ್ಥಾನದಲ್ಲೇ ಉಳಿದರು ಅವರ ಮನಸ್ಸು ಮನೆಗೆ ಹೋಗಿ ಆ ಬಾಲಕ

ಆದರೆ ಅವರು ದೇವಸ್ಥಾನವನ್ನು
ತಟ್ಟೆಗೆ ಹಾಕುತ್ತಿರುವುದನ್ನು ಕಂಡು
ಅಷ್ಟೋತ್ತರ ಮ್ಮ ೀ ?
ಹೂಮಾಲೆ ಯ್ಕೆ ಬಂದ ಕೊನೆಯ ವ್ಯಕ್ತಿಗೆ ತೀರ್ಥ ಪ್ರಸಾದವಿತ್ತು

ಆ ಬಾಗಿಲು ಮುಚ್ಚಿ ಮನೆಗೆ ಬಂದಾಗ ಹನ್ನೊಂದು ಗಂಟೆಯಾಗಿ ವೆ ್ಮ ಚೆನ್ನಾಖರವಾಗಿತ್ತು ಆಚಾರ್ಯರ ಕಣ್ಣು ಮನೆಯ ಮುಂದಿನ ಜಗಲಿ ಬಿಟ್ಟಿದೆ. ಳಿತು ಅಲ್ಲಿ ಯಾರೂ ಇರಲಿಲ್ಲ ಮನೆಯೊಳಗೆ ಕಾಲಿಟ್ಟಾಗಲೂ ನವರ ಮುರೂ ಕಾಣಲಿಲ್ಲ ಸಾವಿತ್ರಮ್ಮ ಅಡಿಗೆ ಮನೆಯಲ್ಲಿದ್ದರು

„ವಿತ್ರೀ ಎಲ್ಲಿ ಮಕ್ಕಳು ಕಾಣ್ತೋಲ್ಲ!" ಅವರಿಗೆ ತಮ್ಮ ರಾಜಿಗಿಂತ ಆ ಹುಡುಗನ ವಿಷಯದಲ್ಲಿ ಆತಂಕವಿತ್ತು

"ಮಕ್ಳು ಸ್ಕೂಲಿಗೆ ಹೋದ್ರು.." ಒಳಗಿನಿಂದಲೇ ಉತ್ತರ ಬಂತು

ಆ ಹುಡುಗನ ವಿಚಾರ ಕೇಳುವ ಮನಸ್ಸು, ಹೆಂಡತಿ ಸಿಡಿಮಿಡಿಗೊಂಡರೆ ? ಆಚಾರ್ಯರು ದೇವರಿಗೆ ಕೈ ಮುಗಿದು ಧೈರ್ಯ ಮಾಡಿ ಗಂಟಲು ಸರಿಮಾಡಿಕೊಂಡು ಕೇಳಿದರು "ಅದೇನೋ ಆ ಹುಡುಗಾಂತ ಏನೋ ಹೇಳಿದ್ಯಲ್ಲ ಏನದು ?" ಮಡಿಪಂಚೆ ತೆಗೆದು ಕೆಲಸಕ್ಕೆ ಹೋಗುವಾಗ ಉಡುತ್ತಿದ್ದ ಮಲ್ ಪಂಚೆಯನ್ನು ಕೈಗೆತ್ತಿಕೊಂಡರು.

ಸಾವಿತ್ರಮ್ಮನಿಂದ ತಕ್ಷಣ ಉತ್ತರ ಬರಲಿಲ್ಲ.

ಆಚಾರ್ಯರು ನಿರಾಸೆಗೊಂಡರು. "ಎಲ್ಲಿ, ನಂಗೆ ಎಲೇ ಹಾಕು ಬಟ್ಟೆ ಬದಲಿಸಿ ಬರ್ತೀನಿ ಅಂಗ್ಡೀಗೆ ಹೊತ್ತಾಯ್ತು..."

ಸಾವಿತ್ರಮ್ಮ ಪಾತ್ರೆಯೊಂದನ್ನು ತೊಳೆಯುತ್ತ ಒಳಗಿನಿಂದಲೇ ಉತ್ತರಿಸಿದರು, "ಇರಿ, ಮೆಣಸಿನ ಸಾರು ಮಾಡಿಬಿಡ್ತೀನಿ. ಗಂಟಲುನೋವಿಗೆ ಸೀತಕ್ಕೆ ಒಳ್ಳೇದು.. ಅದೇ ಆ ಹುಡ್ಗ ಯಾರೋ ನಿಮ್ಮಂದೇ ಊರ್ನೋನಂತೆ. ಜಯಮ್ಮನ ಮಗನಂತೆ ಆಕೆ ತೀರ್ಹೋಗಿ ಒಂದು ತಿಂಗಳಾಯ್ತಂತೆ. ಸಾಯುವಾಗ ಆಕೆ ನಿಮ್ಹೆಸರು ಹೇಳಿ 'ಅಮ್ಮನವರ ದೇವಸ್ಥಾನಕ್ಕೆ ಹೋಗಿ ಕೇಳು ನಿಂಗೆ ಅವ್ರೇ ದಿಕ್ಕು...ಏನಾದ್ರೂ ದಾರಿ ಮಾಡಿಕೊಡ್ತಾರೆ' ಅಂದಿದ್ರಂತೆ.."

ಆಚಾರ್ಯರ ಕೈಲಿದ್ದ ಪಂಚೆ ನೆಲದ ಮೇಲೆ ಬಿತ್ತು ಮುಖ ಬಿಳುಪೇರಿತು ಹಣೆಯಲ್ಲಿ ಬೆವರಿನ ಹನಿಗಳು ಸಾಲುಗಟ್ಟಿದವು "ಹೌದು,

ಅದೇ ಮುಖ...ತನಗೆ ತೀರ ಪರಿಚಿತ ಮುಖ–ತಾನು ನೂರಾರು ಬಾರಿ ಮುತ್ತಿಟ್ಟ ಮುಖ...ಎಲ್ಲ ಅವನ ತಾಯಿಯು ಹಾಗೇ ಜಯು ತನ್ನ ಮನೆಗೆ ಆಗಾಗ್ಗೆ ಬರುತ್ತಿದ್ದ ಅಡಿಗೆಯು ವೆಂಕಮ್ಮನ ಮನೆ ತಪ್ಪಿದ ಮಗಳು ಕದ್ದು ಊರ ಹೊರಗಿನ ಮಂಟಪದಲ್ಲಿ ಕಳೆದ ರಾತ್ರಿಗಳು 'ನನ್ನ ಹೊಟ್ಟೆಯಲ್ಲಿರುವ ಮಗುವಿಗೆ ನೀವೇ ದಿಕ್ಕು ನನ್ನ ಉದ್ಧರಿಸದಿದ್ದರೆ ನಾನೇನು ಮಾಡಲಿ?" ಅವಳ ಧ್ವನಿ ಅವರ ನೆನಪಿನಾಳದಲ್ಲಿ ಪ್ರತಿಧ್ವನಿಸಿತು ಆದರೆ ತನಗೆ ಆಗಲೇ ಸಾವಿತ್ರಮ್ಮನೊಂದಿಗೆ ಮದುವೆ ಗೊತ್ತಾಗಿತ್ತು. ತನಗೆ ಧೈರ್ಯವಿರಲಿಲ್ಲ ತಮ್ಮ ಮದುವೆಯಾದ ಮರುದಿನವೇ ವೆಂಕಮ್ಮ ಮಗಳನ್ನು ಕಟ್ಟಿಕೊಂಡು ಊರು ಬಿಟ್ಟಿರಲಿಲ್ಲವೆ ' ಅವಳನ್ನು ಮರೆತಾಗಿತ್ತು ಅವಳಿತ್ತಿದ್ದಕ್ಕಿಂತ ಇಮ್ಮಡಿಯು ಸುಖ ಸಾವಿತ್ರಮ್ಮ ಕೊಟ್ಟಿರಲಿಲ್ಲವೇ ?.. ಎಂದೋ ಕೇಳಿದ ನೆನಪು–'ಜಯುಮ್ಮನಿಗೆ ಒಂದು ಮಗುವಂತೆ ಗಂಡ ಕಳ್ಳತನದಿಂದ ಕೂಡಿ ಕೊಂಡಿರಬೇಕು " ಅದನ್ನು ಕೇಳಿ ತಾವು ನಕ್ಕು ಸುಮ್ಮನಾಗಿದ್ದಿದ್ದು ನೆನಪು ಹೌದು, ಅವಳದೇ ಮುಖ ಎಲ್ಲ ಅವಳೇ ಆದರೆ . ಹೆಸರು ಮಾತ್ರ ತನ್ನದು ಮಗನಿಗೆ ತನ್ನ ಹೆಸರನ್ನೇ ಇಟ್ಟಿರಲಿಲ್ಲವೆ ? ಇಡದೆ ಮತ್ತೇನು . ತನ್ನ ಮಗನಲ್ಲವೆ ' ಅದಕ್ಕೇ ಆ ಸೆಳೆತ, ಆ ವ್ಯಾಮೋಹ, ಆ ವಾತ್ಸಲ್ಯ

"ಇದೇನು ಹೀಗೆ ನಿಂತಿ ? ಊಟಕ್ಕೆ ಎಲೆ ಹಾಕ್ಲೇನೂ ?" ಸಾವಿತ್ರಮ್ಮನ ಧ್ವನಿಯನ್ನು ಕೇಳಿ ಬೆಚ್ಚಿದರು ಸಾವರಿಸಿಕೊಂಡು ಉತ್ತರಿಸಿದರು

"ಯಾಕೋ ತಲೆ 'ಧಿಂ' ಅಂತು ನೋಡು ಅದಕ್ಕೇ ಹಾಗೇ ನಿಂತೆ ಅಂದ್ಹಾಗೆ ಆ ಹುಡುಗ ಎಲ್ಲಿ ?" ಹೆಂಡತಿಗೆ ಮುಖ ತೋರಲಾರದೆ ಬಗ್ಗಿ ಪಂಚೆಯೊತ್ತಿಕೊಳ್ಳುತ್ತಾ ಕೇಳಿದರು

"ಅವ್ನಾ ? ಚೆನ್ನಾಗಿ ಬೈಯ್ದು ಓಡಿಸ್ದೆ ಇದೇನು ಧರ್ಮಛತ್ರನಾ ? ನೀವು ಎರಡ್ಕಡೆ ದುಡಿದು ಸಂಪಾದ್ಸಿ ಮಕ್ಳನ್ನ ಸಾಕೋದೇ ಸಾಕಾಗಿದ ನಿಮ್ಮೂರಿನ ತಬ್ಬಲಿ ಮಕ್ಳಳ್ನ ಸಾಕೋ ಹಾಗಿದ್ದೇವಾ ನಾವೂ. ಶೆಟ್ರ ಹೆಂಡ್ತೀನೂ ಅದೇ ಹೇಳಿದ್ರು "

ಆಚಾರ್ಯರಿಗೆ ಎದೆಯಲ್ಲೇನೋ ಅವ್ಯಕ್ತ ನೋವು ಗಂಟಲುಬ್ಬಿ ಬಂತು

"ಏನಾದ್ರೂ ಕೊಟ್ಟು ಕಳಿಸಿದ್ರಾ?" ಪಂಚೆಯ ನೆರಿಗೆ ಸರಿಮಾಡಿಕೊಳ್ಳುತ್ತಾ ಕೇಳಿದರು.

"ಸದ್ಯ ನಿಮ್ಮ ಪೂಜೆಗೆ ನೈವೇದ್ಯ ಮಾಡೋಕೇ ನನ್ಗೆ ಹೊತ್ತಿರ್ಲಿಲ್ಲ ಇನ್ನು ಅವನ್ಗೆ ಯಾರು ಉಪಚಾರ ಮಾಡೋರು ? ಬೇರೆ ಎಲ್ಲಾದ್ರೂ ಹೋಗಿ ಭಿಕ್ಷಾನ್ನನೋ ಕೂಲೀನೋ ಮಾಡ್ಕೋಂತ ಬೈಯ್ದು ಓಡಿಸಿದೆ ನಡೀರಿ ಊಟಕ್ಕೆ.. .ಬಡಿಸ್ತೀನಿ"

ಪಾಪ, ಎಷ್ಟು ಬಳಲಿದ್ದನೋ, ಎಷ್ಟು ಹಸಿದಿದ್ದನೋ ತನ್ನೆರಡು ಮಕ್ಕಳ ಜೊತೆಗೆ ಅವನೊಬ್ಬ ಭಾರವಾಗುತ್ತಿದ್ದನೆ ? ದೇವಸ್ಥಾನದ ಕೆಲಸಗಳಲ್ಲಿ ಅವನು ತನಗೆ ಸಹಾಯ ಮಾಡುತ್ತಿರಲಿಲ್ಲವೆ ? ತಮ್ಮ ಮಗ ವೆಂಕಟೇಶನಿನ್ನೂ ಎಂಟು ವರ್ಷದವನು. ಅವನಿಗೆ ಓದು-ಶ್ಲೋಕಿಯೋ ಜಾಸ್ತಿ.. ಆಚಾರ್ಯರು ಷರಟು ಹಾಕಿಕೊಂಡು ಭುಜದ ಮೇಲೆ ಶಲ್ಯ ಹಾಕಿಕೊಂಡು ಕಾಲಿಗೆ ಚಪ್ಪಲಿ ಮೆಟ್ಟಿಕೊಂಡರು

"ಇದೇನು ಹೊರಟುಬಿಟ್ಟಿರಿ, ಊಟ ಮಾಡುವುದಿಲ್ಲವೆ ?" ಸಾವಿತ್ರಮ್ಮ ಕಳಕಳಿಯಿಂದ ಕೇಳಿದರು

"ಬೇಡಾ ಸಾವಿತ್ರಿ ನನಗ್ಯಾಕೋ ಸರಿಯಾಗಿಲ್ಲ ನನಗೇನೂ ಬೇಕಾಗಿಲ್ಲ..." ಮನೆಯ ಹೊಸಿಲು ದಾಟಿ ಹೊರಗೆ ಕಾಲಿಟ್ಟಾಗ ಆಚಾರ್ಯರ ಕಣ್ಣುಗಳು ಮಂಜಾಗಿದ್ದವು. "ಅಮ್ಮಾ ತಾಯಿ, ಭಗವತೀ, ಎಲ್ಲಾ ನಿನ್ನ ಚಿತ್ತ !" ಅವರು ಮನಸ್ಸಿನಲ್ಲೇ ಅಮ್ಮನವರಿಗೆ ವಂದಿಸಿದರು. "ನೀನು ವಿಶ್ವಜನನಿ... ನಿನ್ನ ಗುಡಿಯಲ್ಲಿ ಇದೊಂದು ಜೀವಕ್ಕೆ ಆಸರೆಯಿಲ್ಲವಾಯಿತೇ ?"

# ಉಡುಗೊರೆ

ಕನ್ನಡಿಯ ಮುಂದೆ ನಿಂತು ಮುಂದಲೆಯನ್ನು ತೀಡಿಕೊಂಡು, ಓರಣವಾಗಿ ನೆರಗು ಸರಿಮಾಡಿ, ಮಂಚದ ಕೆಳಗಿದ್ದ ಪೆಟ್ಟಿಗೆ ತೆಗೆದು, ಹಳದಿ ನೈಲಾನ್ ಸೀರೆಯ ಮಡಿಕೆಯಲ್ಲಿದ್ದ ಹತ್ತು ರೂಪಾಯಿನ ಐದು ನೋಟು ಗಳನ್ನು ಪರ್ಸಿನೊಳಗೆ ಹಾಕಿಕೊಂಡು ಹೊರಟಾಗ ಅವಳ ಮನಸ್ಸು ಹಗುರ ವಾಗಿತ್ತು. ಮೂರು ತಿಂಗಳಿಂದ, ಬಂದ ಸಂಬಳವನ್ನು ತಾಯಿಯ ಕೈಗೆ ಹಾಕುವ ಮುನ್ನ ಹತ್ತು, ಇಪ್ಪತ್ತರ ಹಾಗೆ ಸೀರೆಗಳ ಮಡಿಕೆಯಲ್ಲಿ ತೆಗೆದಿಟ್ಟು ಕಾಪಾಡಿದ ಹಣ-ಸಂಜೆಯ ಕಾಲೇಜಿನಲ್ಲಿ, ಸಹಪಾಠಿ ಚಂದ್ರಿಕಾ ಉಡುತ್ತಿದ್ದ ಸೀರೆಯಂತಹುದೇ ತಾನೂ ಕೊಂಡುಕೊಳ್ಳುವುದಕ್ಕಾಗಿ-ಹೇಗಿದ್ದರೂ ನಾಳೆ ಹಬ್ಬ ಸೀರೆ ಕೊಂಡರೆ ಯಾರೂ ಮಾತನಾಡುವುದಿಲ್ಲ ಮನಸ್ಸು ಗುಣಾಕಾರ ಹಾಕುತ್ತಿತ್ತು ಚಪ್ಪಲಿ ಮೆಟ್ಟಿ ಹೊರಬಂದಾಗ ತಾಯಿಯ ಧ್ವನಿ ಕೇಳಿಸಿತು "ಬರ್‍ತಾ ಹಾಗೆ ಒಂದಿಷ್ಟು ಹಣ್ಣು, ಹೂವು, ತರಕಾರಿ ತೊಗೊಂಡು ಬಾ. . ನಾಳೆ ಹಬ್ಬ"

ಹೌದು, ನಾಳೆ ಹಬ್ಬ. ನೂರಾರು ಮನೆಗಳಲ್ಲಿ ದೀಪಗಳು ಪ್ರಜ್ವಲಿಸು ತ್ತವೆ. ಎಲ್ಲೆಲ್ಲೂ ದೀಪೋತ್ಸವ ತೋಟದಲ್ಲಿ ಮಲ್ಲಿಗೆ ಗಿಡದ ಬಳಿ ನಿಂತು ಹೂವು ಕೊಯ್ಯುತ್ತಿದ್ದ ಅಕ್ಕ ಕಣ್ಣಿಗೆ ಬಿದ್ದಳು ಅಕ್ಕನಿಗೆ ನಾಳೆ ಮೊದಲ ದೀಪಾವಳಿ! ಭಾವ ಖಂಡಿತ ಬರುತ್ತಾರೆ ವಾರಕ್ಕೆರಡು ಕಾಗದ ತಪ್ಪದೆ ಬರೆಯುತ್ತಿದ್ದಾರಲ್ಲವೆ? ಅದನ್ನು ರೂಮಿನಲ್ಲಿ ಬಾಗಿಲು ಮುಚ್ಚಿ ಅಕ್ಕ ಹತ್ತಾರು ಬಾರಿ ಓದುತ್ತಿದ್ದಳಲ್ಲವೆ?

ತನಗೆ ಬೆಳಗಾಗುತ್ತಿದ್ದಂತೆ ಅವಸರ. ತಾಯಿಗೆ ಅಷ್ಟಿಷ್ಟು ಸಹಾಯ ಮಾಡಿ, ತಮ್ಮ ತಂಗಿಯರನ್ನು ಗದರಿ, ಅವರಿಂದ ಪಾಠಗಳನ್ನು ಓದಿಸಿ ಬರೆಸಿದರೆ ಆಯಿತು. ಬಳಿಕ ತನ್ನ ಸ್ನಾನ, ಊಟ, ಅಲಂಕಾರ-ಆಫೀಸಿನ

ಅವಾಂತರ ಬಸ್ಸು ಹಿಡಿದು ಹೋದರೆ ತಿರುಗಿ ಮನೆ ಸೇರುತ್ತಿದ್ದುದು ಸಂಜೆಯೆ ಇನ್ನೂ ಬರುತ್ತಿದ್ದಂತೆಯೇ ಸಂಜೆ ಕಾಲೇಜಿನ ಅವಸರ ಅದು ಮುಗಿಸಿ ಬಂದಾಗ ಹಾಸಿಗೆ ಕಂಡರೆ ಸಾಕೆನಿಸುತ್ತಿತ್ತು ಅಕ್ಕನ ಮದುವೆಗೆ ಮಾಡಿದ ಸಾಲದ ಹೊರೆ ತನ್ನ ಓದಿಗೆ ಅಡ್ಡ ಬಂದಾಗ ಕೆಲಸಕ್ಕೆ ಸೇರಿ ತಾನು ಸಂಪಾದಿಸಿದ ಹಣದಿಂದಲೇ ಓದುವ ಛಲ ತನ್ನದು

ಮಾತನಾಡದೆಯೇ ಹೋಗುತ್ತಿದ್ದ ಮಗಳಿಗೆ ಮತ್ತೆ ನೆನಪು ಮಾಡಿದರು ತಾಯಿ

"ಕೇಳಿಸ್ತೇನೇ ನಾನು ಹೇಳಿದ್ದು.. ನಾಳೆ ದೀಪಾವಳಿ ಹಬ್ಬ !"

"ಹೂಂಮ್ಮಾ, ಕೇಳಿಸ್ತು"

ವಿಮನಸ್ಕಳಾಗಿ ರಸ್ತೆಗೆ ಕಾಲಿಟ್ಟಳು ಪರ್ಸಿನಲ್ಲಿ ಇದ್ದ ಐವತ್ತು ರೂಪಾಯಿಗಳನ್ನು ಭದ್ರವಾಗಿ ಹಿಡಿದು ಆಫೀಸಿಗೆ ಕಾಲಿಟ್ಟಾಗ ಹನ್ನೊಂದು ಗಂಟೆ ಹೊಡೆದಿತ್ತು ಕೈಕೆಲಸ ಮಾಡುತ್ತಿದ್ದರೂ ಮನಸ್ಸೆಲ್ಲೋ ! ಮನೆಯಲ್ಲಿ ಪಾರ್ಶ್ವವಾಯುವಿನಿಂದ ನರಳುತ್ತಿದ್ದ ತಂದೆ, ದೂರದ ಊರಿನಲ್ಲಿದ್ದ ಅಣ್ಣ ಕಳುಹಿಸುತ್ತಿದ್ದ ಒಂದಿಷ್ಟು ಹಣ, ತಂದೆಯ ಪೆನ್‌ಶನ್, ತನ್ನ ಸಂಪಾದನೆ-ಇಷ್ಟರಿಂದ ತಾನು, ತನ್ನಕ್ಕ, ತಾಯಿ, ತನ್ನ ಇಬ್ಬರು ತಮ್ಮಂದಿರು, ಒಬ್ಬ ತಂಗಿಯ ಜೀವನ ನಡೆಯಬೇಕಿತ್ತು ಕೈಗೆ ಬಂದ ದುಡ್ಡು ನೀರಿನ ಹಾಗೆ ಹರಿದುಹೋಗುತ್ತಿತ್ತು ಅಕ್ಕನ ಮದುವೆಯ ಸಾಲ ಇನ್ನೂ ತೀರಿಲ್ಲ ಆಗಲೇ ದೀಪಾವಳಿಯ ಅಳಿಯತನ

ಹಿಂದಿನ ದಿನದ ರಾತ್ರಿಯ ಚಿತ್ರ ಅವಳ ಕಣ್ಮುಂದೆ ಸುಳಿದಿತ್ತು.

ಕೋಣೆಯಲ್ಲಿ ಮಲಗಿದ್ದರೂ ನಿದ್ದೆ ಸುಳಿದಿರಲಿಲ್ಲ ಬೇಡವೆಂದರೂ ಕಿವಿಯ ಮೇಲೆ ಬೀಳುತ್ತಿತ್ತು ತಂದೆ ತಾಯಿಯರ ಸಂಭಾಷಣೆ.

"ಏನು ಮಾಡೋದೂಂದ್ರೇ, ಅಳಿಯ ಬರ್‍ತೀನೀಂತ ಬರ್‍ದಿದ್ದಾರೆ ಅವರಿಗೆ ಏನೂ ಕೊಡದೆ ಬರಿಕೈಲಿ ಕಳಿಸೋದು ಹೇಗೆ ? ಅವಳಿಗೂ ಮದುವೆ ಯಾದ ಮೊದಲ ವರ್ಷ ಒಂದು ಹೊಸ ಸೀರೆ ಕೊಡಬೇಡ್ವಾ ?"

"ಚೆನ್ನಾಯ್ತು ಕಣೆ ನೀನು ಹೇಳೋದು ಪಾಪ ಆ ಹುಡ್ಗಿ ಮೂರು, ನಾಲ್ಕು ಸೀರೆಯಲ್ಲೇ ಆಫೀಸಿಗೆ ಹೋಗಿ ದುಡಿದು ತಂದುಹಾಕುತ್ತೆ ಅಕ್ಕನ ಮದುವೇಲೂ ಒಂದು ಹೊಸ ಸೀರೆ ಕಾಣಲಿಲ್ಲ ಅವಳು ಸಾಲದ್ದಕ್ಕೆ ಎರಡು

ತಿಂಗಳು ಮನೆಯ ಬಾಡಿಗೆ ಜೇರೆ ಬಾಕಿಯಿದೆ ಅಳಿಯನಿಗೆ ನೋಡೋಣ ಅವಳಿಗೇನೂ ಬೇಡಾ ಇಷ್ಟಕ್ಕೇ ಮುಗೀತಾ ಇನ್ನೂ ಸೀಮಂತ, ಬಾಣಂತನ ಪ್ರಾರಂಭವಾಗುತ್ತೆ ಮುಂದಿನ ವರ್ಷ !"

"ಸಾಕು, ಸುಮ್ನಿರೀಂದ್ರೆ, ಎಲ್ಲಾ ಆಗೋ ಕಾಲ್ದಲ್ಲಿ ಆದ್ರೆ ಚೆನ್ನ... ಮಾಡೋ ಕಾಲ್ದಲ್ಲಿ ಮಾಡಿದ್ರು ಚೆನ್ನ "

"ಏನು ಮಾಡೋದು ಹೇಳು ನನಗೂ ಬೆಟ್ಟದಷ್ಟು ಆಸೆಯಿದೆ, ಮಗಳಿಗೆ ಅಳಿಯನಿಗೆ ಮಾಡುವುದಕ್ಕೆ ಹಾಗಂತ ಮಿಕ್ಕ ಮಕ್ಕಳನ್ನು ಬಾವಿಗೆ ಹಾಕಲಿ '"

ತನ್ನ ತಾಯಿಗೆ ಯಾವ ವಿಷಯದಲ್ಲೂ ಲೋಪವಿರಕೂಡದು ತಾಯಿಯಾದವಳಿಗೆ ಸಹಜವಾಗಿ ಇರುವ ಆಸೆಯೇ ತನಗೆ ಬರುವ ದುಡ್ಡಿನಲ್ಲಿ ತಾನು ಏನು ಬೇಕಾದರೂ ಕೊಂಡುಕೊಳ್ಳಬಹುದು ತನಗೇನಾದರೂ ಆಸೆ ಕಡಿಮೆಯಿದೆಯೆ ? ಚಂದ್ರಿಕಾ ಹೇಳುತ್ತಿರಲಿಲ್ಲವೇ "ನಾನು ಸಂಪಾದಿಸೋದು ನನ್ನ ಕಾಸ್‌ಮೆಟಿಕ್ಸ್‌ಗೇ ಸಾಲದು" ಅಂತ ಬೇಡಾ, ತನಗೆ ಎಷ್ಟು ಬೇಕೋ ಅಷ್ಟೇ ಸಾಕು ಮೈ ಮುಚ್ಚುವುದಕ್ಕೆ ಸಾಧಾರಣ ಸೀರೆ, ದುಡಿಯುವುದಕ್ಕೆ ಶಕ್ತಿ ನೀಡಲು ಹೊಟ್ಟೆಗೆ ಅನ್ನ, ಗಾಳಿ, ಮಳೆ, ಬಿಸಿಲಿನಿಂದ ರಕ್ಷಿಸಲು ಒಂದು ಮನೆ

ಪಾಪ, ಅಕ್ಕನಿಗೂ ಆಸೆಯಿರದಿದ್ದೀತೆ ? ಭಾವನ ಮುಂದೆ ತಾಯಿಯ ಮನೆಯ ಹೊಸ ಸೀರೆ ತೋರಿಸಿಕೊಂಡು ನಲಿಯಲು... ಯಾರಿಗೆ ಇಷ್ಟವಿರು ವುದಿಲ್ಲ ? ಅವಳು ಎಂದೂ, ಯಾರನ್ನೂ ಬಾಯಿಬಿಟ್ಟು ಏನೂ ಕೇಳಿದವಳಲ್ಲ. ನಾಳೆ ಗಂಡನ ಮನೆಗೆ ಹೊರಟುಹೋಗುತ್ತಾಳೆ ಬರುವುದೆಂದೋ... ತಾನೆಂತಹ ಸ್ವಾರ್ಥಿ ದುಡ್ಡು ಕೈಲಿದ್ದೂ ಅವಳಿಗೆ ಹಬ್ಬ ಬರಿ ಕೈಯಲ್ಲಿ ಮಾಡಿಸಬೇಕೆ ? ಐವತ್ತು ರೂಪಾಯಿಗೆ ಅವಳಿಗೆ ಸೀರೆ ಕೊಂಡರೆ . ಅವಳುಟ್ಟು ತನ್ನ ಮುಂದೆ ನಿಂತು

'ಏನೇ ನಂಗೆ ಈ ಕಲರ್ ಒಪ್ಪುತ್ತಾ ? ನಿಂಗೇ ಚೆನ್ನಾಗಿರ್ತಿತ್ತು. ನೀನು ನನಗಿಂತ ಬಿಳುಪು" ಎಂದರೆ ತನ್ನ ಮನಸ್ಸಿಗೆ ಎಷ್ಟು ನೆಮ್ಮದಿ ! ಸಂಜೆ ತಾನು ಮನೆಗೆ ಹೋಗುವ ಮುನ್ನ ಸೀರೆ ತೆಗೆದುಕೊಂಡು ಅಕ್ಕನಿಗೆ ಕೊಡಬೇಕು !

"ಏನ್ರೀ ಸಾಹೇಬ್ರು ಕರೀತಾ ಇದ್ರೂ ಕನಸು ಕಾಣ್ತಾ ಇದ್ದೀರಿ !"

ಅವಳು ಲಗುಬಗೆಯಿಂದ ಎದ್ದು ಹೋದಳು, ಆತ ಕುರ್ಚಿಯ ಮೇಲೆ ಕುಳಿತು ಸೂರು ಸಿಟ್ಟಿಸುತ್ತಿದ್ದ

"ಏನ್ಸಾರ್ ಕರೆದಿರಾ ?"

"ಹೂಂ ನಿನ್ನೆ ಹೇಳಿದ್ದ ಟೆಂಡರ್ ರೆಡಿಯಾಯ್ತೇ? ಡ್ರಾಫ್ಟ್ ಮಾಡೋಕೇ ಇಷ್ಟೊತ್ತಾದರೆ ಟೈಪು ಮಾಡೋದು ಯಾವಾಗ ?"

"ರೆಡಿಯಾಗಿದೆ ಸಾರ್, ನೀವೇ ಸೈನ್ ಮಾಡಿಲ್ಲ ಡಿಸ್‌ಪಾಚ್ ಮಾಡೋಕೆ ನಿನ್ನೆಯಿಂದ ನಿಮ್ಮ ಹತ್ತಿರ ಸೈನ್ ಆಗದೇ ಇದ್ಯಲ್ಲಾ ಸಾರ್ ?"

"ಹೌದಾ ! ಎಲ್ಲಿದೆ ?"

ಅವಳು ನಕ್ಕು ಅವನ ಮುಂದಿದ್ದ ಫೈಲುಗಳ ರಾಶಿಯಲ್ಲಿ ಕೈಯಾಡಿಸಿ ಅವನಿಗೆ ಬೇಕಾಗಿದ್ದ ಕಾಗದವನ್ನು ಮುಂದೆ ಹಿಡಿದಳು

"ಥ್ಯಾಂಕ್ಸ್ ನೀವು ಹೋಗಬಹುದು ಈವತ್ತಿನ ಪೋಸ್ಟ್ ನೋಡಿ ರಿಪ್ಲೈಗಳನ್ನು ರೆಡಿಮಾಡಿ ತನ್ನಿ "

ಅವಳತ್ತ ಹೋಗುತ್ತಲೂ ಆತ ತಲೆಯ ಮೇಲೆ ಕೈಯಾಡಿಸಿಕೊಂಡ ಇಂದು ತನಗೇನು ಬಂತು ! ಕಣ್ಣ ಮುಂದೆಯೇ ಇದ್ದುದನ್ನು ಕಾಣಲಾರದೆ ಹೊಸಬಳ ಹತ್ತಿರ ನಗೆಗೀಡಾಗಬೇಕಾಯಿತಲ್ಲಾ ! ಕಾರಣ ! ಅವಳೇ ! ತನ್ನೊಲವಿನ ಒಡತಿ, ದೀಪಾವಳಿಗೆ ಖಂಡಿತ ಬರಬೇಕೆಂದು ಆಣೆ ಮಾಡಿ ಬರೆದಿದ್ದಾಳೆ! ಅವಳಿಗೇನು ಗೊತ್ತು ತನ್ನ ಕೆಲಸದ ಹೊರೆ! ಮದುವೆಯಾದ ಕೂಡಲೆ ತನ್ನೊಡನೆ ಕಳಿಸಿದ್ದರೆ . ಪಕ್ಷಮಾಸ ಮುಗಿಯಲಿ, ವಿಜಯದಶಮಿ ಮುಗಿಯಲಿ ಎಂದು ಕಾಡಿಸುತ್ತಿದ್ದಾರಲ್ಲಾ ದೀಪಾವಳಿಗೆ ಹೋದಾಗ ಅವಳಿಗೆ ಚುಚ್ಚಿಕೊಡಬೇಕು, ತನ್ನ ಜೊತೆ ಬರಲು !

ಈಗ ಅವಳು ಏನು ಮಾಡುತ್ತಿರಬಹುದು ! ಹೆಸರಿಗೆ ತಕ್ಕಂತೆ ರೂಪ, ರೂಪಕ್ಕೆ ತಕ್ಕ ವಯ್ಯಾರ, ವಯ್ಯಾರಕ್ಕೆ ತಕ್ಕ ನಡೆ ನುಡಿ ತನಗಾಗಿ ಬ್ರಹ್ಮ ಎಷ್ಟು ಕಷ್ಟಪಟ್ಟು ಅವಳನ್ನು ಸೃಷ್ಟಿಸಿದ್ದಾನೋ...ಆ ಚೆಲುವೆ ತನ್ನ ಬಾಳಿನಲ್ಲಿ ಪ್ರವೇಶಿಸಿದ ದಿನದಿಂದ ತನಗೇನು ಆಗಿದೆ? ಅವಳ ನೀಳವಾದ ಅಲೆಗೂದಲೇ ಸಾಕು ಕರಿಯ ಜಲಪಾತದಂತೆ ತಲೆಯಿಂದ ಮಂಡಿಯವರೆಗೆ ಧುಮ್ಮಿಕ್ಕುತ್ತಿತ್ತು ಇನ್ನು ಆ ಸೋಗೆ ಕಂಗಳೋ...ಮಿಂಚಿನ ಕಿಡಿಗಳೋ . ಹಣೆಯಲ್ಲಿ ಮಿನುಗುವ ತಿಲಕ, ನೀಳವಾದ ಮೂಗಿನಲ್ಲಿ ಮಿನುಗುವ ವಜ್ರದ ನತ್ತೋ,

ತುಟಿಯಲ್ಲಿ ಮಿನುಗುವ ನಗುವೋ ! ಎಲ್ಲವೂ ತನಗೆ ಹುಚ್ಚೇ ಅಮ್ಮನೇನೋ ಸೀರೆ ಕೊಂಡು ತಂದಿದ್ದಾಳೆ ಆದರೆ ತಾನು ಅಮ್ಮನಿಗೆ ತಿಳಿಯದಂತೆ ಒಳ್ಳೆಯ ಸೀರೆಯೊಂದನ್ನು ಅವಳಿಗೆ ಸಿಹಿ ಮುತ್ತಿನೊಡನೆ ಇತ್ತರೆ... ಅದನ್ನುಟ್ಟು ಅವಳು ತನ್ನೆದುರು ಸುಳಿದಾಗ, ತಾನು ಮೂಕನಾಗಿ ಅವಳ ಚಿಗುರಿನಂತಹ ಕೈಗಳನ್ನು ಮೃದುವಾಗಿ ಅದುಮಿದರೆ.

"ಸರ್, ಮೇ ಐ ಕಮ್ ಇನ್ ?" ಅವನು ಹಗಲುಗನಸಿನಿಂದ ಎಚ್ಚೆತ್ತ

"ಯೆಸ್, ಯೆಸ್, ಕಮ್ ಇನ್ "

"ಲೆಟರ್ಸ್‌ಗೆ ರಿಪ್ಲೈ ಮಾಡಿಯಾಯ್ತು. ನೀವು ನೋಡಿ ಅಪ್ರೂವ್ ಮಾಡಿದರೆ ಟೈಪಿಗೆ ಕೊಡುತ್ತೇನೆ "

ಅವಳು ಅವನ ಮುಂದ ಕಾಗದಗಳನ್ನು ಇಟ್ಟು ಹೊರಟುಹೋದಳು

ಯಾವುದನ್ನೂ ಓದದೆ ಜೋಡಿಸಿಟ್ಟು 'ಬೆಲ್' ಒತ್ತಿದ ಜವಾನ ಬಂದ ಕೂಡಲೆ,

'ಟೈಪಿಗೆ ಕೊಡುವಂತೆ ಹೇಳು" ಎಂದ.

ಗಡಿಯಾರದ ಮುಳ್ಳುಗಳು ಓಡುತ್ತಿದ್ದವು ಐದು ಗಂಟೆಯಾಗುತ್ತಲೇ ಒಬ್ಬೊಬ್ಬರಾಗಿ ಆಫೀಸಿನಿಂದ ಹೊರಬಿದ್ದರು ಅವನು ಅವಳಿರುವ ಕಡೆಗೆ ಬಂದು,

"ಸ್ವಲ್ಪ ಈ ಬಿಲ್ಸ್ ನೋಡಿಬಿಡಿ. ನಾಳೆ, ನಾಡಿದ್ದು ನಾನು ಊರಿನಲ್ಲಿರುವುದಿಲ್ಲ ಯಾವ್ದೂ ಪೆಂಡಿಂಗ್ ಇರದೇ ಇರಲಿ ಅಂತ..."

"ಆಗ್ಲಿ ಸಾರ್" ಅವಳ ಕಣ್ಣು ಗಡಿಯಾರದತ್ತ ಹೋಯಿತು

"ಲೇಟ್ ಆದ್ರೇ ನಾನು 'ಡ್ರಾಪ್' ಮಾಡಿ ಹೋಗ್ತೀನಿ, ದಯವಿಟ್ಟು ಈ ಬಿಲ್ಸ್ ನೋಡಿಬಿಡಿ "

ತಲೆತಗ್ಗಿಸಿ ಅವಳು ಕಾರ್ಯಮಗ್ನಳಾದಳು ಕರಿಯ ಕೂದಲನ್ನು ಇಬ್ಭಾಗ ಮಾಡಿದ ಬೈತಲೆ, ನೀಳವಾದ ಮೂಗು, ಶುಭ್ರವಾದ ಹಣೆ, ತಗ್ಗಿದ್ದ ನೀಳೆವೆಯ ಕಣ್ಣುಗಳು ಆಡಂಬರವಿಲ್ಲದೆ ಶುಭ್ರ ಸೌಮ್ಯವಾದ ಮುಖ. ತನ್ನೊಲವಿನ ಒಡತಿಯ ವಯಸ್ಸಿನವಳೇ ಇರಬಹುದು. ಆದರೆ ಅಂತರ ! ಇದೊಂದು ತಿಳಿಗೊಳ. ಅವಳು ಮಹಾಪೂರದ ನದಿ ಒಂದು

ವನಸುಮ. ಇನ್ನೊಂದು ರಾಜೋದ್ಯಾನದ ಕಮಲ. ಸಾದಾ ಹತ್ತಿಯ ಸೀರೆಯುಟ್ಟು ಕುಳಿತಿದ್ದ ಅವಳನ್ನು ನೋಡಿ ಅವನ ಮನಸ್ಸು ನೊಂದಿತು. ಪಾಪ, ಎಷ್ಟು ಕಷ್ಟಪಟ್ಟು ದುಡಿಯುತ್ತಾಳೆ ಈ ಚಿಕ್ಕ ವಯಸ್ಸಿನಲ್ಲಿ ! ದೊಡ್ಡ ಸಂಸಾರ ಇರಬೇಕು. ಈ ವಯಸ್ಸಿನಲ್ಲಿ ಎಷ್ಟು ಆಸೆ ಬಯಕೆಗಳಿರುತ್ತವೆ! ಇವಳು ನಿಗರ್ವಿ, ಸರಳೆ ಎನಿಸಿತು.

"ಎಲ್ಲಾ ರೆಡಿಯಾಗಿದೆ ಸರ್" ಅವಳು ಎದ್ದು ನಿಂತಳು

"ನನಗೊಂದು ಉಪಕಾರ ಮಾಡ್ತೀರಾ ?" ಅವನು ಕೇಳಿದ

"...... .. ...... ..."

"ನನ್ನ ಮಿಸೆಸ್‌ಗೆ ನೀವೊಂದು ಸೀರೆ ಚೂಸ್ ಮಾಡಿ ಕೊಡಬೇಕು. ಇವೊತ್ತು ರಾತ್ರಿ ಊರಿಗೆ ಹೊರಡ್ತಾ ಇದ್ದೀನಿ ನಂಗೆ ಹೆಂಗಸರ ಬಟ್ಟೆಯ ವಿಷಯ ಅಷ್ಟು ತಿಳಿಯೋಲ್ಲ "

"ನಾನು ಕಾಲೇಜಿಗೆ ಹೋಗಬೇಕಾಗಿತ್ತು. ಹೊತ್ತಾಗುತ್ತೇನೋ !"

"ಇಲ್ಲ, ನೀವು ಬೇಗ ಸೆಲೆಕ್ಟ್ ಮಾಡಿದರೆ ಬೇಗ ಹೋಗಬಹುದು "

ಅವಳಿಗೆ ಮನಸ್ಸಿರಲಿಲ್ಲ ದುಡ್ಡಿರುವ ದೊಡ್ಡವರ ಸಹವಾಸವೆಂದರೆ ಅವಳಿಗೆ ಅಷ್ಟಕ್ಕಷ್ಟೆ ಆದರೆ ತನ್ನ 'ಬಾಸ್'ಗೆ ಇಲ್ಲವೆನ್ನುವ ಎದೆಗಾರಿಕೆ ಯಿರಲಿಲ್ಲ

ಹೇಗಿದ್ದರೂ ತಾನೂ ಸೀರೆ ಕೊಳ್ಳಬೇಕು ತನ್ನ ವ್ಯಾಪಾರವನ್ನೂ ಮುಗಿಸಬಹುದು. ಒಂದು ದಿನ ಕಾಲೇಜು ಹೋದರೇನು ಎನ್ನಿಸಿತು. "ಸರಿ" ಎಂದಳು ಅವಳು. "ಆದರೆ ಎಷ್ಟು ರೂಪಾಯಿಯೊಳಗಿನ ಸೀರೆ ಹೇಳಿಬಿಡಿ. ಆಗ ಆರಿಸೋದು ಸುಲಭ "

"ಇರಲಿ, ಒಂದು ಮೂನ್ನೂರು...ಮುನ್ನೂರೈವತ್ತು" ಉತ್ಸಾಹದಿಂದ ಹೇಳಿದ

"ಹೇಗಿದ್ದಾರೆ, ಕಲರ್ ?" ಅವಳು ಸಂಕೋಚದಿಂದಲೇ ಕೇಳಿದಳು.

ಅವನು ಕೊಂಚ ಕೆಂಪಾದ

"ತುಂಬಾ ಬೆಳ್ಳಗಿದ್ದಾಳೆ "

ಕಾರು ಅಂಗಡಿಯ ಮುಂದೆ ನಿಂತಿತು. ಅವಳು ಅಂಗಡಿ ಹೊಕ್ಕಳು. ಅವನು ಹಿಂಬಾಲಿಸಿದ.

ಅವಳು ಸೀರೆಗಳನ್ನು ತೆಗೆಸಿದಳು. ರಾಶಿ ರಾಶಿಯಾಗಿ ಬಿದ್ದ ಸೀರೆಗಳ ಮೇಲೆ ಅವಳ ಕಣ್ಣಾಡಿದವು ಇಂತಹ ಸೀರೆಗಳನ್ನು ತಾನು ಮುಟ್ಟುವುದಕ್ಕೂ ಸಿಗುವುದಿಲ್ಲವಲ್ಲಾ ಎಂದಿತು ಮನಸ್ಸು ಅವನು ದೂರ ಕೈಕಟ್ಟಿ ನಿಂತಿದ್ದ ಕೊನೆಗೆ ನಸುಗೆಂಪಿನ, ಮೈತುಂಬಾ ಜರಿಯ ಹೂವಿದ್ದ ಸೀರೆ ಅವಳ ಮನಸ್ಸಿಗೆ ಒಪ್ಪಿತು ಅವನನ್ನು ಕರೆದು ತೋರಿದಳು ಅವನಿಗೂ ಮೆಚ್ಚಿಕೆಯಾಯ್ತು.

"ಬಿಲ್ ಮಾಡಿಸಿ ಪ್ಯಾಕ್ ಮಾಡಿಸಿ, ಒಂದು ನಿಮಿಷ" ಎಂದಳು

ಅವಳು ಅಂಗಡಿಯವನ ಹತ್ತಿರ ಕೇಳಿದಳು "ಯಾವ್ದಾದ್ರೂ ಕಡಿಮೆ ಬೆಲೆಯ ಐವತ್ತರ ಒಳಗಿನ ಸೀರೆ ತೋರಿಸುತ್ತೀಯಾ ?"

ಮತ್ತೆ ರಾಶಿಯಾಗಿ ಬಿದ್ದ ಸೀರೆಗಳಲ್ಲಿ ತಿಳಿ ಹಸಿರು ಬಣ್ಣದ ಫುಲ್ ವಾಯಿಲ್ ಸೀರೆ ಅವಳಿಗೆ ಮೆಚ್ಚಿಕೆಯಾಯಿತು "ಇದನ್ನೂ ಪ್ಯಾಕ್ ಮಾಡಿ" ಎಂದಳು

ಅವನು ಪಾಕೆಟ್ ಹಿಡಿದು ನಿಂತಿದ್ದ ಅವಳು ಅಂಗಡಿಯವನಿಗೆ ದುಡ್ಡು ಕೊಡಲು ಪರ್ಸ್ ತೆಗೆದಾಗ,

"ರಾಯರು ಕೊಟ್ಟಿದ್ದಾರಮ್ಮಾ" ಎಂದು ಅವಳ ಸೀರೆಯನ್ನೂ ಪಾಕೆಟ್ಟಿನಲ್ಲಿ ಕಟ್ಟಿಕೊಟ್ಟ ಅವಳ ಹಣೆಯ ಮೇಲೆ ಗೆರೆ ಮೂಡಿತು

"ನೀವು ಕೊಡಬಾರದಾಗಿತ್ತು" ಎಂದಳು

"ಇರಲಿ ಬಿಡಿ ನನಗೆ ಉಪಕಾರ ಮಾಡಿದವರಿಗೆ ಹಬ್ಬದ ಸಲುವಾಗಿ ನನ್ನ ಸಣ್ಣ ಉಡುಗೊರೆ ಎಂದುಕೊಳ್ಳಿ" ಎಂದ

ಅಂಗಡಿಯಲ್ಲಿ ಮಾತು ಬೆಳೆಸಲು ಮನಸ್ಸಾಗಲಿಲ್ಲ ಅವಳಿಗೆ ಅವಳಿಗರಿ ವಿಲ್ಲದೆಯೇ ಕಣ್ಣಲ್ಲಿ ಕೃತಜ್ಞತೆಯ ಭಾವ ಮೂಡಿತು.

"ಕೊಂಚ ಹೂವು, ಹಣ್ಣು, ತರಕಾರಿ. ಪಟಾಕಿ ಕೊಳ್ಳುವುದಿಲ್ಲವೇ ?" ಅವಳು ತನ್ನ ತಾಯಿಯ ಮಾತು ನೆನಸಿಕೊಂಡು ಹೇಳಿದಳು

"ಯೂ ಆರ್ ರೈಟ್, ನಾನು ಮರೆತಿದ್ದೆ ಬನ್ನಿ "

ಇಬ್ಬರೂ ಹಣ್ಣು ಹೂವು, ತರಕಾರಿ, ಪಟಾಕಿಗಳನ್ನು ವ್ಯಾಪಾರ ಮಾಡಿದರು ಅವನು ಅವಳು ದುಡ್ಡು ಕೊಡುವುದಕ್ಕೆ ಬಿಡಲಿಲ್ಲ. "ಇರಲಿ ಬಿಡಿ ಸಾಲ ಇನ್ಯಾವಾಗಲಾದರೂ ತೀರಿಸುವಿರಂತೆ" ಎಂದುಬಿಟ್ಟ

ಇಬ್ಬರ ಕೈಗಳಲ್ಲೂ ಪೊಟ್ಟಣಗಳ, ಪಾಕೆಟ್ಟುಗಳ ರಾಶಿ "ಎಲ್ಲ ಹಿಂದಿನ ಸೀಟಿನಲ್ಲಿ ಹಾಕಿ ಮನೆಯ ಹತ್ತಿರ ತೆಗೆದುಕೊಂಡರಾಯಿತು" ಎಂದನು

ಇಬ್ಬರೂ ಹಿಂದಿನ ಸೀಟಿನ ಮೇಲೆ ಎಲ್ಲಾ ರಾಶಿ ಹಾಕಿ ಮುಂದೆ ಕುಳಿತರು

ದೊಡ್ಡ ದೊಡ್ಡ ರಸ್ತೆಗಳು ಸವೆದವು. ಸಣ್ಣ ತಿರುವಿನಲ್ಲಿ ಕಾರು ನಿಲ್ಲಿಸಲು ಹೇಳಿದಳು ಅವಳು, ಅವನು ಕಾರು ನಿಲ್ಲಿಸಿದ ಮೇಲೆ ಇಳಿದು ಹಿಂದಿನ ಸೀಟಿನಲ್ಲಿ ಹಾಕಿದ್ದ ಪಾಕೆಟ್ಟುಗಳನ್ನು ಕಾರಿನಲ್ಲಿದ್ದ ಮಬ್ಬು ಬೆಳಕಿನಲ್ಲಿ ಆಯ್ದುಕೊಂಡಳು

"ತುಂಬಾ ಥ್ಯಾಂಕ್ಸ್ ನನ್ನ ಮಿಸೆಸ್ ಬಂದ ಮೇಲೆ ನಮ್ಮ ಮನೆಗೆ ಖಂಡಿತಾ ಬರಬೇಕು" ಅವನು ಕಾರಿನಲ್ಲಿ ಕುಳಿತು ಕೈಮುಗಿದ

"ನಿಮ್ಮ ಉಡುಗೊರೆಗೆ ಥ್ಯಾಂಕ್ಸ್ ಖಂಡಿತ ನಿಮ್ಮ ಮನೆಗೆ ಬರುತ್ತೇನೆ"

ಅವಳು ಸಣ್ಣ ರಸ್ತೆಯಲ್ಲಿ ಕಾಲಿಟ್ಟಳು ಅವಳು ಮರೆಯಾಗುವವರೆಗೆ ಕಾದು ಅನಂತರ ಅವನು ಕಾರು ಸ್ಟಾರ್ಟ್ ಮಾಡಿದ ಅವನಿಗೂ ಮನಸ್ಸಿಗೆ ನೆಮ್ಮದಿ ದೊರಕಿತ್ತು ತನ್ನ ಉಡುಗೊರೆ ಅವಳು ತೆಗೆದುಕೊಂಡಳಲ್ಲಾ ಸಧ್ಯ, ಧನ್ಯನಾದೆ ಎಂದುಕೊಂಡ ಊರಿಗೆ ಹೋಗಿ ಹೇಳಿದರೆ ಅವಳೂ ಸಂತಸಪಡಬಹುದು ಅವಳೆಷ್ಟಾದರೂ ತನ್ನೊಲವಿನ ಒಡತಿಯಲ್ಲವೆ? ಮನಸ್ಸು ಹೂವಾಗಿ ಅರಳಿತು. ಬಾಯಿಂದ ಹಾಡೊಂದು ಹೊರಹೊಮ್ಮಿತು.

ಅವಳು ಸರಸರನೆ ಮನೆಯತ್ತ ಹೆಜ್ಜೆಯಿಟ್ಟಾಗ ಅವಳ ಮನಸ್ಸೂ ಹೂವಾಗಿತ್ತು. ತನಗಾಗಿ ಅವನು ಖರ್ಚು ಮಾಡಿದ್ದು, ಸಾಗರದಲ್ಲಿ ಒಂದು ಬಿಂದು, ಬೆಲೆ ಎಷ್ಟಾದರೇನು? ಮನಸ್ಸಿನ ಔದಾರ್ಯ ಹೆಚ್ಚಿನದು ಅವನು ತೆಗೆದುಕೊಟ್ಟ ಸೀರೆ ತಾನು ಹೇಗೆ ಆಫೀಸಿಗೆ ಉಟ್ಟು ಹೋಗುವುದು? ಅಕ್ಕನಿಗೆ ಕೊಟ್ಟರೆ...ಹೇಗಿದ್ದರೂ ತನ್ನ ದುಡ್ಡು ತನ್ನ ಹತ್ತಿರವೇ ಇದೆ ಚಂದ್ರಿಕಾಳಂತಹ ಸೀರೆ ಕೊಂಡುಕೊಳ್ಳಬಹುದು

"ಅಕ್ಕ ಬಂದ್ಲು .." ತಮ್ಮ ತಂಗಿಯ ಧ್ವನಿ

"ಓಹೋ ಎಷ್ಟೊಂದು ಸಾಮಾನು ತಂದಿದ್ದಾಳೆ!" ಎಂದಿತು ಇನ್ನೊಂದು ಪುಟ್ಟ ಧ್ವನಿ.

ಎದುರಿಗೆ ಬಂದ ದೊಡ್ಡಕ್ಕನನ್ನು ನೋಡಿದಳು. ಮಾರನೆಯ ದಿನ

ಬರುವ ಪ್ರಿಯತಮನಿಗಾಗಿ ಆಗಲೇ ಕಣ್ಣಲ್ಲಿ ಹೊಳಪೂ ಕೆನ್ನೆಯಲ್ಲಿ ಕೆಂಪೂ ಮೂಡಿತ್ತು.

ತಾಯಿಯ ಕೈಗೆ ಹೂವು, ಹಣ್ಣು, ತರಕಾರಿ ಕೊಟ್ಟಳು ಮಕ್ಕಳ ಮುಂದೆ ಪಟಾಕಿ, ಮತಾಪುಗಳ ಪಾಕೆಟ್ಟುಗಳನ್ನು ಸುರಿದಳು ಸೀರೆಯ ಪ್ಯಾಕೆಟ್ಟನ್ನು ಅಕ್ಕನ ಮುಂದೆ ಹಿಡಿದು,

"ದೀಪಾವಳಿಯ ಶುಭಾಶಯಗಳೊಂದಿಗೆ ಅಕ್ಕ, ನಿನಗಾಗಿ" ಎಂದಳು

ಅಕ್ಕನ ಕಣ್ಣುಗಳು ಅರಳಿದವು

"ಯಾಕ ಸುಮ್ನೇ ದುಡ್ಡು ದಂಡ ಮಾಡ್ತೀ? ನಂಗ್ಯಾಕೀ ಸೀರೆ ತಂದಿ?" ಎಂದು ಬಾಯಿ ಹೇಳಿದರೂ ಪಾಕೆಟ್ಟನ್ನು ಎರಡು ಕೈಗಳೂ ಭದ್ರವಾಗಿ ಹಿಡಿದಿದ್ದವು

ಅವಳು ನಕ್ಕು ಕೋಣೆಗೆ ಹೋಗಿ ತನ್ನ ಪರ್ಸಿನಿಂದ ಐದು ಹತ್ತು ರೂಪಾಯಿಯ ನೋಟುಗಳನ್ನು ಸೀರೆಯ ಮಡಿಕೆಯಲ್ಲಿ ಇಡುತ್ತಿರುವಾಗ ಕೈಯಲ್ಲಿ ಕಾಫಿಯ ಲೋಟ ಹಿಡಿದು ತಾಯಿ ಬಂದಳು

"ಎಲ್ಲಿತ್ತೇ ಇಷ್ಟೊಂದು ದುಡ್ಡು?" ಅವರ ಧ್ವನಿಯಲ್ಲಿ ಅಚ್ಚರಿಯಿತ್ತು

"ಎಲ್ಲಿತ್ತೇ ಇಷ್ಟೊಂದು ದುಡ್ಡು? ಎಷ್ಟು ಭಾರೀ ಸೀರೆ ತಂದಿದ್ದೀಯಾ!" ಅಕ್ಕನ ಧ್ವನಿ ಕೇಳಿ ಅವಳು ತಿರುಗಿ ನೋಡಿದಳು ಅವಳ ಕೈಯಲ್ಲಿ ನಸುಗೆಂಪಿನ ಜರಿಯ ಸೀರೆ!!

ತಾಯಿ, ಅಕ್ಕ ತನ್ನನ್ನು ದೀರ್ಘವಾಗಿ ನೋಡುತ್ತಿದ್ದಾಗ ಅವಳ ಬಾಯಲ್ಲಿನ ದ್ರವ ಒಣಗಿತು ಅವನ ವಿಸ್ಮಯಪೂರಿತವಾದ ಮುಖ ಕಣ್ಮುಂದೆ ಸುಳಿಯಿತು

ಬಾಯಿಗೆ ಎತ್ತಿಕೊಂಡ ಕಾಫಿಯ ಲೋಟ ಕೈಯಲ್ಲೇ ಉಳಿಯಿತು. ಹಬ್ಬಕ್ಕೆ ಯಾರು ಯಾರು ಯಾವ ಯಾವ ಉಡುಗೊರೆ ಕೊಟ್ಟಿದ್ದರು!!

# ಯಾರಿಗೆ ಯಾರು?

ಬಣ್ಣ ಹೋಗಿ ಬಿಳಿಯದಾಗಿದ್ದ ನೈಲಾನ್ ಸೀರೆಯುಟ್ಟು ಅಚೆಮನೆ ಅಲಮೇಲಮ್ಮ ಕೊಟ್ಟ ಹೂಮುಡಿದು ಕ್ರೀಮ್ ಹಾಕಿದ್ದ ಹೈಹೀಲ್ಡ್ ಆಗಿದ್ದ ಚಪ್ಪಲಿ ಮೆಟ್ಟಿ ಕೈಯಲ್ಲಿ ಅಂಗೈ ಅಗಲದ ಚೀಲವನ್ನು ಕೈಗೆ ತಗಲಿಹಾಕಿಕೊಂಡು ಮೋಟುಗಾಲು ಹಾಕುತ್ತ ಹೊರಟ ಲಕ್ಷ್ಮಮ್ಮನನ್ನು ನೋಡಿ ಪಕ್ಕದ ಮನೆ ಪದ್ಮಾವತಮ್ಮ ಕಣ್ಣು ಕಿರಿದು ಮಾಡಿ ನಕ್ಕರು

"ಏನ್ರೀ ಲಕ್ಷ್ಮಮ್ಮ ತರಕಾರಿಗಾ?" ಅವರ ಕಣ್ಣು ಕೈಯ್ಯಲ್ಲಿದ್ದ ಚೀಲದ ಮೇಲಿತ್ತು

"ಹೂಂ ರೀ, ತುಂಬಾ ಜಾಣ್ರಪ್ಪ ನೀವು. ನಾನೆಲ್ಲಿಗ್ಹೋರಟ್ರೂ ಸರಿ ಯಾಗಿ ಊಹಿಸಿಬಿಡ್ತೀರಿ ಬರ್ತೀರಾ ನೀವೂನೂ?" ಲಕ್ಷ್ಮಮ್ಮ ಮಾತು ಸವೆದು ಹೋದೀತೆನ್ನುವಷ್ಟು ನಯವಾಗಿ ಕೇಳಿದರು

"ಇಲ್ರಪ್ಪಾ, ಯಜಮಾನ್ರಿನ್ನೂ ಮನೆಗೆ ಬಂದಿಲ್ಲ ನೀವು ಹೋಗ್ಬಿಟ್ಟು ಬನ್ನಿ ನಿಮ್ಮಾಣತನ ನನಗೆಲ್ಲಿ ಬರ್ಬೇಕೂ ಎಲ್ಲಕ್ಕೂ ನಿಮ್ದೇ ಒಂದು ರೀತಿ ನೋಡಿ " ಎಂದ ಪದ್ಮಾವತಮ್ಮ. "ಬರೀ ಕೈಲಿ ಹೊಂಟ್ರೆ ಬಾಡಿಗೆ ವಸೂಲಿಗೆ. ಹರಕಲು ಸೀರೆ ಉಟ್ಟು ಹೊರಟ್ರೆ ಹೊಸ ಸೀರೆ ತರೋಕೆ ಪರ್ಸ್ ಹಿಡಿದು ಹೊರಟ್ರೆ ಬ್ಯಾಂಕಿಗೆ, ಪುಟ್ಟ ಕೈಚೀಲ ಇದ್ರೆ ತರಕಾರಿಗೆ" ಎಂದು ಬಂದ ಮಾತನ್ನು ನಾಲಿಗೆ ಕಚ್ಚಿ ತಡೆದರು.

"ಸರಿ ಬರ್ತೀನ್ರೀ ಹಾಗಾದ್ರೆ ಇನ್ನೇನು ಕತ್ತಲಾಗಿಬಿಡುತ್ತೆ "

## ಬಲಿತಿದ್ಯಾ ನೋಡೋಣ

ಲಕ್ಷ್ಮಮ್ಮನ ಮೋಟುದ್ದದ ಸೆರಗು ಮರೆಯಾಗುತ್ತಿದ್ದುದನ್ನೇ ನೋಡಿ ಪದ್ಮಾವತಮ್ಮ ನಿಟ್ಟುಸಿರಿಟ್ಟರು. ಅದೊಂದು ದಿನ ಲಕ್ಷ್ಮಮ್ಮನ ಜೊತೆ

ಗಾಂಧಿಬಜಾರಿಗೆ ಹೋಗಿದ್ದಾಗ ಎಂಟಾಣೆ ಬಿಲ್ಲೆಯೊಂದು ಹಿಡಿದು ನಾನೂರು ರೂಪಾಯಿ ಸೀರೆಯಿಂದ ಎರಡು ಪೈಸೆ ಕೊತ್ತಂಬರಿ ಸೊಪ್ಪಿನವರೆಗೆ ಎಲ್ಲ ಅಂಗಡಿಯಲ್ಲೂ ಚೌಕಾಸಿ ಮಾಡಿ ಏನೂ ವ್ಯಾಪಾರ ಮಾಡದೆ ಕೊನೆಗೆ ಎಂಟಾಣೆ ಯನ್ನೂ ಭದ್ರಪಡಿಸಿ ಪದ್ಮಾವತಮ್ಮ ಎಲ್ಲಿ ಒಂದು ಸೊಪ್ಪಿನ ಕಂತೆ ಕೊಡಿ. ಬಲಿತು ಹೋಗಿದ್ಯಾ ನೋಡೋಣ ಎಂದು ಕೇಳಿ ತೆಗೆದುಕೊಂಡು ಮಾರನೆಯ ದಿನ ಅದರಲ್ಲೇ ಹುಳಿ ಮಾಡಿ ತಿಂದು 'ಪದ್ಮಾವತಮ್ಮ ನಿನ್ನೆ ನೀವು ಕೊಟ್ಟ ಸೊಪ್ಪು ಬಹಳ ಬಲಿತುಹೋಗಿತ್ತು ಹಾಲು ಕರ್‍ಯೋ ನಿಂಗನ ಕೈಗೆ ಹಾಕಿಬಿಟ್ಟೆ' ಎಂದಿದ್ದು ಜ್ಞಾಪಕಕ್ಕೆ ಬಂತು. ಅದೂ ಅಲ್ಲದೆ ಲಕ್ಷ್ಮಮ್ಮನ ಹಿಡಿತ ಅವರ ಭೀಮಾಕಾರಕ್ಕೆ ಬಲು ವ್ಯತಿರಿಕ್ತವಾಗಿತ್ತು.

ಇಪ್ಪತ್ತೈದು ಗ್ರಾಂ ಹುರುಳಿಕಾಯಿ, ನಾಲ್ಕು ಹಸಿಮೆಣಸಿನಕಾಯಿ, ಒಂದು ಆಲೂಗಡ್ಡೆ, ಅರ್ಧ ನವಿಲುಕೋಸು, ಒಂದು ತೆಂಗಿನಕಾಯಿ ಚೂರು, ಇದಲ್ಲದೆ ತೂಕ ಕಡಿಮೆಯಾಯಿತೆಂದು ಅಂಗಡಿಯವನ ಮುಂದೆ ನಿಂತು ವಾಚಾಮಗೋಚರ ಜಗಳ . ಪದ್ಮಾವತಮ್ಮ ನೆನೆಸಿಕೊಂಡು ನಕ್ಕರು

ಹತ್ತು ವರ್ಷಗಳಿಂದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ತಮ್ಮ ಪಕ್ಕದ ಮನೆಯಲ್ಲಿ ನಡೆಯುತ್ತಿದ್ದ ಜೀವನನಾಟಕ ಅವರಿಗೆ ಸಾಕಾಗಿಹೋಗಿತ್ತು. ಲಕ್ಷ್ಮಮ್ಮ ಲಕ್ಷಣವಾಗಿ ಲಾಟರಿ ಟಿಕೇಟಿನ ಕಾಲದಲ್ಲಿ ಹುಟ್ಟಿ ಬೆಳೆದು ತಮ್ಮ ಹೆಸರನ್ನು ತಾನು ಲಕ್ಷಾಧಿಕಾರಿಯಾಗಲೆಂದೇ ತನ್ನ ತಾಯಿ ಇಟ್ಟಿದ್ದೆಂದುಕೊಂಡು ತಿಳಿದಿದ್ದರು. ಅವರ ಉಳಿತಾಯ ರೀತಿನೀತಿ ನಮ್ಮ ಪಂಚವಾರ್ಷಿಕ ಯೋಜನೆ ಗಳೊಂದೂ ಕಂಡೂ ಕಾಣದೆ ಅಚ್ಚರಿಪಡುವಂತಿತ್ತು ಕತ್ತಲಾಗುವ ಮುನ್ನ ಎಲ್ಲ ಕೆಲಸ ಮುಗಿಸಿ ಊಟ ಮಾಡಿ ಮುಸುಗು ಬೀರಿ ಮಲಗುತ್ತಿದ್ದ ಅವರಿಗೆ ವಿದ್ಯುಚ್ಛಕ್ತಿಯ ಒಳಕೆಯಲ್ಲಿ ಕಾಲು ಭಾಗ ಖೋತಾ ಹೋಗಲಿ, ಪೂರ್ತಿಯೇ ಖೋತಾ ಆಗುತ್ತಿತ್ತು

"ಪಾಪ, ನೋಡ್ರೀ, ನಾವು ದೀಪ ಉರ್ಸಿ ಕರೆಂಟು ಹಾಳುಮಾಡೋ ಬದ್ಲು ಯಾವ್ದಾದ್ರೂ ಫ್ಯಾಕ್ಟ್ರಿಯಾದ್ರೂ ಉಪಯೋಗಿಸಿಕೊಳ್ಳಲಿ" ಎಂದು ತಮ್ಮ ಮಿತವ್ಯಯದಿಂದಲೇ ಕಾರ್ಖಾನೆಗಳು ಉದ್ಧಾರವಾಗುತ್ತಿರುವುದೆಂದು ನಂಬಿದ್ದರು ತಮ್ಮ ಕಾಂಪೌಂಡಿನಲ್ಲಿದ್ದ ಪಿತ್ರಾರ್ಜಿತವಾಗಿ ಬಂದಿದ್ದ ಮನೆಯನ್ನು ಆರು ಭಾಗ ಮಾಡಿ ಆರುನೂರು ರೂಪಾಯಿ ಬಾಡಿಗೆ ಪಡೆದು

ಬ್ಯಾಂಕಿಗೆ ಸೇರಿಸುತ್ತಿದ್ದರು "ಅಯ್ಯೋ ಬಿಡ್ರೀ, ಇರೋ ಒಂದು ಮನೆ ಹುಡಿ ಹುಡ್ಕೀ ನಂಗ್ಯಾಕೆ ಇಷ್ಟು ದೊಡ್ಡ ಮನೆ. ಪಾಪ ಅವ್ರು ಮನೆ ಹುಡಿ ಹುಡ್ಕೀ ನೂರು ರೂಪಾಯಿಗೆಲ್ಲೂ ಸಿಕ್ಕೀ ಒದ್ದಾಡ್ತಾ ಇದ್ರು ಅದಕ್ಕ ಕೊಟ್ಟಿದ್ದೀನಿ" ಎಂದು ಉಪಕಾರಿಯಂತೆ ಮಾತಾಡಿ ತಾವು ಮಾತ್ರ ತಮ್ಮ ತಾತನ ಕಾಲದಲ್ಲಿ ಕುದುರೆಯ ಲಾಯವಾಗಿದ್ದುದನ್ನು ಭದ್ರಪಡಿಸಿ ಅದರಲ್ಲಿ ಹಾಯಾಗಿದ್ದರು

ಎಲ್ಲ ಪರರಿಂದ....

ಲಕ್ಷಮ್ಮ ಒಂದು ಬೆಂಕಿಕಡ್ಡಿಯನ್ನು ಕೊಳ್ಳುತ್ತಿರಲಿಲ್ಲ ಕಾಂಪೌಂಡಿನಲ್ಲಿ ಗುತ್ತಿಗೆಗೆ ಕೊಟ್ಟಿದ್ದ ಹುಣಿಸಿನ ಮರ, ಸಂಪಿಗೆ ಮರ, ಮಾವಿನ ಮರ, ಕರಿಬೇವಿನ ಸೊಪ್ಪಿನ ಮರಗಳ ಕೆಳಗ ಉದುರಿದ್ದ ಕಡ್ಡಿಗಳನ್ನು ಆರಿಸಿಟ್ಟು ಪಕ್ಕದ ಮನೆಯಿಂದ ಕೆಂಡ ತಂದು ಹೊತ್ತಿಸಿ ಅಡಿಗೆ ಮಾಡಿ, ಒಂದು ಬಕೆಟ್ ಬಿಸಿನೀರು ಕಾಯಿಸಿಕೊಂಡು ಸ್ನಾನ ಮಾಡಿ ಉಳಿದ ಕಡ್ಡಿಗಳನ್ನು ಆರಿಸಿ ಮಾರನೆಯ ದಿನಕ್ಕಾಗಿ ಇಡುತ್ತಿದ್ದರು ಅನ್ನವೊಂದು ಮಾಡಿಕೊಂಡು, ಅಕ್ಕ ಪಕ್ಕಗಳಲ್ಲಿದ್ದ ಬಾಡಿಗೆದಾರರ ಮನೆಗಳಿಂದ ಸಾರು, ಪಲ್ಯ, ಹುಳಿ ಗೊಜ್ಜು ಗಳನ್ನು ನಯವಾಗಿ ಕೇಳಿ ತಂದು ಊಟ ಮುಗಿಸುತ್ತಿದ್ದರು ಮೈ ಸೋಪಿಗ ದುಂಡನಯ ಕಲ್ಲು, ಹಲ್ಲುಜ್ಜುವುದಕ್ಕೆ ಬೇವಿನ ಕಡ್ಡಿ, ಬಟ್ಟೆಯೊಗೆಯಲು ಅಂಟುವಾಳದ ಕಾಯಿ, ಎಲ್ಲ ಅಕ್ಕಪಕ್ಕದವರ ಮನೆಗಳಲ್ಲಿ ಹುಡುಕಿ ತರುತ್ತಿದ್ದರು ಎರಡನೇ ಸೀರೆ ಕೊಂಡು ಒಂದು ವರ್ಷ ಉಟ್ಟು, ಮಾರನಯ ವರ್ಷ ಅದಕ್ಕೆ ಪ್ರಿಂಟ್ ಹಾಕಿಸಿ ಹೊಸ ಸೀರೆಯೆಂದು ಹೇಳುತ್ತಿದ್ದರು ಮರುವರ್ಷ ಅವುಗಳಿಗೆ ಬೇರೆ ಅಂಚು, ಅನಂತರ ಅವುಗಳ ಬಣ್ಣವನ್ನು ನಾಲ್ಕಾಣೆ ಬಣ್ಣದ ಸೋಪು ಹಾಕಿ ಬದಲಾಯಿಸಿ ಹೊಸ ಸೀರ ಮಾಡಿಕೊಳ್ಳುತ್ತಿದ್ದರು ಕೊಳ್ಳುತ್ತಿದ್ದುದ್ದೂ ಎಂದೂ ಹರಿಯದ ನೈಲಾನ್ ಸೀರೆಗಳೇ!!

ಕೊನೆಗೆ ಸಂಸಾರದ ವಿಷಯವೂ ಅಷ್ಟೆ ಗಂಡ ನರಸಿಂಹ ಲಕ್ಷಮ್ಮನ ಉಳಿತಾಯದಲ್ಲಿ ಜೀವ ಸಮೇತ ಉಳಿಯುವುದೇ ಕಷ್ಟವಾಗಿತ್ತು ಗಂಡನ ಸರಸ ಸಂಭಾಷಣೆಯಲ್ಲಿಯೂ ಕಾಲವನ್ನೂ ವ್ಯರ್ಥ ಮಾಡಲಿಚ್ಛಿಸದಾಗ ನರಸಿಂಹ ಉಟ್ಟ ಬಟ್ಟೆಯಲ್ಲೇ ಹೇಳದೆ ಕೇಳದೇ ಓಡಿಹೋಗಿದ್ದ ಇನ್ನು ಮಕ್ಕಳ ಮಾತೇಕೆ? ಅಕ್ಕಪಕ್ಕದ ಮನಯ ಮಕ್ಕಳನ್ನೇ ಎತ್ತಿ ಮುದ್ದಾಡಿ ಮಾತಾಡಿಸಿ

ಸಂಭ್ರಮಪಟ್ಟರು ಲಕ್ಷಮ್ಮ, ಇಷ್ಟೆಲ್ಲಾ ಮಿತವ್ಯಯವಿದ್ದರೂ ಮತ್ತೊಂದರಲ್ಲಿ ಮಾತ್ರ ಮುಕ್ತಹಸ್ತೆಯಾಗಿದ್ದರು ಮಾತಿಗೆ ನಿಂತರೆ ಕೊನೆ ಮೊದಲಿರುತ್ತಿರಲಿಲ್ಲ

ಇಂದೂ ಪದ್ಮಾವತಮ್ಮನ ಕೈಲಿ ಒಂದು ಕಂತೆ ಸೊಪ್ಪು ಗಿಟ್ಟಿಸಬಹುದೆಂದುಕೊಂಡಿದ್ದ ಲಕ್ಷಮ್ಮನಿಗೆ ಅವರು ಬರದಿದ್ದಾಗ ಕೊಂಚ ಬೇಸರವೇ ಆಯಿತು ಆ ಯೋಚನೆಯ ಗುಂಗಿನಲ್ಲಿ ಅತ್ತ ಇತ್ತ ನೋಡದೇ ನಡೆಯುತ್ತಿದ್ದ ಲಕ್ಷಮ್ಮ ತಮ್ಮ ಹಿಂದೆ ತಮಗೆಂದೂ ಸಿಕ್ಕದಿದ್ದ ಮಗುವೊಂದು ಹಿಂಬಾಲಿಸುತ್ತಿದ್ದುದು ತಿಳಿಯಲಿಲ್ಲ ನೀರು ಗಾಳಿಯಂತೆ ಮಕ್ಕಳು ಬಿಟ್ಟಿ ಸಿಕ್ಕರೆ ಬಿಡುತ್ತಿದ್ದರೇ ?

ನೀವಿದ್ದೇ ಹೀಗೆ....

ತರಕಾರಿಯ ಅಂಗಡಿಯ ಮುಂದೆ ತಮಗೆ ಕಾಣದೆ ಒಂದು ಕೊಳೆತ ಹುರುಳೀಕಾಯಿ ಹಾಕಿದ್ದಕ್ಕಾಗಿ ಐದು ಪೈಸೆ ಕಡಿಮೆ ಕೊಡುವುದಾಗಿ ಚೌಕಾಸಿ ಮಾಡುತ್ತಿದ್ದಾಗ ಎದುರಿಗೆ ಹಾಜರಾದ ಪೋಲೀಸ್ ಅರಸಪ್ಪನನ್ನು ಕಂಡು ತಮ್ಮ ಗಂಟಲು ಮತ್ತೂ ದೊಡ್ಡದು ಮಾಡಿದರು

"ನೋಡ್ದ್ಯಾಪ್ಪಾ ಮೋಸಾನಾ ನೀವು ಪೋಲೀಸ್‌ಗಳಿದ್ದೇ ಹೀಗೆ ಇನ್ನು ನೀವ್ಯಾರೂ ಇಲ್ದಿದ್ರೆ ಇನ್ನು ಹ್ಯಾಗೋ ಇವರ ವ್ಯಾಪಾರ ! !"

ಅರಸಪ್ಪ ಅಪ್ರತಿಭನಾದ ಅವನ ಕೈಯಲ್ಲಿ ಒಂದು ಮಗು ಕೆದರಿದ ಕೂದಲು, ಮಾಸಿದ್ದ ಹಸಿರು ಚಡ್ಡಿ ನೀಲಿ ಪರಟು ಹಾಕಿದ್ದ ಮಗು

"ಆ ಮಾತು ಆಂಗಿರ್ಲಿ ಇಚಾರಿಸ್ಕೊಂತೀನಿ ಈ ಮಗಾನ ಯಾಕೆ ರೋಡ್ನಾಗೇ ಬುಟ್ಬುಟ್ಟು ಬಂದ್ಬುಟ್ರೀ ಬರೀ ಕಾರು ಬಸ್ಸು ಆಟೋರಿಕ್ಷಾ ಬ್ರೇಕಿಲ್ದಾಗೇ ಓಡಾಡ್ತಾವೆ ಕರ್ರ್ಕೊಳ್ಳಿ !" ಆ ಮಾತು ಕೇಳಿ ಲಕ್ಷಮ್ಮ ಕಣ್ಣು ಕಣ್ಣು ಬಿಟ್ಟರು ತಮ್ಮ ಪಕ್ಕದಲ್ಲಿ ನಿಂತಿದ್ದ ಮುಡಿ ಹೆಂಗಸಿನ ಕಡೆ ನೋಡಿ ನಕು ಸುಮ್ಮನಾದರು "ನಿಮ್ಗೇನೆ ಹೇಳ್ತಾ ಇರಾದೂ–ಕೇಳ್ಸಾಕಿಲ್ವಾ ?" ಅರಸಪ್ಪ ಆರ್ಭಟಿಸಿದಾಗ ಲಕ್ಷಮ್ಮ ಹೌಹಾರಿದರು

'ಏನಪ್ಪ ನೀನು ಹೇಳೋದೂ ಈ ಮಗೂ ನಂದಾಂತ ಯಾರು ಹೇಳದ್ರೂ ?"

"ಅಂಗಾರೆ ನಂದಾ ?.. ಸುಮ್ನೆ ಗಲಾಟೆ ಮಾಡ್ದೇ ಕರ್ಕೊಂಡ್ಹೋಗಿ, ಮಕ್ಳು ಹೆಚ್ಚಾಗಿದ್ರೆ ಯಾವ್ದಾದ್ರೂ ಅನಾಥಾಶ್ರಮಕ್ಕೆ ಸೇರಿಸ್ಬುಡಿ ನಂಪ್ರಾಣ ಯಾಕ ತಿಂತೀರಾ ? ನಾಕಾಣ್ಗಿಲ್ವಾ ನಿಮ್ಕಿಂದೆ ಬಂದ ಈ ಮಗಾನ್ನ ?"

"ಅಯ್ಯೋ ದೇವ್ರೇ ನಂಗೆ ಮಕ್ಳಿಲ್ಲಪ್ಪಾ . ನಮ್ಮೆಜಮಾನ್ರು ನನ್ನ ಬಿಟ್ಟು ಹೋಗಿ ಹತ್ತು ವರ್ಷ ಆಯ್ತು "

"ಆ ಕಥೆ ಕಟ್ಕೊಂಡು ನಾಯೇನ್ಮಾಡ್ಲೀ ನೀವು ಅದ್ರ ಅಮ್ಮ" ಅಲ್ಲದ್ರೆ ಅದ್ಯಾಕೆ ನಿಮ್ಕಿಂದೆ ಬರ್ತಾ ಇತ್ತೂ ?"

ಕರ್ಕೊಂಡ್ಹೋಗಿ ಮನೆಗೆ

ಪೋಲೀಸಿನವನು ಸೇರಿದ ಕಡೆ ಗುಂಪು ಹತ್ತಾರು ಜನ ಸೇರಿದರು. ಮುದುಕರೊಬ್ಬರು,

"ಹೋಗ್ಲೀ ಬಿಡೀಮ್ಮಾ ಅವನ ಡ್ಯೂಟಿ ಅವನು ಮಾಡ್ತಾನೆ.... ನಿಮ್ಮನೇ ವಿಚಾರ ಅವನ್ಗೇನು ಗೊತ್ತು ಪಾಪ ಗಲಾಟೆಯಲ್ಲಿ ಮಗು ಕಂಗಾಲಾಗಿದೆ ಕರ್ಕೊಂಡು ಹೋಗಿ ಮನೇಗೆ" ಎಂದರು

ಅಷ್ಟೇ ಸಾಕು, ಮಗು ಜೋರಾಗಿ ಅಳಲು ಶುರು ಮಾಡಿತು ತರಕಾರಿ ಅಂಗಡಿಯವನೂ ಮಧ್ಯದಲ್ಲಿ ತಲೆ ಹಾಕಿ ತನ್ನ ಮುಯ್ಯಿ ತೀರಿಸಿಕೊಂಡ.

"ಆಯಮ್ಮ ಯಾವಾಗ್ಲೂ ಅಂಗೇನೇ, ಎಲ್ಲಕ್ಕೂ ಚೌಕಾಸೀನೆ "

"ನಂಗೆ ಟೇಮಿಲ್ಲ. ಸರ್ಕಲ್‌ತನ ಇಲ್ದಿದ್ರೆ ಸಾಯೇಬ್ರು ನನ್ತಲೇ ಮ್ಯಾಗೆ ನಾಲ್ಕು ಮಡಗ್ತಾರೆ ನಿಮ್ಗೆ ಒಪ್ಸಿವ್ನಿ. ಮಗೂನ ಇವ್ರೆಲ್ಲರ ಎದ್ರುಗೂ. ." ಕೈಯ್ಯಲ್ಲಿದ್ದ ದೊಣ್ಣೆ ಬೀಸುತ್ತಾ ನಡೆದ

ಲಕ್ಷ್ಮಮ್ಮನಿಗೆ ದಿಕ್ಕೇ ತೋಚದಾಯಿತು. ಮಗುವೇನೋ ಬಿಟ್ಟಿ ಸಿಕ್ಕಿತ್ತು. ಆದರೆ ಪುಕ್ಕಟ್ಟೆಯಾಗಿ ದೊರೆತ ಈ ವಸ್ತುವೊಂದು ಅವರಿಗೆ ಬೇಡವಾದ ಮೊದಲನೆಯ ವಸ್ತು

ಅದರ ಹೆಸರು ಕುಲ ಗೋತ್ರ ವಿಚಾರಿಸಿ, ಪದ್ಮಾವತಮ್ಮನ ಯಜಮಾನ ರಿಗೆ ತಿಳಿಸಿ ಪೊಲೀಸ್ ಸ್ಟೇಷನ್‌ಗೆ ಕೊಟ್ಟುಬಿಟ್ಟರೆ ಸಾಕು, ಮುಂದಿನದು ದೇವರಿಚ್ಛೆ ಎಂದುಕೊಂಡಳು ಸುತ್ತಲಿದ್ದ ಜನಕ ಕಣ್ಣು ಬಾಯಿಯನ್ನು

ಎದುರಿಸಲಾರದೇ ಮಗುವಿನ ಕೈ ಹಿಡಿದು ನಾಲ್ಕು ಹೆಜ್ಜೆ ನಡೆದರು ಹಿಂದಿನಿಂದ ತರಕಾರಿಯವನು ಬಂದ

"ಏನ್ರಮ್ಮಾ ಬಿಟ್ಟೆ ಮಗಾ ಸಿಕ್ತೂಂತ ಕಾಸು ಕೊಡ್ದೇ ಒಂಟೋಗದಾ ?"

ಲಕ್ಷಮ್ಮ ಅವನಿಗೆ ದುಡ್ಡು ಕೊಟ್ಟು ಮನೆಯ ಕಡೆಗೆ ಮಗುವನ್ನು ಹಿಡಿದು ಕಾಲು ಹಾಕಿದರು ಮೂಲೆಯಲ್ಲಿ ನಿಂತಿದ್ದ ಬಣ್ಣಬಣ್ಣದ ಬಟ್ಟೆ ಧರಿಸಿ ನಿಂತಿದ್ದ ಕಾಲೇಜಿನ ಯುವಕರ ಗುಂಪು ಅವರನ್ನು ನೋಡಿದಾಗ ಒಂದು ಕಂಠ "ಏ ಕ್ಯಾ ಹುವಾ ? ಕಬ ಹುವಾ, ಕೈಸೆ ಹುವಾ, ಕ್ಯೋಂ ಹುವಾ" ಎಂಬ ಎಂಬ ಹಾಡು ಹಾಡಿದಾಗ ಲಕ್ಷಮ್ಮನಿಗೆ ಮೈಯೆಲ್ಲಾ ಉರಿದುಹೋಯಿತು ಆದರೂ ತಮಗೆ ಅದು ಕೇಳಿಸಲಿಲ್ಲವೆಂಬಂತೆ ಮುಂದೆ ನಡೆದು ಜನ ನಿಬಿಡ ವಾಗಿದ್ದ ಜಾಗದಲ್ಲಿ ಮಗುವನ್ನು ನಿಲ್ಲಿಸಿ,

"ಏನಪ್ಪಾ ನಿನ್ಹೆಸರು ?"

".. .. ..   .. .. "

"ಅಮ್ಮನ ಹೆಸರೇನು ?"

"..     ... .. ..."

"ನಿಮ್ಮನೆ ಎಲ್ಲಿ ?"

"............. ..."

ಕನ್ನಡ ಬರುವುದಿಲ್ಲವೋ ಏನೋ ಬೆಂಗಳೂರಿನ ತುಂಬಾ ಮಲೆಯಾಳಿ ಗಳೂ, ತೆಲುಗರೂ, ಹಿಂದೀ ಮಾತಾಡುವವರೂ, ತಮಿಳರೇ ಜಾಸ್ತಿ ಯಾವ ಪರದೇಶಿ ಬಿಟ್ಟು ಹೋದನೋ ಎಂದುಕೊಂಡರು ಮಗುವಿನ ಮುಖ ನೋಡಿದರು. ಮೂಗು ಕಣ್ಣುಗಳಲ್ಲಿ ಗಂಗಾ ಪ್ರವಾಹ....ಪಾಪ ಎನ್ನಿಸಿತು

ತಾನು ಮನೆಗೆ ಕರೆದುಕೊಂಡು ಹೋದರೆ.. !!

ತಮ್ಮ ಸುತ್ತಮುತ್ತಲೂ ನೋಡಿದರು ಯಾವ ಹೆಂಗಸೂ ಏನನ್ನೂ ಹುಡುಕುತ್ತಿರಲಿಲ್ಲ ಮಗುವಿನ ಪುಟ್ಟ ಪುಟ್ಟ ಹೆಜ್ಜೆಯೊಂದಿಗೆ ತಮ್ಮ ದಾಪು ಗಾಲಿನ ಹೆಜ್ಜೆಯನ್ನೂ ಸರಿ ಮಾಡಿಕೊಂಡರು. ಪಾಪ ಮಗುವಿಗೆ ಮಾತೂ ಬರುವುದಿಲ್ಲ

## ಹೆಸ್ರುಬೇಕು

ಎದುರಿಗೆ ಚಾಕಲೇಟ್ ಅಂಗಡಿ ಕಾಣುತ್ತಲೇ ಮಗು ನಿಂತಿತು.

"ನಂಗೆ ಪೆಪ್ಪಿ ಬೇಕು "

"ಎಲಾ ಹುಡುಗ, ಮಾತೇ ಬರೋಲ್ಲಾಂತಿದ್ದೆ, ಚಾಕಲೇಟ್ ನೋಡಿ ಬಾಯಿ ಬಿಟ್ಟೆಯಲ್ಲ. ನಿನ್ನ ಹೆಸರೇನು ಹೇಳು ಚಾಕಲೇಟು ಕೊಡಿಸುತ್ತೀನಿ "

"ಪಾಪು "

"ನಿಮ್ಮ ತಾಯಿ ಹೆಸರು ?"

"ಅಮ್ಮ "

"ತಂದೆ ಹೆಸರು ?"

"ಅಪ್ಪ "

"ನಿಮ್ಮನೆ ಎಲ್ಲಿ ?"

"ದೂಲ. ನಂಗೆ ಪೆಪ್ಪಿ ಬೇಕು "

ಲಕ್ಷ್ಮಮ್ಮ ಹಣೆ ಚಚ್ಚಿಕೊಂಡರು ಒಳ್ಳೇ ಗ್ರಹಚಾರ ಬಂತಲ್ಲಾ ಪದ್ಮಾವತಮ್ಮ ಜೊತೆಗಿದ್ದಿದ್ದರೆ ಹೀಗಾಗುತ್ತಿರಲಿಲ್ಲ ಮಗು ಜೋರಾಗಿ ಅಳಲು ಮೊದಲು ಮಾಡಿತು

"ಎಷ್ಟಪ್ಪಾ ಚಾಕಲೇಟೂ ?"

"ಐದು ಪೈಸಾಗೆ ಒಂದು."

"ಅಬ್ಬಬ್ಬಾ.. ಬರ್‍ತಾ ಬರ್‍ತಾ ಎಲ್ಲಾ ಸಾಮಾನು ಚಿನ್ನ ಆಗ್‍ತಾ ಇದೆ! ಎರಡು ಪೈಸೆ ಇದೆ ಕೊಡ್ತೀಯಾ ?"

"ಆಗೋಲ್ಲಮ್ಮ ?

"ನಂಗೆ ಪೆಪ್ಪೀ."

"ಬಾ...ಮನೇಲಿ ಕೊಡಿಸ್ತೀನಿ..." ಲಕ್ಷ್ಮಮ್ಮ ಪುನಃ ಅಂಗಡಿ ಮುಂದೆ. ಗಲಾಟೆಯಾದೀತೆಂದು ಉಪಾಯವಾಗಿ ಮಗುವಿನೊಂದಿಗೆ ಮುನ್ನಡೆದರು

ತಮ್ಮ ಮನೆ ಬೀದಿಗೆ ಇನ್ನೇನು ತಿರುಗಬೇಕು. ಅಷ್ಟರಲ್ಲಿ ನಾಲ್ಕೈದು ಜನ ಹಿಂದೆ ಓಡಿ ಬರುತ್ತಿದ್ದುದು ಕಂಡಿತು. ಎಲ್ಲಿ "ಏನು ಆಕ್ಸಿಡೊಂಟೋ, ಸುಡುಗಾಡು" ಎಂದು ಮುಂದೆ ನಡೆದರು.

"ಹಿಡ್ಕೊಳ್ರೀ...ಅವ್ರನ್ನ ನಮ್ಮನೇ ಮಗೂನ ಎತ್ಕೊಂಡು ಹೋಗ್‍ತಾ ಇದ್ದಾರೆ !"

ಲಕ್ಷ್ಮಮ್ಮ ಗಕ್ಕನೆ ನಿಂತರು ಓಡಿ ಬಂದವರೆಲ್ಲಾ ಅವರನ್ನು ಮುತ್ತಿದ್ದರು ನಡು ವಯಸ್ಸಿನ ಗಟ್ಟಿ ಮುಟ್ಟಾದ ಹೆಂಗಸು

"ಏನ್ರೀ ಇದೆಂತಾ ಬದ್ಕು ? ಇನ್ನೊಬ್ರ ಮನೆ ಮಗೂನ ಹಾರಿಸ್ಕೊಂಡು ಹೋಗಿ ಮಾರ್ಬೇಕೂಂತ ಇದ್ರಾ ?"

"ಇದೇನಪ್ಪಾ ಹೀಗಂತೀರಿ ಮಗು ಪಾಪ ರೋಡ್ನಲ್ಲಿ ಸಿಕ್ತು "

"ಅಲ್ಲಾ ಮತ್ತೆ ನಿಮ್ಮಂತಹವರಿಗೆ ಎಲ್ಲಾ ರೋಡ್ನಲ್ಲಿ ಸಿಕ್ಕುತ್ತೆ."

"ಕೇಳಪ್ಪಾ ಬೇಕಾದ್ರೆ ಆ ಸರ್ಕಲ್ ಹತ್ರ ನಿಂತಿದ್ದ ಪೋಲೀಸ್ನ. ."

"ಅವ್ನೇ ಹೇಳಿದ್ದು ಮಗು ನಿಮ್ದೂಂತ ನೀವೇ ಕರ್ಕೊಂಡು ಹೋದ್ರಿಂತಾ ಮನೆ ಗಂಡ್ಸಿದ್ದಿದ್ರೆ ನಿಮ್ಮನ್ನ ಲಾಕಪ್ಪಿನಲ್ಲಿ ಹಾಕಿಸ್ತಿದ್ದೆ" ಮಗುವನ್ನತ್ತಿಕೊಂಡು ಲೊಚಲೊಚನ ಮುತ್ತಿಟ್ಟು, "ನನ್ನ ಚಿನ್ನ, ನನ್ನ ಬಂಗಾರಾ ಊರಲ್ಲಾ ಸಿಂಗಾಗಿ ಹುಡ್ಕಿದ್ನಲ್ಲಾ ಸಧ್ಯ ನನ್ನ ಹೆತ್ತ ಹೊಟ್ಟೆ ಪುಣ್ಯ ಚೆನ್ನಾಗಿತ್ತು ಆ ಪೋಲೀಸ್ನೋನು, ಆ ತರಕಾರಿ ಅಂಗ್ಡಿಯವನು ಹೇಳ್ದೇ ಇದ್ರೇ ನಿನ್ಗತಿ ಏನಾಗ್ತಿತ್ತೋ ' !"

"ಕರ್ಕೊಂಡ್ಹೋಗೀಮ್ಮಾ ಮಗೂನ ಪಾಪ ಹೆದರಿದೆ" ಒಂದು ಕಂಠ. "ಇಂತಹವೆಲ್ಲಾ ಇರ್ಬೇಕಾದ್ರೇ ಫ್ಯಾಮಿಲಿ ಪ್ಲಾನಿಂಗ್ ಯಾಕೇಂತ ?" ಮತ್ತೊಂದು ಕಂಠ

## ಬೇಕಾದ್ದು ಮಾಡ್ತಾರೆ

"ದುಡ್ಡಿಗಾಗಿ ಜನ ಏನ್ಬೇಕಾದ್ರೂ ಮಾಡ್ತಾರೆ ಈ ಕಾಲ್ದಲ್ಲಿ..." ಮಗದೊಂದು .

ಲಕ್ಷಮ್ಮ ವಿಗ್ರಹದಂತೆ ನಿಂತಿದ್ದರು "ಇನ್ಮೇಲೆ ಹೀಗೆಲ್ಲಾ ಮಾಡ್ಬೇಡಿ ನಿಮ್ಮ ವಯಸ್ನೋರು ಪುರಾಣ ಪುಣ್ಯ ಕಥೇಂತ ಇರೋದ್ಬಿಟ್ಟು ಇಂಥ ನೀಚ ಕೆಲ್ಸಕ್ಕೆ ಯಾಕೀದ್ರೀ ? ಹೋಗಿ "

ಜನರು ಕರಗಿ ಹೋದರು ಲಕ್ಷಮ್ಮ ನಿಧಾನವಾಗಿ ಕಾಲು ಹಾಕುತ್ತಾ ಮನೆಯತ್ತ ನಡೆದರು ಪದ್ಮಾವತಮ್ಮ ಯಜಮಾನರೊಡನೆ ಮಾತಾಡುತ್ತಾ ಕುಳಿತಿದ್ದರು ಲಕ್ಷಮ್ಮನನ್ನು ನೋಡಿ ಕಿಸಕ್ಕನೇ ನಕ್ಕು,

"ಏನ್ರೀ ಇಷ್ಟು ಹೊತ್ತು ಮಾಡ್ಬಿಟ್ರೀ ? ದೀಪ ಹಚ್ಚೋ ಹೊತ್ತಾಗೋಯ್ತಲ್ಲಾ ?" ಎಂದರು  ಲಕ್ಷಮ್ಮ ಉತ್ತರಿಸಲಿಲ್ಲ

ಮನೆಯ ಬಾಗಿಲು ತೆಗೆಯಲು ಹೋದಾಗ ಕೈಲಿದ್ದ ಐದು ಪೈಸೆ ಕೆಳಗೆ ಬಿತ್ತು. ಸದ್ಯ ಯಾವುದಾದರೂ ಹೋಗಲಿ ಚಾಕಲೇಟಿಗಾಗಿ ಖರ್ಚು ಮಾಡಬೇಕಾಗಿದ್ದ ಐದು ಪೈಸೆ ಉಳಿಯಿತಲ್ಲಾ ಸಾಕು ಎಂದುಕೊಳ್ಳದಿರಲಿಲ್ಲ

# ಹಬ್ಬದ ಉಡುಗೊರೆ

ಕೆಂಪು ಲಂಗ, ಹಸಿರು ರವಿಕೆ ತೊಟ್ಟುಕೊಂಡು ತಲೆಗೆ ನೈಲಾನ್ ಬ್ಯಾಂಡ್ ಹಾಕಿಕೊಂಡು, ಕೈಗೆ ಬಳೆ, ಕಾಲಿಗೆ ಚೈನು, ಕೊರಳಿಗೆ ಸರ, ಕಿವಿಗೆ ಕೆಂಪಿನ ಲೋಲಕ್ಕು, ಕಣ್ಣಿಗೆ ಕಾಡಿಗೆ, ಹಣೆಗೆ ಪುಟ್ಟ ತಿಲಕವಿಟ್ಟುಕೊಂಡು ನಿಂತಿದ್ದಳು ಪುಟ್ಟ ಕಮಲು, "ಊ.. ನಂಗೆ ಕಹಿ ಬೇವು ಬೆಲ್ಲ ಬೇಡ, ಸಿಹಿ ಬೆಲ್ಲ ಮಾತ್ರಾ ಬೇಕು" ಎಂದು ಹಟ ಮಾಡಿದಾಗ ಅಜ್ಜಿ ಮುದ್ದು ಮಾಡಿಕೊಟ್ಟ ಬೆಲ್ಲದ ಚೂರನ್ನು ನೆಕ್ಕುತ್ತ,

ಬೆಲ್ಲದಿಂದ ಅಂಟಾಗಿದ್ದ ಆದರ ಮುದ್ದು ಮುಖವನ್ನೇ ನೋಡುತ್ತ ನಿಂತ ಎದುರುಮನೆ ಶಾಸ್ತ್ರಿ

ಅಸ್ತವ್ಯಸ್ತವಾಗಿದ್ದ ಶಾಸ್ತ್ರಿಯ ಜುಟ್ಟು, ಹಣೆಯಲ್ಲಿದ್ದ ವಿಭೂತಿ ಕುಂಕುಮಗಳನ್ನು ನೋಡಿ ಕಮಲು ನಕ್ಕಳು ಶಾಸ್ತ್ರಿ ನಗದಿರಲು ಸಾಧ್ಯವೇ ? ಮೊದಲೇ ಮಕ್ಕಳೆಂದರೆ ಪ್ರಾಣ, ಪಾಪ ಆದರೆ ದೇವರು ಅವನಿಗೆ ಒಂದು ಮಗುವನ್ನೂ ಕೊಡದೆ, ಸುತ್ತಮುತ್ತಲಿನವರಿಗೆಲ್ಲಾ ಧಾರಾಳವಾಗಿ ಮಕ್ಕಳನ್ನು ಕರುಣಿಸಿಬಿಟ್ಟಿದ್ದ

ಏನು ವ್ಯಾಪಾರವೋ ?

ಪಕ್ಕದ ಮನೆ ಪಂಕಜಮ್ಮನವರು ಯಜಮಾನರೊಡನೆ ಶನಿವಾರ, ಭಾನುವಾರ ಸಿನಿಮಾಕೆ ಹೋಗುವಾಗ ತಮ್ಮ ಎರಡು ಮಕ್ಕಳನ್ನೂ ಶಾಸ್ತ್ರಿಯ ತರಕಾರಿ ಅಂಗಡಿಯಲ್ಲಿ ಕೂಡಿಸಿ ಹಾಯಾಗಿ ಹೊರಟುಬಿಡುತ್ತಿದ್ದರು ಪ್ರತಿ ವರ್ಷ ಮಳೆ ಬೆಳೆ ತಪ್ಪಿದರೂ ಮಗುವನ್ನು ಮಾತ್ರ ತಪ್ಪದೆ ಹೆರುತ್ತಿದ್ದ ಹಿಂದಿನ ಮನೆ ಹೇಮಾವತಿ ತನ್ನ ಆರು ಮಕ್ಕಳನ್ನೂ ನಿಶ್ಚಿಂತೆಯಾಗಿ ಶಾಸ್ತ್ರಿಯ ಅಂಗಡಿಗೆ ರವಾನಿಸಿಬಿಡುತ್ತಿದ್ದಳು. ಎದುರು ಮನೆಯ ಕುಟುಂಬಯೋಜನಾ

ಕೇಂದ್ರದಲ್ಲಿ ಕೆಲಸ ಮಾಡುವ ಕೃಷ್ಣಪ್ಪನವರ ಆರುಮಕ್ಕಳೂ ಅಲ್ಲಿಗೇ ಓಡಿಬಂದುಬಿಡುತ್ತಿದ್ದುವು. ಆ ಅಂಗಡಿಯನ್ನು ನೋಡಿದ ಹೊಸಬರಿಗೆ ಈ ಶಾಸ್ತ್ರಿ ಮಾಡುತ್ತಿರುವುದು ತರಕಾರಿ ವ್ಯಾಪಾರವೋ ಅಥವಾ ಮಕ್ಕಳ ವ್ಯಾಪಾರವೋ ಎಂದು ಕೆಟ್ಟ ಅನುಮಾನ ಬಂದರೂ ಆಶ್ಚರ್ಯವಿಲ್ಲವೆನ್ನುವ ಹಾಗಿತ್ತು.

ಶಾಸ್ತ್ರಿಗೆ ಮಕ್ಕಳೆಂದರೆ ಪ್ರೀತಿಯಿತ್ತು. ನಿಜ. ಆದರೆ ಅವನ ತಾಳ್ಮೆಗೂ ಮಿತಿ ಇತ್ತು. ತರಕಾರಿಗಳನ್ನು ಕಿತ್ತುಹಾಕದಂತೆ ಮಕ್ಕಳನ್ನು ಕಾಯುವ ಕೆಲಸ, ತೋಟದಲ್ಲಿ ಕೋತಿಗಳನ್ನು ಕಾಯುವುದಕ್ಕಿಂತಲೂ ಕಠಿಣವಾದದ್ದು ಅನಿಸಿದಾಗ ಒಮ್ಮೊಮ್ಮೆ ಗದರಿಸಿಬಿಡುತ್ತಿದ್ದ. ನಗುಮುಖದ ಶಾಸ್ತ್ರಿ ಅಷ್ಟು ಗದರಿದರೆ ಸಾಕು, ಧನಿ ದೊಡ್ಡದು ಮಾಡಿ ಅಳುತ್ತಾ,

"ಆಂಟೀ, ಶಾಸ್ತ್ರಿ ಮಾಮಾ ಹೊಡೆದುಬಿಟ್ರು" ಎಂದು ಶ್ರೀಮತಿ ಶಾಸ್ತ್ರಿಯ ಮುಂದೆ ನಿಲ್ಲುತ್ತಿದ್ದುವು. ಶ್ರೀಮತಿ ಎಂದರೆ ಶಾಸ್ತ್ರಿಗೆ ಬಹಳ ಭಯ ಭಕ್ತಿ, ಶಾಸ್ತ್ರಿ ಎತ್ತರ ಗಾತ್ರದಲ್ಲಿ ದೊಡ್ಡದಾಗಿದ್ದರೂ ನಾಲ್ಕೂವರೆ ಅಡಿ ಎತ್ತರವಾಗಿ ತೆಳ್ಳಗಿದ್ದ ಪುಟ್ಟ ಹೆಂಡತಿಗೆ ಬಹಳ ಹೆದರುತ್ತಿದ್ದ. ಅವಳು ಬಾಯಿ ತೆರೆದರೆ ಸಾಕು, ನಾಲ್ಕೈದು ದಿನ ಮನೆ ಸೇರುತ್ತಿರಲಿಲ್ಲ. ಅಂಗಡಿಯಲ್ಲಿದ್ದ ಕುಂಬಳಕಾಯನ್ನು ತಲೆದಿಂಬಾಗಿಟ್ಟುಕೊಂಡು, ಬಾಳೆ ಎಲೆಗಳನ್ನು ಹೊದ್ದು ನಿದ್ದೆಮಾಡಿಬಿಡುತ್ತಿದ್ದ. ಹಸಿ ಹುರುಳಿಕಾಯಿ, ಸೌತೆಕಾಯಿಗಳನ್ನು ತಿಂದು ಸಂತೃಪ್ತನಾಗಿರುತ್ತಿದ್ದ. ಅಂತಹವಳ ಮುಂದ ಮಕ್ಕಳು ಚಾಡಿ ಹೇಳದರೆ ತಾನುಳಿಯುವುದುಂಟೆ ?

## ಕೆಟ್ಟದ್ದೆಲ್ಲಾ ಕೆಡಕಿಮೇಲೆ

ಶ್ರೀಮತಿಗೂ ಗಂಡನನ್ನು ಕಂಡರೆ ಪ್ರೇಮ. ಮಕ್ಕಳೆಂದರ ಪ್ರೀತಿ ಮಕ್ಕಳಿಲ್ಲದ ಅವಳಿಗೆ ಕೆಟ್ಟದ್ದೆಲ್ಲಾ ಕೆಡಕಿ ಮೇಲೆ ಎಂಬಂತೆ ಪ್ರಪಂಚದಲ್ಲಿ ಆಗುವ ತಪ್ಪುಗಳಿಗೆಲ್ಲಾ ತನ್ನ ಗಂಡನೇ ಕಾರಣ ಎನ್ನುವ ಭಾವನೆ ಬಲವಾಗಿ ಮೂಡಿತ್ತು.

ಆ ದಿನ ಆಚೆ ಮನೆ ಸುನಂದಮ್ಮ ತರಕಾರಿ ಕೊಂಡುಹೋದ ಕೂಡಲೇ ಈ ಕಡೆಯಿಂದ ಅಂಗಡಿಯಲ್ಲಿ ಪ್ರತ್ಯಕ್ಷಳಾದಳು ಶ್ರೀಮತಿ

"ಏನ್ರೀ ಅದೂ ಆಕೆ ಹತ್ರ ಬಾಳಾ ಮಾತಾಡ್ತಿದ್ರಲ್ಲ ?"

"ಆಂ ? . ಊಂ ಏನು ಮಾತಾಡ್ತಿದ್ದೆ ? ತರಕಾರೀ ಲೆಖ್ಖ ಹೇಳ್ತಿದ್ದೆ "

"ಆದೆಷ್ಟೊತ್ತು ?"

ಆಕೆ ಯಾವಾಗ್ಲೂ ಮೂವತ್ತಾರು, ಮೂವತ್ತೇಳು ಪೈಸಾದ ವ್ಯಾಪಾರಾನೇ ಮಾಡ್ತಾಳೆ.. ಅದನ್ನೆಲ್ಲಾ ಬೇಗ ಕೂಡೋಷ್ಟು ಬುದ್ಧಿ ನಂಗೆ ಓಡೋಲ್ವಲ್ಲಾ . ."

"ಹೂಂ ಯಾಕೆ ಓಡಲ್ಲ. ನಿಮಗೆ ಸುನಂದಮ್ಮನಿಗೆ ಇಬ್ಬರಿಗೂ ನಾಗಾಲೋಟದಲ್ಲೇ ಓಡ್ತಾಯಿದೆ ಬುದ್ಧಿ ಆದಕ್ಕೇ ಅವಳು ನಾಲ್ಕು ಹಸೀ ಮೆಣಸಿನಕಾಯಿ ಬೇಕಾದ್ರೂ ನಿಮ್ಮ ಹತ್ತಿರಾಲೇ ಓಡಿಬರ್ತಾಳೆ ನಂಗೆಲ್ಲಾ ಗೊತ್ತಿದೇರೀ "

"ಶ್ ! ಮಗೂ ಎದುರಿಗೆಲ್ಲಾ ಏನೇನೋ ಮಾತಾಡಬೇಡ ಮಗು ತೊಡೇ ಮೇಲೆ ಕೂತಿರೋದು ಕಾಣೋದಿಲ್ವೆ ?" ತೊಡೆಯ ಮೇಲೆ ಕುಳಿತಿದ್ದ ಕೃಷ್ಣಪ್ಪನವರ ಆರನೆಯ ಮಗುವನ್ನು ತೋರಿಸಿದ ಶಾಸ್ತ್ರಿ.

## ಮಕ್ಕಳೇ ರಕ್ಷಾಕವಚ

ಕಣ್ಣು ಕೆಂಪಗೆ ಮಾಡಿಕೊಂಡರೂ ತುಟಿ ಎರಡು ಮಾಡದೆ ಒಳಗೆ ನಡೆದಿದ್ದಳು ಶ್ರೀಮತಿ. ಮಕ್ಕಳ ಮುಂದೆ ಅವಳು ತಣ್ಣಗಾಗುತ್ತಾಳೆ ಎನ್ನುವ ರಹಸ್ಯವನ್ನು ಅವತ್ತೇ ಕಂಡುಕೊಂಡ ಶಾಸ್ತ್ರಿ ಅಂದಿನಿಂದ ಎಲ್ಲದಕ್ಕೂ ಮಕ್ಕಳನ್ನೇ ರಕ್ಷಾಕವಚವನ್ನಾಗಿ ಮಾಡಿಕೊಂಡ. ನೆರೆಹೊರೆಯಿಂದ ಹೇರಳವಾಗಿ ಸಿಗುತ್ತಿದ್ದ ಆ ಅಸ್ತ್ರಗಳನ್ನೇ ಆಶ್ರಯಿಸಿ ಅಪ್ಪರವಟ್ಟಿಗೆ ಅಜೇಯನಾಗಿ ಉಳಿದ

ಆದರೂ ಅವನು ಕೂತರೆ ತಪ್ಪು, ನಿಂತರೆ ತಪ್ಪು ಸ್ವಚ್ಛವಾಗಿ ಮೈತೊಳೆದು ಜುಟ್ಟನ್ನು ತೀಡಿ ಕಟ್ಟಿ, ವಿಭೂತಿ ಕುಂಕುಮ ಧರಿಸಿ, ಬೆಳ್ಳಗೆ ಒಗೆದ ಬಟ್ಟೆ ತೊಟ್ಟು ಅಂಗಡಿಗೆ ಹೊರಟರೆ,

"ಏನ್ರಿ ಇಷ್ಟೊಂದು ಸಂಭ್ರಮ ?. . ತರಕಾರೀ ವ್ಯಾಪಾರಾ

ಮಾಡೋಕೂ ಈ ಪಾಟಿ ಶೃಂಗಾರ ಮಾಡ್ಕೊಂಡು ಹೋಗಬೇಕಾ? ಇವತ್ತು ಸುನಂದಮ್ಮ ಬರ್‍ತೀನೀಂತ ಹೇಳಿದ್ಲೇನೂ?"

"ಛೆ ಏನ್ ಮಾತಾಡ್ತೀಯೋ! ಸುನಂದಮ್ಮನ ಮೂರನೇ ಮಗೂ ನೀಲ ಇಲ್ಲೇ ನಿಂತಿರೋದು ಕಾಣೋದಿಲ್ವೇ?"

ಶ್ರೀಮತಿ ನೆಟಿಕೆ ಮುರಿಯುತ್ತಾ ನಿಷ್ಕ್ರಮಿಸಿದಳು ಮಡದಿ ಅನುಮಾನಿಸಿದಳಲ್ಲಾ ಎಂದು ಶಾಸ್ತ್ರಿ ಪಾಪ, ಮೂರು ದಿನ ಮುಖ ಕ್ಷೌರ ವನ್ನೂ ಮಾಡಿಕೊಳ್ಳದೆ, ಮನೆಯಲ್ಲಿ ತೊಡುತ್ತಿದ್ದ ಕಂಪು ಷರಟು, ಕೊಳೆ ಪಾಯಿಜಾಮು ಹಾಕಿಕೊಂಡು ಹೊರಟರೂ,

## ಇದೇನ್ರೀ ಅವತಾರ

"ಇದೇನ್ರೀ ಅವತಾರಾ" ಎದುರು ಮನೇ ಶಿವೂಗಾಳೀ ಬೀಸ್ತೇನು ನಿಮಗೂ? ಅವನೇನೋ ಕಾಲೇಜು ಹುಡುಗಾ ಅಪ್ಪ ಅಮ್ಮನ ಹಿಡಿತಕ್ಕೆ ಸಿಕ್ದೆ ಹಿಪ್ಪಿ ಆಗಿದ್ದಾನಂತೆ ನಿಮಗೇನು ಬಂತು ಕೇಡು ಈ ವಯಸ್ನಲ್ಲಿ? ಕೆನ್ನೇ ಮೇಲೆಲ್ಲಾ ಕೂದಲೂ, ಕೊಳಕು ಬಟ್ಟೇ ಈ ಹುಚ್ಚು ಕಳೇ ನನ ಅಂಕೇಯಿಂದ ತಪ್ಪಿಸ್ಕೊಂಡಿದ್ದೀನೀಂತ ಭ್ರಾಂತಿಯಿಂದ ಹೀಗಾಡೋಕೆ ಎಷ್ಟು ಧೈರ್ಯ ನಿಮಗೆ?"

"ಯಾಕತ್ತೇ ನಮ್ಮ ಶಿವೂನ ಅನ್ನೋದೂ?" ಎದುರಿಗೇ ನಿಂತಿದ್ದ ಶಿವೂನ ಕೊನೇ ತಂಗಿ ಸುಮ್ಮಿ ಕೀರಲು ಗಂಟಲಲ್ಲಿ ಕೇಳಿದಳು.

"ಶ್. ಮಕ್ಕಳ ಮುಂದೆ ಮಾತಾಡ್ತೀಯಲ್ಲೇ.." ಶಾಸ್ತ್ರಿ ಗೆಲುವಿನಿಂದ ಹೇಳಿದ.

"ಹುಂ ..ಹಾಳು ಪ್ರಾರಬ್ಧ ಮಕ್ಕಳು. ಯಾವಾಗ್ಲೂ ಇವರ ಮುಂದೇನೇ ಸಾಯುತ್ವೆ... ಗಂಡ ಹೆಂಡತೀರು ಅನ್ಯೋನ್ಯವಾಗಿ ಮಾತಾಡೋಕೂ ಅವಕಾಶವಿಲ್ಲ." ಎಂದು ಅವಡುಗಚ್ಚಿಕೊಂಡೇ ಒಳಗೆ ಹೋದಳು

ಯುಗಾದಿ ಹಿಂದಿನ ದಿನ ಅಂಗಡಿಯಲ್ಲಿ ಬಿಡುವಿಲ್ಲದ ವ್ಯಾಪಾರ ನಡೆಯಿತು. ಶಾಸ್ತ್ರಿಗೆ ದುಡ್ಡು ಎಣಿಸುವುದಕ್ಕೂ ಬಿಡುವಿರಲಿಲ್ಲ ರಾತ್ರಿ ಹತ್ತೂವರೆ ಗಂಟೆಗೆ ಮನೆಗೆ ಬಂದಾಗ ಶ್ರೀಮತಿ ನಿದ್ರಾಲೋಕದಲ್ಲಿ ವಿಹರಿಸು ತ್ತಿದ್ದಳು. ಈಗ ಧೈರ್ಯವಾಗಿ ಮಡದಿಯೆದುರು ನಿಂತ, ನಿರ್ಭಯವಾಗಿ

ಅವಳನ್ನು ಕಣ್ತುಂಬಾ ನೋಡಿದ ಶ್ರೀಮತಿ ನಿಜವಾಗಿಯೂ ಚೆಲುವೆಯೇ! ಆದರೆ ಸಿದ್ದೆಯಲ್ಲೂ ಅವಳ ಹುಬ್ಬುಗಂಟಿಗೆ ಕಾರಣ? ಓ, ತಿಳಿಯಿತು ಒಂದು ನೈಲೆಕ್ಸ್ ಸೀರೆಯನ್ನು ಬಹಳ ದಿನಗಳ ಹಿಂದಯೇ ಕೇಳಿದ್ದಳು ಗೌರಿ ಹಬ್ಬದಲ್ಲಿ "ಆಗಲಿ ವಿಜಯದಶಮಿ ಹೊತ್ತಿಗೆ ತರುತ್ತೇನೆ" ಅಂದಿದ್ದ, ವಿಜಯದಶಮಿ ಬಂದಾಗ "ಈ ಸಾರಿ ದುಡ್ಡಿಲ್ಲ ದೀಪಾವಳಿಗೆ ಖಂಡಿತಾ ತರ್ತೀನಿ" ಎಂದು ಜಾರಿಕೊಂಡ ದೀಪಾವಳಿಯೇ ಬಂದಾಗ "ಇನ್ನೇನು ಸಂಕ್ರಾಂತಿಗೆ ಗ್ಯಾರಂಟಿ" ಎಂದು ಬಚಾವಾಗಿದ್ದ ಅವಳೂ ಮುನಿದು ಕೇಳುವುದನ್ನೇ ಬಿಟ್ಟಳು ಈಗ ಯುಗಾದಿಗೇ ಬರಲಿದೆ ನಾಳೆ! ನಾಳೆ ಬೇಗ ಎದ್ದು ಅವಳು ಕಣ್ಣು ಬಿಡುವುದಕೆ ಮುಂಚೆಯೇ ಅಂಗಡಿಗೆ ಹೋಗಿಬಿಡ ಬೇಕೆಂದು ನಿರ್ಧರಿಸಿ, ನಾಲ್ಕು ಲೋಟ ನೀರು ಕುಡಿದು ಮಲಗಿದ

ಬೆಳಗ್ಗೆ ಕಣ್ಣು ಬಿಟ್ಟಾಗ ಶ್ರೀಮತಿ ಆಗಲೇ ತಲೆಗೆ ನೀರು ಹಾಕಿಕೊಂಡು ದೇವರಿಗೆ ದೀಪವನ್ನೂ ಹಚ್ಚಿ ಆಗಿತ್ತು ತನಗೆ ಕೈಕೊಟ್ಟ ನಾಲ್ಕು ಲೋಟ ನೀರನ್ನು ಶಪಿಸುತ್ತ ಎದ್ದು ಮುಖ ತೊಳೆದು ಬಂದಾಗ ತುಟಿಯ ಮೇಲೆ ವಿಜಯದ ನಗೆ ಬೀರುತ್ತ ಶ್ರೀಮತಿ ಕಾಫಿ ಕೊಡುವ ಬದಲು ಅವನ ಕೈಗೆ ಬೆಲ್ಲದ ಸಣ್ಣ ಚೂರು, ಬೇವಿನ ಹೂಗಳನ್ನಿಟ್ಟಳು

"ಇವತ್ತು ಯುಗಾದಿ ಅಲ್ವೆ? " ಎಂದು ವಯ್ಯಾರ, ವ್ಯಂಗ್ಯ ಎರಡನ್ನೂ ಬೆರೆಸಿ ನುಡಿದಳು ಶಾಸ್ತ್ರಿಗೆ ಆನಂದವಾಯಿತು, ಅನುಮಾನವೂ ಮೂಡಿತು. ಇಷ್ಟು ಚೆನ್ನಾಗಿ ಯಾವತ್ತೂ ಕಂಡಿರಲಿಲ್ಲ ಮಡದಿ ಮೆಲ್ಲನೆ ಅವಳ ಬಳಿ ಸಾರಿ,

"ಶ್ರೀಮತೀ " ಎಂದು ಪ್ರೀತಿಯಿಂದ ಬಾಯಿಬಿಟ್ಟ

ಅರ್ಧಾಂಗಿ ವೈಯ್ಯಾರದ ನಡಿಗೆಯಲ್ಲಿ ಅಡಿಗೆ ಮನೆಯೊಳಗೆ ಸರಸರನೆ ಹರಿದು ಹೋದಾಗ, ಈ ಸಾರಿ ಖಂಡಿತ ಸೀರೆ ತರಲೇಬೇಕೆಂದು ನಿರ್ಧರಿಸಿದ ಶಾಸ್ತ್ರಿ. ಅಷ್ಟು ಹೊತ್ತಿಗೆ ಸರಿಯಾಗಿ ಹಿಂದಿನ ಮನೆ ಹೇಮಾವತಿ ಹೊಸ ಸೀರೆಯುಟ್ಟು ನರಿಗೆ ಚಿಮ್ಮುತ್ತಾ ಬಂದಳು

"ಶಾಸ್ತ್ರಿಗಳೇ, ಹಬ್ಬದ ದಿನ ಇನ್ನೂ ಅಂಗಡೀನೇ ತೆಗೀಲಿಲ್ಲವಲ್ಲಾ ನೀವು?....ಬಾಳೆಎಲೆ ಬೇಕಿತ್ತು. "

ಅಡಿಗೆ ಮನೆಯೊಳಗಿಂದ ಶ್ರೀಮತಿ ಬಂದಳು ಹೇಮಾವತಿಯ ಹೊಸ ಸೀರೆಯನ್ನು ಕಂಡು ಗಂಡನ ಕಡೆ ಕಿರುಗಣ್ಣಲ್ಲಿ ನೋಡುತ್ತ,

"ಹೌದು, ಇವತ್ತು ಯುಗಾದಿ ಅಲ್ವೆ . ಬೇಗ ಹೋಗಿ" ಎಂದು ಇನ್ನೊಮ್ಮೆ ಕುಕ್ಕಿದಳು

ಶಾಸ್ತ್ರಿ 'ಇಗೋ ಬಂದೆ. .' ಎನ್ನುತ್ತ ಬಚ್ಚಲು ಮನೆ ಕಡೆ ನಡೆದ ಸ್ನಾನ ಮಾಡಿ ಬರುವಾಗಲೂ ಹೇಮಾವತಿ ಅಲ್ಲೇ ಇದ್ದಳು ಹೆಂಗಸರಿಬ್ಬರಲ್ಲಿ ಗಹನವಾದ ಸಂಭಾಷಣೆ ನಡೆದಿತ್ತು

ಹೆಂಗ್ಸು ಅಂದ್ರೇ ಅವಳೇರಿ !

'ಹೆಂಗಸು ಅಂದ್ರೆ ಅವಳೇರೀ. .ಅವನ ಕೈ ಕಾಲು ಮುರಿದು ಕೂಡಿಸಿ ಬಿಟ್ಳು . "

"ಅಷ್ಟಲ್ದೆ....ಹೆಣ್ಣನ್ನ ಯಾವಾಗ್ಲೂ ತೀರಾ ರೇಗಿಸಬಾರದು ನೋಡಿ . "

ಜುಟ್ಟು ಕಟ್ಟುತ್ತಿದ್ದ ಶಾಸ್ತ್ರಿಗೆ ಕೈಕಾಲು ಉಡುಗಿದಂತಾಯಿತು ಕಿವಿ ಗೊಟ್ಟು ಆಲಿಸಿದ

"ಅವಳನ್ನು ನೋಡಿಯಾದ್ರೂ ನಾವು ಕಲೀಬೇಕ್ರೀ ಈ ಗಂಡಸರಿಗೆ ಹೀಗೇ ಕಲಿಸಬೇಕು.. "

"ಅಯ್ಯೋ ಅದೆಲ್ಲಿ ಸಾಧ್ಯ ? ಎಲ್ಲರೂ ಇಂದಿರಾ ಹಾಗಾಗೋಕೆ ಸಾಧ್ಯವೇ ಹೇಳಿ ?"

"ಯಾಕಾಗೋಲ್ಲ ನಾವು ಮನಸ್ಸು ಮಾಡಬೇಕು ಅಷ್ಟೆ !"

ಶಾಸ್ತ್ರಿ ಬೇಗ ಬೇಗ ಬಟ್ಟೆ ಧರಿಸಿದ. ಹಿಂದಿನ ದಿನದ ನೋಟುಗಳ ಸುರುಳಿಯನ್ನು ಜೇಬಿಗೆ ಹಾಕಿಕೊಂಡು ಈಚೆಗೆ ಬಂದ.

"ಬನ್ನಿ ಬಾಳೆಯೆಲೆ ಕೊಡ್ತೀನಿ."

ಹೇಮಾವತಿ ಮಾತು ನಿಲ್ಲಿಸಿ ಶಾಸ್ತ್ರಿಯ ಹಿಂದೆ ನಡೆದಳು ಶಾಸ್ತ್ರಿ ಅಂಗಡಿ ತೆಗೆದು ಬಾಳೆಯೆಲೆ ಕೊಟ್ಟು,

"ಹೇಮಾವತಮ್ಮಾ ಒಂದು ಕಾಲು ಗಂಟೆ ಇಲ್ಲಿರಿ, ನಾ ಬಂದು ಬಿಡ್ತೀನಿ" ಎಂದು ಸರಸರನೆ ನಡೆದ. ರಸ್ತೆಯ ಮೂಲೆಯಲ್ಲಿದ್ದ ಶ್ರೀನಿವಾಸ ಕ್ಲಾತ್ ಎಂಪೋರಿಯ ಂನಲ್ಲಿ ಅವಸರದಲ್ಲೇ ಒಂದು ನೈಲೆಕ್ಸ್ ಸೀರೆ ಖರೀದಿ

ಮಾಡಿ, ಸೀರೆಯ ಸುರುಳಿಯನ್ನು ಕಂಕುಳಲ್ಲಿಟ್ಟುಕೊಂಡು ವಾಪಸ್ಸು ಹೆಜ್ಜೆಯಿಟ್ಟ ದೂರದಿಂದಲೇ ಅಂಗಡಿಯ ಕಡೆ ನೋಡಿದ

ಅಂಗಡಿಯಲ್ಲಿ ಹೇಮಾವತಿ ಇರಲಿಲ್ಲ. ಹೇಮಾವತಿಯ ನಾಲ್ಕನೆಯ ಮಗ ಸತೀಶ ಕುಳಿತಿದ್ದ ಶಾಸ್ತ್ರಿ ಹತ್ತಿರ ಬಂದೊಡನೆಯೇ ಕುಳಿತಿದ್ದ ಜಾಗ ಬಿಟ್ಟು ಎಗರಿ ಓಡಿ ಹೋದ ಶಾಸ್ತ್ರಿಗೆ ಆ ಹುಡುಗನ ಚರ್ಯೆಯಿಂದ ಕುತೂಹಲವಾದರೂ ಅವನಿಗೆ ಅದೆಲ್ಲಾ ಯೋಚಿಸಲು ಬಿಡುವಿರಲಿಲ್ಲ ತರಕಾರಿ, ಬಾಳೆಯೆಲೆಗಳನ್ನು ಕೊಳ್ಳಲು ಜನ ಬರತೊಡಗಿದರು. ಮಧ್ಯಾಹ್ನ ಹನ್ನೆರಡು ಗಂಟೆವರೆಗೂ ವ್ಯಾಪಾರ ಸಾಗಿತು ಆದರ ನಡುವೆ ಎಂದಿನಂತೆ ಮಕ್ಕಳು ಅಂಗಡಿಗೆ ಬಾರದೆ ದೊಡ್ಡವರೇ ಬಂದಿದ್ದು ಅವನ ಗಮನಕ್ಕೆ ಬಾರದಿರಲಿಲ್ಲ

ಬೆದರಿ ಓಡಿದರು

ಮಧ್ಯಾಹ್ನ ಅಂಗಡಿಯ ಬಾಗಿಲು ಹಾಕಿ, ಕಂಕುಳಲ್ಲಿ ಸುರುಳಿಯನ್ನಿಟ್ಟುಕೊಂಡು ಮನೆಯ ಕಡೆ ಗೆಲುವಿನಿಂದ ಹೆಜ್ಜೆಯಿಟ್ಟ ಮನೆಯ ಮುಂದೆ ಹತ್ತಿಪ್ಪತ್ತು ಹೆಂಗಸರು ಮಕ್ಕಳು ನೇರಿದ್ದನ್ನು ಕಂಡು ಸೋಜಿಗಪಟ್ಟ

"ಒಳ್ಳೆಯದೇ ಆಯಿತು ಇಷ್ಟು ಜನರೆದುರಿಗೆ ತಾನು ತಂದ ಸೀರೆಯನ್ನು ಶ್ರೀಮತಿ ಮೆರೆಸುವುದನ್ನು ನೋಡುವುದೇ ನಿಜವಾದ ಹಬ್ಬ" ಎಂದುಕೊಳ್ಳುತ್ತ ಇನ್ನೂ ಬೇಗನೆ ದಾಪುಗಾಲು ಹಾಕುತ್ತಾ ಬಂದ

ಇವನ ಮುಖ ಕಂಡ ಕೂಡಲೇ ಹೆಂಗಸರು ಗಾಬರಿಯಿಂದ ಬೇಗಬೇಗನೆ ಮನೆಗಳಿಗೆ ಓಡಿದರು ಮಕ್ಕಳಂತೂ ಬೆದರಿದ ಕೋಳಿಪಿಳ್ಳೆಗಳಂತೆ ಚೆಲ್ಲಾಪಿಲ್ಲಿಯಾಗಿ ಕಣ್ಮರೆಯಾದವು ಅಲ್ಲೇ ನಿಂತಿದ್ದ ಶ್ರೀಮತಿಯೂ ಅದೃಶ್ಯಳಾಗಿದ್ದಳು

ಚಕಿತನಾದ ಶಾಸ್ತ್ರಿ ಮನೆಯೊಳಗೆ ಕಾಲಿಟ್ಟ ಮನೆಯಲ್ಲಿ ಎಲ್ಲವೂ ಇದ್ದಂತೆಯೇ ಇತ್ತು ಹಬ್ಬದ ಅಡಿಗೆಯೂ ಇಲ್ಲ! ತಲೆಬುಡ ತಿಳಿಯದೆ ಅವನು ಮಂಚದ ಮೇಲೆ ಒರಗಿ ಕುಳಿತ ಆಯಾಸ ಹಸಿವು, ನಿದ್ದೆ ಬರುವಂತಾಗಿತ್ತು. ಅರ್ಧ ಗಂಟೆ ಹಾಗೇ ಕುಳಿತರೂ ಶ್ರೀಮತಿಯಾಗಲಿ, ಒಂದು ನರಪಿಳ್ಳೆಯಾಗಲೀ ಅತ್ತ ಸುಳಿಯಲಿಲ್ಲ. ದಿಙ್ಮೂಢನಾಗಿ ಕುಳಿತಿದ್ದಾಗಲೇ

ಅವನ ಕಣ್ಣಿಗೆ ಬಿದ್ದಿದ್ದು ಪ್ಲಾಸ್ಟಿಕ್ ಗೊಂಬೆ! ಯಾವ ಮಗು ಇಲ್ಲಿ ತಂದು ಹಾಕಿತೋ? ಎತ್ತಿಕೊಂಡು ಮತ್ತೆ ಮಂಚದ ಮೇಲೆ ಒರಗಿದ.

ಮತ್ತೆ ಕಣ್ಣು ತೆರೆದಾಗ ಹೆಂಗಸರ ಗುಸು ಗುಸು ಮಾತುಗಳು, ಶ್ರೀಮತಿಯ ಅಳು..

"ಅಯ್ಯೋ ಅಳಬೇಡ್ರಿ. ಹಾಗೇರಿ ಹುಚ್ಚ್ಯಾಂದ್ರೆ ಪಾಪ ಅವರಿಗೆ ಮಕ್ಕಳೊಂದ್ರೆ ಪ್ರಾಣ ತ್ಚ್ ತ್ಚ್ "!

"ಹೌದುರೀ ನಮ್ಮೂರಲ್ಲೂ ಒಬ್ಬ ಹುಚ್ಚ ಕಂಡ ಕಂಡ ಮಕ್ಕಳನ್ನೆತ್ತಿ ಮುದ್ದಾಡೋನು ಮನೇ ತುಂಬಾ ಗೊಂಬೆ ಇಟ್ಕೊಂಡು ಆಡೋನು ಏನ್ಮಾಡೋದು ದೇವರು ಮಕ್ಕಳನ್ನ ಕೊಡಬೇಕು ಅಷ್ಟೆ "ಮತ್ತೆ ಶ್ರೀಮತಿಯ ಅಳು.

"ಅಯ್ಯೋ ಬೇಡ್ರೀ ಶ್ರೀಮತೀ ನಾಳೆನೇ ಮೆಂಟಲ್ ಹಾಸ್ಪಿಟಲ್‌ಗೆ ಕರ್ಕೊಂಡ್ ಹೋಗಿ ತೋರಿಸಿಕೊಂಡು ಬನ್ನಿ ಈಗೀಗ್ ನೂರಾರು ತರಾ ಔಷಧೀ ಬಂದಿದಯಂತೆ ಇದೇನ್ಮಹಾ"

ಯಾರಿಗೆ ಹುಚ್ಚು?

ಶಾಸ್ತ್ರಿ ತಟಕ್ಕನೆ ಎದ್ದು ಕುಳಿತ ಕೈಲಿದ್ದ ಗೊಂಬೆಯನ್ನೆತ್ತಿ ಎಸೆದು ಬಾಗಿಲ ಬಳಿ ಬಂದ ಬಾಗಿಲು ಹೊರಗಿನಿಂದ ಚಿಲಕ ಹಾಕಿದ್ದು ಅವನಿಗೆ ತಿಳಿಯಿತು

"ಏನಿದು ಅವಾಂತರ? .ಯಾರಿಗೆ ಹುಚ್ಚು? ತೆಗೀರಿ ಬಾಗ್ಲು!"

ಒಮ್ಮೆಲೇ ಮೌನ ಆವರಿಸಿತು ಶಾಸ್ತ್ರಿ ಜೋರಾಗಿ ತಟ್ಟಿದ

"ಅಯ್ಯೋ ಏನ್ರೀ ಮಾಡೋದೂ?"

"ಹುಚ್ಚು ಹಿಡಿದಾಗ ಕೆಟ್ಟ ಬಲಾ ಬರುತ್ತಂತೆ ಬಾಗಿಲು ಮುರಿದ್ರೆ ಗತೀ?"

ಶ್ರೀಮತಿಯ ಅಳು ತಾರಕಕ್ಕೇರಿತು ಶಾಸ್ತ್ರಿಯ ಕೋಪ ನೆತ್ತಿಗೇರಿತು ಜತೆಗೇ ಹಸಿವೂ ಸೇರಿತು.

"ತೆಗೀರಿ ಬಾಗ್ಲ ..ರೀ ಸುನಂದಮ್ಮ, ಹೇಮಾವತಮ್ಮ ಏನಿದು ಗಂಡಸರ ಜತೆ ಹುಡುಗಾಟ? ..ಒಳ್ಳೇ ಮಾತಲ್ಲಿ ತೆಗೀದೇ ಇದ್ರೆ " ಎಂದು

ಹಲ್ಲು ಕಡಿಯುತ್ತ ಬಾಗಿಲನ್ನೆಳೆದ, ಗುದ್ದಿದ, ಒದೆದ.. ಆಮೇಲೆ ತಾನೇ ತಾನಾಗಿ ಏದುತ್ತ ನಿಂತ

ಮತ್ತೆ ಸ್ಮಶಾನ ಮೌನ

"ನೀವೆಲ್ಲಾ ಹೋಗ್ರೀ ಹಬ್ಬದ ದಿನ ಬೇರೆ ನಿಮಗ್ಯಾಕೆ ತೊಂದರೆ.... ಏನೋ ನಮ್ಮ ನಮ್ಮ ಕರ್ಮ .." ಶ್ರೀಮತಿಯ ದನಿ

"ಅಯ್ಯೋ ಹ್ಯಾಗ್ರೀ ಹಾಗನ್‌ಬೇಡಿ ನೆರೆಹೊರೆ ಅಂದ್ರೇ. "

"ಅಯ್ಯೋ ಏನೂ ಬೇಡಿ ಸಧ್ಯ ನಾನೊಬ್ಬಳೇ ಹೇಗೋ ನೋಡ್ಕೋ ತೀನಿ ಸಧ್ಯ ನಿಮ್ಮ ಮಕ್ಕಳು ಇಲ್ಲಿ ಸುಳಿದ ಹಾಗೆ ನೋಡಿಕೊಳ್ಳಿ.. " ಸೆರಕ್ಕನೆ ಮೂಗೆಳೆದಳು ಶ್ರೀಮತಿ

"ಅಯ್ಯೋ ಪಾಪ ಏನ್ ಬಂತಮ್ಮ ನಿಮಗೆ "

ಮತ್ತೆ ಎರಡು ನಿಮಿಷ ಮೌನ ಹೆಂಗಸರು ಒಬ್ಬೊಬ್ಬರಾಗಿ ಇಬ್ಬಿಬ್ಬ ರಾಗಿ ಹೊರಗೆ ಹೋದದ್ದು ಶಾಸ್ತ್ರಿಗೆ ಗೊತ್ತಾಯಿತು ಯಾವುದನ್ನೂ ಯೋಚಿ ಸುವ ಸ್ಥಿತಿಯಲ್ಲಿರಲಿಲ್ಲ ಅವನು ಬಾಗಿಲು ತೆರದಾಗ ತನ್ನ ಕಣ್ಣುಗಳನ್ನೇ ನಂಬದಂತೆ ನೋಡಿದ

ಮಡದಿ ಮುಗುಳ್ನಗೆ

ಸ್ವಲ್ಪ ಹೊತ್ತಿಗೆ ಮುಂಚೆ ರೋದಿಸಿದ ಮಡದಿ ಈಗ ಮುಗುಳ್ನಗುತ್ತ ಎದುರಿಗೇ ನಿಂತಿದ್ದಳು ! ಮಂಚದ ಮೇಲಿದ್ದ ಸುರುಳಿಯನ್ನು ನೋಡುತ್ತಲೇ ಅವಳ ಕಣ್ಣುಗಳರಳಿದ ವು

"ಓಹ್ ಎಷ್ಟು ಒಳ್ಳೆಯವರು ನೀವು ಹೋದ ಗೌರಿ ಹಬ್ಬದಲ್ಲಿ ಕೇಳಿದ್ದ ಸೀರೇನ ಮರೀದೇ ತಂದಿದ್ದೀರಲ್ಲ ತುಂಬಾ ಜ್ಞಾಪಕ ಶಕ್ತೀಂದ್ರೆ ನಿಮಗೆ" ಗಂಡನ ತಲೆ ಸವರಿ, ಅವನ ಸೊಂಟ ಬಳಸಿ ಅಡಿಗೆ ಮನೆಗೆ ಕರೆದೊ ಯ್ದಳು ಶಾಸ್ತ್ರಿ ತೇಲುತ್ತಲೇ ಅವಳೊಡನೆ ಹೋದ ಅಲ್ಲಿಂದಾಚೆ ಅವನಿ ಗೇನೂ ಜ್ಞಾಪಕವಿಲ್ಲ ಅಂತಹ ಸ್ವರ್ಗ ಸುಖ ಅನುಭವಿಸಿದ್ದು ಅದೇ ಮೊದಲು

ಅವನಿಗೆ ತಿಳಿವು ಬಂದಾಗ ಕೆಂಪು ನೈಲೆಕ್ಸ್ ಸೀರೆಯುಟ್ಟು ಕಂಗೊಳಿಸು ತ್ತಿದ್ದ ಶ್ರೀಮತಿ ಆದೇ ತಾನೇ ಹೊರಗೆ ಹೊರಟಿದ್ದಳು. ಅವನು ಹಾಗೆಯೇ

ಅವಳನ್ನು ಹಿಂಬಾಲಿಸಿ ಗೇಟಿನವರೆಗೂ ಬಂದಾಗಲೇ ಎದುರು ಮನೆಯಲ್ಲಿ ಪುಟ್ಟ ಕಮಲು ಕಂಡಿದ್ದು.

"ಬಾರೇ ಇಲ್ಲಿ ಕಳ್ಳಿ ಒಂದು ದೊಡ್ಡ ಬೆಲ್ಲದ ಅಚ್ಚನ್ನೇ ಕೊಡ್ತೀನಿ ! ....ಬಾ ಬಾ .ಬಾರೇ ಪುಟಾಣಿ. "

ಈ ಸಾರಿ ಕಮಲಿ ನಗಲಿಲ್ಲ, ಗಂಭೀರವಾಗಿ ಶಾಸ್ತ್ರಿಯನ್ನೇ ನೋಡಿದಳು. ಕಮಲುವಿನ ತಾಯಿ ದಡದಡನೆ ಬಂದು ಕಮಲುವನ್ನೆತ್ತಿಕೊಂಡು ಶಾಸ್ತ್ರಿಯನ್ನೇ ಬೆದರಿದ ನೋಟದಿಂದ ನೋಡುತ್ತ ಒಳಗೆ ಕರೆದೊಯ್ದಳು

"ಬುದ್ಧಿ ಸರಿಯಾಗಿದ್ದರೆ ಮಗೂಗೆ ದೊಡ್ಡ ಬೆಲ್ಲದ ಅಚ್ಚನ್ನೇ ಯಾರಾದ್ರೂ ಕೊಡ್ತೀನೀಂತಾರಾ ?" ಅನ್ನುವಂತಿತ್ತು ಆಕೆಯ ನೋಟ

"ರೆಫ್ಯೂಜಿ" ಕಾಟವಿಲ್ಲ !

ಬೆಪ್ಪಾಗಿ ನಿಂತ ಶಾಸ್ತ್ರಿಯನ್ನು ನೋಡಿ ಶ್ರೀಮತಿ ಅರ್ಥಗರ್ಭಿತವಾಗಿ ನಕ್ಕಳು. "ಇನ್ನು ಮೇಲೆ ನಮಗೆ ಈ ರೆಫ್ಯೂಜಿಗಳ ಕಾಟ ತಪ್ಪಿತೂಂದ್ರೆ ನಾವಿಬ್ರೇ ಒಟ್ಟಿಗಿರಬಹುದು "

ಇನ್ನು ಮಕ್ಕಳು ಯಾರೂ ಅಂಗಡಿಯ ಬಳಿ ಬಾರದಾಗ ಅವನಿಗೆ ದುಃಖವಾಗಲಿಲ್ಲ ಮುಂದಿನ ಯುಗಾದಿಯ ವೇಳೆಗೆ ತನ್ನ ಶ್ರೀಮತಿಯ ಮುದ್ದಾದ ಹೆಣ್ಣು ಮಗುವನ್ನು ಮುದ್ದಿಸುತ್ತಿದ್ದ

# ಬಲಿಯಿಂದ ಬುಟ್ಟಿಗೆ

'ನಮ್ಮ ನಿರ್ಮಲಾ ಬಹಳ ಅದೃಷ್ಟವಂತಳು!' ಎಂದುಕೊಂಡರು ವಿಜಯಮ್ಮ. ನಾಲ್ವರು ಹೆಣ್ಣುಮಕ್ಕಳನ್ನು ಹಡೆದು, ಬೆಳೆಸಿ, ಓದಿಸಿ, ಕೊನೆಗೆ ವಯಸ್ಸಿಗೆ ಬಂದಾಗ ಅಲ್ಲಿ ಇಲ್ಲಿ ತಡಕಾಡಿ ಮದುವೆಗೊಂದು ವರನನ್ನು ಹುಡುಕಿ ಅವರವರಿಗೆ ತಕ್ಕಷ್ಟು ವರೋಪಚಾರ ಮಾಡಿಕೊಟ್ಟು ಗೇಸತ್ತಿದ್ದರು. ದೊಡ್ಡ ಮಗನ ನೆರಳಲ್ಲಿದ್ದು, ಸೊಸೆಗೆ ತಕ್ಕಂತೆ ನಡೆದುಕೊಂಡು, ಅವಳು ಬೇಸರಿಸಿಕೊಂಡರೆ ತನ್ನ ಹೆಣ್ಣುಮಕ್ಕಳ ಬದುಕು ಕೆಟ್ಟೀತೆಂಬ ಭಯದಿಂದ ಮಗ ಸೊಸೆ, ಮೊಮ್ಮಕ್ಕಳಿಗೆ ತಕ್ಕಂತೆ ನಡೆದುಕೊಂಡಿದ್ದರು. ಯಜಮಾನರು ಬಿಟ್ಟುಹೋಗಿದ್ದ ಆಸ್ತಿಯೆಂದರೆ ಕೈತುಂಬಾ ಸಂಪಾದಿಸುವ ಮಗ, ಐವರು ಹೆಣ್ಣುಮಕ್ಕಳು. ಹತ್ತು ವರ್ಷಗಳಿಂದ ಮಗನ ಮನೆಯಲ್ಲಿ ದುಡಿಯುತ್ತಾ ಸೊಸೆಯ ಶುಶ್ರೂಷೆ ಮಾಡಿಕೊಂಡಿದ್ದ ವಿಜಯಮ್ಮನ ಬದುಕು ಕೊನೆಗೂ ಸಾರ್ಥಕಗೊಂಡಿತ್ತು. ನಾಲ್ವರು ಹೆಣ್ಣುಮಕ್ಕಳನ್ನೂ ದಡಮುಟ್ಟಿಸಿಯಾಗಿತ್ತು. ಕೊನೆಯ ನಿರ್ಮಲಳಿಗೆ ಅವರಾಗಿಯೇ ಅರಸಿ ಬಂದು ಸಂಬಂಧ ಕುದುರಿಸಿ ಕೊಂಡಿದ್ದರು.

"ನಿಮ್ಮ ಹುಡುಗಿ ನಮಗೆ ಬಹಳ ಒಪ್ಪಿಗೆ. ವರೋಪಚಾರ, ವರದಕ್ಷಿಣೆ ಯಾವುದನ್ನೂ ಬಯಸುವುದಿಲ್ಲ. ಮಗಳ್ನ ಒಂದು ತುಳಸಿದಳ ಇಟ್ಟುಕೊಟ್ಟು ಧಾರೆ ಎರೆದುಕೊಟ್ಟರೂ ಸರಿ!" ಎಂದಿದ್ದರು ರಂಗಸ್ವಾಮಿ ದಂಪತಿಗಳು. "ನಾನೂ ಹೆಣ್ಣು ಹೆತ್ತಿದ್ದೀನಿ ವಿಜಯಮ್ಮ. ಒಬ್ಬಳನ್ನು ಹಾಗೂ ಹೀಗೂ ಒಂದು ನೆಲೆಗೆ ತಂದಾಯಿತು. ಇವನ ಮದುವೆಯಾದ ಮೇಲೆ ನಮ್ಮ ಗಾಯಿತ್ರಿಯ ಮದುವೆ ಮಾಡಬೇಕೆಂದು ಇವರ ಹಟ. ಮನೆ ಹೆಣ್ಣು ಮಗಳನ್ನು ಕಳಿಸಿಬಿಟ್ಟರೆ ಮನೆ 'ಬಿಕೋ' ಎನ್ನುತ್ತೆ. ನಮ್ಮ ಮನೆಗೊಂದು

ಹೆಣ್ಣು ಮಗು ಬರಲಿ. ಆಮೇಲೆ ನಮ್ಮ ಮಗು ಕೇಳ್ಸೋಣ ಅಂತ ಒಂದೇ ಪಟ್ಟು ಹಿಡಿದಿದ್ದಾರೆ." ಮೀನಾಕ್ಷಮ್ಮ ತಮಗೆ ನಿರ್ಮಲಳನ್ನು ಮನೆಯ ಸೊಸೆಯಾಗಿ ಮನತುಂಬಿಸಿಕೊಳ್ಳಲಿರುವ ಹಂಬಲವನ್ನು ವ್ಯಕ್ತಪಡಿಸಿದ್ದರು.

"ನೋಡೀ, ನಂಗೆ ಹೆಣ್ಣುಮಕ್ಕಳನ್ನು ಅತಿ ಅಕ್ಕರೆಯಿಂದ ಬೆಳೆಸಿದರೆ ಅವರಿಗೆ ಅನಂತರ ಏನಾದ್ರೂ ಕಷ್ಟ ಸುಖ ಬಂದರೆ ಬೇಸರಪಟ್ಕೊಂಡಾರೂಂತ ಮೊದಲಿನಿಂದಲೇ ಕಷ್ಟಸುಖ ತಿಳ್ಕೊಳ್ಳೋ ಹಾಗೆ ಬೆಳೆಸಿದ್ದೀನಿ. ನಿಮ್ಮ ಕಮಲ ವಿಮಲ ಇಬ್ಬರೂ ಸೇರಿರೋ ಮನ ದೊಡ್ಡ ಸಂಸಾರ–ಅತ್ತೆಮಾವ, ಭಾವ ಮೈದುನ, ನಾದಿನಿಗಳಿರೋ ಮನೆ. ಆದ್ರೂ ಇವ್ರೊತ್ಗೂ ಅವರೇನಾದ್ರೂ ಈ ಕಡೆ ತೌರಿಗೆ ಬಂದರೆ 'ಬೇಗ ಬನ್ನೀ' ಅಂತ ಗಲಾಟೆಮಾಡಿ ಕರಸ್ಕೋತಾರೆ. ನನ್ನ ಹೆಣ್ಣು ಮಕ್ಕಳು ಹಾಗೆ ಹಚ್ಕೊಂಡು ನಮ್ಮದೂ, ತಮ್ಮದೂ ಅಂತ ಭೇದ ಮಾಡ್ದೇ ಸಂಸಾರ ಮಾಡ್ಕೊಂಡಿದ್ದಾರೆ. ನಮ್ಮ ನಿಮ್ಮೀನೂ ಹಾಗೇನೇ! ಆದ್ರೆ ಕೆಲಸಕ್ಕೆ ಹೋಗೋದ್ರಿಂದ ಮನೆಕೆಲ್ಸದಲ್ಲಿ ಇನ್ನೂ ಪರಿಣತಿಯಿಲ್ಲ ಅಷ್ಟೆ!"

ವಿಜಯಮ್ಮ ತನ್ನ ಹೆಣ್ಣುಮಕ್ಕಳ ಬಗ್ಗೆ ಹೇಳಿಕೊಂಡಾಗ ಅದರಲ್ಲಿ ಉತ್ಪ್ರೇಕ್ಷೆ ಏನೂ ಇರಲಿಲ್ಲ. ಕಮಲ, ವಿಮಲರಂತೆ, ಮಾಲ, ಅಮಲರೆಲ್ಲರೂ ಸೇರಿದ ಮನೆಯವರಿಗೆ ಬೇಕಾಗಿಯೇ ಇದ್ದರು. ಅಣ್ಣ ಅತ್ತಿಗೆಯವರ ಕೈಯಲ್ಲಿ ಬೆಂದವರು ತಗ್ಗಿ ಬಗ್ಗಿ ನಡೆಯುವುದನ್ನು ಕಲಿತಿದ್ದರು. ಕೈಹಿಡಿದ ಪತಿಯನ್ನನು ಸರಿಸಿಕೊಂಡಿದ್ದರು. ಅಣ್ಣನ ಮನೆಯ ಹಂಗಿಗಿಂತ ಗಂಡನ ಮನೆಯ ಅಂಬಲಿಯೇ ಹೆಚ್ಚು ಸುಖ ನೀಡಿತ್ತು.

ಆದರೆ ನಿರ್ಮಲಳ ಓದು ಮುಗಿಯುವ ವೇಳೆಗೆ ಅಣ್ಣ ರಾಮಕೃಷ್ಣ ನಾಲ್ವರು ಸಹೋದರಿಯರ ಮದುವೆ ಮಾಡಿ ಸೋತಿದ್ದ. "ಈಗೇನವಸರಮ್ಮ ನಿಮ್ಮಯ ಮದುವೆಗೆ! ನಾಲ್ಕು ದಿನ ಹಾಯಾಗಿ ಓಡಾಡಿಕೊಂಡಿರಲಿ ಬಿಡು" ಎಂದಿದ್ದ. ಅದಕ್ಕೆ ತಕ್ಕಂತೆ ಅತ್ತಿಗೆಯ ಸೋದರಮಾವ ಬ್ಯಾಂಕೊಂದರಲ್ಲಿ ಜನರಲ್ ಮ್ಯಾನೇಜರ್ ಆಗಿದ್ದರಿಂದ ನಿರ್ಮಲ ಕೆಲಸಕ್ಕೆ ಸೇರಲು ಬಯಸಿದಾಗ ಅಣ್ಣ-ಅತ್ತಿಗೆಯರ ಸಹಕಾರದಿಂದ ಬ್ಯಾಂಕಿನಲ್ಲಿ ಕೆಲಸವೂ ಸಿಕ್ಕಿತ್ತು. ಮಗಳು ಹೊರಗೆ ಪುರುಷನಂತೆ ದುಡಿಯುವುದು ಸರಿಬಿದ್ದಿರಲಿಲ್ಲ ವಿಜಯಮ್ಮನಿಗೆ.

"ಯಾಕೆ ನಿಂಗೆ ಕೆಲ್ಸ? ಮನೇಲೇ ಇದ್ದು ನಂಗೊಂದಿಷ್ಟು ಸಹಾಯ ಮಾಡು. ಪುಟ್ಟು, ರಾಣಿಗೆ ಪಾಠ ಹೇಳಿಕೊಡು, ಕಸೂತಿ, ಹೊಲಿಗೆ,

ಈಗೇನೋ ಹೇಳ್ಕೊಡ್ತಾರಲ್ಲಾ ಬನ್ನು, ಬ್ರೆಡ್ಡು, ಕೇಕು ಮಾಡೋದು ಅನ್ನ ಕಲಿ! ಹಾಳು ಗಾಳಿ, ಬಿಸಿಲು ಮಳೆ ಅನ್ನದೇ ನೀನ್ಯಾಕ ಕೆಲ್ಸಮಾಡ್ಬೇಕೂ?"

"ನಾನ್ಯಾಕೆ ಮಾಡ್ಬೇಕೂಂದ್ರೆ, ನನ್ನ ಕಾಲಿನ ಮೇಲೆ ನಾನು ನಿಲ್ಲಬೇಕು! ನಿನ್ನ ಹಾಗೆ ಇನ್ನೊಬ್ಬರ ಮನೆ ಚಾಕರಿ ಮಾಡ್ಕೊಂಡು ಅವರು ಕೊಡೋ ಎಂಜಲನ್ನ, ಎಂಜಲು ಕಾಸಿಗೆ ಕೈಯೊಡ್ಡುವುದಿಲ್ಲ ನಾನು! ದಿನಬೆಳಗಾದರೆ ನಾನೇ ನೋಡ್ತಾ ಇಲ್ವಾ ನೀನು ಅಣ್ಣ ಅತ್ತಿಗೆಯರ ಮರ್ಜಿ ಹಿಡ್ಕೊಂಡು ಒದ್ದಾಡೋದು! ನಂಗೆ ಕಾಫಿ ಕೊಡಮ್ಮಾಂದ್ರೆ 'ತಾಳೆ ನಿನ್ನ ರಾಮೂಗೆ ಕೊಟ್ಬಿಟ್ಟು ಆಮೇಲೆ ನಿಂಗೆ ಕೊಡ್ತೀನಿ' ಅಂತೀಯಾ! ಅವನು ನಿನ್ನ ಕುಲೋದ್ಧಾರಕ! ಮಾಡಿಕೋ! ನನ್ನ ಮಾತ್ರ ನಿನ್ನ ದಾರಿಗೆ ಎಳೀಬೇಡಾ!" ಎಂದು ಖಂಡ ತುಂಡವಾಗಿ ಹೇಳಿದ್ದಳು ನಿರ್ಮಲ. ಚಿಕ್ಕಂದಿನಿಂದ ತಾಯಿಯ ದುಡಿತ, ಅಕ್ಕಂದಿರ ಹೊರೆ, ಅಣ್ಣನ ಹಿರಿಮೆ ಕಂಡು ಹೇಸಿದ್ದಳು. ತನ್ನ ತಾಯಿ ಮನಸ್ಸು ಮಾಡಿದ್ದರೆ ಸರ್ವ ಸ್ವತಂತ್ರಳಾಗಿ ತಮ್ಮನ್ನು ಸುಖವಾಗಿ ಬೆಳೆಸಬಹುದಿತ್ತು. ತಾವೆಲ್ಲಾ ಓದಿದವರೇ. ತನಗೆ ನೌಕರಿ ಕೊಡಿಸಿದ ಅಣ್ಣ ಅವರಿಗೂ ಕೊಡಿಸುತ್ತಿರಲಿಲ್ಲವೇ? ತಾನು ಅಬಲೆ, ತನಗೆ ಆಸರೆ ಬೇಕು. ತಾನು ತನ್ನ ಬದುಕನ್ನು ಸ್ವತಃ ರೂಪಿಸಿಕೊಳ್ಳಲು ಅನರ್ಹಳು-ತಾನು ಹೆಣ್ಣು ಹೆತ್ತವಳು ಎಂದು ತನ್ನನ್ನು ತಾನೇ ಅಧೋಗತಿಗಿಳಿಸಿಕೊಂಡ ತಾಯಿಯ ಬಗೆ ಕನಿಕರ ಇರಲಿಲ್ಲ. ತಾತ್ಸಾರವಿತ್ತು. ಕುರಿಗಳಂತೆ, ತಾಯಿ ಹಾಕಿಕೊಟ್ಟ ಹಾದಿಯಲ್ಲೇ ನಡೆದು ತಮ್ಮ ಬಾಳನ್ನೂ ಒಂದಲ್ಲ ಒಂದು ದಿನ ತಾಯಿಯ ಬದುಕಿನ ಪ್ರತಿಬಿಂಬದ ತುಣುಕು ಮಾಡಿಕೊಳ್ಳಬಹುದಾದ ಅಕ್ಕಂದಿರ ಮೇಲೆ ತಿರಸ್ಕಾರವಿತ್ತು! ತಾನು ಗಂಡು ಮಗ, ತಾನು ಕುಲೋದ್ಧಾರಕ, ವಂಶದ ಕುಡಿಯೆಂದು ಬೀಗುತ್ತಿದ್ದ ಅಣ್ಣನನ್ನು ಕಂಡರೆ ಅಸಹ್ಯವೆನಿಸಿತ್ತು. ತಾವೆಲ್ಲಾ ವಂಶದ ಕುಡಿಯಲ್ಲವೇ? ಅವನೊಬ್ಬನದೇನು ಹೆಚ್ಚುಗಾರಿಕೆ? ಅವನ ಮೈಯ್ಯೇನು ಬಂಗಾರದಿಂದ ಮಾಡಿದೆಯೇ? ತಮ್ಮನ್ನು ಅಮ್ಮ 'ಹೆಣ್ಣುಮಕ್ಕಳೆಂದು' ನಿರ್ಲಕ್ಷಿಸದೇ ಅವನಿಗೆ ಹಣ ಸುರಿದು ಓದಿಸಿದಂತ ತಮಗೂ ಓದಿಸಿದ್ದರೆ ತಾವೂ ಇಂದು ದೊಡ್ಡ ಹುದ್ದೆಯಲ್ಲಿರಬಹುದಿತ್ತು. ಅಣ್ಣ ಅತ್ತಿಗೆಯರನ್ನೂ ತಾಯಿಯನ್ನೂ ಸಾಕಬಹುದಿತ್ತು. ತನ್ನ ಸಂಪಾದನೆ ತನ್ನ ಸ್ವಾತಂತ್ರ್ಯದ ಬಗ್ಗೆ ನಿರ್ಮಲಳಿಗೆ ಹೆಮ್ಮೆಯಿತ್ತು.

"ಹಣದ ಸ್ವಾತಂತ್ರ್ಯವಿಲ್ಲದೇ ಇರೋದೇಮ್ಮಾ ಹೆಣ್ಣಿನ ಅಬಲತೆಗೆ ಕಾರಣ. ತಾನೇ ನಾಲ್ಕು ಕಾಸು ದುಡಿಯುವ ಹಾಗಿದ್ದರೆ ಯಾಕ ಸಂಕಟವಮ್ಮಾ?" ಎನ್ನುತ್ತಿದ್ದಳು. "ಅನಾದಿಕಾಲದಿಂದಲೂ ತಪ್ಪು ಹೆಣ್ಣಿನದೇ. ಮೂಲನಿವಾಸಿಗಳಲ್ಲಿ ಗುಹೆಗಳಲ್ಲಿದ್ದು ಕಾಡಿನ ಗೆಡ್ಡೆ, ಗೆಣಸು, ತಿಂದು, ಬೆಂಕಿ ಆರದಂತೆ ಯಾರಾದರೂ ಕಾಯಬೇಕಿತ್ತು. ಅದಕ್ಕೆ ಪುರುಷ "ಹೆಣ್ಣೇ ನೀನು ಗುಹೆಯಲ್ಲಿದ್ದು ಬೆಂಕಿ ಆರದಂತೆ ಕಾಪಾಡಿಕೋ, ನಾನು ಹೊರಗೆ ಹೋಗಿ ಆಹಾರ ತರುತ್ತೇನೆ" ಎಂದಾಗ ಪುರುಷನಲ್ಲಿ ಹೆಣ್ಣನ್ನು ಆಳುವ ಭಾವನೆಯಿರಲಿಲ್ಲ. ಸಹಕಾರದ ಅಗತ್ಯವಿತ್ತು. ಅಂದು ಅವಳು "ಹಾಗೆ ಬೇಡ ನೀನೊಂದು ದಿನ ಬೆಂಕಿ ಕಾಯಿಸಿ, ಬೇಯಿಸಿ, ಮಕ್ಕಳು ಮರಿ ನೋಡಿಕೋ, ನಾನು ಹೊರಗೆ ಹೋಗಿ ಆಹಾರ ತರುತ್ತೇನೆ" ಎಂದು ಇಬ್ಬರೂ ಒಂದೊಂದು ದಿನ ಹಂಚಿಕೊಂಡಿದ್ದರೆ, ಈ ತಾರತಮ್ಯವೇ ಇರುತ್ತಿರಲಿಲ್ಲ. ಗುಹೆಯಲ್ಲಿ ಬೆಚ್ಚಗೆ ಕುಳಿತು ಹೊರಗಿನ ಪ್ರಕೃತಿಯ ಪ್ರಕೋಪದಿಂದ ರಕ್ಷಿಸಲ್ಪಟ್ಟಾಗ ಅವಳಿಗೆ ಗುಹೆಯೇ ಹಿತ, ಮಕ್ಕಳು, ಬೇಯಿಸುವುದೇ ಹಿತ ಎನ್ನಿಸಿರಬೇಕು. "ಹಾಗೇ ಆಗಲಿ, ನೀನು ಹೊರಗೆ ಹೋಗಿ ಆಹಾರ ಅರಸಿ ಬಾ. ನಾನು ಬೇಯಿಸಿ, ನಿನ್ನ ಮಕ್ಕಳು ಮರಿಗಳನ್ನು ನೋಡಿಕೊಳ್ಳುತ್ತೇನೆ" ಎಂದುಬಿಟ್ಟಳು. ನೋಡು ಅವತ್ತೇ–ಬಂತು ನಮಗೆ ಈ ಪಟ್ಟ!" ನಿರ್ಮಲ ಹೇಳುತ್ತಿದ್ದಾಗ ಅತ್ತಿಗೆ ನಗುತ್ತಿದ್ದಳು. ವಿಜಯಮ್ಮ ಸಿಡಿಮಿಡಿಗೊಳ್ಳುತ್ತಿದ್ದರು.

"ಹೆಣ್ಣು ಮಕ್ಕಳಿಗೆ ಅವಕ್ಕೇ ಹೆಚ್ಚು ಓದಿಸಬಾರದು ಎನ್ನೋದು! ಎಷ್ಟು ಮಾತಾಡ್ತೀ ನೋಡು. ಅದಲ್ಲಾ ಚೆನ್ನಾಗಿರೋಲ್ಲ. ಪ್ರಕೃತಿ ನಿಯಮಕ್ಕೆದುರಾಗಿ ಹೋಗಬಾರದು. ಅಷ್ಟೊಂದು ಸ್ವಾತಂತ್ರ್ಯ ತೆಗದು ಕೊಂಡ್ರೆ ಹೆಣ್ಣು ಎಂದಾದ್ರೂ ಹಾಳಾಗ್ತಾಳೆ!"

"ಇಲ್ಲ ನಿನ್ನ ಹಾಗೆ ಉದ್ಧಾರ ಆಗ್ತಾಳೆ!" ಎಂದು ರೇಗಿ ನಿರ್ಮಲ ಅಲ್ಲಿಂದೆದ್ದು ಹೋಗುತ್ತಿದ್ದಳು. ಅವಳಿಗೆ ಮನೆಗೆಲಸ, ಕಸೂತಿ, ಅಂದ ಚೆಂದ ಎಲ್ಲ ಬೇಸರ. ತಿಂಗಳು ತಿಂಗಳಿಗೆ ಕೈ ತುಂಬಾ ಹಣ ಬಂದಾಗ ನೀರಿನಂತೆ ಖರ್ಚು ಮಾಡಿದರೂ ಸರಿಯೆನಿಸಿತ್ತು. ಕೊನೆಗೆ ತಾನು ಸಂಪಾದಿಸುವ ಹಣ, ತಾನು ಹೇಗೆ ಖರ್ಚು ಮಾಡಿದರೂ ಸರಿಯೆನಿಸಿತ್ತು. ಕೊನೆಗೆ ತಾನು ಸಂಪಾದಿಸುವ ವ್ಯಕ್ತಿ ಎಂದು ತಿಳಿದ ಅಣ್ಣ ಒಂದೆರಡು ಬಾರಿ

ಸೂಚಿಸಿದ್ದ "ನಿಮ್ಗೇ, ಮನೆ ಖರ್ಚು ತುಂಬಾ ಆಗ್ತಾ ಇದೆ ಸಾಮಾನಿನ ಬೆಲೆಗಳು ಗಗನಕ್ಕೇರ್‍ತಾ ಇವೆ ಸಂಗ ಸಂಸಾರ ಹೇಗಪ್ಪಾ ನಿಬಾಯಿಸೋದು ಅನ್ನಿಸ್ತಾ ಇದೆ ಬರೋ ಹಣವೆಲ್ಲಾ ನೀನು ಖರ್ಚು ಮಾಡ್ತಾನೆ ಇದ್ರೆ ಪುಟ್ಟಿಗೆ, ರಾಣೀಗೆ ಏನು ಮಾಡೋದೂ ಎನ್ನಿಸಿಬಿಟ್ಟಿದ ನಾಲ್ಕು ಕಾಸು ಕೂಡಿಡೋಣಾಂದ್ರೆ ಆಗ್ತಾ ಇಲ್ಲ!"

ಅದು ನಿನ್ನ ತಲೆನೋವೇನ್ನಬೇಕೆನಿಸಿದ್ದರೂ ನಿರ್ಮಲ ಹೇಳದೇ ತಡೆದು ಕೊಂಡು ಅವನಿಗಿಂತ ಅರಿತಳು ಮನೆಯ ಖರ್ಚಿಗಾಗಿ ಅವನಿಗೊಂದಿಷ್ಟು ಹಣ ಇತ್ತು ತಾನೇ ವಿಮುಕ್ತಳಾಗಿದ್ದಳು "ರಾಮೂ, ನಮಗಾಗಿ ನೀನು ಎಷ್ಟು ಖರ್ಚು ಮಾಡ್ತೀ! ಇರಲಿ ಇಟ್ಕೋ ಯಾವುದಕ್ಕಾದ್ರೂ ಬೇಕಾಗುತ್ತೆ!"

ರಾಮುವಿಗೆ ಮಂಗಲಾದ ಶತ್ರು ಆಗ ಅದನ್ನು ಕಂಡ ವಿಜಯಮ್ಮ ಮಗಳನ್ನು ಹತ್ತಿರ ಕರೆದು ಉಸುರಿದ್ದರು "ಅವನ ಕೈಗ್ಯಾಕೆ ಕೊಟ್ಟೆ? ನೀನೇ ಒಂದಿಷ್ಟು ಬಳೆ, ಸರಾನೋ, ಒಂದಿಷ್ಟು ಸೈಟು, ಮನೆ, ಮಾರಾಂತ ಮಾಡ್ಕೋಬಾರ್‍ದಿತ್ತಾ? ನಿನ್ನ ಹಣದಲ್ಲಿ ಅವನು ಸಂಸಾರ ಸಾಗಿಸ್ಬೇಕಾ?"

"ಇದ್ಯಾಕಮ್ಮಾ, ಸಂಪಾದಿಸೋ ಯೊಗ್ಯತೆ ಅವನಿಗೊಬ್ಬನಿಗೇನಾ ಇರೋದು? ಅವನೊಬ್ಬನೇ ಖರ್ಚು ಮಾಡ್ಬೇಕಾ? ಅವನಿಗೂ ಹಣದ ಮುಗ್ಗಟ್ಟಿರುತ್ತೆ? ಆವ್ರ ನಾನೂ ಒಡವೆ ಮಾಡಿಸ್ಕೋತೀನಿ ಮನೇನೂ ಕಟ್ಟಿಸ್ಕೋತೀನಿ ನೋಡ್ತಾ ಇರು!"

ಅವಳೆಂದಂತೆಯೇ ಸೈಟೊಂದನ್ನು ಕೊಂಡಳು ಬ್ಯಾಂಕಿನಿಂದ ಸಾಲ ತೆಗೆದು ಮನೆ ಕಟ್ಟಲೂ ಪ್ರಾರಂಭಿಸಿದಳು ಅವಳಿಗೆ ಅನುರೂಪನಾದ ವರ ಸಿಗದೇ ಬಸವಳಿದಿದ್ದರು ವರನ ಬಗ್ಗೆ ಹೇಳಿದಾಗ ನಿರ್ಮಲ ನಗುತ್ತಿದ್ದಳು ನಂಗಾ ಕಮಾ ಮದುವೆ? ಹಾಯಾಗಿದ್ದೀನಿ!" ಮನೆ ಬಾಡಿಗೆಗೆ ಕೊಟ್ಟಳು.

ಆದರೆ ವರ್ಷಗಳು ಕಳೆದಂತೆ ಅವಳ ಗೆಳತಿಯರೆಲ್ಲಾ ಮದುವೆಯಾಗಿ ಒಬ್ಬೊಬ್ಬರಾಗಿ ದೂರ ಸರಿಯುತೊಡಗಿದಾಗ ತಾಯಿ ವಯಸ್ಸಿನ ಕಾಯಿಲೆಯಿಂದ ನಿತ್ರಾಣರಾಗತೊಡಗಿದಾಗ ಅವಳಿಗೆ ತನ್ನ ಏಕಾಕಿತನದ ಪರಿಚಯವಾಗುತ್ತಾ ಬಂದಿತ್ತು ತಾಯಿ ಕಣ್ಮುಚ್ಚಿದರೆ ಅಣ್ಣನೊಂದಿಗೆ ತಾನಿರುವುದು ಸಾಧ್ಯವಿಲ್ಲ ತಾನೊಬ್ಬಳೇ ಇರಬೇಕಾದೀತು ತನ್ನ ಕಷ್ಟ ಸುಖಗಳನ್ನು ಹಂಚಿಕೊಳ್ಳಲು ಯಾರು? ತಾನೀಗಲೇ ಬೇರೆಯಾಗಿ ಹೋಗುವುದು ಸರಿಯೆಂದು ಬಾಡಿಗೆಗಿತ್ತ

ಮನೆಯನ್ನು ಬಿಡಿಸಿಕೊಂಡು ತಾಯಿಯೊಂದಿಗಿರತೊಡಗಿದ್ದಳು. ಪ್ರಕೃತಿ ಸಹಜವಾದ ಬಯಕೆಗಳೆದ್ದು ಕುಣಿದಾಗ ವಿಭ್ರಾಂತಳಾಗಿ ಮೈಕೊಡವಿ ಎದ್ದರೂ ಕೊನೆಗೊಂದು ದಿನ ತಾನು ಸೋಲಬೇಕಾದೀತೆಂಬ ಭಯ ಆವರಿಸಿಕೊಂಡಿತು ಅದರ ಬದಲು ತನ್ನನ್ನು ಹೊರಗೆ ದುಡಿಯುವ ಸ್ವಾತಂತ್ರ್ಯ ಕೊಟ್ಟ ಯಾರಾದರೂ ಮದುವೆಯಾಗಲಿಚ್ಛಿಸಿದರೆ ಮದುವೆಯಾಗುವನೆಂದು ತಿಳಿಸಿದಾಗ ಮುಪ್ಪಿನಂಚಿನಲ್ಲಿ ಹೆಣಗುತ್ತಿದ್ದ ವಿಜಯಮ್ಮ ಅವರಿವರಲ್ಲಿ ಹೇಳಿದ್ದರು. "ನಮ್ಮ ನಿಮ್ಮಗೆ ಸರಿಹೋಗೋರು ಯಾರಾದ್ರೂ ಸಿಕ್ತಾರಾ ನೋಡಿ !"

ಅವರಿವರಿಂದ ತಿಳಿದು ಬಂದವರೇ ರಂಗಸ್ವಾಮಿ ದಂಪತಿಗಳು ನಿರ್ಮಲಳನ್ನು ಆಗಾಗ ದೂರದಿಂದಲೇ ನೋಡಿದ್ದರು ಮುಂಚೆ ಬಡತನ ದಲ್ಲಿದ್ದರೂ ಮಗ ಓದಿ ಸಂಪಾದಿಸುವ ಹಾಗಾಗುವ ವೇಳೆಗೆ ಮೊದಲ ಮಗಳ ಮದುವೆ ಸಾಲ ಸೋಲ ಮಾಡಿ ಮುಗಿಸಿದ್ದರು ಮಗ ಗೋಪಾಲನ ಯೋಚನೆಯಿರಲಿಲ್ಲ. ಕಾಲು ಕೊಂಚ ಊನವಾಗಿದ್ದ ಗಾಯಿತ್ರಿ ಅವರಿಗೆ ದೊಡ್ಡ ಯೋಚನೆಯಾಗಿದ್ದಳು. ನೋಡಲು ಲಕ್ಷಣವಾಗಿದ್ದರೂ ಕಾಲಿನ ತೊಂದರೆಯೊಂದರಿಂದ ಯಾರೂ ಮದುವೆಯಾಗಲು ಮುಂದ ಬಂದಿರಲಿಲ್ಲ ಓದಿಸಿ ಅವಳನ್ನು ಮುಂದೆ ತರಬೇಕೆಂದರು ಅವಳಿಗೆ ಅದರಲ್ಲಿ ಮನಸ್ಸಿರಲಿಲ್ಲ ಎಲ್ಲರಂತೆ ತಾನು ಒಳ್ಳೆಯವನ ಕೈಹಿಡಿದು ತನ್ನ ಜೀವನ ನಡೆಸುವ ಕನಸು ಕಾಣುವವಳು ಗೋಪಾಲನಿಗೇನೂ ವಯಸ್ಸು ಕಡಿಮೆಯಾಗಿರಲಿಲ್ಲ ಅವನ ಗೆಳೆಯರಿಗೆಲ್ಲಾ ಲಗ್ನವಾಗಿ ಮಕ್ಕಳಿದ್ದರು ಮಗ ತಪ್ಪುದಾರಿ ಹಿಡಿದಾನೆಂದು ಅವನಿಗೆ ಹೆಣ್ಣು ಹುಡುಕತೊಡಗಿದ್ದರು ಆಗಲೇ ಅವರಿಗೆ ನಿರ್ಮಲಳ ವಿಷಯದಲ್ಲಿ ಆಸಕ್ತಿ ಬಂದುದು "ನನಗೇನಮ್ಮಾ ಅವಸರ? ಗಾಯಿತ್ರೀದು ಆಗ್ಲಿ !" ಎಂದಾಗ ಮೀನಾಕ್ಷಮ್ಮ ಬಹಳ ಯೋಚಿಸಿ ಹೇಳಿದರು "ಅವಳದ್ದೂ ಆಗುತ್ತೆ ಬಿಡು ಕಂಕಣಬಲ ಕೂಡಿ ನಿಂಗೆ ಬಂದರೆ ಬರುವ ನಿನ್ನ ಹೆಂಡತಿ ಅದೃಷ್ಟದಿಂದ ಅವಳಿಗೂ ಕಂಕಣ ಕೂಡಿ ಬಂದೀತು !"

ಗೋಪಾಲ ಒಳ್ಳೆಯ ಲಕ್ಷಣವಾದ ಗಂಭೀರ ವ್ಯಕ್ತಿ ಅವನನ್ನು ನಿರ್ಮಲ ನೋಡಿದಾಗ ಮೊದಲ ನೋಟಕ್ಕೆ ಮೆಚ್ಚಿದ್ದರೂ ಯಾವುದನ್ನೂ ತನಗೆ ತಾನೇ ಸಮರ್ಥಿಸಿಕೊಳ್ಳಲಾರನೆಂದೂ ತಿಳಿದಿತ್ತು. ಆದರೆ ಅವನನ್ನೊಪ್ಪಲು ಅದು ಅಡ್ಡಿ ಬಂದಿರಲಿಲ್ಲ. ಎಲ್ಲರ ಕಣ್ಣೆದುರಿಗೆ ತಾನು ಅತ್ಯಂತ ಸರಳವಾಗಿ,

ಅವನಂತಹವನನ್ನು ಕೈಹಿಡಿಯಬೇಕು ಸಮಾಜದಲ್ಲಿ ಹೆಣ್ಣಿನ ಮೌಲ್ಯ ಹೆಚ್ಚುತ್ತಿದೆಯೆಂದು ತೋರಬೇಕು ಎನ್ನುವ ಹಂಬಲ, ತಾಯಿಗೆ ಹೇಳಿದ್ದಳು "ಮಂಗಳ ಸೂತ್ರ ಬಿಟ್ಟರೆ, ನನಗೇನೂ ಬೇಡಾಂತ ಹೇಳಮ್ಮ." ರಂಗಸ್ವಾಮಿ ಯವರೂ ಹೇಳಿದರು "ಇಬ್ಬರೂ ಅರ್ಧ ಅರ್ಧ ಖರ್ಚು ಹಾಕಿ ಮದುವೆ ಮಾಡೋಣ ಬಂದವರಿಗೆ ಊಟ, ಉಡುಗೊರೆಗೆ ಸೀಮ್ರೋಬ್ಬರೇ ಏಕೆ ಖರ್ಚು ಮಾಡಬೇಕು? ನಮ್ಮ ಗೋಪಾಲನಿಗೂ ಕೈಗೆ ಹಾಕುವ ಉಂಗುರ ಬಿಟ್ಟು ಏನೂ ಕೊಡಬಾರದು!"

ವಿವಾಹಕ್ಕೆ ಬಂದವರೆಲ್ಲಾ ನಿರ್ಮಲಳ ಅದೃಷ್ಟ ಕೊಂಡಾಡಿದ್ದೂ ಕೊಂಡಾಡಿದ್ದೇ 'ಯಾವ ಜನ್ಮದ ಸುಕೃತ ಪುಣ್ಯವೋ ನಿಂದು!' ಎಂದು ಹಾಡಿ ಹೊಗಳಿದ್ದೇ ಅಕ್ಕಂದಿರು, ಅಣ್ಣ, ಅತ್ತಿಗೆಯರ ಬಾಯಿ ಕಟ್ಟಿ ಹೋಗಿತ್ತು ಅತ್ತೆ, ಮಾವ ಸೊಸೆಗೆ ಉಪಚರಿಸಿದ್ದೂ ಉಪಚರಿಸಿದ್ದ! "ನಮ್ಮ ಮನೆ ಬೆಳಗೋ ದೀಪ! ನೋಡಿ ಕಾಲ ಬದಲಾಯ್ತು ಹೆಣ್ಣು ಹುಟ್ಟೊಂದ್ರೇ ಮೂಗಳೀತಾ ಇದ್ರು ಈಗ ನನ್ನ ಸೊಸೆ ನೋಡಿ ಯಾವ ಗಂಡುಮಗನಿಗೆ ಕಡಿಮೆ!" ಎಂದು ಆರತಕ್ಷತೆಗೆ ಬಂದವರ ಮುಂದೆ ಹೇಳಿದ್ದರು. ಗಾಯತ್ರಿಯಂತೂ ಅತ್ತಿಗೆಯ ಜನ್ಮ ಬಿಟ್ಟು ಕದಲಲಿಲ್ಲ "ಗೋಪಾಲ ಪುಣ್ಯ ಮಾಡಿದ್ದ" ಎಂದು ಯಾರೋ ಹೇಳಿದಾಗ "ನಮ್ಮ ನಿಮ್ಮ ಏನೂ ಕಡಮೆ ಇಲ್ಲ ಸ್ವಂತ ಮನೆ ಇದೆ ಕೈ ತುಂಬಾ ಸಂಪಾದಿಸುತ್ತಾಳೆ!" ವಿಜಯಮ್ಮ ಹೆಮ್ಮೆಯಿಂದ ಹೇಳಿಕೊಂಡು ಮೂಗು ಮುರಿದಿದ್ದರು

ಮೊದಲ ರಾತ್ರಿ! ಹುಚ್ಚು ಯೌವನದ ಕಾವಿಲ್ಲದಿದ್ದರೂ, ಹೆಣ್ಣು ಗಂಡುಗಳ ಪರಸ್ಪರ ಆಕರ್ಷಣೆ! ನಿರ್ಮಲಳಷ್ಟು ಸುಂದರ, ಸದ್ಗುಣಿ ಹೆಂಡತಿ ಇನ್ನೊಬ್ಬರಿಗಿಲ್ಲ ಎಂಬ ಹೆಮ್ಮೆ ಗೋಪಾಲನಿಗೆ ಎಂತಹ ಒಳ್ಳೆಯ ವ್ಯಕ್ತಿ ತನ್ನ ಸ್ವಾತಂತ್ರ್ಯಕ್ಕೆ ಎಷ್ಟು ಮನ್ನಣೆಯಿತ್ತು ತನ್ನನ್ನು ಇಷ್ಟು ಗೌರವದಿಂದ ನಡೆಸಿಕೊಳ್ಳುವ ಪತಿ! ಎಂದು ನಿರ್ಮಲಳಿಗೆ ಅತಿಸಂತಸ ಒಬ್ಬರಿಗಾಗಿ ಇನ್ನೊಬ್ಬರು, ತಮ್ಮ ಸೋಲನ್ನೊಪ್ಪಿಕೊಂಡಾಗ ಆಗುವ ವಿಜಯೋತ್ಸವವೇ ಇಬ್ಬರದಾಗಿತ್ತು ಮಾರನೆಯ ದಿನವೇ ಮಧುಚಂದ್ರಕ್ಕಾಗಿ ಹದಿನೈದು ದಿನಗಳು, ಎಲ್ಲರಿಂದ ದೂರ ಇಬ್ಬರೇ ಹಾರಿಹೋಗಿದ್ದರು. ಎಲಾ ಆ ಹುರುಪಿನಲ್ಲಿ ಮಾತ್ರ!

ಅಕ್ಕಪಕ್ಕದವರಲ್ಲಿ ವಿಜಯಮ್ಮ ಹೇಳಿಕೊಂಡು ಕಣ್ಣೊರಸಿಕೊಂಡಿದ್ದರು "ಸ್ವಾಭಿಮಾನೀಂತ್ರ ನೋಡಿ ನಮ್ಮ ನಿರ್ಮಲ ! ಕೊನೆಗೂ ತನ್ನ ಮೂಗಿನ ನೇರಕ್ಕೇ ನಡೆದಳು. ಅವಳ ಕೈಹಿಡಿಯೋನೂ ಅಂತಹವನೇ ಸಿಗಬೇಕಾ ? ಅವಳು ಹೇಳಿದಂತೆ ನಡೆಯೋ ಅತ್ತೇ ಮಾವ ಸಿಗಬೇಕಾ ? ಈಗಿನ ಕಾಲ್ದಲ್ಲಿ ಯಾರು ವರೋಪಚಾರ, ವರದಕ್ಷಿಣೆಯಿಲ್ದೆ ಇಷ್ಟು ಸುಲಭವಾಗಿ ಮದ್ವೆ ಯಾಗ್ತಾರೆ ? ಯಾರು ಅವಳ ಸ್ವಾತಂತ್ರ್ಯ, ಹಟಕ್ಕೋಸ್ಕರ ಹೊರ್ಗೆ ದುಡೀತೀನಿ ಅಂದ್ರೆ ಬಿಡ್ತಾರೆ! ನಮ್ಮ ನಿರ್ಮಲ ಒಂದು ಚಮಚ ಈ ಕಡೆಯಿಂದ ಆ ಕಡೆ ಇಡೋಲ್ಲ"

ಮಧುಚಂದ್ರದಿಂದ ಬಂದ ನಿರ್ಮಲ ಹೊಸಬಳು ಗೋಪಾಲ ಹೊಸ ಮನುಷ್ಯ

"ನಿಮ್ಮೀ, ನೀನು ಕೆಲಸಕ್ಕೆ ಹೋಗ್ಬೇಡಾ ಬಿಟ್ಬಿಡೂಂತ ಹೇಳೋಣಾ ಅನ್ನತ್ತೆ ! ಯಾವಾಗ್ಲೂ ನೀನು ನಂಜೋತೆನೇ ಇರ್ಬೇಕೂ !"

"ಹೂಂ ಆಗ್ಲಿ, ಮಕ್ಳೂ ಮರಿ, ಯಾವ ತಾಪತ್ರಯ ಇಲ್ವಲ್ಲ ಈಗ ! ಅದೆಲ್ಲಾ ತಾಪತ್ರಯ ಆದಾಗ ಬಿಟ್ಬಿಡ್ತೀನಿ !" ನಿರ್ಮಲ ಹೇಳಿದಾಗ ಗೋಪಾಲ ಗಂಭೀರನಾಗಿದ್ದ ಸ್ವಲ್ಪ ಹೊತ್ತಿನ ನಂತರ ಹೊರಗೆ ಬಂದಾಗ ಮೀನಾಕ್ಷಮ್ಮ ಸೊಸೆಯ ಮುಡಿಗೆ ಹೂವು ಮುಡಿಸುತ್ತಾ ಹೇಳಿದರು "ನೋಡು, ನಾಲ್ಕು ದಿನ ಹಾಯಾಗಿ ಹೋಗಿಬಂದದ್ದು ಎಷ್ಟು ಚೆನ್ನಾಗಿ ಕಾಣ್ತೆ !?"

"ಇವರೂ ಅದೇ ಹೇಳ್ತಾ ಇದ್ರು ಕೆಲಸ ಬಿಟ್ಬಿಡೂಂತಾ !"

ಮೀನಾಕ್ಷಮ್ಮನ ಮುಖ ಗಂಭೀರವಾಯಿತು "ಬಿಡುವಿಯಂತೆ ನಾಲ್ಕು ದಿನ ಹಾಯಾಗಿರು ಈಗ್ಲಿಂದ ಅಡಿಗೆ, ಮನೆ, ಕೆಲ್ಸಾಂತ ಮನೇಲಿ ಕೂತ್ಕೊಂಡು ಏನು ಮಾಡ್ಬೇಕು ? ಅಂದ ಹಾಗೆ ನಮ್ಮ ಗಾಯಿತ್ರಿನ್ನ ನೋಡೋಕೆ ಯಾರೋ ಬರ್ತಾ ಇದ್ದಾರೆ ಹುಡುಗ ಸುಮಾರಾಗಿ ಓದಿದ್ದಾನಂತೆ ಏನೋ ಸ್ವಂತ ಉದ್ಯಮ ಪ್ರಾರಂಭಿಸ್ತಾನಂತೆ ಅದಕ್ಕೊಂದಿಷ್ಟು ಹಣ ಅವನಿಗೆ ಒದಗಿಸಿ ಕೊಡೋ ಹಾಗಿದ್ರೆ ಖಂಡಿತ ಆಗ್ತೀನೀಂತ ಅಂತಿದ್ದಾನಂತೆ "

"ಹಾಗಾದ್ರೇ ಮಾಡೋದು ತಾನೇ ? ಅಂತೂ ಅವಳನ್ನ ಮದುವೆ ಯಾಗೋಕೆ ತಯಾರಿದ್ದಾನಲ್ಲಾ !" ಆಗ ಬಂದ ಗೋಪಾಲ ದನಿ ಸೇರಿಸಿದ.

"ಮಾಡ್ಬೋದಪ್ಪಾ. ಆದ್ರೆ ಅವನಿಗೆ 50ಸಾವಿರ, ಒಂದು ಲಕ್ಷ

ಬಿಸಿನೆಸ್ ಮಾಡೋಕ್ಕೆ ಎಲ್ಲಿಂದ ತರ್ಲಪ್ಪಾ ನಾನು ?" ರಂಗಸ್ವಾಮಿ ಕನ್ನಡಕ ಮೂಗಿಗೇರಿಸಿದರು

"ಅಂದ್ರೆ ಸಂಬಂಧ ಬಿಟ್ಬಿಡ್ತೀಯಾ ?" ಗೋಪಾಲ ಕೇಳಿದ

"ಇನ್ನೇನು ಮಾಡೋಕ್ಕಾಗುತ್ತೆ ? ನಿಮ್ಮಕ್ಕನ ಮದ್ವೆ ಸಾಲಾನೇ ತೀರ್ಸಿಲ್ಲ ಇನ್ನೂ ಇವಳಿಗೆಲ್ಲಿಂದ ಅಷ್ಟು ಹಣ ತರಲಿ ?"

ಕ್ಷಣಕಾಲ ಎಲ್ಲರೂ ಮೌನ ಮೀನಾಕ್ಷಮ್ಮ ಗಂಟಲು ಸರಿಪಡಿಸಿ ಕೊಂಡರು

"ನೀವಿಬ್ರೂ ಮನಸ್ಸು ಮಾಡಿದ್ರೆ ಆಗುತ್ತೇಪ್ಪಾ ಇಬ್ರೂ ಕೈತುಂಬಾ ಸಂಪಾದಿಸ್ತೀರಿ. ಎಲ್ಲಿಂದಾದ್ರೂ ಸಾಲ ತಂದು ತೀರಿಸೋ ಭಾರ ಹೊತ್ಕೊಳ್ಳೋ ಹಾಗಿದ್ರೆ ಆಗುತ್ತೆ !"

"ಆಗಲಿ, ಯೋಚ್ನೆ ಮಾಡ್ತೀನಿ !" ಗೋಪಾಲ ಮತ್ತೆ ಕೊರಡಿ ಹೊಕ್ಕ ಅವನನ್ನು ನಿಧಾನವಾಗಿ ಹಿಂಬಾಲಿಸಿದ ನಿರ್ಮಲಳ ಕಿವಿಗೆ ಬಾಗಿಲು ಮುಚ್ಚುವ ಮುನ್ನ ಅತ್ತೆ ತಮ್ಮ ನಿಕಟವರ್ತಿ ಮಂಜಮ್ಮನ ಬಳಿ ಹೇಳುತ್ತಿದ್ದುದು ಕೇಳಿಸಿತು "ನೋಡೀ ಅದಕೇ ನಾನು ಆ ಹುಡುಗಿ ಸುಮಾರಾಗಿದ್ರೂ ಗೋಪಾಲಂಗೆ ತಂದ್ಕೊಳ್ಳೋಕೊಪ್ಪಿದ್ದು , ವರದಕ್ಷಿಣೆ ಬೇಡಾ ವರೋಪಚಾರ ಬೇಡಾಂದಿದ್ದು ! ತಿಂಗಳಿಗೆ ಇಷ್ಟು ಸಂಬಳಾಂದ್ರೆ ಎಷ್ಟಾಯ್ತು ನೋಡಿ ನಮ್ಮ ಹಳೇ ಸಾಲಾನೂ ತೀರುತ್ತೆ ಮದ್ವೇನೂ ಆಗುತ್ತೆ ! ದುಡಿಯುವ ಹೆಣ್ಣು ಸಿಕ್ಕಿರ್ಬೇಕಾದ್ರೆ ವರದಕ್ಷಿಣೆ ಯಾಕೆ ಹೇಳಿ ? ಗೋಪಾಲನೂ ಅದಕ್ಕೇ ಒಪ್ಪಿದ್ದು ! ಸ್ವಂತ ಮನೆಯಿದೆ ಬಾಡ್ಗೆ ತಪ್ಪುತ್ತೆ !" ನಿರ್ಮಲ ಬಾಗಿಲಲ್ಲೇ ನಿಂತಳು. "ಬಾ ಇಲ್ಲಿ ನಿಮ್ಮ–ನಿಂಗೊಂದು ಮಾತು !" ಗೋಪಾಲ ಕೈನೀಡಿ ಕರೆದಾಗ ನಿರ್ಮಲ ಅತ್ತ ತಿರುಗಲಿಲ್ಲ "ನೀವೇನೂ ಹೇಳಬೇಡಿ ನಂಗೆಲ್ಲಾ ಗೊತ್ತು !"

"ನಿಂಗೇನು ಗೊತ್ತು ?" ಗೋಪಾಲ ಆಚ್ಚರಿಯಿಂದ ಕೇಳಿದ

"ನನ್ನ ಮೌಲ್ಯ !" ತನ್ನ ಮಾತಿಗೆ ಅವನು ಪ್ರತಿಕ್ರಿಯೆ ತೋರುವ ಮುನ್ನ ಬಾಗಿಲು ತೆರೆದು ಕೊರಡಿಯಿಂದ ಹೊರಬಿದ್ದಳು ಬಲೆಯ ಮೀನು ಬುಟ್ಟಿಯಲ್ಲಿ ಬಿದ್ದಿತ್ತು !

# ಮಲ್ಲಮ್ಮನ ಪವಾಡ

"ಅಳಾದ್ ಒತ್ತು ನಧಾನಾಗಿ ಮೂಡಬಾರ್‍ದಿತ್ತಾ "

ಮಲ್ಲಮ್ಮ ಅಂಗಡಿ ಬೀಗ ತೆಗೆಯುತ್ತ ಗೊಣಗಿದಳು. ಅವಳ ಸ್ವಭಾವವೇ ಹಾಗೆ. ಎಲ್ಲರೂ ಅವಳ ಮಾತಿನಂತೆ ನಡೆದೂ ನಡೆದೂ, ಸೂರ್ಯ ಚಂದ್ರರು ಸಹಾ ತಾನು ಹೇಳುವಂತೆ ನಡೆದುಕೊಳ್ಳುವುದಿಲ್ಲವಲ್ಲಾ ಎನ್ನುವ ಅತೃಪ್ತಿ ಅವಳಲ್ಲಿ ಬಹಳ ದಿನಗಳಿಂದ ಗುಟ್ಟಾಗಿ ಕುದಿಯುತ್ತಿತ್ತು. ಬೀಗ ತೆಗೆದು ಧೂಳು ಒರೆಸಿ ಪೆಟ್ಟಿಗೆಯ ಮೇಲೆ ಇನ್ನೂ ಸರಿಯಾಗಿ ಕೂತಿರಲಿಲ್ಲ ನಿತ್ಯದ ಗಿರಾಕಿ ಸಿದ್ದಣ್ಣ ಹಾಜರ್.

"ಏನ್ ಮಲ್ಲಕ್ಕ ಶಾನೇ ಒತ್ತು ಮಾಡ್ಬುಟ್ಟೆ ಇವತ್ತು.. ಬೀಡಿ ಇಲ್ದೆ ಬೆಳಗ್ಗೆ ಎದ್ದಾಗಿಂದಾ ತಲೇನೇ ಓಡದೇ ಕುಂತೈತೆ "

"ನಾ ಯೇನ್ ಮಾಡ್ಲಿ ಯೇಳು.. ಒತ್ತಾರೆ ನಾ ಏಳಾಕ್ ಮುಂಚೇನೇ ಬಿಸ್ಲು ಬಂದ್ಬುಡಾದಾ ?"

"ಓಗ್ಲಿ ಬುಡು...ಒಂದ್ಕಟ್ ಬೀಡಿ ಕೊಡು "

"ದುಡ್ಡು ?"

"ಅಯ್... ಕೊಡ್ದೇ ಓಡೋತೀನಾ ? ..ನಾಳೀಕೆ ಕೊಡಾನಂತೆ, ಬೀಡಿ ಕೊಡಿಲ್ಲಿ "

"ಅದೆಲ್ಲಾ ಆಗಾಕಿಲ್ಲಪ್ಪೋ ಇನ್‌ಮ್ಯಾಕೆ ಇಂಗೇ ಎಲ್ಲಾ ಸಾಲ ಏಳ್ಕಂತಾ ಓದ್ರೆ ನಾನು ಅಂಗಡೀ ತೆಗ್ಯಾ ಕೆಲ್ಸಾನೇ ಇಲ್ಲ. ಒಂದೇ ಸಲೀಕೆ ಅಂಗಡೀ ಮುಚ್ಚಿ ಬೀಗಾ ಆಕಿ, ಬೀಗದಕೈನ ಬಾವಿಯಾಗೆ ಎಸೆದು ತೆಪ್ಗೆ ಕುಂತ್ಬುಡ್ತೀನಿ.. !"

'ಎಷ್ಟೈತೋ ಅಷ್ಟು ಮಡಗು'

ಸಿದ್ದಣ್ಣ ಅವಾಕ್ಕಾದ ಇಷ್ಟು ದಿನ ನಲೀಸಾಗಿ ಸಾಲ ಕೊಡುತ್ತಿದ್ದ ಮಲ್ಲಮ್ಮನಿಗೆ ಇಂದೇನಾಯಿತು ?

"ಯಾಕ್ ಮಲ್ಲಕ್ಕ ಇಂಗೇಳ್ಬುಟ್ಟೆ ?"

"ಮತ್ತಿನ್ನೆಂಗೇಳ್ಲಿ ನಂಗೂ ತುರ್ತಾಗಿ ಅಣಾ ಬೇಕಾಗೈತೆ ಈಗ ಬಂದೋಬಸ್ತಾಗಿ ಒಂದ್ಮನೆ ಅಂಗ್ಡಿ ಕಟ್ಟಿ ಸಾವಾ ಅಂತ ಮಾಡಿಬುಟ್ಟೆವ್ನಿ. ಈಗ ಜೇಬ್ನಾಗೆ ಎಷ್ಟೈತೋ ಅಷ್ಟು ಮಡಗೂ ಇಲ್ಲಿ ಒತ್ತಾರೆ ಎದ್ದು ಸಾಲಾ ಏಳ್ ಬ್ಯಾಡಾ ಇನ್ಮ್ಯಾಕೆ !"

ಸಿದ್ದಣ್ಣ ಸೋಜಿಗ ಪಡುತ್ತ ಜೇಬಿಗೆ ಕೈ ಹಾಕಿ ಇಪ್ಪತ್ತು ಪೈಸಾ ತೆಗೆದು ಪೆಟ್ಟಿಗೆಯ ಮೇಲಿಟ್ಟ ಬಾಯಲ್ಲಿ ಬೀಡಿ ಕಚ್ಚಿಕೊಂಡು

"ಕಡ್ಡಿ ಕೊಡು " ಎಂದ

"ಕಡ್ಡಿ ? . ಅಲ್ಲೈತೆ ನೋಡು !"

ಹಳೇ ಡಬ್ಬವೊಂದರಲ್ಲಿ ಹಳೇ ಲಾಟರಿ ಟಿಕೇಟುಗಳನ್ನೆಲ್ಲಾ ಸಣ್ಣಗೆ ಕತ್ತರಿಸಿಟ್ಟಿದ್ದಳು ಸಿದ್ದಣ್ಣ ಮುಗುಳ್ನಕ್ಕು ಅದರಿಂದ ದೀಪದಲ್ಲಿ ಹಚ್ಚಿಕೊಂಡು ಹೊಗೆ ಬಿಡುತ್ತಾ ಹೋಗಲು ಹೆಜ್ಜೆ ಮುಂದಿಟ್ಟ

ಸಿದ್ದಣ್ಣಾ...ಎಂಗಿದ್ರೂ ಚಿಕ್ಕಸಾಲೀ ಮನೇ ಮುಂದೇ ಓಯ್ತೀಯಲ್ಲಾ ಆ ರಂಗಾಚಾರೀಗೇಳ್ಬುಡೂ. ಮನೇ ತಾವಾ ಬಾ ಅಂತ .ಸರಾ ಕಿತ್ಹೋಗೈತೆ, ಸರಿ ಮಾಡಿಸ್ಬೇಕು !. "

ಸಿದ್ದಣ್ಣ ಏನೋ ಕೇಳಬೇಕೆಂದು ಯತ್ನಿಸಿದವನು ಮತ್ತೆ ಸುಮ್ಮನಾಗಿ ಮುಂದಕ್ಕೆ ಹೆಜ್ಜೆ ಹಾಕಿದ

"ಹೂಂ ಬಡ್ಡಿಮಗಂದು ಅದೃಷ್ಟಾಂದ್ರೆ ಇಂಗಿರ್ಬೇಕಲ್ವಾ!...ಆಳಾದ್ ಲಾಟ್ರಿ ತಿಕೀಟ್ ತಗಂಡೂ ತಗಂಡೂ ಬರೀಬೆಂಕಿಗ್ ಕೂಡಾಕೆ ಆಯ್ತು .. ಎಲಾದ್ರೂ ಆ ಸಿವಾ ಕಣ್ಬುಟ್ ನೋಡ್ಬೇಕು . " ಎಂದು ತನ್ನಲ್ಲೇ ಮಾತ ನಾಡಿಕೊಳ್ಳುತ್ತಾ, ಶಿವನ ನೆನಪಾದ ಮೇಲೆ ಒಂದು ಊದಿನ ಕಡ್ಡಿಯನ್ನೆಳೆದು ಅರ್ಧ ಮುರಿದು ಬೆಂಕಿ ನೋಕಿಸಿ, ಶಿವನ ಪಟಕ್ಕೆ ಸೇರಿಸಿದಳು ಇವತ್ತು ಎಂದೂ ಇಲ್ಲದ ಸ್ಪೆಷಲ್ ಭಕ್ತಿಯಿಂದ ಕೈ ಮುಗಿದು ನಕ್ಕಳು

"ಏನ್ ಮಲ್ಲವ್ವಾ...ಭೋ ಕುಸಿಯಾಗಿ ಕೈ ಮುಗೀತಾ ನಿಂತ್ಬುಟ್ಟೆ ?"

ಮಲ್ಲಮ್ಮ ತಿರುಗಿ ನೋಡಿದಳು ತಾಂಬೂಲ ತುಂಬಿದ ಬಾಯಿಗೆ ಕಡ್ಡಿಪುಡಿ ಎಸೆದುಕೊಳ್ಳುತ್ತಾ ನಿಂತಿದ್ದಾಳೆ ಮುನಿಯಮ್ಮ !

## ಅದೆಂಥ ಗಂಡ ?

"ಊಂ. ಸಿವಾ ಕಣ್ಣುಬುಟ್ಟು ನೋಡುದ್ ಮ್ಯಾಲೂ ಕುಸಿಯಾಗಿಲ್ವೇ ಓದ್ರೆ ಆಯ್ತದಾ ?"

ಮುನಿಯಮ್ಮ ಅವಾಕ್ಕಾಗಿ ಅವಳನ್ನೇ ನೋಡುತ್ತ ತುಸು ಹೊತ್ತು ನಿಂತಿದ್ದವಳು ಬಾಯಲ್ಲಿದ್ದ ರಸವನ್ನ ಪಿಚಕ್ಕನೆ ಉಗುಳಿ ಅಂಗಡಿಯಲ್ಲೇ ಜಾಗ ಮಾಡಿಕೊಂಡು ಕುಳಿತಳು

"ಅದೇನ್ ಒಸಿ ಒಡಿಸಿ ಏಳ್ ಬ್ಯಾಡದಾ ?"

"ನೋಡೂ, ಇವತ್ ಬೆಳಗಾಯ್ತಿದ್ದಂಗೇ ನನ್ ಗಂಡನ ಊರಿಂದ ಆಳು ಬಂದಿದ್ದಾ "

'ಅಯ್ಯಾ ..ಅದೆಂತಾ ಗಂಡನೋ ಬುಡವ್ವಾ ..ಒಂದಿನಾನಾರಾ ನಿನ್ ಕೂಟೆ ಇದ್ದದ್ನ ಕಾಣೆ ಈಗ್ಯಂತೇನೋ ಪಿರೀತಿ ? ಒಂದಪ್ಪು ಸಂದಾಕಿ ಅಂಗ್ಡೀ ಗಿಂಗ್ಡೀ ಆಕ್ಕಂಡಿದ್ ನೋಡಿ ಆಸೆ ಆಯ್ತೇನೋ !"

ಮಲ್ಲಮ್ಮ ನಕ್ಕಳು ಪಾಪ, ಮುನಿಯಮ್ಮನಿಗೇನು ಗೊತ್ತು, ಮಲ್ಲಮ್ಮನಿಗೆ ಮದುವೆಯೇ ಆಗಿರಲಿಲ್ಲವೆಂದು ?

## ಹಳ್ಳೀಲಿ ಮೆರೆದ ಧೀರೆ

ಅವಳಪ್ಪನಿಗೆ ನಾಲ್ಕು ಹೆಣ್ಣು ಮಕ್ಕಳು ಸಾಲಾಗಿ ಹುಟ್ಟಿದಮೇಲೆ, ಐದನೆಯದು ಗಂಡೇ ಆಗುತ್ತದೆ ಎಂದು ಶಾಸ್ತ್ರ ಹೇಳಿದ್ದಾಗ 'ರುಸ್ತುಂ' ಹೆಣ್ಣಾಗಿ ಹುಟ್ಟಿದಳು ಈ ಮಲ್ಲಮ್ಮ ಅವಳನ್ನೇ ಗಂಡು ಮಗುವಿನಂತೆ ಬೆಳೆಸಿದರು ತಂದೆ ತಾಯಿ ಅವಳು ಅಗಾಧವಾಗಿ ಬೆಳೆದು ನಿಂತಳು ಗೋಲಿ ಆಡಿ, ಅಂಗಳದಲ್ಲೆಲ್ಲಾ ಹಳ್ಳ ಮಾಡಿದಳು ಮರಕೋತಿ ಆಡಿ, ಕೊಂಬೆಗಳನ್ನು ಮುರಿದಳು. ಚಿನ್ನಿ ದಾಂಡು ಆಡಿ ನಾಯಿಯ ಕಣ್ಣು ಒಡೆದಳು ಹದಿನಾರು ವರ್ಷಕ್ಕೆ ತಂದೆಗಿಂತ ಒಂದು ಗೇಣು ಮೇಲೆ ಬೆಳೆಯುವ ಹೊತ್ತಿಗೆ ಅವಳ ಅಕ್ಕಂದಿರೆಲ್ಲಾ ಮದುವೆಯಾಗಿ ಗಂಡಂದಿರ ಮನೆ ಸೇರಿದ್ದರು. ಈ ರುಸ್ತುಂ

ಹೆಣ್ಣನ್ನು ಮದುವೆಯಾಗುವ ನರಸಿಂಹ ಸುತ್ತಮುತ್ತಲ ಹಳ್ಳಿಯಲ್ಲಿ ಹುಟ್ಟಿರಲೇ ಇಲ್ಲವಾದ್ದರಿಂದ ಮಲ್ಲಮ್ಮ ಎದುರಾಳಿಯನ್ನೇ ಕಂಡರಿಯದ ಧೀರೆಯಾಗಿ ಹಳ್ಳಿಯಲ್ಲಿ ಮೆರೆದಳು ಇಡೀ ಹಳ್ಳಿಯಲ್ಲಿ ಅವಳಿಗೆ ಎದುರಾಡಿ ಉಳಿದವರೇ ಇಲ್ಲ. ಕೈ ಬಳೆ ಹಿಂದಕ್ಕೆ ಸರಿಸಿ, ಸೀರೆಯ ನಿರಿಗೆ ಮೇಲೆ ಮಾಡಿ ನಿಂತರೆ ಗಂಡಸರೂ ಸಹ ಕಿಮಕ್ಕೆನ್ನುತ್ತಿರಲಿಲ್ಲ.

ಆದರೆ ಹಳ್ಳಿಯ ಹೆಣ್ಣುಗಳಿಗೆ ಮಾತ್ರ ಅಚ್ಚುಮೆಚ್ಚು ಮಲ್ಲಮ್ಮ ಅವರಿಗೇನು ತೊಂದರೆ ಬಂದರೂ ಮಲ್ಲಮ್ಮ ಬಲಗೈಯಾಗಿ ಬರುವಳು. ಹದಿನೇಳರ ಹರೆಯದ ನಿಂಗಿ ಬಾವಿಗೆ ನೀರಿಗೆ ಹೋಗಿದ್ದಾಗ ಚಿಗುರುಮೀಸೆ ನಾಗಣ್ಣ ಕೀಟಲೆ ಮಾಡಿದನೆಂದು ಮಲ್ಲಮ್ಮನ ಬಳಿಗೆ ಫಿರ್ಯಾದು ಹೋದುದನ್ನು ತಿಳಿದ ನಾಗಣ್ಣ ಹಿತ್ತಲ ಬಾಗಿಲಿಂದ ನುಸಿದು ಊರು ಬಿಟ್ಟು ಹೋದವನು ಒಂದು ತಿಂಗಳು ಮತ್ತೆ ಬರಲಿಲ್ಲ. ತಿಮ್ಮಪ್ಪನ ಮಗಳು ಸಿಡುಬಿನ ಮುಖದ ಸುಬ್ಬಿ ಮದುವೆಯಲ್ಲಿ ಗಂಡು ರಾಮಪ್ಪನ ಮುಖದೋಳನ್ನ ಮದ್ವೆ ಆಗನಾರೆ' ಎಂದು ಹಸೆಯ ಮಣೆಯ ಮೇಲೇ ಹಟ ಮಾಡಿ ಎದ್ದು ಹೋದಾಗ ಅಲ್ಲೇ ಹೆಣ್ಣುಗಳ ಗುಂಪಿನಲ್ಲಿದ್ದ ಮಲ್ಲವ್ವ ತಾನೂ ಸೆರಗು ಕಟ್ಟಿ ಎದ್ದು ನಿಂತಿದ್ದನ್ನು ಕಂಡ ರಾಮಪ್ಪ ಹೌಹಾರಿ,

"ಸುಮ್ಕಿರವ್ವ, ನಾವಲ್ಲಾ ನೋಡ್ಕಂತೀವಿ.. ಅವನು ಕೆರ ತಾವ ಓಗವ್ನೆ ಅಷ್ಟೇಯ! ಈಗ ಬಂದ್ಬುಡ್ತಾನೆ ನೀ ಕುಂತ್ಕೋ ತಾಯಿ" ಎಂದು ಹೇಳಿ ಮಗನನ್ನು ಒದ್ದು ಕರೆದುಕೊಂಡು ಬಂದು ತಾಳಿ ಕಟ್ಟಿಸಿದ್ದ

## ಯಾರು ನೋಡ್ಕಂತಾರೆ ?

ಹೆದರಿಕೆಯನ್ನೇ ಕಂಡರಿಯದ ಮಲ್ಲವ್ವ ಬೆಳಗಾಗೆದ್ದು ತಂಮೆಯ ನಾಲ್ಕು ಎಮ್ಮೆಗಳನ್ನು ಲೀಲಾಜಾಲವಾಗಿ ಎಳೆದುಕೊಂಡು ಹೋಗಿ ಮೇಯಿಸಿ ಬರುತ್ತಿದ್ದಳು. ಕಾಡಿಗೆ ಹೋಗಿ ಒಂದೇ ದಿನದಲ್ಲಿ ಒಂದು ತಿಂಗಳಿಗಾಗುವಷ್ಟು ಸೌದೆ ಕಡಿದು ತರುತ್ತಿದ್ದಳು ಅವಳ ತಾಯಿ ಭೀಮೇಶ್ವರನಿಗೆ ಹರಕೆ ಹೊತ್ತಿದ್ದರಿಂದಲೋ ಮಲ್ಲವ್ವ ಹೀಗಾಗಿದ್ದು ಎಂದು ಹಳ್ಳಿಯವರೆಲ್ಲಾ ಗುಟ್ಟಾಗಿ ಆಡಿಕೊಂಡಿದ್ದೂ ಉಂಟು ಅಂತೂ ಹತ್ತೊಂಭತ್ತು ವರ್ಷವಾದರೂ ಏಕಾಂಗಿಯಾಗಿ ಉಳಿದ ಮಗಳನ್ನು ನೋಡಲಾರದೆ ತಾಯಿ ಕಣ್ಮುಚ್ಚಿದ ಸ್ವಲ್ಪ

ದಿನದಲ್ಲೇ ತಂದೆಗೂ ಕರೆ ಬಂತು ಸಾಯುವ ದಿನ ಅವನು ಮಗಳನ್ನು ಕೂಡಿಸಿಕೊಂಡು ? ಬನಿಗರೆದು,

"ನಿಂಗೊಂದ್ ದಾರಿ ಮಾಡ್ಲಿಲ್ಲವಲ್ಲವ್ವಾ ಮಲ್ಲೀ ನಿನ್ನ ಯಾರು ನೋಡ್ಕಂತಾರೆ .?" ಎಂದಾಗ,

"ಅಯ್ ಈಸ್ಟು ದಿನಾ ನಿನ್ನ ನಾನೇ ನೋಡ್ಕಂತಿರ್ಲಿಲ್ವಾ ?" ಎಂದುತ್ತರವಿತ್ತಿದ್ದಳು ಆ ಧೀರೆ

ಏನು ಏಳಿ ಕಳಿಸನ್ನೆ?

ತಂದೆ ತಾಯಿಗಳು ಹೋದ ಮೇಲೆ ಹಳ್ಳಿಯಲ್ಲಿರಲು ಬೇಸರವಾಗಿ ನಾಲ್ಕು ಎಮ್ಮೆಗಳನ್ನೂ ಮಾರಿ, ಹಣ ತೆಗೆದುಕೊಂಡು ಈ ಊರಿಗೆ ಬಂದು ಅಂಗಡೀ ಇಟ್ಟಿದ್ದಳು ಬರುವಾಗ ಕತ್ತಿಗೆ ಕರಿಮಣಿ ಸರ ಕಟ್ಟಿಕೊಂಡು ಬರುವುದನ್ನು ಮರೆಯಲಿಲ್ಲ ಅವಳು ಗಂಡ ಬಿಟ್ಟು ಹೋಗಿರುವನೆಂದೂ ತಾನು ಜೀವನೋಪಾಯಕ್ಕಾಗಿ ಅಂಗಡಿ ನಡೆಸುತ್ತಿರುವನೆಂದೂ ಹೇಳಿಕೊಂಡು ಹಾಯಾಗಿದ್ದು ಬಿಟ್ಟಿದ್ದಳು. ಇದೆಲ್ಲಾ ಮುನಿಯಮ್ಮನಿಗೇನು ಗೊತ್ತು ಪಾಪ ? ಎಲೆಯಡಿಕೆಯಿಂದ ಕೆಂಪಾದ ನಾಲಿಗೆಯನ್ನು ನೋಡಿಕೊಳ್ಳುತ್ತಾ ಕೇಳಿದಳು.

"ಏನು ಏಳಿಕಳಸನ್ನೆ ನಿನ್ನ ಗಂಡ ?"

"ಅದೇ . ಆಸ್ತಿ ಯಮಾರಾ ಸರಿ ಓಯ್ತು ಬಾ ಅಂದನ್ನೆ. "

"ಶಾನೇ ಆಸ್ತಿ ಐತಾ ಅವನ್ ತಾವಾ ?"

"ಊಂ...ಹತ್ತೆಕೆರೆ ಜಮೀನ್ ಐತೆ, ನಾಕಂಕಣದ್ಮನೇ ಐತೇ...ಒಳ್ಳೇ ಸೀಮೇ ಅಸಾ ಐತೆ..."

"ಊಂ !? .ಓಯ್ತೀಯಾ ಅಂಗಾರೆ ?"

"ಓಗಾನಾಂತ ಇವ್ನಿ...ಒಸೀ ದುಡ್ಡೂ ಕಾಸೂ ಮಾಡ್ಕಬ್ಯಾಡ್ವಾ ನಾನು !"

"ಬ್ಯಾಡ್ವಾ ಮತ್ತೆ ?....ಓಗ್‌ಬುಟ್‌ಬಾ ಅದೃಷ್ಟವಂತೆ ಕಣವ್ವಾ ನೀನು !" ಮುನಿಯಮ್ಮ ಎದ್ದುಹೋದಳು. ಮಲ್ಲವ್ವ ಗಂಭೀರವಾಗಿ ಏನೋ ಲೆಕ್ಕ ಹಾಕತೊಡಗಿದಳು.

ಅರ್ಧ ಗಂಟೆಯೊಳಗೆ ಅಕ್ಕಸಾಲಿ ರಂಗಾಚಾರಿ ಬಂದ

ಗಟ್ಟೀ ಮಾಡ್ಕೊಡು

"ಏನವ್ವಾ ಬರೇಳ್ದಂತೆ ?"

"ಊಂ ಊರಿಂದ ಹಳೀ ಒಡವೇ ಕಳಿಸವ್ನೆ ನಮ್ಮಕ್ಕ . "

"ಅದೇನಂತೆ " ಅಲ್ಲೀ ಕುಳಿತ ಅಚಾರಿ

"ಅವಳ ಮಗಳಿಗೆ ಲಗ್ನ ಅಂತೆ ಭಾರೀ ಕಡೆ ಕೊಡ್ತಾ ಅವ್ಳೆ . ಅಳೀ ಕಾಲದ್ ಒಡವೆ ಆಕಿದ್ರ ಆಯ್ತದಾ ? ಅದ್ಕೇ ಆ ಒಡವೇನೆಲ್ಲಾ ಕರಗ್ಸಿ ಚಿನ್ನದ್ ಗಟ್ಟೀ ಮಾಡ್ಕೊಡು !"

"ಊ " ಇನ್ನೇನೋ ಕೇಳಲು ಹೋದ ರಂಗಾಚಾರಿಯನ್ನು ಕಣ್ಣಿ ದೃಷ್ಟಿಯಿಂದಲೇ ತಡೆದು ಮುಂದೆ ಹೇಳಿದಳು ಮಲ್ಲವ್ವ,

"ಸಂಜೇಗ್ ಬಾ ಎಲ್ಲಾ ಕರಗ್ಸಿ ಕೊಡೋವಂತೆ ನಿಂಗೆಸ್ಟಾಯ್ತದೋ ಕೊಡಾನಂತೆ. ."

"ಅಂಗೇ ಅಗ್ಲವ್ವ "

"ಯಾರಿಗಾನಾ ಅಂಗಂತ ಏಳಿಗೀಳೀಯಾ.. ಉಸಾರಾಗಿ ಅವಳ ಚಿನ್ನ ಅವ್ಳಿಗೆ ತಲುಪ್ಸಿದ್ರೆ ಸಾಕಾಗ್ಯತೆ ನಂಗೆ !"

"ಅದ್ನಿಜ ಬುಡು" ಎಂದು ಗೋಣು ಆಡಿಸಿದ ಅವನು, "ಯಾರ್ನ ನಂಬಕಾಯ್ತದೆ ಈ ಕಾಲದಲ್ಲಿ ಕಳ್ಳರು ಶಾನೇ ಜಾಸ್ತಿ ಆಯ್ತಾ ಅವ್ರೆ!"

ಕಳ್ಳರು ಅನ್ನುತ್ತಲೇ ಮತ್ತೆ ನಕ್ಕಳು ಮಲ್ಲವ್ವ, ಬೆಳಗಿನ ಝಾವ ನಡೆದ ಸಂಗತಿ ಅವಳ ಕಣ್ಮುಂದೆ ಸುಳಿಯಿತು ನಿನ್ನೆ ತಾನೇ ಒಂದು ದೊಡ್ಡ ಸೌದೆ ಹೊರೆಯನ್ನು ಮನೆಗೆತಂದು ಹಾಕಿದ್ದಳು ಸಂಜೆ ಅಷ್ಟನ್ನೂ ಒಡೆದು ಹಾಗೆಯೇ ಹಾಕಿದ್ದಳು ರಾತ್ರೆ ಸೊಳ್ಳೆಕಾಟ ತಡೆಯಲಾರದೆ ಕಣ್ಣಿಗೆ ನಿದ್ರೆಯೇ ಹತ್ತಿರಲಿಲ್ಲ ಹಾಳಾದ ಸೌದೆ ತುಂಬಾ ಹಸಿಯಾಗಿದ್ದದ್ದನ್ನು ನೆನಸಿಕೊಂಡುಸೌದೆ ಅಂಗಡಿ ಮಾದಯ್ಯನ ಮೇಲೆ ಕೋಪ ಉಕ್ಕಿಬಂದು ಈ ಸೌದೆಯಲ್ಲಿ ಬೆಳಗ್ಗೆ ಸ್ನಾನಕ್ಕೆ ನೀರು ಕಾಯಿಸಿ ಎಸರಿಗೆನೀರಿಡಲು ಸಾಧ್ಯವೇ ?

"ಅಳಾದ್ ನನ್ಮಗಾ ತೂಕಾ ಜಾಸ್ತಿ ಬರ್ಲಿ ಅಂತ ಅಸೀ ಸೌದೆ ಆಕಿ

ಮೋಸಾ ಮಾಡನ್ನೇ !" ಎಂದು ಬೈದು ಆ ಮಗ್ಗುಲಿಗೆ ತಿರುಗಿದಳು. ಹಿತ್ತಲ ಕಡೆಏನೋ ಸದ್ದು !

ಥೂ ...ಇದು ಸಾಲದೂಂತ ಅಳಾದ್ ಎಗ್ಗಣಾನೋ ಬೆಕ್ಕೋ ಬೆಕ್ಕೇ ಇರ್ಬೇಕು... ಮೂರು ಮೂರು ತಿಂಗಳಿಗೆ ಮರಿ ಆಕಿ ನನ್ನನೇಲಿ ಮನನ್ನಾಗ್ಸಿಬುಟ್ಟ್ವು ಓಡಾಡ್ತದ ಆ ಬೆಕ್ಕು ಮುಂಡೇದು !.. ಆ ಮರಿ ಗೋಳ್ನೆಲ್ಲಾ ಸಾಗ್ಸಿ ಸಾಗ್ಸಿ ಸಾಕಾಯ್ತು...ಈದಪಾ ಕಾಲು ಮುರೀಬೇಕು ಸೌದೆ ಸೀಳ್ನಾಗೆ" ಎಂದುಕೊಳ್ಳುತ್ತಾ ಮಗ್ಗುಲಿಗೆ ತಿರುಗಿದಳು ಇನ್ನು ನಿದ್ದೆ ಬರುವ ಹಾಗೇ ಇಲ್ಲ. ಹೋಗಲಿ, ಸೌದೆಯನ್ನಾದರೂ ಸಣ್ಣ ಸಣ್ಣ ಸೀಳು ಮಾಡಿ ಬೆಳಿಗ್ಗೆ ಒಲೆ ಹಚ್ಚೋಣವೆಂದುಕೊಂಡು ಮೇಲೆದ್ದಳು.

'ಕಳ್ಳ ಸಿಕ್ಕಲಿ....'

ಮೂಲೆಯಲ್ಲಿದ್ದ ಮಚ್ಚನ್ನು ಕೈಲಿ ಹಿಡಿದು, ಸೀರೆಯ ನೆರಿಯನ್ನು ಎತ್ತಿ ಕಟ್ಟಿ ಹಿಂದಿನ ಬಾಗಿಲ ಕಡೆ ಬಂದಳು ಸೀಮೆಯೆಣ್ಣೆ ಬುಡ್ಡಿಯನು ಪಟಕಿ ಬಳಿ ತಡವಿ ಹಿಡಿದು ದೀಪ ಹಚ್ಚಿ ನೋಡುತ್ತಾಳೆ, ಬಾಗಿಲು ತರದಿದೆ ! ಹಿತ್ತಿಲ ಬಾಗಿಲನ್ನು ಮುಚ್ಚಿ ಬಂದೇ ಮಲಗಿದ್ದು ಅವಳಿಗೆ ಚೆನ್ನಾಗಿ ನೆನಪಿತ್ತು ಬಾಗಿಲನ್ನು ಭದ್ರಪಡಿಸಿ ಅಡಿಗೆ ಮನೆಯ ಕಡೆ ನಡೆದಳು, ಅರಗತ್ತಲಲ್ಲಿ ಹೊಸಲನ್ನು ಎಡವಿದಾಗ ನೋವಿನಿಂದ ಅವಳ ಕೋಪ ಇನ್ನೂ ಉಕ್ಕಿತು ಎಲ್ಲಾ ಹಾಳು ಆ ಸೌದೆ ಮಾದನಿಂದ !

ನನ್ಮಗಾ !...ಸಿಕ್ಕಲೀ ಅವನು, ಒಂದೇ ಏಟ್ಗೆ ತರಿದಾಕ್ದೇ ಇದ್ರೆ ನಮ್ಮಪ್ಪನ್ ಮಗಳಾ ನಾನು ?" ಎಂದು ಜೋರಾಗಿ ಅಂದುಕೊಳ್ಳುತ್ತಾ ಅಡಿಗಯ ಮನೆಗೆ ಬಾದವಳು ಬಾಗಿಲಲ್ಲೇ ಗಕ್ಕನೆ ನಿಂತಳು !

ಸೀಮೆಯೆಣ್ಣೆ ಬುಡ್ಡಿಯ ಮಬ್ಬು ಬೆಳಕಿನಲ್ಲಿ ಅವಳೆದುರಿಗೇ ಒಬ್ಬ ಅಜಾನುಬಾಹು ವ್ಯಕ್ತಿ ನಿಂತಿದ್ದಾನೆ ಅವನ ಕೈಲಿ ಅವಳದೇ ಎರಡು ತಾಮ್ರದ ಕೊಡಗಳು. ಅವನೂ ಅವಳನ್ನೇ ಬೆದರಿದ ಕಣ್ಣುಗಳಿಂದ ನೋಡುತ್ತಿದ್ದಾನೆ !

ಮಲ್ಲಮ್ಮನ ಕೆದರಿದ ತಲೆ, ನಿದ್ರೆಯಿಲ್ಲದೆ ಕೆಂಪಡರಿದ ಕಣ್ಣುಗಳು.

ಅವಡುಗಚ್ಚಿದ ಬಾಯಿ  ಆ ಬಾಯಿಯಿಂದ ಅದೇ ತಾನೇ ಬಂದಿದ್ದ ಮಾತು ಗಳು, ಹಣೆಯಲ್ಲಿ ದೊಡ್ಡ ಕುಂಕುಮ, ಕೈಯಲ್ಲಿ ಮಚ್ಚುಗತ್ತಿ !

ಮಲ್ಲಮ್ಮ ಒಂದು ಗಳಿಗೆ ಸ್ಥಂಭಿತಳಾದರೂ ಅವಳ ಚುರುಕು ಕಣ್ಣುಗಳಿಗೆ ಅವನ ಕೈಕಾಲು  ನಡುಗುತ್ತಿರುವುದು ತಿಳಿದುಹೋಯಿತು  ಬಲಗೈಲಿ ಮಚ್ಚನ್ನು ತುಡುಕಿ ಹಿಡಿದು ಒಂದು ಹೆಜ್ಜೆ ಮುಂದಿಟ್ಟಳು  ಅವನು ಒಂದು ಹೆಜ್ಜೆ ಹಿಂದೆ ಸರಿದ

"ಯಾವನೋ ನೀನು ?.  " ಅವನು ತುಟಿ ಎರಡು ಮಾಡದೇ ಪೆಚ್ಚಾಗಿ ನಿಂತಾಗ ಗಂಟಲನ್ನು ಇನ್ನಷ್ಟು ದೊಡ್ಡದು ಮಾಡಿ

'ನಡೀ ಟೇಸನ್‌ಗೆ  '

"ಏ ನಿಂಗಾ  ನೋಡ. ರಂಗಾ  ಬನ್ರೋ" ಎಂದು ಕೂಗಿದಳು ಆ ಕಳ್ಳನ ಇದ್ದಬದ್ದ ಧೈರ್ಯ ಉಡುಗಿತು  ಕೈಯಲ್ಲಿದ್ದ ಕೊಡಗಳನ್ನು ನೆಲದ ಮೇಲಿಟ್ಟು ಕೂಗಬೇಡವೆನ್ನುವಂತೆ ಕೈ ಸನ್ನೆ ಮಾಡಿದ ಅವನು

ಮಲ್ಲಮ್ಮನನ್ನು' ಮೊದಲೇ ನೋಡಿದ್ದರ ಖಂಡಿತವಾಗಿ ಈ ಮನೆಗೆ ಕಾಲಿಡುವ ಹುಚ್ಚು ಕೆಲಸ ಮಾಡುತ್ತಿರಲಿಲ್ಲ

"ಏಯ್ ಕೈಯೆತ್ತಿದ್ರೋ ನಾಕ್ ತುಂಡು ಮಾಡಿಬುಡ್ತೀನಿ !  "

ಅವನು ಎರಡೂ ಕೈಗಳನ್ನೂ ಜೋಡಿಸಿ ಮುಗಿದು ನಡುಗುತ್ತ ನಿಂತು ಕೊಂಡಾಗ ಅವಳ ಧೈರ್ಯ ಇನ್ನೂ ಹೆಚ್ಚಾಯಿತು

"ನಡೀ ಟೇಸನ್‌ಗೆ  ಮಚ್ಚು ಕೈಲೇ ಇಡ್ಕಂಡು ನಿನ್ನಿಂದೇ ಬತ್ತೀನಿ. . ಅತ್ತಿತ್ತ ತಿರುಗ್ದ್ರೋ ತಲೇಗೇ ಆಕಿಬುಡ್ತೀನಿ !"

ಅವನು ನಿಂತಲ್ಲೇ ಕುಸಿದು ಅವಳ ಕಾಲುಗಳನ್ನು ಹಿಡಿದ

"ಬ್ಯಾಡಕಣವ್ವ ಟೇಸನ್ ಗೀಸನ್ನು ಇದೊಂದ್ಸಲಾ ಬುಟ್ಟುಬುಡೂ ನನ್ನ ಪಕ್ಕದ್ ಊರಿಂದ ಸಾವ್ಕಾರ್ ಮನೆಯಿಂದ ಬಂದೆ, ಇದೇ ಎರಡ್ನೇ ಮನೆ...ಇನ್ ಬರಾಕಿಲ್ಲ ಈ ಕಡೆ ಮೊಕಾ ಆಕಾಕಿಲ್ಲ ಬುಟ್ಬುಡು ." ಎಂದು ಮೆಲ್ಲನೆ ಗೋಗರೆದ.

ಮಲ್ಲವ್ವ ಅವನ ಷರಟಿನ ಕುತ್ತಿಗೆಗೆ ಕೈಹಾಕಿ ಲೀಲಾಜಾಲವಾಗಿ ಮೇಲೆತ್ತಿ ನಿಲ್ಲಿಸಿದಳು

"ಯೆಂಡ್ತೀ ಮಕ್ಕಳು ಅವ್ರಾ ?"

"ಊ ಊ!" ಆದೇಕೋ ಅವಳ ಕಣ್ಣುಗಳು ಒಂದು ಕ್ಷಣ ಶಾಂತ ವಾದುವು

"ಓಗ್ಲಿ, ತೊಲಗು ಎಂಡ್ತೀ ಮಕ್ಳ ಎಸರೇಳಿ ಬದುಕ್ದೆ ಇನ್ನೊಂದ್ಸಲ ಇಲ್ಲೀಗ್ ಬಂದ್‌ಗಿಂದೀಯ" ಅವನನ್ನು ದರದರ ಎಳೆದುಕೊಂಡು ಹಿತ್ತಿಲ ಬಾಗಿಲ ಬಳಿ ಬಂದು ಬಾಗಿಲು ತೆಗೆದು ನೂಕಿದ ರಭಸಕ್ಕೆ ಅವನು ಮುಗ್ಗರಿಸಿ ಬಿದ್ದು ಎದ್ದು ಓಡಿದ.

## ಎಂಥ ಭಾಗ್ಯ !

ಬಾಗಿಲನ್ನು ಭದ್ರಪಡಿಸಿ ಮಲ್ಲಮ್ಮ ಮತ್ತೆ ಅಡಿಗೆ ಮನೆಗೆ ಬಂದಳು. ಕಳ್ಳ ನೆಲದ ಮೇಲೆ ಇಟ್ಟಿದ್ದ ಕೊಡಗಳನ್ನು ಸ್ವಸ್ಥಾನದಲ್ಲಿಡಲು ಮೇಲೆತ್ತಿದಳು. ಕೊಡ ಭಾರವಾಗಿತ್ತು ! ಬುಡ್ಡಿಯ ಬೆಳಕಿನಲ್ಲಿ ಬೋರಲು ಹಾಕಿ ನೋಡು ತ್ತಾಳೆ ಅದರ ಮುಕ್ಕಾಲು ತುಂಬಿದ ಚಿನ್ನದ ಒಡವೆಗಳು, ಹವಳ ಕೆಂಪಿನ ಆಭರಣಗಳು ! ಇನ್ನೊಂದು ಅರೆಬಿರಿದ ಬಟ್ಟೆಯ ಗಂಟಿನಲ್ಲಿ ಬೆಳ್ಳಿ ಸಾಮಾನು ಗಳು ! ತನ್ನ ಕಣ್ಣುಗಳನ್ನು ತಾನೇ ನಂಬದೆ ಮನೆಗೆ ಬಂದ ಈ ಭಾಗ್ಯವನ್ನು ಅಷ್ಟು ಹೊತ್ತು ನೋಡಿದಳು. ಮುಂದೆ ಏನು ಮಾಡಬೇಕೆನ್ನುವುದನ್ನು ಯೋಚಿಸಿದಳು ಎಲ್ಲವನ್ನು ಭದ್ರಪಡಿಸಿ ಬೆಳಕು ಮೂಡುವ ಹೊತ್ತಿಗೆ ಬಾಗಿಲು ತೆರೆದು, ಹಿತ್ತಲ ನಲ್ಲಿಯಲ್ಲಿ ನೀರು ಹಿಡಿಯಲು ಈಚೆ ಬಂದಳು ಖಾಲಿ ಕೊಡಗಳನ್ನು ಹಿಡಿದು !

ಕೊಡಗಳಲ್ಲಿ ನೀರುತ ಂಬುತ್ತಿದ್ದಾಗ ಪಕ್ಕದ ಮನೆ ಲಕ್ಕಮ್ಮ ಕೇಳಿದಳು.

"ರಾತ್ರೆ ಯಾರೋ ನೆಂಟರು ಬಂದಂಗಿತ್ತು ?"

"ಊಂ .ನನ್ ಗಂಡ ಅಳ್ಳಿಯಿಂದ ಏಳಿ ಕಳ್ಸಿದ್ದ. ತುರ್ತಾಗಿ.... ಏಳ್ಬುಟ್ಟು ಓಡೋದ ಆಳು !"

ಸಂಜೆ ರಂಗಾಚಾರಿ ಬಂದು ಅವಳ ಕೆಲಸಗಳೆಲ್ಲವನ್ನೂ ಸದ್ದಿಲ್ಲದೆ ಮಾಡಿ ಕೊಟ್ಟು ಅವಳಿಂದ ಕೂಲಿಯಲ್ಲದೆ ಐವತ್ತು ರೂಪಾಯಿ ಇನಾಂ ಪಡೆದು

ಹಿಗ್ಗುತ್ತ ಹೋದಾಗ ಬೆಳಗಾಗುತ್ತಿತ್ತು ಅವನು ಹೋದ ಅರ್ಧಗಂಟೆಯೊಳಗೆ ಮಲ್ಲಮ್ಮ ಗಂಟು ಮೂಟೆ ಕಟ್ಟಿ ಹೊರಟಳು

"ಓಗಿಬುಟ್ಟು ಬತ್ತೀನಿ ಕಣವ್ವ ನನ್ ಗಂಡನೂರಿಗೆ" ಎಂದು ಮುನಿಯಮ್ಮನಿಗೆ ಹೇಳಿ, ಅವಳಿಗೆ ಎಲೆಯಡಿಕೆ ಕಡ್ಡಿ ಪುಡಿ ಕೊಡುವುದನ್ನು ಮರಯಲಿಲ್ಲ

'ಊರ್ತುಂಬಾ ಕಳ್ರು ಅವ್ರೆ'

ನಾಲ್ಕು ತಿಂಗಳಾದ ಮೇಲೆ ಒಂದು ದಿನ ಬೆಳಿಗ್ಗೆ ಮಲ್ಲಮ್ಮ ಅಂಗಡಿಯ ಎದುರು ನಿಂತು ಅದನ್ನು ಆಳುಗಳ ಕೈಲಿ ಕೆಡವಿಸುತ್ತಿದ್ದುದನ್ನು ಮೊದಲು ನೋಡಿ ಬೆರಗಾದವಳು ಮುನಿಯಮ್ಮನೇ.

"ಏನ್ ಮಲ್ಲವ್ವಾ. .ಯಾವಾಗ್ ಬಂದೆ? ಓದ್ ಕೆಲ್ಸ ಆಯ್ತಾ ?"

"ನಾ ಓದ್ ಮ್ಯಾಲೇ ಆಗ್ದೇ ಇರ್ತೈತಾ ?...ಎಂದಳು ಮಲ್ಲವ್ವ. ಅವಳ ಕತ್ತಿನಲ್ಲಿ ಇನ್ನೂ ದಪ್ಪ ಚಿನ್ನದ ಸೀತಾಳಿಯ ಸರದೊಡನೆ ಮಿನುಗುತ್ತಿತ್ತು

"ಇದೇನ್ ಅಂಗ್ಡೀ ಕೆಡವುಸ್ತಾ ಇದ್ದೀ ?"

"ಇಲ್ವಾ ಮತ್ತೆ. ಅಳೇ ಮನೇ, ಊರ್ತುಂಬಾ ಕಳ್ರು ಅವ್ರೇ!... ಭದ್ರವಾಗಿ ದೊಡ್ಡದಾಗಿ ಕಟ್ಸಾವಾ ಅಂತ... ಇನ್ನು ಮ್ಯಾಲೆ ಚಿಲ್ರೆ ಅಂಗ್ಡೀ ಇರಾಕಿಲ್ಲ. ಇಲ್ಲಿ, ಜವುಳೀ ಅಂಗ್ಡೀ ಬತ್ತದೆ!... ಆದ್ರೂ ನೀನ್ ಬಂದ್ರೆ ಎಲಡಿಕೆ ಒಗೆನೊಪ್ಪು ಕೊಡ್ತೀನಿ ಬರ್ದೀ ಇರಬ್ಯಾಡ

ಅಷ್ಟು ಹೊತ್ತಿಗೆ ಸಿದ್ದಣ್ಣನೂ ಹಾಜರಾಗಿದ್ದ.

"ದುಡ್ಡೆಲ್ಲಿತ್ತವ್ವಾ ನಿಂಗೆ ?

"ನನ್ಗಂಡಾ ಎಲ್ಲಾ ನನ್ನೆಸುರ್ಗೇ ಮಾಡಿ ಯಾತ್ರೆಗೊಂಟೋದ...ನನ್ಯಾಸಿ ಆಯ್ತಾನಂತೆ"

ಹಾಗೆ ಹೇಳುತ್ತಿರುವಾಗಲೇ ಊರ್ನಿಂದ ಬಂದಿಳಿದ ಅಕ್ಕ, ಭಾವ ಅವಳನ್ನೇ ಬೆರಗಾಗಿ ನೋಡುತ್ತಿದ್ದುದನ್ನು ಕಂಡು,

"ನಡಿಯವ್ವ ಒಳೀಕೆ ..ನೆಂಟ್ರು ಬೀದೀಲಿ ನಿಂತಾರಾ!..." ಎಂದು ಮನೆಯೊಳಗೆ ಕರೆದೊಯ್ಯುತ್ತಾ, "ಕಟ್ಸಿಸ್ತೀನಿ ನೋಡ್ತಾ ಇರಕ್ಕಾ ..ರಟ್ಟೆ ಬಿದ್ದೋಗಗಂಟಾ ಗಂಡ್ಸಿಗಿಂತಾ ಎಚ್ಚಾಗಿ ದುಡೀನಿಲ್ವಾ!" ಎಂದು ದನಿ ಎತ್ತರಿಸಿ ಹೇಳಿದಳು, ಮುಂಬಾಗಿಲನ್ನು ಹಾಕಿದ ಮೇಲೆ.

# ಆತ್ಮಹತ್ಯೆ?.. ಆಕಸ್ಮಿಕ!

ಆದಿಶೇಷನ 'ಕರ್ಲ್-ಆನ್' ಸುಪ್ಪತ್ತಿಗೆಯ ಮೇಲೆ ಪ್ರೀತಿಯ ಮಡದಿ ಮಹಾಲಕ್ಷ್ಮಿ ನೀಡಿದ ಅಮೃತಾನ್ನ ಭೋಜನವುಂಡು, ಕೈಕಾಲು ಚಾಚಿ ಆಗ ತಾನೇ ಮಲಗಿದ್ದ ಮಹಾವಿಷ್ಣು. ತೂಕಡಿಕೆ ಬೇರೆ ಮೊದಲೇ 'ಎಕ್ಸಿಕ್ಯುಟಿವ್ ಹೆಡ್' ಆಗಿ ಯಾವಾಗಲೂ ಕೈ ತುಂಬಾ ಕೆಲಸ, ತಲೇ ತುಂಬಾ ಯೋಚನೆ ಅವನಿಗೆ ಇಂದು ಏನೋ ಭಾನುವಾರ, ಇದುವರೆಗೂ ಯಾವ 'ಅರ್ಜೆಂಟ್ ಕಾಲ್ಸ್'ಊ ಬಂದಿರಲಿಲ್ಲ ಮನಸ್ಸು ಹಾಯಾಗಿತ್ತು ಮಡದಿ ಮಹಾಲಕ್ಷ್ಮಿ ತಾಂಬೂಲದ ತಟ್ಟೆ ಹಿಡಿದು ಮಂದಗಮನದಿಂದ ಮಹಾವಿಷ್ಣುವಿನ ಬಳಿಗೆ ಬಂದಳು ಇನ್ನೇನು ಅವನಿಗೆ ತಾಂಬೂಲ ನೀಡಬೇಕು, ಅಷ್ಟರಲ್ಲಿ ಬಾಗಿಲು ಬಡಿದ ಸದ್ದು ವೈಕುಂಠದ ಇಬ್ಬರು ಘೂರ್ಕಗಳಾದ ಜಯವಿಜಯರು ಬಾಗಿಲ ಬಳಿ ನಿಂತಿದ್ದರು

"ಥೂ ಹಾಳಾದ್ದು, ಸಂಡೇ ಒಂದು ದಿನವಾದ್ರೂ ರಿಲ್ಯಾಕ್ಸ್ ಮಾಡಲು ಬಿಡೋಲ್ಲ ನನ್ನ ಅಸಿಸ್ಟೆಂಟ್‌ಗಳು" ಎಂಬು ಗೊಣಗುತ್ತಾ ಉತ್ತರೀಯ ಕಿರೀಟಗಳನ್ನಿಟ್ಟುಕೊಂಡು ಬಾಗಿಲ ಬಳಿ ನಡೆದನು.

"ಏನ್ರೋ ಅದು...ಯಾರು ಬಂದಿದ್ದಾರೋ ಈಗ. ನಾನು ಮನೇಲಿಲ್ಲಾಂತ ಹೇಳಕ್ಕಾಗೋಲ್ವಾ ... ಒಬ್ಬರಲ್ಲ...ಇಬ್ಬರಿದ್ದೀರಾ.. ದ್ವಾರ ಪಾಲಕರು.. ದಂಡಕ್ಕೆ !" ಅವರ ಮೇಲೆ ಕಿಡಿ ಕಾರಿದ

"ಇಲ್ಲ ಸಾರ್...ನಿಮ್ಮ ಮೂರು ಜನ ಅಸಿಸ್ಟೆಂಟ್ಸ್...ಅದೇನೋ 'ಅರ್ಜೆಂಟ್' ಅಂತ ಒಂದು ವಿಚಿತ್ರ ಪ್ರಾಣೀನ ಕರ್ಕೊಂಡ್ಬಂದಿದ್ದಾರೆ.. !" ವಿಜಯ ಕೈಮುಗಿದು ನುಡಿದ.

"ಇನ್ನೇನು...ಕೂಡ್ಸು ಅವ್ರನ್ನೆಲ್ಲಾ.. ಡ್ರಾಯಿಂಗ್ ರೂಮ್ನಲ್ಲಿ... ಬರ್ತೀನಿ ಒಂದು ನಿಮಿಷದಲ್ಲಿ..." ಎಂದು ಹೇಳಿ ಕುಳಿತಿದ್ದ ಮಡದಿಯ ಬಳಿ

ಬಂದ ಮಹಾವಿಷ್ಣು ಅವನನ್ನು ಕಂಡ ಕೂಡಲೇ ಮೊದಲೇ ರೇಗಿದ್ದ ಲಕ್ಷ್ಮಿ ರೂಮ್ಮಿನೇ ವಿಷ್ಣು ಕೂಗುತ್ತಿದ್ದರೂ ಕೇಳಿಸದಂತೆ ಒಳನಡೆದಳು. "ಆಗ್ಲಿ ಅವರೆಲ್ಲಾ ಹೋದ ಮೇಲೆ ಅವಳನ್ನು ವಿಚಾರಿಸಿಕೊಳ್ತೀನಿ" ಎಂದುಕೊಂಡು ಮಹಾವಿಷ್ಣು ಡ್ರಾಯಿಂಗ್ ರೂಮಿನತ್ತ ಬಂದ

ಯಾವ ಪ್ರಾಣಿ ಇದು ?

ಅಲ್ಲಿ ಬ್ರಹ್ಮ, ಈಶ್ವರ, ಯಮ ಒಂದು ಮಾನವನ ಅಸ್ಥಿಪಂಜರದಂತಿದ್ದ ಪ್ರಾಣಿ ಸೀಕಲು ಬಣ್ಣ, ಗುಳಿ ಬಿದ್ದ ಕಣ್ಣು, ಸುಕ್ಕುಗಟ್ಟಿದ್ದ ಕೆನ್ನೆ, ತಲೆಯಲ್ಲಿ ಅಲ್ಲಲ್ಲಿ ಒಂದೊಂದು ಬಿಳಿಯ ಕೂದಲು, ಹರಿದು ಮಾಸಲು ಬಣ್ಣಕ್ಕೆ ತಿರುಗಿದ ಖಾದಿ ಕಚ್ಚೆ ಪಂಚೆ, ಅಲ್ಲಲ್ಲಿ ತೇಪೆ ಹಾಕಿದ್ದ ಬಿಳಿಯ ಬಣ್ಣದಿಂದ ಕೆಂಪಗೆ ತಿರುಗಿದ ಷರಟು, ಹಲ್ಲೆಲ್ಲಾ ಉದುರಿದ ಬೊಚ್ಚು ಬಾಯಿ, ಕೈಯಲ್ಲಿ ಒಂದು ಸಣ್ಣ ಬೆತ್ತ, ಮೂಗಿನ ಕೆಳಗೆ ಇಳಿದಿದ್ದ ಕನ್ನಡಕ..ಬ್ರಹ್ಮ ಇದನ್ನ್ಯಾವಾಗ ಸೃಷ್ಟಿಸಿರಬಹುದು? ಪ್ರಶ್ನಾರ್ಥಕವಾಗಿ ಬ್ರಹ್ಮನನ್ನು ನೋಡಿದ

"ಅವನೊಬ್ಬ ಬಡ ಸ್ಕೂಲು ಮೇಷ್ಟ್ರು. !" ಎಂದು ಉತ್ತರವಿತ್ತ ಬ್ರಹ್ಮ ಬಡ ಮಾಸ್ತರು ನಿಂತಲ್ಲಿಂದಲೇ ನಡುಗುತಾತ್ತ ಕೈಮುಗಿದರು

ಅತಿಥಿ ಸತ್ಕಾರವಾದ ಮೇಲೆ ವಿಷ್ಣು, ಅವರೆಲ್ಲಾ ಬಂದ ಸಂಗತಿ ಯೇನೆಂದು ಕೇಳಲು ಆತುರನಾದನು

"ಈ ಪ್ರಾಣಿಯನ್ನು ನನ್ನ ಬಳಿ ಕರೆತರಲು ಕಾರಣ ?"

ಅನುಮಾನ ಬಂತು

ಗಂಟಲು ಸರಿಮಾಡಿಕೊಂಡು ಯಮ-"ಮಿಸ್ಟರ್ ವಿಷ್ಣು... ಇವೊತ್ತು ಯಮಲೋಕದಲ್ಲಿ 'ಸ್ಟೇಟ್ ಆಫ್ ಎಮರ್ಜೆನ್ಸೀ' ಈ ಮಹಾರಾಯನಿಂದ. ಈತ ನಾಲ್ಕು ದಿನಗಳ ಕೆಳಗೆ ಕಾವೇರಿ ನದಿಯಲ್ಲಿ ಪಾಚಿ ಕಟ್ಟಿದ್ದ ಬಂಡೆಯ ಮೇಲೆ ನಿಂತು,'ಇಲ್ಲಿ ಕಾಲು ಜಾರಿ ಬಿದ್ದಿದ್ದರೆ . ಚೆನ್ನಾಗಿತ್ತು' ಎಂದುಕೊಳ್ಳುವ ಹೊತ್ತಿಗೆ ಕಾಲು ಜಾರಿ ಕಾವೇರಿಯ ಮಡಿಲಲ್ಲಿ ಸತ್ತ ಚಿತ್ರಗುಪ್ತನಿಗೆ ಇದು ಆಕಸ್ಮಿಕವೋ ಆತ್ಮಹತ್ಯೆಯೋ ಅನುಮಾನ ಬಂದು, ನನ್ನ ಬಳಿಗೆ ಬಂದು

ಆತ್ಮಹತ್ಯೆಯಾದರೆ ಕ್ಲೀನ್ ಆಗಿ ಅವರನ್ನ ನರಕಕ್ಕೆ ಕಳಿಸ್ಬಿಡ್ತಾ ಇದ್ದೆ... ಪಿಶಾಚಿಗಳ ವ ನ್ಯ . ಇವರೆ ..ಆತ್ಮಹತ್ಯೆ ಮಾಡಿಕೊಳ್ಳೋದಿಕ್ಕೆ ಯೋಚಿಸ್ತಾ ಇದ್ದೆ. ಸ್ವರ್ಗಕ್ಕೆ ಕಳಿಸೋಕೆಅವನಲ್ಲಿ ಅಂತಹದೇನೂ ಕಲ್ಯಾಣಗುಣಗಳೇನೂ ಕಾಣಿಸಲಿಲ್ಲ ಇವನ ಕೇಸ್ ಡಿಸ್ಪೈಡ್ ಮಾಡ್ದೇ ನಾನು ಮುಂದೆ ಕೆಲ್ಸಾ ಮಾಡೊ ಆಗೋಲ್ಲಾ ..ಆಗ್ಲೆ ಎರಡು ಸಾವಿರದವರೆಗೂ ಕ್ಯೂ ನಿಂತಿದೆ ಬಾಗಿಲ ಹತ್ರ . ಬ್ರಹ್ಮ ಈಶ್ವರನನ್ನೂ ಕನ್‌ಸಲ್ಟ್ ಮಾಡಿದೆ .ಬ್ರಹ್ಮ ಮಹೇಶ್ವರ ಇಬ್ಬರೂ ಅವನ ಕೇಸ್ ಡಿಸ್ಪೈಡ್ ಮಾಡೋಕೆ ನೀನೇ ಸರಿ ಅಂದ್ರು ಇಲ್ಲಿಗೆ ಕರ್ಕೊಂಡ್ಬಂದೆ ನಾನೀ ಕಡೆ ಬಂದಕೂಡ್ಲೇ ಚಿತ್ರಗುಪ್ತ ಕಾರುಬಾರು ನಡೆಸಾನು ಅಂತ ಸ್ಟೇಟ್ ಆಫ್ ಎಮರ್ಜೆನ್ಸಿ ಡಿಕ್ಲೇರ್ ಮಾಡ್ಬಿಟ್ಟೆ ಯಮಲೋಕದಲ್ಲಿ ಈವೊತ್ತು ನರಕ ಸ್ವರ್ಗದಲ್ಲಿನಥ್ಯಕ್ಕೆ 'ಕರ್ಫ್ಯೂ'

## ಲಯದ ಕೆಲಸಕ್ಕೆ ರೆಸಿಗ್ನೇಷನ್

ಬ್ರಹ್ಮ ತಲೆಯ ಕಿರೀಟ ಸರಿಪಡಿಸಿಕೊಳ್ಳುತ್ತಾ- "ಮಹಾವಿಷ್ಣು .ಈ ಪ್ರಾಣಿ ಹೀಗಾಗುತ್ತೇಂತ ನಾನು ಎಕ್ಸ್‌ಪೆಕ್ಟ್ ಮಾಡಿರ್ಲಿಲ್ಲ ಇಲ್ದಿದ್ರ ಅದ್ನ ಸೃಷ್ಟಿಸುತ್ತಲೇ ಇರ್ಲಿಲ್ಲ.. !'

ಈಶ್ವರ ಹೊದೆದ ಚರ್ಮವನ್ನು ಸಡಿಲಪಡಿಸಿಕೊಂಡು ಹೇಳಿದ-"ಭೂಮಿಯಲ್ಲಿ ಜೀವಕೋಟಿ ಹೀಗೆ ಸವೆದುಹೋಗುತ್ತಾ ಬಂದಲ್ಲಿ ನನ್ನ ಲಯದ ಕೆಲಸಕ್ಕೆ ರೆಸಿಗ್ನೇಷನ್ ಕೊಟ್ಬಿಡ್ತೀನಿ ಮಹಾವಿಷ್ಣು "

ಮಹಾವಿಷ್ಣು ಯೋಚನಾಪರವಶನಾದ ಈ ಮೇಷ್ಟರು ಮಾಡಿದ ಪಾಪಪುಣ್ಯಗಳ ಪಟ್ಟಿ ತರಿಸಿ ಗುಣಾವಗುಣಗಳನ್ನು ವಿಮರ್ಶಿಸಿ ಅನಂತರ ಯಾವುದಾದರೂ ಕನ್‌ಕ್ಲೂಷನ್‌ಗೆ ಬರಬೇಕೆಂದು ಅವನ ಪಾಪಪುಣ್ಯಗಳ ಪಟ್ಟಿಯನ್ನು ತರಿಸಿದ. ಪುಣ್ಯದ ಪಟ್ಟಿಯನ್ನು ಮೇಜಿನ ಮೇಲೆ ತೆಗೆದಿರಿಸಿ' ಪಾಪಗಳ ಪಟ್ಟಿ ಕೈಗೆತ್ತಿಕೊಂಡ ಮೇಷ್ಟ್ರ ಕಡೆ ತಿರುಗಿ.

"ಸ್ವಾಮಿ...ತಾವು...ಸ್ಕೂಲು ಮೇಷ್ಟ್ರು ನಾನು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಸತ್ಯವಾದ ಉತ್ತರ ಕೊಡ್ಬೇಕೂ...ತಿಳೀತಾ...?" ಸ್ವಲ್ಪ ಗಡುಸಾಗಿ ಕೇಳಿದ.

## ಸ್ವಂತಕ್ಕೆ ಬಳಸಬಹುದೇ?

"ಆಗಲಿ ಪರಮಾತ್ಮ !" ಮೇಷ್ಟ್ರು ಕರ ಜೋಡಿಸಿದರು

"ನಿಮ್ಮ ಶಾಲೆ ಮೈದಾನ ದೊಡ್ಡದಾಗಿದ್ದು ತುಂಬಾ ಹುಲುಸಾಗಿ ಹುಲ್ಲು ಬೆಳೆದಿದ್ದು ಅದರಲ್ಲಿ ನಿಮ್ಮ ಮನೆ ದನಗಳನ್ನು ತಂದು ಮೇಯಿಸುತ್ತಿದ್ದಿರಲ್ಲಾ .ಅದ್ಯಾಕೆ ? ಸ್ಕೂಲ್ ಪ್ರಾಪರ್‌ಟೀಸ್ ನೀವು ಸ್ವಂತಕ್ಕೆ ಉಪಯೋಗಿಸಬಹುದೇ ? ಹುಡುಗ್ರು ಅದನ್ನ ಓಡಿಸಿದರೆ ಅವ್ರನ್ನ ಕ್ಲಾಸ್ ಬೆಂಚ್ಮೇಲೆ ನಿಲ್ಲಿಸ್ತಾ ಇದ್ರಲ್ಲಾ !"

ಮೇಷ್ಟ್ರು ಮೂಗಿನ ಕನ್ನಡಕ ಸರಿಪಡಿಸಿಕೊಳ್ಳುತ್ತಾ—

"ಪರಮಾತ್ಮಾ . ನೀನೆಲ್ಲಾ ಬಲ್ಲವನು ಮೈದಾನದ ತುಂಬಾ ಹುಲ್ಲೇನೋ ಬೆಳೆದಿತ್ತು ಹುಡುಗರು ಅದನ್ನು ತುಳಿದು ಕೆಡಿಸುತ್ತಿದ್ದರು. ಓಡುವಾಗ ತಡೆಯುತ್ತೆ ಅಂತ ಕಿತ್ತು ಎಸೆಯುತ್ತಿದ್ದರು ಕ್ರಿಕೆಟ್ ಪಿಚ್‌ಗೆ ಎಂದು ಅದರ ಮೇಲೆ ಮರಳು ಸುರಿದು ಹಾಳು ಮಾಡುತ್ತಿದ್ದರು ನನ್ನ ಹಸು ಹೊಟ್ಟೆಗಿಲ್ಲದೇ ಒಣಗಿ ನಿಂತಿತ್ತು ಮೂಕ ಪ್ರಾಣಿ ಹಸಿವು ನೀರಡಿಕೆ, ಅದಕ್ಕೆ ಹೇಳಿಕೊಳ್ಳಲು ಬರದು ಮನೆಯುವರಿಗೇ ಹೊಟ್ಟೆಗೆ ಸಾಲದು. ಇದಕ್ಕೇನು ಕೊಡಲಿ ಎಂದು ಹುಡುಗರು ಕ್ಲಾಸಿನೊಳಗೆ ಇದ್ದಾಗ ಮೈದಾನದಲ್ಲಿ ಬಡುತ್ತಿದ್ದೆ ಮಿಕ್ಕಿದಾಗ ಕಟ್ಟೆಹಾಕುತ್ತಿದ್ದೆ" ಮಹಾವಿಷ್ಣು ಒಂದು ನಿಮಿಷ ಕಣ್ಣು ಮುಚ್ಚಿದ

## ನಿದ್ದೆ ಏಕೆ ಮಾಡುತ್ತಿದ್ದಿರಿ?

"ಕ್ಲಾಸಿನಲ್ಲಿ ಹುಡುಗರಿಗೆ ಪಾಠ ಹೇಳಿಕೊಡುವ ಬದಲು ಟೇಬಲ್ ಮೇಲೆ ತಲೆಯಿಟ್ಟು ನಿದ್ದೆ ಮಾಡುತ್ತಿದ್ದಿರಿ ..ಅದು ನಿಮ್ಮ ಕರ್ತವ್ಯಭ್ರಷ್ಟತೆಯಲ್ಲವೇ?"

ಮೇಷ್ಟ್ರು ಹಣೆಯ ಬೆವರೊರೆಸಿಕೊಂಡರು

"ಭಗವಂತಾ .ನಮ್ಮ ಸ್ಕೂಲು ಟೈಮ್‌ಟೇಬಲ್ ನೋಡಿಲ್ಲ... ನೀವೆಲ್ಲಾ, ಯಾವಾಗಲೂ ನನ್ನ ಪಿರಿಯಡ್ಡಿಗೆ ಮುಂಚೆ ಗಣಿತ ಆಮೇಲೆ ಸ್ಪೋರ್ಟ್ಸ್ ಊ .ನಾನು ಕ್ಲಾಸಿಗೆ ಬರುವ ಹೊತ್ತಿಗೆ ಗಣಿತ ಮಾಡಿ ತಲೆ ಕೆಡಿಸಿಕೊಂಡ ಮಕ್ಕಳು ನನ್ನ ಪಾಠದ ಕಡೆಗೆ ಗಮನ ಕೊಡುತ್ತಿರಲಿಲ್ಲ. ಇನ್ನು

ಮಿಕ್ಕವರು ನೆಕ್ಸ್ಟ್ ಪಿರಿಯಡ್ ಏನು ಆಟ ಆಡೋಣ ಅನ್ನೋ ಗುಂಗಿನಲ್ಲಿ ಇರುತ್ತಿದ್ದರು. ಗಮನ ಇಲ್ಲದ ಕಡೆಗೆ ಪಾಠ ಹೇಳಿ ಏನು ಪ್ರಯೋಜನ ಅಂತ ನಾನು ಕಣ್ಣು ಮುಚ್ಚುತ್ತಿದ್ದೆ ಕೆಲವು ಹುಡುಗರೂ ಮುಚ್ಚುತ್ತಿದ್ದರು

ಕಡ್ಲೆಪುರಿ ಕೊಟ್ಟಿದ್ದೇಕೆ ?

ಬ್ರಹ್ಮ ವಿಷ್ಣು ಮಹೇಶ್ವರರು ಒಬ್ಬರ ಮುಖವನ್ನೊಬ್ಬರು ನೋಡಿ ಕೊಂಡರು

"ಅದ್ಸರಿ ಗಣೇಶನ ಹಬ್ಬದ ಅಂಗವಾಗಿ ಸ್ಕೂಲಿನಲ್ಲಿ ತಲಾ ಒಂದೊಂದು ರೂಪಾಯಿ ಚಂದಾ ಎತ್ತಿ ಹಬ್ಬದ ದಿನ ಮಕ್ಕಳಿಗೆ ಕಡಲೇಪುರಿ ಹಂಚಿದ್ದು ಸರಿಯೇನ್ರೀ ? ದೇವರ ಹೆಸರಿನಲ್ಲಿ ದುಡ್ಡು ಹೊಡೆಯಬಹುದೇನ್ರೀ ?" ಮೇಷ್ಟ್ರು ನಾಲಿಗೆ ಒಣಗಿದ ತುಟಿಯನ್ನು ಸವರಿತು

"ಸರ್ವವ್ಯಾಪಿ ನೀನು, ದೇವ....ಪ್ರಪಂಚದಲ್ಲಿ ಆಗುತ್ತಿರುವ ಅನ್ಯಾಯ ದೇವರ ಹೆಸರಿನಲ್ಲೇ ಕೌಂಟರ್‌ಫೀಟ್ ಕರೆನ್ಸೀ ದೇವಸ್ಥಾನದ ಆಭರಣಗಳ ನಾಪತ್ತೆ ದೇವರ ದರ್ಶನಕ್ಕಾಗಿ ಬರುವವರ ಕೈಯಲ್ಲಿ ಲಂಚ, ಪ್ರಸಾದಕ್ಕೆ ದುಡ್ಡು ಮಂಗಳಾರತಿಗೆ ದುಡ್ಡು ಆ ಎಲ್ಲಾ ದುಡ್ಡು ಭಗವಂತನಿಗೇನೂ ಉಪಯೋಗಿಸುವುದಿಲ್ಲ. ನಮ್ಮ ಊರಿನಲ್ಲಿ ನೂರೆಂಟು ಮಂಡಳಿಗಳಿವೆ ರಾಮನವಮಿ, ಗಣೇಶನ ಮಂಗಳಾರತಿಗಳನ್ನು ಮಾಡಿಸಿ ದೊಡ್ಡ ದೊಡ್ಡ ಮನೆ ಕಟ್ಟಿಬಿಟ್ಟಿದ್ದಾರೆ ಹಾಗಾದಲ್ಲಿ ನಾನು ಕೇವಲ ಒಂಬೈವತ್ತು ರೂಪಾಯಿ ನನ್ನ ಮಕ್ಕಳು ಮೊಮ್ಮಕ್ಕಳಿಗಾಗಿ ಹಬ್ಬದ ದಿನ ಬಳಸಿಕೊಂಡೆ ನನಗಾಗಿ ನಾನು ಒಂದು ಕಾಸನ್ನೂ ಬಳಸಲಿಲ್ಲ ಅದೂ ಅಲ್ಲದೆ ಗಣೇಶಚತುರ್ಥಿಯ ದಿನ ಮಕ್ಕಳೆಲ್ಲಾ ಮನೆಯಲ್ಲಿ ಕಡುಬಿನೂಟ ಹೊಟ್ಟೆ ತುಂಬಾ ತಿಂದು ಬಂದಿದ್ದರು. ಇನ್ನೂ ಏನಾದ್ರೂ ಕೊಟ್ಟರೆ ಊರ ತುಂಬಾ ಕಾಯಿಲೆ ಕಸಾಲೆ– ಮಕ್ಕಳು ತಿಂದು ಮಲಗಿ ಬಿಟ್ಟಾವು ಎಂದು ಬರೀ ಕಡಲೆಪುರಿ ಕೊಟ್ಟೆ."

ಸಾಮಾನೆಲ್ಲಾ ಏಕೆ ಸಾಗಿಸ್ತಿದ್ರೀ ?

"ಮೇಷ್ಟ್ರೇ....ಸ್ಕೂಲಿನಿಂದ ಇಂಕು, ಪೇಪರ್, ಪರ್ನೈ, ಎನ್. ಸಿ. ಸಿ.

ಮಕ್ಕಳಿಗೆ ತಂದ ತಿಂಡಿ ಇನ್ನೂ ನೂರಾರು ವಸ್ತುಗಳು ನಿಮ್ಮ ಮನೆಗೆ ಸಾಗುತ್ತಿದ್ದುದಕ್ಕೆ ಕಾರಣ ? ಅದು ಕಳ್ಳತನ ”

ಮೇಷ್ಟ್ರು ಅಷ್ಟರಲ್ಲಿ ತಡೆದರು

“ಸುಳ್ಳು ಮಹಾವಿಷ್ಣು, ಅದು ಸುಳ್ಳು ನಾನು ಏನನ್ನೂ ಸಾಗಿಸುತ್ತಿರಲಿಲ್ಲ. ಸ್ಕೂಲಿನ ಜವಾನ್ರೂ ಕ್ಲರ್ಕ್ಸ್ ಮುಂತಾದವರು ಸಾಗಿಸುತ್ತಿದ್ದುದನ್ನು ನಾನು ಕಂಡದ್ದರಿಂದ ಡಿಪಾರ್ಟ್‌ಮೆಂಟ್‌ಗೋ ಹೆಡ್ ಮಾಸ್ಟರ್‌ಗೋ ನಾನು ಹೇಳ್ಬಿಡ್ತೀನೀ ಅನ್ನೋ ಭಯದಿಂದ ನನ್ನ ಬಾಯಿ ಮುಚ್ಚಿಸೋಕೆ ಆಗಾಗ ತಾವು ತೆಗೆದುಕೊಂಡು ಹೋಗುತ್ತಿದ್ದುದರಲ್ಲಿ ಒಂದಷ್ಟು ಇಷ್ಟು ಕೊಡೋರು ನಾನಾಗಿ ಒಂದು ‘ಚಾಕ್‌ಪೀಸ್’ ತುಂಡನ್ನೂ ನನ್ನ ಮನೆಗೆ ಸಾಗಿಸಿಲ್ಲ !” ಮಹಾವಿಷ್ಣು ಕಿರೀಟ ತೆಗೆದು ತಲೆ ಕೆರೆದುಕೊಂಡ ಯಮ ಕಿರುನಗೆ ಸೂಸಿದ. ಈಶ್ವರನಿಗೆ ಆಗಲೇ ಯೋಗನಿದ್ದೆ

ಪಾಸು ಮಾಡಿಸ್ತಿದ್ದೀರಲ್ಲಾ....?

“ಮೇಷ್ಟ್ರೇ ಇದೊಂದೇ ಪಾಯಿಂಟ್ ನೀವು ಕೆಲವು ಹುಡುಗರು ಕೊಟ್ಟ ಬ್ಲಾಂಕ್ ಪೇಪರ್‌ನಲ್ಲಿ ನೀವೇ ಆನ್ಸರ್ಸ್ ಬರೆದು ಮಾರ್ಕ್ಸ್ ಕೂಟ್ಟು ಪಾಸು ಮಾಡಿಸುತ್ತಿದ್ದಿರಲ್ಲ ಸರಿಯಾ ?”

‘ದೇವಾ, ಕೆಲವು ಹುಡುಗರು ಬರೆಯುವುದರಲ್ಲಿ ಬುದ್ಧಿವಂತರು. ಕೆಲವರು ಬಾಯಿಯಲ್ಲಿ ಹೇಳಲು ತಿಳಿದವರು ಬುದ್ಧಿಯಿದ್ದೂ ಬರೆಯಲು ತೋಚದೆ ಖಾಲಿ ಪೇಪರ್ ಕೊಡುತ್ತಿದ್ದ ಮಕ್ಕಳಿಗೆ ಮಾತ್ರ ಹಾಗೆ ಮಾಡುತ್ತಿದ್ದೆ ”

“ಅದೇ ವಿಚಾರದಲ್ಲಿ ಪಬ್ಲಿಕ್ ಪರೀಕ್ಷೆಯಲ್ಲಿ ಟ್ಯಾಬ್ಯುಲೇಷನ್‌ನಲ್ಲಿ ಒಂದನ್ನು ಒಂಬತ್ತು. .ಸೊನ್ನೆಯನ್ನು ಎಂಟು ಮಾಡಿ ನಾಲ್ಕು ಜನರನ್ನು ಪಾಸು ಮಾಡಿಸಿದಿರಲ್ಲಾ...!”

“ಹಾಗಲ್ಲಾ ಭಗವಂತ ಅಷ್ಟೇ ಅಷ್ಟು ಮಾಡಿದ್ದಕ್ಕೆ ನಾಲ್ಕು ಮಕ್ಕಳು ಪಾಸಾದವು ಆ ಮಕ್ಕಳ ರಿಜಿಸ್ಟರ್ ನಂಬರು ನನ್ನ ಹೆಡ್‌ಮಾಸ್ಟರ್ ಮಕ್ಕಳದು ..ಅದರಿಂದ ನನಗೆ ಬಹಳ ಉಪಯೋಗವಾಯ್ತು. ಅಂದಿನಿಂದ

ಹೆಡ್‌ಮಾಸ್ಟರ್ ನನ್ನನ್ನು ಎಲ್ಲದಕ್ಕೂ ನಂಬುತ್ತಿದ್ದರು. ಅದೂ ಅಲ್ಲದೆ ಅಂಕಿಗಳ ಆಟ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಇನ್‌ಕಮ್ ಟ್ಯಾಕ್ಸ್ ಆಫೀಸಿನಲ್ಲಿ ಹಳೆ ಮಾಮೂಲು ನಂಗು ಕೇವಲ ಕಿರಿಮು ಹದಿನಾಲ್ಕು ಬಂದ ಕಡೆ ತೊಂಬತ್ತನಾಲ್ಕು ಮೂವತ್ತು ಬಂದಕಡೆ ಮೂವತ್ತೆಂಟು ಅಷ್ಟೆ ಆದರಿಂದ ಯಾರಿಗೂ ನಷ್ಟವಾಗಲಿಲ್ಲ !"

## ಸರಿಯೆಂದು ನಂಬಿ ಮಾಡಿದ್ದೇನೆ

ವಿಷ್ಣು ವಿಸ್ಮಯಾಕ್ರಾಂತನಾದ ಈ ಮೇಸ್ಟ್ರು ತಾನು ಮಾಡಿದ್ದೆಲ್ಲಾ ಸರಿಯೆಂದು ನಂಬಿ ಮಾಡಿದ್ದಾನೆ, ಎಲ್ಲೂ ಕಪಟ ನೋಟಿನಲ್ಲಿ ನರಕಕ್ಕೆ ಹೇಗೆ ಕಳಿಸಲಿ ಎಂದು ಯೋಚಿಸಿದ ಅವನು ಕೊಟ್ಟ ಉತ್ತರವಲ್ಲಾ ಸಮಂಜಸವಾಗಿವೆ ಆದ್ದರಿಂದ ಆಕಸ್ಮಿಕ ಮರಣದ ಪಾಯಿಂಟ್ ಏನೂ ಪ್ರಯೋಜನವಿಲ್ಲ ಆತ್ಮಹತ್ಯೆಯ ಪಾಯಿಂಟ್ ಹಿಡಿದುಕೊಂಡರೆ

"ಮೇಸ್ಟ್ರೆ ನಿಮ್ಮ ಆತ್ಮಹತ್ಯೆಗೆ ಕಾರಣ ?"

'ದೇವಾದಿದೇವಾ, ನಾನು ಫ್ಯಾಮಿಲಿ ಪ್ಲಾನಿಂಗ್ ಬರೋಕ್ಮುಂಚನೇನು ನನ್ನ ಕೊನೆ ಮಗು ಹುಟ್ಟಿದಾಗ ಅದು ಜಾರಿಗೆ ಬಂದದ್ದು ನನಗೆ 10 ಜನ ಮಕ್ಕಳು, ಎಂಟು ಜನ ಹೆಣ್ಮಕ್ಳು ಕೊನೇದೆರಡು ಗಂಡು ಆರು ಜನ ಹೆಣ್ಮಕ್ಳಿಗೂ ವರ ಹುಡ್ಕೀ ವರದಕ್ಷಿಣೆ ಕೊಟ್ಟು "

ಮಹಾವಿಷ್ಣು ಮೂಗಿನ ಮೇಲೆ ಬೆರಳಿಟ್ಟ

## ವರದಕ್ಷಿಣೆ ಜಾರೀಲಿದೆಯೆ ?

"ಏನ್ರೀ ಇನ್ನೂ ವರದಕ್ಷಿಣೆ ಜಾರಿಯಲ್ಲಿದೆಯೇನ್ರೀ ?"

"ಅಯ್ಯೋ ! ಏನ್ಹೇಳ್ಳಿ ಭಗವಂತ, ವರದಕ್ಷಿಣೇಂತಾ ಇಲ್ಲ ನಮ್ಗೆ ವರದಕ್ಷಿಣೆ ಏನೂ ಬೇಡಾ ಹುಡುಗಂಗೆ ಸ್ಕೂಟರ್, ವಾಚು, ನಾಲ್ಕು ಟೆರಿಲಿನ್ ಸೂಟು, ಇರೋಕೆ ಸಣ್ಣ ಮನೆ ಅಂತ ನೂರಾರು ವಸ್ತುಗಳ ಪಟ್ಟಿ ಯನ್ನು ಕೊಡ್ತಾರೆ ಕನ್ಯಾಪಿತೃಗಳನ್ನು ಕಂಡರೆ ಅದಕ್ಕೇ ಈಗ ಕನ್ಯೆಗಳ ಮನಸ್ಸು ರೋಸಿ ಹೋಗಿ ಕೆಲ್ಸಕ್ಕೆ ಇಳಿದ್ಬಿಟ್ಟಿದ್ದಾರೆ ಬ್ಯಾಂಕುಗಳಲ್ಲಿ ಎಲ್ ಐ. ಸೀಲಿ, ಶಾಲೆಗಳಲ್ಲಿ ಷೋರೂಮ್ಸ್‌ನಲ್ಲಿ ಎಲ್ಲೆಲ್ಲೂ ಅವ್ರೇ . ಕೈತುಂಬಾ ಸಂಪಾದಿಸ್ಕೊಂಡು ಹಾಯಾಗಿದ್ದಾರೆ. "ಮಹಾವಿಷ್ಣು ಚಕಿತನಾದ

"ಮುಂಚೆ ಕಲಿಗಾಲ ಮುಗಿಸ್ಬಿಡ್ತಾ ಅನ್ನತ್ತೆ ನಂಗೆ–ಹೋಗ್ಲೀ ಹೇಳಿ ಮುಂದೆ ಆರ್ಜನಕ್ಕೆ ಮದ್ವೆ ಮಾಡ್ಸಿದ್ರೀ "

ನಂದಗೋಕುಲ

"ಆರು ಜನಕ್ಕೆ ಮದ್ವೆ ಮಾಡ್ಸಿ ಅವ್ರ ಬಾಣಂತನಗಳನ್ನ ಮಾಡೋದ್ರಲ್ಲಿ ನಾನು ಮುದ್ಕ ಆದೆ ನನ್ನ ಇಬ್ರು ಹೆಣ್ಮಕ್ಳು ಬ್ಯಾಂಕಿನಲ್ಲಿ ಕೆಲಸ ಮಾಡ್ತಾ ಇದ್ದಾರೆ ಗಂಡು ಮಕ್ಳಿಬ್ರನ್ನೂ ಅವ್ರೇ ಓದಿಸ್ತಾ ಇದ್ದಿದ್ದು ಸಾಲದ್ದಕ್ಕೆ ನನ್ನ ಮದ್ವೆಯಾದ ಹೆಣ್ಮಕ್ಳು-'ಅಜ್ಜ ಹೇಗಿದ್ರೂ ಮೇಷ್ಟ್ರು ಚೆನ್ನಾಗೆ ಪಾಠ ಹೇಳಿಕೊಡ್ತಾರೆ ಅಲ್ಲೇ ಓದ್ಕೊಳ್ಳಿ' ಅಂತ ಅವರವರ ಮಕ್ಕಳನ್ನ ನನ್ನ ಮನೆಗೇ ಕಳ್ಸಿದ್ದಾರೆ ನನ್ಹೆಂಡ್ತೀ ಅವರುಗಳಿಗೆ ಬೇಯಿಸಿ ಮೇಯಿಸಿ ಅರ್ಧ ಜೀವ ಆಗಿದ್ದಾಳೆ ನನ್ನದು ತುಂಬಿದ ಸಂಸಾರ, ನಂದ ಗೋಕುಲ ದಿನಕ್ಕೆ ಕಡೇಪಕ್ಷ ಐದು ಆರು ರೂಪಾಯಿ ಖರ್ಚು ಸಾಲದ್ದಕ್ಕೆ ಡಾಕ್ಟರ್ ಬಿಲ್ಲುಗಳು. ಬಡತನದ ಜೊತೆಗೆ ಹೊಸ ಹೊಸ ರೋಗಗಳೂ ಬಗ್ತಾ ಇದ ದೇವಾ ! ನನ್ನ ಮಗ ಮೊನ್ನೆ ತಾನೇ ಇಂಜಿನಿಯರ್ ಪರೀಕ್ಷೆ ಪಾಸು ಮಾಡಿದ ಅವನನ್ನೇ ನಂಬಿದ್ದೆ ಅವನು "ನಾಲ್ಕು ವರ್ಷಗಳ ಕೆಳಗ ಪಾಸು ಮಾಡಿದ ಇಂಜಿನೀಯರ್ಸ್‌ಗೇ ಕೆಲ್ಸಾ ಇಲ್ಲ ನಂಗಲ್ಲಿ ಸಿಕ್ಕುತ್ತೇಂತ ಅಲ್ಲ ಇಲ್ಲಿ ಸಾಲ ಮಾಡಿ ಆದ್ರೂ ನನ್ತಲೇಗೆ ಕಟ್ಬಿಟ್ಟು ನನ್ನೂ ನಡು ನೀರ್ನಲ್ಲಿ ಕೈ ಬಿಟ್ಟು ಮೊನ್ನೆ ತಾನೇ ಅಮೇರಿಕಾಗೆ ಪ್ಲೇನ್ ಹತ್ಬಿಟ್ಟ " ಮೇಷ್ಟ್ರು ಪಂಚೆಯ ತುದಿಯಿಂದ ಕಣ್ಣು ಮೂಗು ಒರಸಿಕೊಂಡರು 'ಇನ್ನೊಬ್ಬ ಡಾಕ್ಟರಿಗೋದ್ತಾ ಇದ್ದೋನು "ಡಾಕ್ಟರಿಗಳಿಗೂ ಕೆಲ್ಸ ಸಿಗೋಲ್ಲ ಇನ್ನೇಲೇಂತ ಮಧ್ಯದಲ್ಲೇ ಓದು ಬಿಟ್ಟು ಅದೆಂಥಾದ್ದೋ 'ಯೋಗಿ' ಅಂತೆ ಅವನ್ಹತ್ರ ಹೋಗಿ, ಕಾವಿ ಧರಿಸಿ, ಗಡ್ಡ ಮೀಸೆ ಬೆಳ್ಸಿ ತಾನೂ ಒಬ್ಬ ಯೋಗಿ ಆಗ್ಹೋದಾ ಕೊನೆಗೆ ನನ್ನ ಇಬ್ಬರು ಹೆಣ್ಮಕ್ಳು ತಾವು ದುಡಿದಿದ್ದು ದಂಡ ಎನ್ನಿ ತಂತಮ್ಮ ಆಫೀಸ್ನಲ್ಲಿ ತಾವೇ ಗಂಡಂದಿರನ್ನು ಆರಿಸ್ಕೊಂಡ್ಬಿಟ್ಟು ನಂಗೊತ್ತಿಲ್ದೆ ಮದ್ವೆ ಮಾಡ್ಕೊಂಡ್ಬಿಟ್ರು....ನಾನು ಮುದ್ಕ...ಒಬ್ನೇ ರಥ ಹೇಗೆ ಎಳೀಲಿ ಅವರೆಲ್ಲರ ಪಾಲಿಗೆ ನಾನು ಸತ್ತ ಹಾಗೆ" ಮೇಷ್ಟ್ರು ಬಿಕ್ಕಳಿಸಿದರು ಮಹಾವಿಷ್ಣು ತಣ್ಣಗಾದ,

"ಆತ್ಮಹತ್ಯೆ ಘೋರ ಪಾಪ ಅಲ್ವೇನ್ರೀ ?"

"ಪರಮಾತ್ಮ ಜೀವವಿದ್ದು ಸತ್ತಾಗಿರೋ ನನ್ಗೆ ಆತ್ಮಹತ್ಯೆಯೇನೂ ಆಕಸ್ಮಿಕ ಏನೂ ? ನಾನು ಸತ್ಹೋಗಿ ಆರು ತಿಂಗಳಾಯ್ತು ಮಕ್ಕಳೆಲ್ಲಾ ದೂರ ಆಗಿ ಎಂಟು ತಿಂಗಳಾಯ್ತು ಇನ್ನು ನಾಲ್ಕು ದಿನಗಳ ಕೆಳಗೆ ನಾನು ನೀರಿನಲ್ಲಿ ಬಿದ್ದು ಸತ್ತದ್ದು ಸಾವೇ ? ಅದು ಪುನರ್ಜನ್ಮ !"

ಮಹಾವಿಷ್ಣು, ಬ್ರಹ್ಮ, ಈಶ್ವರ, ಯಮ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು ಮಹಾವಿಷ್ಣು ಕಣ್ಣು ಮುಚ್ಚಿ ಕುಳಿತ

"ಮೇಷ್ಟ್ರೆ ನಿಮಗೆ ನಮ್ಮ ಸ್ವರ್ಗ ನರಕ ಎರಡರಲ್ಲೂ ಸೀಟ್ ಸಿಗೋಲ್ಲ ಸದ್ಯಕ್ಕೆ ನೀವೇನಾದ್ರೂ ಭೂಮಿಗೇ ಲಾಯಕ್ಕು.ವಾಪಸ್ ಅಲ್ಲಿಗೇ ಹೋಗ್ಬಿಡಿ " ನಿಮ್ಮ ಸತ್ನಿ ನಾಲು ದಿನಗಳಿಂದ ನಿಮ್ಮನ್ನು ಕಾಣದೆ ಒದ್ದಾಡ್ತಾ ಇದ್ದಾರೆ ನಾಲ್ಕು ಜನ ಯಾರೋ ನಿಮ್ಮನ್ನ ನದಿ ದಂಡೆ ಮೇಲೆ ಬಿದ್ದಿರೋದ್ನ ನೋಡಿ "ನದೀಲಿ ಮುಳುಗಿದ್ರೂ ಬದಿ ದ್ದಾನೇ ಅಂತ ಆಸ್ಪತ್ರೆಗೆ ಸೇರಿಸ್ತಾರೆ ಸರಿ ಹೋದ್ಮೇಲೇ ನಿಮ್ಮನೇಗೋ ಸ್ಕೂಲಿಗೋ ಹೋಗಿ "

ಮೇಷ್ಟ್ರು ಮಹಾವಿಷ್ಣುವಿನ ಕಾಲ ಬಳಿ ಬಂದು ದೈನ್ಯದಿಂದ ಕೇಳಿ ಕೊಂಡರು "ನಾನು ಭೇತಾಳ ಪಿಶಾಚಿಗಳ ಮಧ್ಯದಲ್ಲೇ ಇರ್ತೀನಿ ನಾನು ಭೂಮಿಗೆ ವಾಪಸ್ ಹೋಗೋಲ್ಲ .. "

'ಹೋಗ್ಬಿಟ್ಟು ಬನ್ನಿ'

ಮಹಾವಿಷ್ಣು ಅವರಿಗೆ ಅಭಯ ನೀಡುತ್ತಾ–"ಹೋಗ್ಬಿಟ್ಟು ಬನ್ನಿ ನಿಮ್ಗೆ ಒಳ್ಳೇದಾಗುತ್ತೆ. ಮಹಾಜನ್, ತುಕೋಳ್ ಆಯೋಗದ ವರದಿ ಗಳಿನ್ನೂ ಕಾರ್ಯಗತವಾಗಿಲ್ಲ.. ಇನ್ಮೇಲೆ ಎಲ್ಲಾ ಸುಧಾರಿಸಬಹುದು..." ಕಾರ್ಯಾಲಾಪ ಮುಗಿದಂತೆ ಮಹಾವಿಷ್ಣು ಎದ್ದ. ಇನ್ನು ಮಿಕ್ಕವರೂ ಎದ್ದರು ಮೇಷ್ಟ್ರು ಎದ್ದ ವೈಕುಂಠದ ಹೊರಬಾಗಿಲ ಬಳಿಗೆ ಸಾಗಿದರು.

ಅಸಿಸ್ಟೆಂಟ್ಸ್‌ನ ರವಾನಿಸಿ, ಹೆಂಡತಿಯನ್ನು ವಿಚಾರಿಸಿಕೊಳ್ಳಲು ಮಹಾ ವಿಷ್ಣು ಲಕ್ಷ್ಮಿಯ ರೂಮಿಗೆ ಹೋದ ಅಲ್ಲಿ ಕಂಡದ್ದೇನು ? ಒಂದು ಪುಟ್ಟ ಚೀಟಿ–"ನೀವು ವಿಚಾರಿಸ್ತಿರೋ ಮೇಷ್ಟ್ರ ಹೆಂಡತಿಯನ್ನು ವಿಚಾರಿಸಿಕೊಳ್ಳಲು ನಾನು, ಸರಸ್ವತಿ, ಪಾರ್ವತಿ.. ಹೋಗಿರುತ್ತೇನೆ !" ವಿಷ್ಣು ಮತ್ತೆ ನಿಟ್ಟುಸಿರು ಬಿಡುತ್ತಾ ತನ್ನ 'ಕರ್ಲ್‌ಆನ್' ಮೇಲೆ ಶಯನೋತ್ಸವಕ್ಕೆ ಒರಗಿದ.

# ಮತ್ತೆ ಮಡಿಲಿಗೆ

ಬೆಳಗ್ಗೆ ಹೊತ್ತು ಹುಟ್ಟುವ ಮುನ್ನವೇ ಎದ್ದು ಒಲೆಗೆ ಉರಿಹಾಕುತ್ತಿದ್ದ ಚೆನ್ನಿಯನ್ನು ಕಂಡ ಸಿದ್ದಮ್ಮ ಅಚ್ಚರಿಗೊಂಡರು ಮುಸುಕು ಬೀರಿ ಮಲಗಿರುತ್ತಿದ್ದ ಮಗಳನ್ನು ಬಲವಂತದಿಂದ ಎಬ್ಬಿಸಿ ಉಪಚಾರ ಮಾಡಿ ಕಾಫಿ ಕಾಯಿಸಿ ಕೊಟ್ಟು ಕಳಿಸಬೇಕಿತ್ತು ಇಂದೇನು ಹೀಗೆ ?

"ಇದೇನವ್ವಾ ಈಟೊತ್ಗೇ ಎದ್ಬುಟ್ದೇ ? ಉಟ್ವಾ ಸೂರ್ಯ ಉಟ್ತಾನೋ ಇಲ್ವೋ !"

ಒಲೆಯ ಮುಂದೆ ಕುಳಿತು ಕಡ್ಡಿ, ಬೆರಣಿ ಹಾಕುತ್ತಿದ್ದ ಚೆನ್ನಿ ತಾಯಿಯ ಮುಖ ನೋಡಿ ನಕ್ಕಳು

"ಎಳಾದು ಮರ್ತೋಯ್ತು ಕಣವ್ವಾ, ನೆನ್ನೀಕೆ ಸಾಕಾಗಿ ಓಗಿತ್ತು. ಮನಿಕೊಂಡ್ರೇ ಸಾಕಾಗಿತ್ತು ಇವೊತ್ತು ಅಮ್ಮಾವ್ರು, ರಾಯ್ರು, ಮಕ್ಳು ಊರಿಗೊಂಟವ್ರೆ, ನನ್ನೂ ಕರ್ಕೊಂಡೋಗ್ತಾರಂತೆ. ಓಗಾವಾಂತಾ ...

ಮಲಗಿದ್ದ ಸಿದ್ದಮ್ಮ ಸರಕ್ಕನೆ ಎದ್ದು ಕುಳಿತಳು

"ಆ ಪಾಟ ಬೆಣ್ಣೆ ಆಕ್ಬೇಡಾ ಒಗೆ ಆಯ್ತದೆ ..ಅಲ್ಕಣವ್ವಾ. ನೀನು ಊರಿಗೆ ಓಗೋ ಆಗಿದ್ರೆ ನಂಗೆ ಯೋಳ್ಬೇಡ್ವಾ ? ನಾ ಕಳಿಸಾಕಿಲ್ಲ ಅಂದ್ರೆ ಏನ್ಮಾಡೀಯಾ ?"

ತಾಯಿಯ ಮುಗ್ಧತೆಯನ್ನು ಬಲ್ಲ ಚೆನ್ನಿ ಮೆಲು ನಕ್ಕಳು "

"ಅವ್ವಾ, ನೀನು ನಂಗೆ ಯೇನೂ ಬೇಡಾನ್ನಕ್ಕಿಲ್ಲ ಅದ್ರಲ್ಲೂವೆ ಅಮ್ಮಾವ್ರು ಅಂದ್ರೆ ನಿಂಗೆ ದೇವ್ರು ಆಗಲ್ವಾ ? ಅವ್ರು ಜೊತೆ ನೀನು ನನ್ನ ಕಳ್ಸಾಕಿಲ್ವಾ ?"

ಸಿದ್ದಮ್ಮ ಎದ್ದು ನಿಂತು ಮೈಮುರಿದಳು. ತಲೆಯನ್ನು ಕೆರೆದುಕೊಂಡಳು

"ಸರಿ ಕಣವ್ವಾ, ನನಗಿಂತ ನಿಂಗೆ ಅವ್ನೋರೇ ಎಚ್ಚಾಗೋದ್ರು ಊಂ ನೀರು ಕಾದ್ರೆ ಮೈ ತೊಳ್ಕೋ ಕಾಫಿ ಕಾಯ್ಸಿ, ಎಲ್ಡು ರೊಟ್ಟಿ ತಟ್ಕೊಡ್ತೀನಿ. ದಾರಿಗಾಯ್ತದೆ. "

ಚೆನ್ನಿ ಕಿಲಕಿಲನೆ ನಕ್ಕಳು ಅವಳಿಗೆ ಹಾಗೆ ನಗುವುದು ಈಚೀಚಿಗೆ ಬಹಳ ಅಭ್ಯಾಸವಾಗಿತ್ತು

"ಅಂಗೆಲ್ಲಾ ನಗ್ಬೇಡಾಂತ ಯೇಳಿಲ್ವಾ ನಾನು ..ಏಟೊಂದಪ ಏಳಿವ್ನಿ ! ಅದೆಲ್ಲಾ ಸಂದಾಕಿರಾಕಿಲ್ಲ, ಅಂಗೆ ಮೈ ಕುಣಿಸ್ಕಂಡು ಎಲ್ಲಕ್ಕೂ ನಗ್ಬಾರ್ದು "

ಚೆನ್ನಿ ನಸುನಕ್ಕಳು

"ಸುರುವಾಯ್ತು ಕಣವ್ವಾ ರಾಮಾಣ್ಯ. ರೊಟ್ಟಿಗಿಟ್ಟಿಯೇನೂ ಬ್ಯಾಡಾ. ಕಾಫಿ ಕಾಸ್ಕೊಡೂ ಅವ್ರಾವ್ರ ಮನೇ ಅಂಗೆ ಕಾಪಿಪುಡಿ ಒಸಿ ಜಾಸ್ತಿ ಆಕು. ನಾನು ಮೈ ತೊಳ್ಕೊಂತೀನಿ "

ತನ್ನ ಮುರುಕು ಪೆಟ್ಟಿಗೆಯಿಂದ ನಾಲ್ಕೈದು ದಿನಗಳ ಕೆಳಗೆ ಅವ್ವಾವರ ಮನೆ ಬಚ್ಚಲಮನೆ ತೊಳೆಯುವಾಗ ಕದ್ದು ತಂದಿದ್ದ ಮೈ ಸೋಪನ್ನು ತೆಗೆದಳು ಮೈ ಒರೆಸಿಕೊಳ್ಳಲು ಸೀರೆಯ ಹರುಕು ತುಂಡೊಂದನ್ನು ಹಿಡಿದು ಸ್ನಾನಕ್ಕೆ ಹೊರಟಳು ನೀರು ಹದವಾಗಿ ಕಾದಿತ್ತು ಮೈಯನ್ನು ಎರಡು ಬಾರಿ ಸೋಪು ಹಾಕಿ ಉಜ್ಜಿ ಉಜ್ಜಿ ತೊಳೆದಳು ಬಚ್ಚಲ ತುಂಬಾ ಸುವಾಸನೆ ಹರಡಿತ್ತು ಸ್ನಾನ ಮುಗಿಸಿ ಮೈ ಒರೆಸಿಕೊಂಡು ತುಂಡು ಸೀರೆಯನ್ನು ಮೈಗೆ ಸುತ್ತಿಕೊಂಡು ಬಂದಾಗ ಉರಿಯುತ್ತಿದ್ದ ಸೀಮೆಯೆಣ್ಣೆ ದೀಪದಲ್ಲಿ ಅವಳನ್ನು ಕಂಡ ಸಿದ್ದಮ್ಮ ಹುಬ್ಬು ಗಂಟಿಕ್ಕಿದ್ದಳು "ಇಂಗೆಲ್ಲಾ ಮೈ ಕಾಣೋ ಅಂಗೆ ಬರ್ಬಾರ್ದವ್ವಾ ಇಸ್ಟೇ ಸೀಯೇನು ಸಿನೀಮಾದವ್ಳಾ ? ಎಂಗ್ಸು ಮರ್ಯಾದೆ ಕಲೀಬೇಕವ್ವಾ ಮೈತುಂಬಾ ಬಟ್ಟೆ ಆಕ್ಕೊಂಡು ತಿರ್ಗಾಡ್ಬೇಕವ್ವಾ ಇದಲ್ಲಾ ಸಂದಾಕಿರಾಕಿಲ್ಲ "

ಚೆನ್ನಿ ಕತ್ತು ಕೊಂಕಿಸಿ ಅಗಲವಾದ ಕಣ್ಣನ್ನು ಮತ್ತೂ ಅಗಲವಾಗಿ ತೆರೆದು ತಾಯಿಯನ್ನು ನೋಡಿದಳು.

"ಅವ್ವಾ, ನಿಂಗೇನೂ ತಿಳ್ಯಾಕಿಲ್ಲ. ಅವ್ನೋರು ಮೈತೊಳ್ಕೊಂಡು ಬರೀಟವಲ್ನ ಇಂಗೆ ಕಟ್ಕೊಂಡು ಬರ್ತಾರೆ. ರಾಯ್ರು ಅಲ್ಲೇ ಇರ್ತಾರೆ...!

ಆವ್ರೇ ಅಂಗಾದ್ಮೇಲೆ ಇನ್ನೇನವ್ವಾ? ನೀನು ಎಣ್ಣು ಎಂಗ್ಸು. ನಿನ್ಮುಂದೆ ತಾನೇ ನಾವ್ಬಂದಿದ್ದು!"

ಸಿದ್ದವ್ವ ಹಣೆ ಬಡಿದುಕೊಂಡಳು

"ಸೀ ರೋನಾರ ಏಳು ಅದೆಲ್ಲಾ ನಾಗರೀಕತೆ ಅಲ್ಲವ್ವಾ! ಸದ್ಯ ನಿಂಗೊಂದು ಗಂಡು ಉಡ್ಗ ಲಗ್ನ ಮಾಡಿದ್ರೆ ನಂಗೆ ಸಾಕು ನಿಸೂರಾಗಿ ಮನಗ್ತೀನಿ"

ಚೆನ್ನಿಗೆ ಮಾತಿನ ಮೇಲೆ ಗಮನವಿಲ್ಲ ಅವಳು ತನ್ನ ಮುರುಕು ಪೆಟ್ಟಿಗೆಯಿಂದ ಹಾಕಿಕೊಳ್ಳಲು ಬಟ್ಟೆ ತೆಗೆದುಕೊಳ್ಳುತ್ತಿದ್ದಳು ಅವ್ವಾವರು ಚಿತ್ರನ ಹುಟ್ಟಿದ ಹಬ್ಬಕ್ಕೆ ಹೊಲಿಸಿಕೊಟ್ಟ ಚೀಟಿಯ ಲಂಗ ತೆಗೆದಳು ಅದಕ್ಕೊಪ್ಪುವ ತೆಳ್ಳಗಿನ ಅರ್ಧ ಸೀರೆಯೊಂದನ್ನು ದಾವಣಿಗಾಗಿ ತೆಗೆದಳು ಮೈಗೆ ಅಂಟಿಕೊಂಡಂತಿರುತ್ತಿದ್ದ ಕಡುನೀಲಿಯ ಅವ್ವಾವ್ರ ತಂಗಿಯ ರವಿಕೆ ತೆಗೆದುಕೊಂಡಳು ಒಂದೊಂದಾಗಿ ಹಾಕಿಕೊಂಡಾದ ಮೇಲೆ ನೆರಗನ್ನು ನಯವಾಗಿ ಎದೆಯ ಮೇಲೆ ಹಾಕಿ ಭುಜವನ್ನು ದಾಟಿ ಬೆನ್ನು ಸುತ್ತಿ ಬಂದು ಸೊಂಟಕ್ಕೆ ಸಿಕ್ಕಿಸುವ ಹಾಗೆ ಹೊದ್ದುಕೊಂಡಳು ಗುಡಿಸಿಲಿನ ಇನ್ನೊಂದು ಮೂಲೆಯಲ್ಲಿದ್ದ ಗೂಡಿನಿಂದ ಶನೇಶ್ವರನ ಪಟದ ಮುಂದಿದ್ದ ಕನ್ನಡಿಯೊಂದನ್ನು ತೆಗೆದುಕೊಂಡಳು ಸಣ್ಣ ಸೀಸೆಯಲ್ಲಿದ್ದ ಕೊಬ್ಬರಿ ಎಣ್ಣೆಯನ್ನು ನಯವಾಗಿ ತಲೆಗೆ ಹಚ್ಚಿಕೊಂಡು ಮುರುಕು ಬಾಚಣಿಗೆಯಿಂದ ತಲೆಯನ್ನು ಬಾಚಿಕೊಂಡು ಗುಂಗುರಾಗಿದ್ದ ಕೂದಲನ್ನೆಲ್ಲಾ ಎತ್ತಿ ಬಾಚಿ ಚಿತ್ರನಿಗೆ ಹಾಕುತ್ತಿದ್ದ ರಿಬ್ಬನ್ನೊಂದರ ತುಂಡೊಂದನ್ನು ಕಟ್ಟಿದಳು ಅವ್ವಾವರ ಮನೆಯಿಂದ ಎಂದೋ ಕದ್ದಿದ್ದ ಕಾಡಿಗೆಯ ಡಬ್ಬಿ ತೆಗೆದು ಕಣ್ಣಿಗೆ ಹಚ್ಚಿಕೊಂಡಳು ಒಂದು ಕಡ್ಡಿ ತೆಗೆದು ಕಾಡಿಗೆಯನ್ನೇ ಉದ್ದವಾಗಿ ಹಣೆಗೆ ಹಚ್ಚಿಕೊಂಡಳು. ಎರಡು ಹುಬ್ಬಿನ ನಡುವೆ ಶನೇಶ್ವರನ ಪ್ರಸಾದವೆಂದು ತಾಯಿ ತೆಗೆದಿಟ್ಟಿದ್ದ ವಿಭೂತಿಯನ್ನು ಹಚ್ಚಿಕೊಂಡಳು

"ಅವ್ವಾ, ಕಾಪಿ ಆಯ್ತಾ?" ಚೆನ್ನಿಯ ಪ್ರಶ್ನೆಗೆ ಉತ್ತರಕೊಡಲು ಸಿದ್ದವ್ವ ಅಲ್ಲಿರಲಿಲ್ಲ ಹಿತ್ತಲಿಗೆ ಹೋಗಿರಬೇಕೆಂದುಕೊಂಡಳು.

ಗುಡಿಸಿಲ ಗೋಡೆಗ ತಗಲಿ ಹಾಕಿದ್ದ ಹಸಿರು ಬಣ್ಣದ ಚೀಲವೊಂದನ್ನು ತೆಗೆದುಕೊಂಡಳು ಪೆಟ್ಟಿಗೆಯಿಂದ ತನ್ನ ಬಟ್ಟೆಗಳನ್ನೆಲ್ಲಾ ತೆಗೆದು ಮಡಿಸಿ

ಚೀಲದೊಳಗೆ ತುರುಕಿದಳು ಪುಟ್ಟದೊಂದು ಗಂಟು ತೆಗೆದು ಬಿಚ್ಚಿದಳು ಅದರಲ್ಲಿದ್ದ ಎರಡು ರೂಪಾಯಿ ನೋಟುಗಳೂ, ಒಂದು ಹತ್ತು ರೂಪಾಯಿಯ ನೋಟು ಒಂದು ನೂರರ ನೋಟುಗಳನ್ನು ನೋಡಿ ಮತ್ತೆ ಗಂಟುಕಟ್ಟಿ ಚೀಲದೊಳಗೆ ಹಾಕಿದಳು

ಅಷ್ಟರಲ್ಲಿ ಸಿದ್ದವ್ವ ಒಳಗೆ ಬಂದಳು

"ಆಗ್ಲೇ ಆಗೋಯ್ತಾ ? ತಾಳು ಒಂದೆಲ್ಡು ನಿಮ್ಸ ಕಾಫಿ ಕಾಯ್ಸಿ ಕೊಟ್ಬುಡ್ತೀನಿ " ಒಲೆಯ ಮೇಲಿಟ್ಟಿದ್ದ ನೀರಿನ ಪಾತ್ರೆಯ ಹತ್ತಿರ ನಡೆದಳು ಕೈಯಲ್ಲಿ ಚೀಲ ಹಿಡಿದು ಬಂದು ಎದುರಿಗೆ ನಿಂತ ಮಗಳನ್ನು ಕಂಡು ಸಿದ್ದವ್ವನ ಮನಸ್ಸು ಆಲೋಚನೆಗೀಡಾಯಿತು ತನಗಿಂತ ಒಂದು ಗೇಣು ಉದ್ದವಿದ್ದ ತನಗಿಂತ ಹೆಚ್ಚಾಗಿ ತಿಳಿವಳಿಕೆ ಇದ್ದ ಮಗಳಿಗೆ ಹೇಳುವುದಕ್ಕೆ ಅವಳ ನಾಲಿಗೆ ಅನುಮಾನಿಸಿತು ಕೈಗೆ ಕಾಫಿಯ ಹಿತ್ತಾಳೆ ಲೋಟ ಕೊಡುತ್ತಾ ಹೇಳಿದಳು

"ಇದ್ಯಾಕೆ ಚೀಲ ಹೊತ್ಕೊಂಡಿದೀ ! ಏಟ್ಟಿನಾ ಊರ್ಗ್ಹೋತಿಯ ? ನಿನ್ನ ಎಲ್ಲಾ ಸಾಮಾನೂ ತೊಗೊಂಡಿದೀಯಾ ಯೆಂಗೆ ?"

ಕಾಫಿ ಕುಡಿಯುತ್ತ ಚೆನ್ನಿ ಉತ್ತರಿಸಿದಳು. "ಅದ್ಯಾಕವ್ವಾ ಎಲ್ಲಕ್ಕೂ ಅಡ್ಡ ಮಾತ್ಯೇಳ್ತಿ ? ಅವ್ವಾವ್ರ ಜೊತೆ ಓಗ್ತಾ ಇವ್ನಿ ಹೆಂಗೋ ಯೇನೊ ಎಲ್ಲಕ್ಕೂ ನೀ ಯಾಕೆ ಇಂಗೆ ತಲೆ ಕಡಿಸ್ಕಂತೀ ? ನಾಯೇನು ಎಳೇ ಮಗೂನಾ ?"

ಸಿದ್ದವ್ವನ ಮಾತು ಗಂಟಲಲ್ಲೇ ಉಳಿಯಿತು. ಚೆನ್ನಿ ಮಗುವಾದಾಗ ತಾನೆಷ್ಟೋ ಹಾಯಾಗಿದ್ದುದುಂಟು ಬೆಳೆದು ನಿಂತ ಚೆನ್ನಿ ಅವಳಿಗೆ ಒಂದು ಸಮಸ್ಯೆಯಾಗಿದ್ದಳು ಕಾಫಿ ಕುಡಿದ ಲೋಟವನ್ನು ತಾಯಿಯ ಕೈಗಿತ್ತು ಚೆನ್ನಿ ತಾಯಿಯ ಮುಖ ನೋಡಿ ನಕ್ಕಳು

"ಸುಮ್ನೆ ಇಲ್ಲದ್ದನ್ನ ಯೋಚ್ನೆ ಮಾಡಿ ತಲೆ ಕೆಡಿಸ್ಕೋಬ್ಯಾಡ. ಯಾವಾಗ ಬತ್ತೀನಿಂತ ಕಾಜ್ಗ ಯಾರ್ಕೈಲಾದ್ರೂ ಆಕಸ್ತೀನಿ ಬರ್ಲಾ ? ಒತ್ತಾಯ್ತದೆ ಅವ್ರೆಲ್ಲಾ ಕಾಯ್ತಾ ಇರ್ತಾರೆ.. "

ಸಿದ್ದವ್ವ ಮಗಳನ್ನು ತಲೆಯಿಂದ ಕಾಲಿನವರೆಗೆ ನೋಡಿದಳು ಮಗಳು ತನಗೆ ಮೋಸ ಮಾಡುತ್ತಿಲ್ಲ ತಾನೆ ?

"ನಾನೂ ಅಷ್ಟು ದೂರ ಬತ್ತೀನಿ. ಅಂಗೆ ಅವ್ವಾವ್ರತಾವ ನಿನ್ನ ಸರೀಕೆ ನೋಡ್ಕೊಂತ ಯೇಳ್ಬಿಟ್ರೆ ನಂಗೆ ಆಯಾಗಿರುತ್ತೆ....ನಡಿ "

ಚೆನ್ನಿ ನಿಟ್ಟುಸಿರಿಟ್ಟಳು.

"ಅವ್ವಾ ನಿಂಗೆ ಏನೇಳ್ಳಿ ಯೇಳು, ನೀನು ಅಮ್ಮಾವ್ರ ಅತ್ರ ಬಂದು ನನ್ನ ಮಗಳ್ನ ಸರ್‍ಯಾಗಿ ನೋಡ್ಕೊಳ್ಳೀಂತ ಯೇಳಿದ್ರೆ ಅವ್ರು ಏನನ್ಕೊಂತಾರೆ ? ನಾಲ್ಕು ವರ್ಷದಿಂದ ನಂಗೇನಾರಾ ಕೆಟ್ಟದ್ದು ಅಂದ್ಕೊಂಡಿದ್ದಾರಾ ? ಮಾಡಿದ್ದಾರಾ ? ಅದೆಲ್ಲಾ ಸಂದಾಕಿರೋಕಿಲ್ಲ, ನಿಂಗೆ ನನ್ನ ಬಿಟ್ಟಿರೋಕಾಗಲ್ಲಾಂತ ಕಾಣಸ್ತೈತೆ. ಅದ್ಕೇ ಅಂಗಾಡೀಯ ! ನಾನೇನು ಊರು ಬಿಟ್ಟು, ನಿನ್ಬಿಟ್ಟು ಓಡೋಗ್ತಾ ಇವ್ನಾ ?"

ಸಿದ್ದಮ್ಮ ಮಗಳ ಮಾತು ಕೇಳಿ ಸುಮ್ಮನಾದಳು ಹೌದು, ತಾನು ನಾಲ್ಕು ವರ್ಷದ ಕೆಳಗೆ ಅಮ್ಮಾವರ ಮನೆಯಲ್ಲಿ ಮಗಳನ್ನು ಕೆಲಸಕ್ಕೆ ಸೇರಿಸಿದಾಗಿನಿಂದ ಎಷ್ಟು ಅಕ್ಕರಯಿಂದ ನೋಡಿಕೊಂಡಿದ್ದರು ! ಐದನೇ ತಾರೀಖಿಗೆ ಸರಿಯಾಗಿ ಸಂಬಳ ಕೊಟ್ಟು ಕಳಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಚೆನ್ನಿಯ ಕೈಲಿ ತನಗೂ ಏನಾದರೂ ಕಳಿಸಿ ಕೊಡುತ್ತಿದ್ದರು

"ಒತ್ತೀನಿ ಕಾದಿರ್‍ತಾರೆ" ಚೆನ್ನಿ ಸುಮ್ಮನೆ ನಿಂತಿದ್ದ ಸಿದ್ದಮ್ಮನನ್ನು ದಾಟಿ ಬಾಗಿಲು ತೆರೆದು ಹೊರಗೆ ನಡೆದಳು

* * * *

ಮುಂಜಾನೆಯ ತಂಗಾಳಿ ಚೆನ್ನಿಯ ಮೇಲೆ ಬೀಸುತ್ತಿತ್ತು. ಬೇಗ ಬೇಗ ಹೆಜ್ಜೆ ಹಾಕಿದಳು ಆತಂಕದಿಂದ ಅತ್ತ ಇತ್ತ ತಿರುಗಿ ನೋಡುತ್ತಾ ನಡೆದಾಗ ದಾರಿಯಲ್ಲಿ ಕಾಣದೆ ಸಗಣಿಯ ಮೇಲೆ ಕಾಲಿಟ್ಟಳು

"ಥೂ ಇದ್ರ ಮನೆ ಆಳಾಗ !" ಎಂದುಕೊಂಡು ಕಾಲಿಗೆ ಮೆತ್ತಿಕೊಂಡಿದ್ದ ಸಗಣಿಯನ್ನು ರಸ್ತೆಯ ಪಕ್ಕದಲ್ಲಿದ್ದ ಹುಲ್ಲಿಗೆ ಮೆತ್ತಿ ಒರೆಸಿಕೊಂಡಳು

ಅವಳು ಅರಳಿಕಟ್ಟೆಯ ಬಳಿ ಬಂದಾಗ ಮುಂಬೆಳಗು ಹೊನ್ನಾಗಿತ್ತು ಕಟ್ಟೆಯ ಮೆಟ್ಟಿಲು ಹತ್ತಿ ಕುಳಿತುಕೊಂಡಳು ಕೈಲಿದ್ದ ಚೀಲವನ್ನು ತನ್ನ ಪಕ್ಕದಲ್ಲಿಟ್ಟುಕೊಂಡಳು. ನಡೆದು ಬಂದು ಕೊಂಚ ಬೆವರಿದ್ದ ಮುಖವನ್ನು ತನ್ನ ಸೆರಗಿನಿಂದ ಒರೆಸಿಕೊಂಡಳು ಇನ್ನೇನು ಬರಬಹುದು. ಬೆಳಗ್ಗೆ ಅವರಿಗೆ ಇಷ್ಟು ಹೊತ್ತಿಗೆ ಎಲ್ಲಿ ಆಗುತ್ತೆ ಗಲ್ಲಕ್ಕೆ ಕೈ ಕೊಟ್ಟು ಕುಳಿತಳು. ತಾನು

ಮಾಡುತ್ತಿರುವುದು ಸರಿಯೆ ? ತಾನು ಹೇಗಿದ್ದವಳು ಹೇಗಾಗಿದ್ದೇನೆ ! ಅವಳ ಮನಸ್ಸು ನಾಲ್ಕು ವರ್ಷಗಳ ಹಿಂದಿನದನ್ನು ಜ್ಞಾಪಿಸಿಕೊಂಡಿತು ಇಂದು ಅಂದಿನ ಹಾಗಲ್ಲ 'ಇಂದು ಎಲ್ಲರಂತೆ ನಾಗರಿಕಳು.

ತಾಯಿಯ ಸೆರಗಿನ ಹಿಂದ ನಿಂತಿದ್ದ ತಾನು ಹರಕು ಕೆಂಪು ಲಂಗ, ನೀಲಿ ರವಿಕೆ ಹಾಕಿಕೊಂಡು, ಹರಳೆಣ್ಣೆ ಹಾಕಿ ಬಾಚಿ ಬಿಗಿಯಾಗಿ ಒಂದು ಪುಟ್ಟ ಜಡೆ ಹೆಣೆಸಿಕೊಂಡು, ತನಗೆ ಯಾವಾಗಲೂ ಇರುತ್ತಿದ್ದ ನೆಗಡಿಯಿಂದ ಮೂಗೊರೆಸಿ ಕೊಂಡು ನಿಂತಿರಲಿಲ್ಲವೆ ? ಅಮ್ಮಾವರನ್ನು ಮೊದಲ ಬಾರಿಗೆ ನೋಡಿದ ತಾನು ಅವರಿಂದ ಕಣ್ಣು ಕೀಳಲಾರದೆ ನಿಂತಿರಲಿಲ್ಲವೆ ? ಅವರ ಕೈಲಿದ್ದ ಮುದ್ದು ಚಿತ್ರ ಕರ್ಪೂರದ ಬೊಂಬೆಯಂತಿರಲಿಲ್ಲವೆ ? ತನ್ನ ತಾಯಿಗೂ ಅಮ್ಮಾವರಿಗೂ ನಡೆದ ಮಾತುಕತೆ ಇನ್ನೂ ನೆನಪಿನಲ್ಲಿ ಹಸುರಾಗಿಯೇ ಇದೆ

"ಇವ್ಳಾ ನಿನ್ಮಗಳು, ಸಿದ್ದಮ್ಮಾ ? ಎಷ್ಟು ವರ್ಷ ?"

"ಅನ್ನೆಲ್ಡು ವರ್ಷ ಕಣ್ರಾಯಿ. ಬಲು ಪೀಚು ಕನವ್ವಾ ನಾವೇನು ಅಲು ತುಪ್ಪ ಅಕಿ ಸಾಕ್ತೀವಾ ? ನೀವೇ ಕಾಪಾಡ್ಬೇಕು ."

ಅಷ್ಟರಲ್ಲಿ ಲಂಗ ಎತ್ತಿ ತಾನು ಮೂಗು ಒರೆಸಿಕೊಂಡಾಗ ಅಮ್ಮಾವರು ಮುಖ ಸಿಂಡರಿಸಿದರು.

'ಥೂ ಶುದ್ಧ ಅನಾಗರೀಕದ್ದು ! ಏನು ಇಷ್ಟೇನಾ ಬುದ್ಧಿ ಕಲ್ಸಿರೋದೂ ?"

ತಾಯಿ ತನ್ನ ತಲೆ ತಡವಿದ್ದಳು

"ನಾನೂ ಅರೀದ ಮಗಳು ತಾಯಿ, ಅದ್ನೊಂದೊಸಿ ಕಲ್ಸಿ ತಿದ್ಕೊಳ್ಳಿ "

ಹೌದು. ಅಮ್ಮಾವರು ತನ್ನನ್ನು ಎಷ್ಟು ಬಗೆಯಲ್ಲಿ ತಿದ್ದಿದ್ದರು ! ತನಗೆ ಹರಳೆಣ್ಣೆ ಹಾಕುವುದನ್ನು ನಿಲ್ಲಿಸಿ ಒಂದು ಸಣ್ಣ ಬಾಟಲಲ್ಲಿ ಕೊಬ್ಬರಿ ಎಣ್ಣೆ ಕೊಟ್ಟು ಅದನ್ನು ಹಚ್ಚಿ ಬಾಚಿಕೊಳ್ಳುವಂತೆ ಹೇಳಿದ್ದರು ಮೈ ತೊಳೆಯಲು ಸಣ್ಣ ಪುಟ್ಟ ಸೋಪಿನ ಚೂರುಗಳನ್ನು ಕೊಟ್ಟಿದ್ದರು ತಲೆಗೆ ತಾನು ಕಟ್ಟಿ ಕೊಳ್ಳುತ್ತಿದ್ದ ಹುರಿಯನ್ನು ತೆಗೆಸಿ ಚಿತ್ರನ ಹಳೆಯ ರಿಬ್ಬನ್ನುಗಳನ್ನು ಕೊಟ್ಟಿದ್ದರು. ಹರಕು ಲಂಗ ತೆಗೆಸಿ ತಮ್ಮ ಹಳದಿ, ಕೆಂಪು ಬಣ್ಣದ ಒಳಗಿನ ಲಂಗಗಳನ್ನೂ ತಮಗೆ ಚಿಕ್ಕದಾದ ಒಂದೆರಡು ರವಿಕೆಗಳನ್ನೂ ಕೊಟ್ಟು ದಿನ ಬಿಟ್ಟು ದಿನ ಬಟ್ಟೆ ಬದಲಿಸಿ ಬರುವಂತೆ ಹೇಳಿದ್ದರು.

ಮನೇಗೆ ಬರೋವ್ರು—ಹೋಗೋವ್ರು ಜಾಸ್ತಿ. ನಿನ್ನ ಕೊಳಕುತನ ನೋಡಿ ನಗ್ತಾರೆ ಯಾವಾಗ್ಲೂ ಕ್ಲೀನಾಗಿರ್ಬೇಕು ತಿಳೀತಾ? ಯಾವಾಗ್ಲೂ ಹುಬ್ಬು ಗಂಟು ಹಾಕ್ಕೊಂಡು ತಿರ್ಗ್ಬೇಡಾ" ಮಾತಾಡ್ಸಿದ್ರೆ ನಗ್ತಾ ನಗ್ತಾ ಉತ್ತರ ಕೊಡು..." "ಪಾತ್ರೆ ಹೀಗೆ ಬೋರಲು ಹಾಕ್ಬೇಕು..." "ಕಪ್ಪು, ಸಾಸರು ಹೀಗೆ ಹಿಡ್ಕೋಬೇಕು" "ಹಾಸಿಗೆ ಸರಿ ಮಾಡ್ಬೇಕಾದ್ರೆ ಹೀಗೆ ನೀಟಾಗಿ ಕಂಬಳಿ ಮಡಿಸಿ ಹಾಕ್ಬೇಕೂ .." ಪ್ರತಿಯೊಂದು ತರಹದ ಕೆಲಸಕ್ಕೂ ತನ್ನನ್ನು ಸರಿಪಡಿಸಿಕೊಳ್ಳಲಿಲ್ಲವೆ? ತಾನು ಅವರ ಕೈಲಿ ಎಷ್ಟು ಬೇಗ ಬದಲಾದೆ! ತಾನೂ ಅಮ್ಮಾವರ ಹಾಗೇ ಆಗಬೇಕೆಂಬ ಆಕಾಂಕ್ಷೆ ಬಲವಾಗಿ ಬೇರೂರಿರಲಿಲ್ಲವೆ?

ಮಲಗುವ ಮನೆ ಗುಡಿಸಿ, ಒರೆಸಿ ಹಾಸಿಗೆ ಬಟ್ಟೆಗಳನ್ನು ಸರಿಮಾಡುವಾಗ ತಾನೆಷ್ಟು ಬಾರಿ ಮೆತ್ತಗಿನ ಹಾಸಿಗೆಯನ್ನು ಮತ್ತೆ ಮತ್ತೆ ಮುಟ್ಟಿ ನೋಡುತ್ತಿರಲಿಲ್ಲ! ಅವರು ಹೊದೆಯುವ ಕಂಬಳಿಯನ್ನು ಕೆನ್ನೆಗೊತ್ತಿಕೊಂಡು ಅದರ ಬಿಳುಪನ್ನು ನೋಡಿರಲಿಲ್ಲ ಅವಸರದಲ್ಲಿ ಎದ್ದು ಹೋಗುವಾಗ ನೆಲದ ಮೇಲೆ ಹಾಕಿರುತ್ತಿದ್ದ ರಾತ್ರಿ ಉಡುಪಿನ ಮೃದುತ್ವ, ಅದನ್ನು ಆವರಿಸಿದ್ದ ಯಾವುದೋ ಹಿತವಾದ ಸುವಾಸನೆ ಅಲ್ಲೇ ಬೀರುವಿನ ತುಂಬ ಇದ್ದ ಬಣ್ಣಬಣ್ಣದ ಸೀರೆ ರವಿಕೆಗಳ ಮೇಲೆ ಆಸೆಯಿಂದ ಕಣ್ಣಾಡಿಸಿರಲಿಲ್ಲವೆ ತಾನು? ಕಾಲಿಗೆ ಹಾಕುತ್ತಿದ್ದ ಎಲ್ಲಾ ನಮೂನೆಯ ಚಪ್ಪಲಿಗಳನ್ನೂ ಅಮ್ಮಾವರು ಇಲ್ಲದಿದ್ದಾಗ ಹಾಕಿಕೊಂಡು ಓಡಾಡಿರಲಿಲ್ಲವೆ? ಕನ್ನಡಿಯ ಮುಂದಿದ್ದ ಅಲಂಕಾರ ಸಾಮಗ್ರಿಗಳ ಮೇಲೆ ಆಸೆಯಿಂದ ಕೈಯಾಡಿಸಿರಲಿಲ್ಲವೆ? ಅಮ್ಮಾವರು ಹಾಕಿಕೊಳ್ಳುವಾಗ ಅಲ್ಲಲ್ಲಿ ಚೆಲ್ಲುತ್ತಿದ್ದ ಪೌಡರನ್ನು ನಯವಾಗಿ ಬೆರಳಲ್ಲಿ ಎತ್ತಿಕೊಂಡು ಮುಖಕ್ಕೆ ಹಚ್ಚಿಕೊಳ್ಳುತ್ತಿರಲಿಲ್ಲವೆ?

ತಾನು ಕಲಿಯದಿದ್ದದ್ದೇನು? ನೋಡದಿದ್ದದ್ದೇನು? ಮಾಡದಿದ್ದುದು ಏನು? ಒಮ್ಮೆ ಬೆಳಗ್ಗೆ ಅಷ್ಟು ಹೊತ್ತಿಗೇ ಬಂದಾಗ ಮಲಗುವ ಮನೆಯಲ್ಲಿ ತಾನು ಕಂಡದ್ದಾದರೂ ಏನು! ಅಮ್ಮಾವರೂ ರಾಯರೂ ಇಬ್ಬರೇ.. ಥೂ, ತಾನು ಹಾಗೆ ಒಳಗೆ ನುಗ್ಗಬಾರದಿತ್ತು. ತಾನು ಬಂದದ್ದು ಕಂಡು ಅಮ್ಮಾವರು ಚಡಪಡಿಸಿ ಏಳಲಿಲ್ಲವೆ? ಅನಂತರ ತಾನೊಬ್ಬಳೇ ಇದ್ದಾಗ ತನ್ನನ್ನು ಗದರಿಸಲಿಲ್ಲವೆ? "ಬಾಗಿಲು ಬಡಿಯದೆ, ತೆಗೆದಿದ್ದರೂ ಹಾಗೆ ಒಳಗೆ ಬರಬಾರದು"

ಪ್ರತಿದಿನ ರಾಯರು ಆಫೀಸಿಗೆ ಹೊರಡುವ ಮುನ್ನ ಅಮ್ಮಾವರನ್ನು

ಎಲ್ಲಿದ್ದರೂ ಕದ್ದು ಮುತ್ತಿಡುತ್ತಿದ್ದುದನ್ನು ತಾನು ಕಂಡಿರಲಿಲ್ಲವೆ ? ಒಮ್ಮೊಮ್ಮೆ ರಾಯರು ಮನೆಗೆ ತರುತ್ತಿದ್ದ ಬಾಟಲುಗಳನ್ನು ತಾನೇ ಒಳಗಿಡುತ್ತಿರಲಿಲ್ಲವೆ ? ಸಂಜೆ ಲೋಟಗಳನ್ನು ಮುಂದಿರಿಸಿಕೊಂಡು ಅಮ್ಮಾವರೂ ರಾಯರೂ ನಗುತ್ತಾ ಮಾತಾಡುತ್ತಾ ಬಾಟಲಿನಿಂದ ಸುರಿದುಕೊಂಡು ಕುಡಿಯುತ್ತಿರಲಿಲ್ಲವೆ ? ಹಾಗೇ ಅಮಲೇರಿದಾಗ ರಾಯರು ಅಮ್ಮಾವರ ಮೈ ಸವರುತ್ತಿರಲಿಲ್ಲವೆ ? ಥೂ ! ತಾನದನ್ನೆಲ್ಲ ನೋಡಬಾರದಾಗಿತ್ತು. ಆದರೆ ಪುಟ್ಟ ಚಿತ್ರ ಅವರ ಬಳಿ ಹೋಗದಂತೆ ತಾನು ನೋಡಿಕೊಳ್ಳಬೇಕಿತ್ತು. ಅವರು ಮುಗಿಸಿದ ಮೇಲೆ ಮಲಗಲು ನಡೆದಾಗ ತಾನು ಬಾಟಲನ್ನೂ ಲೋಟಗಳನ್ನೂ ತೊಳೆಯುವಾಗ ಅದರ ತಳದಲ್ಲಿ ಮಿಕ್ಕಿರುತ್ತಿದ್ದುದನ್ನು ಬಾಯಿಗೆ ಸುರಿದುಕೊಂಡು ರುಚಿನೋಡಿ ಹೇಸಿಕೊಳ್ಳುತ್ತಿರಲಿಲ್ಲವೆ ? ಅನಂತರ ಚಿತ್ರನನ್ನು ಪುಟ್ಟ ರೂಮಿನ ಪುಟ್ಟ ಮಂಚದ ಮೇಲೆ ಮಲಗಿಸಿ ಮುಚ್ಚಿದ ಬಾಗಿಲ ಬಳಿ ಕೂಗಿ ಹೇಳಿ ಮನೆಗೆ ಹೋಗುತ್ತಿರಲಿಲ್ಲವೆ ?

ನಾಲ್ಕು ವರ್ಷಗಳಲ್ಲಿ ಎಷ್ಟು ಬದಲಾವಣೆ! ಮೊದಮೊದಲು ಅಚ್ಚರಿಗೊಳ್ಳುತ್ತಿದ್ದ ತಾನು ಈಗ ತನ್ನ ಪರಿಸರಕ್ಕೆ ಹೊಂದಿಕೊಂಡಿರಲಿಲ್ಲವೆ ? ಮನೆಗೆ ಆಗಾಗ ಬರುತ್ತಿದ್ದ ನೆಂಟರೂ, ಸ್ನೇಹಿತರೂ, ಗಂಡಸು ಹೆಂಗಸೆಂಬ ಭೇದವಿಲ್ಲದೆ ಬೆರೆಯುತ್ತಿದ್ದ ರೀತಿನೀತಿಗಳನ್ನು ಕಂಡೂಕಾಣದಂತೆ ಸುಮ್ಮನಿರುತ್ತಿರಲಿಲ್ಲವೆ ? ತನಗೆ ಅದೆಲ್ಲಾ ಈಗ ಹಳೆಯದು. ತಾನೂ ಬದಲಾಯಿಸಿರಲಿಲ್ಲವೆ ? ತಾನು ಕೆಲಸಕ್ಕೆ ಸೇರಿದ ಹೊಸತರಲ್ಲಿ ತಂದುಹಾಕಿದ್ದ ಕೆಂಪು ದಾಸವಾಳದ ಕಡ್ಡಿ ಈಗ ಗಿಡವಾಗಿ ಅಲ್ಲಲ್ಲಿ ಮೊಗ್ಗುಗಳನ್ನು ಬಿಟ್ಟಿರಲಿಲ್ಲವೇ ? ತಾನೂ ಬೆಳೆದಿರಲಿಲ್ಲವೇ ? ತನಗೆ ತಾಯಿ 'ಗುಡ್ಲು ಹಾಕಿ ಹದಿನೈದು ದಿನ ಕೆಲಸಕ್ಕೆ ಕಳುಹಿಸದಿದ್ದಾಗ ತಾಯಿಯ ಮೇಲೆ ರೇಗಿರಲಿಲ್ಲವೆ? ಅಮ್ಮಾವರ ಮನೆಯ ರುಚಿರುಚಿಯಾದ ತಿಂಡಿ, ಊಟ ಆಗಾಗ ದೊರಕುತ್ತಿದ್ದ ಹಳೆಯ ಲಂಗ, ರವಿಕೆ ಸೀರೆಗಳಿಂದ ತಾನೂ ಅರಳಿರಲಿಲ್ಲವೆ ? ಆಗಾಗ ತಾಯಿಯನ್ನು ಗೋಗರೆದು ಸಿನಿಮಾ ನೋಡಲು 'ಟೆಂಟ್'ಗೆ ಹೋದಾಗ ಅಲ್ಲಿಗೆ ಬರುತ್ತಿದ್ದ ಗಂಡು ಹುಡುಗರೂ, ಪುಂಡರೂ ತನ್ನ ಕಡೆ ನೋಡಿ ನಕ್ಕು ಕಣ್ಣು ಹೊಡೆಯುತ್ತಿರಲಿಲ್ಲವೆ ?...

* * * *

ಚೆನ್ನಿ ಬೇಸರದಿಂದ ಆಕಳಿಸಿದಳು. ತಾನು ಬಂದು ಎಷ್ಟು ಹೊತ್ತಾ

ಯಿತು? ಇನ್ನೂ ಬರಲಿಲ್ಲವೆ? ಪುಟ್ಟ ಪುಟ್ಟ ಮಕ್ಕಳು ಸ್ಲೇಟು, ಬಳಪ, ಪುಸ್ತಕ ಹಿಡಿದು ಸ್ಕೂಲಿನ ಕಡೆಗೆ ಹೊರಟಿದ್ದವು ಬಸ್ಸು, ಕಾರುಗಳ ಓಡಾಟ ಜಾಸ್ತಿಯಾಗಿತ್ತು. ಇದೇನು ಇನ್ನೂ ಬರಲಿಲ್ಲ? ಇಷ್ಟು ಹೊತ್ತಿಗೆ ಅಮ್ಮಾವರು ಎದ್ದು ತನ್ನ ಬರುವಿಗಾಗಿ ಕಾಯುತ್ತಿರಬಹುದು, ಅವರು. ತಾನು ಹೀಗೆ ಮಾಡುವೆನೆಂದು ಎಂದೂ ತಿಳಿದಿರುವುದಿಲ್ಲ ತಾನೇಕೆ ಹೀಗೆ ಮಾಡಿದೆ!

ಅಂದು ಅಮ್ಮಾವರ ಮನೆಗೆ ಬಂದ ಅವನನ್ನು ಕಂಡು ತನಗೆ ಹೇಗೆ ಹೇಗೋ ಆಗಿತ್ತು. ಅವನು ಹಾಕಿದ್ದ ಬಣ್ಣದ ಹೂವಿನ ಶರಟೂ, ದೊಗಳೆ ಪ್ಯಾಂಟೂ, ಸುರುಳಿಸುರುಳಿಯಾಗಿ ಬಿಡುತ್ತಿದ್ದ ಸಿಗರೇಟಿನ ಹೊಗೆ, ಕೆನ್ನೆಗಳ ಪಕ್ಕದಲ್ಲಿದ್ದ ಉದ್ದ ಕೂದಲು–ಗೀರುಮೀಸೆ–ಕತ್ತಿನವರೆಗೆ ಬಿಟ್ಟಿದ್ದ ತಲೆಯ ಕೂದಲು–ಮಾತಾಡುವಾಗ ಅರೆಕಣ್ಣು ಮುಚ್ಚಿ ನೋಡುತ್ತಿದ್ದ ರೀತಿ, ಇನ್ನೂ ಹರೆಯದಲ್ಲಿ ಕಾಲಿಡುತ್ತಿದ್ದಂತಿಹ್ದ ವ್ಯೈಮಾಟ...

ತಾನು ಒಳಗೆ ಬರುತ್ತಲೂ ಅಮ್ಮಾವರು ಹೇಳಿದ್ದರು. "ನೋಡು ಚೆನ್ನಿ, ಹೊರಗಿನ ರೂಮು ಕ್ಲೀನ್ ಮಾಡಿ ಹಾಸಿಗೆ ಬಟ್ಟೆ ಸರಿಮಾಡು. ಇವರು ಒಂದು ವಾರ ಇಲ್ಲೇ ಇರ್ತಾರೆ. ಅವರ ಸಾಮಾನೆಲ್ಲಾ ರೂಮಿನಲ್ಲಿ ತೆಗೆದಿಡು"

ತಾನು ಲಗುಬಗೆಯಿಂದ ರೂಮು ಸ್ವಚ್ಛಗೊಳಿಸಿ ಅವರ ಸಾಮಾನು ಗಳನ್ನೆಲ್ಲಾ ತೆಗೆದು ರೂಮಿನಲ್ಲಿ ಓರಣವಾಗಿರಿಸಿ ಹೊರಕ್ಕೆ ಬರುತ್ತಿದ್ದಾಗ ಅವನು ತನ್ನೆದುರು ಬಂದು ನಿಂತು ಅರೆಮುಚ್ಚಿದ ಕಣ್ಣಿನಿಂದ ನೋಡಿದ್ದ.

"ನಿನ್ನ ಹೆಸರೇನು? ಮಾದಕವಾದ ಧ್ವನಿ

"ಚೆನ್ನಿ" ತನಗೆ ಹೆಸರು ಹೇಳಲೂ ನಾಚಿಕೆ.

"ನೋಡೂ...ಒಂದಿಷ್ಟು ಕೊಳೆ ಬಟ್ಟೆ ಒಗೆದುಕೊಡ್ತೀಯ?"

"ಉಂ" ಹತ್ತಿರ ಬಂದಿದ್ದ ಅವನಿಂದ ತಾನು ದೂರ ಸರಿದಿರಲಿಲ್ಲವೆ?

"ಬಾ ಕೊಡ್ತೀನಿ." ಅವನು ತನ್ನ ಕೈಚೀಲದಿಂದ ಬಟ್ಟೆಗಳನ್ನು ತೆಗೆದು ಕೊಟ್ಟಾಗ ತಾನು ಅವುಗಳನ್ನೊಯ್ದು, ಸೋಪು ಹಾಕಿ ಉಜ್ಜಿ ಉಜ್ಜಿ ಆಗಸರ ಮನೆಯಿಂದ ಬಂದ ಬಟ್ಟೆಯ ಹಾಗೆ ಮಾಡಿಕೊಟ್ಟಿರಲಿಲ್ಲವೆ? ಸಂಜೆ ಮನೆಗೆ ಹೋಗುವ ಮುನ್ನ ಅವನ ಬಟ್ಟೆಗಳನ್ನು ಮಡಿಸಿ ರೂಮಿನಲ್ಲಿ ಬಾಟಲು,

ಲೋಟ ಹಿಡಿದು ಕುಳಿತಿದ್ದ ಅವನು ತನ್ನ ಕಡೆ ನೋಡಿ ನಕ್ಕ ಜೇಬಿಗೆ ಕೈಹಾಕಿ ಪರ್ಸ್ ತೆಗೆದು ಎರಡರ ಒಂದು ನೋಟನ್ನು ತನ್ನ ಮುಂದೆ ಹಿಡಿದಾಗ ತಾನು ಬೇಡವೆನ್ನುವಂತೆ ತಲೆಯಲ್ಲಾಡಿಸಿದ್ದೆ

"ಪರ್ವಾಗಿಲ್ಲ, ತೊಗೋ, ಏನಾದ್ರೂ ಕೊಂಡ್ಕೊ ಪಾಪ ಎಷ್ಟು ಕಷ್ಟ ಪಟ್ಟು ಬಟ್ಟೆ ಒಗೆದಿದ್ದೀಯ ?"

"ಅಮ್ಮಾವರು ಬೈಯ್ತಾರೆ!" ತನಗರಿವಿಲ್ಲದೆಯೇ ಆ ಮಾತು ಬಂದಿತ್ತು "ಅಮ್ಮಾವರಿಗೆ ಹೇಳಬೇಡ!" ಅವನು ತನ್ನ ಕೈಹಿಡಿದು ಅಂಗೈಯೊಳಗೆ ನೋಟನ್ನು ತುರುಕಿದ್ದ

ಅವನು ಪ್ರತಿದಿನ ಏನಾದರೂ ಕೆಲಸ ಹೇಳುತ್ತಿದ್ದ. ತಾನು ಮಾಡುತ್ತಿದ್ದೆ ಅಮ್ಮಾವರಿಗೆ ಕಾಣದ ಹಾಗೆ ತನ್ನ ಕೈಲಿ ದುಡ್ಡಿಡುತ್ತಿದ್ದ ಅದನ್ನು ಯಾರಿಗೂ ತೋರದೆ ದಾವಣಿಯ ತುದಿನೆರಗಿನಲ್ಲಿ ಗಂಟುಹಾಕಿ ಸೊಂಟದೊಳಗೆ ತುರುಕಿಕೊಂಡು ಮನೆಗೆ ಹೋಗಿ ತಾಯಿ ಮರೆಯಾದಾಗ ಪೆಟ್ಟಿಗೆಯಲ್ಲಿನ ಪುಟ್ಟಗಂಟಿನೊಳಕ್ಕೆ ಸೇರಿಸುತ್ತಿದ್ದೆ. ಅವನು ಹೇಳುವ ಕೆಲಸ ಅಂತಹದೇನೂ ದೊಡ್ಡವಲ್ಲ 'ನನ್ನ ಶೂಸು ಪಾಲಿಶ್ ಮಾಡ್ಕೊಡು' ಬಟ್ಟೆ ಇಸ್ತ್ರಿ ಮಾಡಿಸಿಕೊಂಡು ಬಾ,' 'ಒಂದು ಪ್ಯಾಕ್ ಸಿಗರೇಟು ತೊಗೊಂಬಾ,' 'ಬಟ್ಟೆ ಮಡಿಸಿಡು,' 'ಬಟ್ಟೆ ಒಗೆದುಕೊಡು' ಇಂತಹದ್ದೇ

ಅಂದು ಅಮ್ಮಾವರೂ ರಾಯರೂ ಸಂಜೆ ಸಿನಿಮಾಕ್ಕೆ ಹೊರಟಾಗ ಚಿತ್ರ ಹಠ ಮಾಡಿದ್ದರಿಂದ ಅವಳನ್ನೂ ಕರೆದುಕೊಂಡು ಹೋಗಿದ್ದರು ಅವನು ರೂಮಿನಲ್ಲಿ ಸಣ್ಣಗೆ ಹಾಡು ಗುನುಗುತ್ತಾ ಲೋಟ ಬಾಟಲಿನೊಂದಿಗೆ ಕುಳಿತಿದ್ದ. ಹೊರಡುವ ಮುನ್ನ ಅಮ್ಮಾವರು ತನಗೆ ಹೇಳಿದ್ದರು

"ನೋಡು ಚೆನ್ನಿ.. ಹಾಸಿಗೆ ಹಾಸಿ ಬಿಟ್ಟು, ಚಿತ್ರ ಹರಡಿರುವ ಆಟದ ಸಾಮಾನೆಲ್ಲಾ ತೆಗೆದಿಟ್ಟು ನೀನು ಮನೆಗೆ ಹೋಗು ಮನೇಲಿ ಯಾರೂ ಇರೋಲ್ಲ."

ಅವರತ್ತ ಹೋಗುತ್ತಲೂ ಅವನು ನನ್ನನ್ನು ಕರೆದ

"ಚೆನ್ನಿ, ಓಡಿ ಹೋಗಿ ಒಂದು ಪ್ಯಾಕೆಟ್ ಸಿಗರೇಟು ತೊಗೊಂಡ್ಬಾ." ಅವನಿತ್ತ ದುಡ್ಡಿನಿಂದ ಸಿಗರೇಟು ತಂದಿತ್ತಾಗ ಅವನು ತನ್ನ ಕೈ ಹಿಡಿದ.

"ನಾನು ಕೊಟ್ಟಿದ್ದ ದುಡ್ಡೆಲ್ಲಾ ಏನ್ಮಾಡಿದೆ ?"

"ಅಂಗೇ ಮಡಿಕ್ಕೊಂಡಿವ್ನಿ."

ತಾನು ಅವನ ಕೈಯಿಂದ ಕೊಸರಾಡಿದಾಗ "ಹಂಗೆಲ್ಲಾ ಹಠ ಮಾಡ್ಯಾದರ್ೂ ಇನ್ನೂ ದುಡ್ಡು ಬೇಕಾ ?" ಅವನು ತನ್ನ ಕೈ ಬಿಡದೆ ಕೇಳಿದ್ದ

"ಬ್ಯಾಡ ಈಗಿರಾಪೇ ಸಾಕು ಕೈಬಿಡಿ. ಒತ್ತಾಯ್ತು, ಓಗ್ಬೇಕು !"

ತಾನು ಕೊಸರಾಡಿದಾಗ ಅವನು ನಕ್ಕಿದ್ದ.

'ನಾನು ಏಳಿದ್ದಾಗೆ ಕೇಳು ನಿನಗೆ ಬೇಕಾದ್ದೆಲ್ಲಾ ಕೊಡ್ತೀನಿ....!" ಒಂದೇ ಕೈಯಿಂದ ಲೋಟದಲ್ಲಿದ್ದುದನ್ನು ಗಂಟಲಿಗೆ ಸುರಿದುಕೊಂಡ.

"ಯೇನೂ ಬ್ಯಾಡಾ ಬಿಡಿ " ಅವನು ತನಗೆ ಮಾತಾಡಲು ಬಿಡಲಿಲ್ಲ. ಅವನನ್ನು ಎದುರಿಸಿ ಹೋರಾಡಲೂ ತನಗೆ ಆಗಿರಲಿಲ್ಲ ಅವನೇನೇನು ಆಸೆ ತೋರಿಸಿದ್ದ ಆಗ ! ಅಮ್ಮಾವರದಂತಹದ್ದೇ ಸೀರೆ, ಚಪ್ಪಲಿ, ಸೆಂಟು, ರಾತ್ರಿಯುಡುಪು . ಎಲ್ಲ ! ಅಂದು ಮನೆಗೆ ಹೊರಟಾಗ ತನ್ನ ಕೈಲಿ ಹತ್ತು ರೂಪಾಯಿನ ನೋಟುಗಳಿದ್ದವು

ತೀರ ಹೊತ್ತಾಗಿ ಬಂದಿದ್ದು ಕಂಡು ತಾಯಿ ಕೋಪಗೊಂಡಿದ್ದಳು. 'ಇದೇನು ಈ ಪಾಟಿ ಪೊತ್ತು ? ಯೇನ್ಮಾಡ್ತಿದ್ದೆ ? ಇಂಗೆಲ್ಲಾ ಪೊತ್ತಾಗಿ ಬಂದ್ರೆ ಕೆಲ್ಸ ಬುಟ್ಬುಡೂ ಬೆಳ್ಗೆ ಉಡ್ಗೀರು ಇಷ್ಟೊತ್ತನ್ಕಂಟ ಪೊತ್ಗೆ ಇರಾನಾಂದ್ರೇನು ನೀ ತರಾ ದುಡ್ಡು ಸಾಕು, ನಂಗೆ ನಿನ್ನ ಯೋಚ್ನೇನೂ ಸಾಕು ಮನ್ಯಾಗೇಯಿಟ್ಟು ಬೇಯಿಸ್ಕೊಂಡಿರು. ನಾನೇ ಇನ್ನು ಎಲ್ಡು ಮನೆ ಕೆಲ್ಸಾ ಮಾಡ್ತಂತೀನಿ "

ತನಗಾದುದು ತಾಯಿಗೆ ಹೇಗೆ ತಿಳಿಯಬೇಕು ? ಅವಳಿಗೆ ಗೊತ್ತಾದರೆ ತನ್ನನ್ನು ಸುಮ್ಮನೆ ಬಿಡುವಳೆ ? ತನ್ನ ಬಳಿಯಿರುವ ದುಡ್ಡಿನಿಂದ ಅಮ್ಮಾವರ ಕತ್ತಿನಲ್ಲಿ ಹಾಕಿಕೊಂಡಿರುವಂತಹ ಹವಳ ಮುತ್ತಿನ ಸರ ಬಳೆಯಂಗಡಿಯಿಂದ ತರಬೇಕು ಬಂಗಾರದ್ದು ಇಲ್ಲದಿದ್ದರೂ ಅದೇ ತರಹದ್ದು ಅಂಗಡಿಯಲ್ಲಿ ಎರಡು ರೂಪಾಯಿಗೆ ಸಿಕ್ಕುವುದಿಲ್ಲವೆ ?

ಸಿದ್ದಮ್ಮ ಮಗಳು ಸುಮ್ಮನೆ ನಿಂತಿದ್ದು ಕಂಡು ಮತ್ತೂ ರೇಗಿದಳು. "ಅದ್ಯಾಕೆ ಅಂಗೆ ನನ್ನ ನೋಡ್ತೀಯಾ ? ಯಾಕೀಟೊತ್ತು ಮಾಡ್ದೆ ? ಯಾವನ್ಜೊತೇನಾರ ಓಗಿದ್ಯಾ ಯೆಂಗೆ ?"

ಚೆನ್ನಿ ಬೆಚ್ಚಿದಳು ಕೈ ಬೆರಳುಗಳು ಅವಳ ಸೊಂಟದಲ್ಲಿದ್ದ ಹತ್ತು ರೂಪಾಯಿಗಳತ್ತ ಹೋಯಿತು

"ಯಾಕವ್ವಾ ಅಂಗೆ ಅಂತೀಯಾ ? ಅವ್ಮಾವ್ರು ಮನೀಗೆ ಅದ್ಯಾರೋ ನೆಂಟ್ರು ಬಂದವ್ರೇ, ಅದ್ಕೇ ಈಟೊತ್ತಾಯ್ತು ಅವ್ಮಾವ್ರು ಅಂಗೆಲ್ಲಾ ನನ್ನ ಒಬ್ಬಳ್ನೇ ಕಳಿಸಾಕಿಲ್ಲ ಪಕ್ಕದ್ಮನೇ ಕೆಂಪವ್ನನ ಜೊತೆ ಮಾಡಿ ಕಳ್ಸದ್ರು ಅವಳು ಮೂಲೇಲಿ ತಿರ್ಗಿ ಮನ್ಗೆ ಓದ್ಲು ನಾನಿತ್ತ ಬಂದೆ ಬೇಕಾದ್ರೆ ಕೇಳೋಗೂ ."

ಚೆನ್ನಿಗೆ ಸುಳ್ಳು ನಿರರ್ಗಳವಾಗಿ ಬಂದಿತ್ತು ನಾಳೆ ಕೆಂಪಿಯ ಕೈಗೆ ಒಂದು ರೂಪಾಯಿ ಕೊಟ್ಟರೆ ಸಾಕು, ಅವಳು ತನಗೆ ಬೇಕಾದ ಹಾಗೆ ನಡೆದುಕೊಳ್ಳು ತ್ತಾಳೆ. ಅವಳಿಗೆ ಎಲೆ ಅಡಿಗೆ ಅಷ್ಟು ಕಾಸು ಯಾರು ಕೊಡ್ತಾರೆ ?

* * * *

ಮಾರನೆಯ ದಿನ ತಾನು ಮನೆಗೆ ಹೊರಟಾಗ ದೀಪ ಹಚ್ಚಿತ್ತು ರಸ್ತೆಗೆ ಬಂದಾಗ ಮರದ ಹಿಂದೆ ನಿಂತು ಸಿಗರೇಟು ಸೇದುತ್ತಿದ್ದ ಅವನು ತನ್ನನ್ನು ಹಿಂಬಾಲಿಸಿದ್ದ.

"ಚೆನ್ನಿ ! ನನ್ನ ಬಿಟ್ಟು ಹೋಗ್ಬೇಡಾ .ನೀನು ಎಷ್ಟು ಚೆನ್ನಾಗಿದ್ದೀ ಗೊತ್ತಾ ? ನೀನು ಕೆಲ್ಸಾ ಮಾಡೋಕೆ ಸರಿಯಾಗಿಲ್ಲ ನೀನೇನಿದ್ರೂ ರಾಣಿ ಹಾಗೆ ಇರ್ಬೇಕು ನಾನ್ಹೇಳಿದ್ಹಾಗೆ ಕೇಳು ನೀನು ರಾಣಿ ಹಾಗಿರ್ಬ್ಬೋದು.

ಅವನು ತನ್ನ ಪಕ್ಕಕ್ಕೆ ಬಂದು ಕೈ ಹಿಡಿದಾಗ ತಾನು ದೂರ ಸರಿದಿದ್ದೆ

"ಸುಮ್ಕಿರಿ ಸೋಮಿ. ಯಾರಾರ ಕಂಡಾರು ನಾನು ಮನೀಗೆ ಓಗ್ಬೇಕು. ಒತ್ತಾದ್ರೆ ನಮ್ಮವ್ವ ಬೈಯ್ತಾಳೆ !"

ಅದಕ್ಕುತ್ತರವಾಗಿ ಅವನು ಮೆಲ್ಲಗೆ ನಕ್ಕಿದ್ದ.

"ಬೇಗ ಕಳಿಸ್ತೀನಿ ನೀನು ನಾ ಹೇಳಿದ ಹಾಗೆ ಕೇಳಿದ್ರೆ ಬೇಗ ಹೋಗ್ಬೋದು. ಹಿಂಗೆ ಅಡ್ಡಿ ಮಾಡ್ತಾ ಇದ್ರೆ ನಿಂಗೆ ಲೇಟಾಗುತ್ತೆ ನನ್ಕಂಡ್ರೆ ನಿಂಗೆ ಇಷ್ಟ ಇಲ್ವಾ ? ನಿನ್ನೆ ನಿಂಗೆ ಚೆನ್ನಾಗಿಲ್ಲಿಲ್ವಾ ?"

ತಾನು ಬೆಚ್ಚಿ ನಿಂತಿರಲಿಲ್ಲವೆ ? ಹಿಂದಿನ ದಿನದ ಅನುಭವ ನೆನಸಿ ಕೊಂಡಾಗ ಮೈಯಲ್ಲಿ ರಕ್ತ ಬಿಸಿಯಾಯಿತು. ತಾನು ಅವನು ಹೇಳಿದ ಹಾಗೆ

ಕೇಳಿದರೆ....ಅದರಲ್ಲೇನು ತಪ್ಪು ? ಅಮ್ಮಾವರು ರಾಯರು ಇರಲಿಲ್ಲವೆ ? ತಾನು ನೋಡಿದ ಟೆಂಟ್ ಸಿನಿಮಾದಲ್ಲಿ ನಾಯಕ ನಾಯಕಿ ಹಾಗಿರಲಿಲ್ಲವೆ ? ಅಮ್ಮಾವರ ಮನೆಗೆ ಬರುತ್ತಿದ್ದ ಬಣ್ಣ ಬಣ್ಣದ ಪುಸ್ತಕದಲ್ಲಿ ಏನೆಲ್ಲಾ ಚಿತ್ರಗಳಿದ್ದವು ಗಂಡು ಹೆಣ್ಣು ಅರೆ ಬೆತ್ತಲೆ, ಬೆತ್ತಲೆ !

"ಚೆನ್ನೀ, ಯಾಕೆ ಸಂತೆ ? ನಡಿ.. ಆ ಮಾವಿನ ತೋಪಿನಾಚೆ ಯಾರೂ ಇರೋಲ್ಲ" ಅವನು ಕೈ ಜಿಗುಟಿದಾಗ ಎಚ್ಚೆತ್ತು ಮರು ಮಾತಾಡದೆ ಅವನ ಹಿಂದೆ ಹೋಗಿರಲಿಲ್ಲವೆ ? ತೋಪಿನ ಕತ್ತಲಲ್ಲಿ ತಾನು ಅವನ ಕೈಗೊಂಬೆಯಾಗಿರಲಿಲ್ಲವೇ ? ಅವನೊಡನಿದ್ದಾಗ ಹೊತ್ತು ಹೋದುದೇ ತನಗೆ ತಿಳಿದಿರಲಿಲ್ಲ ಅವನೇ ತನ್ನನ್ನು ಎಚ್ಚರಿಸಿದಲಿಲ್ಲವೆ ? "ಚೆನ್ನಿ ಹೋಗು ತುಂಬಾ ಹೊತ್ತಾಯ್ತು ನಿಮ್ಮ ತಾಯಿ ಬೈಯ್ತಾಳೆ " ತಾನು ಹೋಗುವಾಗ ಮತ್ತೆ ಹತ್ತು ರೂಪಾಯಿಯ ನೋಟುಗಳು

ಅಂದು ಅಷ್ಟು ಹೊತ್ತಾಗಿ ಬಂದಾಗ ಸಿದ್ದಮ್ಮ ಎಂದಿನಂತೆ ರೇಗಿರಲಿಲ್ಲ ಮಗಳ ಕೆದರಿದ ತಲೆ, ಮುದುರಿದ ಬಟ್ಟೆ ನೋಡಿ ನಿಟ್ಟುಸಿರಿಟ್ಟಳು "ಏನವ್ವಾ, ನೆಂಟ್ರು ಯಾವಾಗ ಊರಿಗೋಗ್ತಾರೆ ? ಕೆಂಪಿ ತಾವು ಕೇಳ್ದೆ ಮನೇಲಿ ಸಿಂಗೆ ಬಾಳಕೆಲ್ಸ ಅಂದ್ಲು .ಇಂಗೆ ದುಡಿಸ್ಕಂಡ್ರೆ ನೀನೇನಾಗ್ಬೇಕೂ ಈ ದಪ ಪಸ್ಟ್ ಆಗೋತ್ಲೂವೆ ಕೆಲ್ಸ ಬುಟ್ಬುಡು "

ಹೀಗೆ ಐದಾರು ದಿನಗಳು ಕಳೆದಿದ್ದವು ಅವನು ಕರೆಯುದೆಯೇ ತೋಪಿನ ಬಳಿ ಹೊರಟಾಗ ತಾನು ಮನೆಯಿಂದ ಹೊರಬಿದ್ದು ಅವನ ಹಿಂದೆ ಹೋಗಿರಲಿಲ್ಲವೇ ? ಒಂದು ದಿನ ಅವನು ತಾನು ಹೊರಟಾಗ ಕೈಗೆ ನೂರರ ನೋಟೊಂದನ್ನು ತುರುಕಿ ಕೆನ್ನೆಗೆ ಮುತ್ತಿಟ್ಟಿರಲಿಲ್ಲವೆ ?

"ಚೆನ್ನಿ, ನಿನ್ನ ಬಿಟ್ಟು ನಾನು ಹೇಗಿರಲಿ ? ನಾಳೆ ನಾನು ಊರಿಗೆ ಹೊರಟುಹೋಗ್ತೀನಿ ಏನ್ಮಾಡಲಿ ?"

ಅವನು ಹೊರಟುಹೋದರೆ ತನ್ನ ಗತಿ ? ತನಗೆ ಅವನನ್ನು ಬಿಟ್ಟಿರುವುದೂ ಕಷ್ಟವಲ್ಲವೆ ?

"ನಾನೂ ಬರ್ತೀನೇಳಿ ನಿಮ್ಜೊತೆ....!" ತಾನು ಮೆಲ್ಲನುಸುರಿದಾಗ ಅವನು ತನ್ನನ್ನು ಅಪ್ಪಿದ್ದ

"ನಿಜವಾಗ಼್ೂ ಬರ್ತೀಯಾ ಚೆನ್ನಿ ? ನನ್ನ ಕಂಡ್ರೆ ಅಷ್ಟು ಪ್ರೀತೀನಾ ನಿನ್ಗೆ ?"

ತಾನು ಹೌದೆನ್ನುವಂತೆ ತಲೆಯಲ್ಲಾಡಿಸಿದಾಗ ಅವನು ತಲೆ ಸವರಿದ್ದ.

"ನನ್ನ ಜೊತೆ ಬರ್ತೀ ತಾನೆ? ಅಂದ್ಹಾಗೆ ನಾನು ಕೊಟ್ಟ ದುಡ್ಡು ಏನು ಮಾಡ್ತಿ ?"

"ಅಮ್ಮಾವರ ಸೀರೆ ತರದ್ದೊಂದು ಸೀರೆ ಕೊಂಡ್ಕಂತೀನಿ ಉದ್ದ ಲಂಗ ತೊಗೋತೀನಿ ಅದಷ್ಟು ಮೆತ್ತಗಾಗಿರ್ತೈತೆ ಒಳ್ಗೆರಾದೆಲ್ಲಾ ಕಾಣ್ತೈತೆ... ನಂಗ ಅದ್ನ ಕಂಡ್ರೆ ಬೋ ಇಷ್ಟ"

"ನನ್ಜೊತೆ ಬಂದ್ರೆ ನಿಂಗೆ ಎಲ್ಲಾ ನಾನೇ ತೆಗೆದು ಕೊಡ್ತೀನಿ ನಾಳೆ ಬೆಳಗ್ಗೆ ಅಷ್ಟೊತ್ತಿಗೇ ಊರಿಗೆ ಹೊರಡ್ತಾ ಇದ್ದೀನಿ ಆ ಅರಳಿಕಟ್ಟೆ ಬಳಿ ಬಂದ್ಬಿಡು ನಿನ್ನ ಸಾಮಾನೆಲ್ಲಾ ತಂದ್ಬಿಡು ನೀನು ರಾಣಿ ಹಾಗಿರ್ಬೋದೂ" ಅವನು ಮೈ ಕೊಡವಿ ಎದ್ದು ನಿಂತು ಹೇಳಿದ್ದ

"ಅಂಗೇ ಆಗ್ಲಿ . ಬರ್ತೀನಿ ಅಂಗಾರ ಈ ದುಡ್ಡು ನೀವೇ ಮಡಿಕ್ಕೊಳ್ಳಿ. ನಾಳೀಕೆ ನಾನು ಇಸ್ಕಂತೀನಿ" ನಾನು ದುಡ್ಡು ಅವನ ಕೈಗಿಡಲು ಹೋದಾಗ ಅವನು ನಕ್ಕಿದ್ದ

"ಬೇಡಾ, ಇಟ್ಕೋ ಬೇಕಾದ್ರೆ ನಾಳೇನೂ ನಿಂಗೆ ಕೊಡ್ತೀನಿ. ಅಷ್ಟು ದುಡ್ಡು ಐದು ನಿಮಿಷದಲ್ಲಿ ನಾನು ಖರ್ಚು ಮಾಡ್ತೀನಿ ನೀನೇ ಇಟ್ಕೋ ದುಡ್ಡು ಒಂದ್ಸಲ ಕೊಟ್ಮೇಲೆ ವಾಪಸ್ಸು ಕೊಡ್ಬಾರ್ದು" ಅವನು ಹೊರಟಾಗ ತಾನೇ ಮತ್ತೆ ಹೇಳಿರಲಿಲ್ಲವೆ ? "ನಾಳೀಕೆ ಬೆಳಗ್ಗೆ ಅಸ್ಟೊತ್ಗೇ ಅರಳಿ ಮರದ್ತಾವ ಇರ್ತೀನಿ ." ಅವನು ನಗುತ್ತಾ ಕೈಬೀಸಿ ಹೋಗಿದ್ದ.

ಚೆನ್ನಿ ಮತ್ತೆ ಏರುತ್ತಿದ್ದ ಬಿಸಿಲಲ್ಲಿ ಹಾಯಾಗಿ ಮಲಗಿದ್ದ ರಸ್ತೆಯನ್ನು ನೋಡಿದಳು ಹೊಟ್ಟೆಯಲ್ಲಿ ಹಸಿವಿನಿಂದ ಸಂಕಟ ಏರುತ್ತಿತ್ತು ತಾಯಿಯ ಕೈಲಿ ರೊಟ್ಟಿಯಾದರೂ ಮಾಡಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಬೆಳಗ್ಗೆ ಅಷ್ಟು ಹೊತ್ತಿಗೇ ಬರುತ್ತೇನೆಂದವನು ಇನ್ನೂ ಏಕೆ ಬರಲಿಲ್ಲ ? ಓಡಾಡುವ ಬಸ್ಸು ಕಾರು, ಸೈಕಲ್ಲು, ಕೆಲಸಕ್ಕಾಗಿ ಹೊರಟ ಜನರು ಬಿಟ್ಟು ರಸ್ತೆಯಲ್ಲಿ ತನಗಾರೂ ಬೇಕಾದವರು ಇಲ್ಲ ತಾನೂ ಹೀಗೆ ಕೆಲಸಕ್ಕೆ ಹೋಗಬೇಕಿತ್ತು. ಒಂದು ದಿನವೂ ಕೆಲಸಕ್ಕೆ ತಪ್ಪಿಸಿಕೊಂಡಿರಲಿಲ್ಲ. ಅಮ್ಮಾವರು ತನಗಾಗಿ

ಕಾಯುತ್ತಿರಬಹುದು ಪುಟ್ಟಿ ಚಿತ್ರ ಇಷ್ಟು ಹೊತ್ತಿಗೆ ಅಳುತ್ತಿರಬಹುದು ಅದು ತನ್ನನ್ನು ಎಷ್ಟು ಹಚ್ಚಿಕೊಂಡಿದೆ! ತನ್ನ ಮುಖ ನೋಡಿದರೆ ಅಳು ನಿಲ್ಲಿಸುತ್ತಿತ್ತು ಅಮ್ಮಾವರು ಚಿತ್ರನ ಹುಟ್ಟಿದ ಹಬ್ಬಕ್ಕೆ ಹೊಸ ಲಂಗ ಹೊಲೆಸಿಕೊಡುತ್ತೇನೆಂದು ಹೇಳಿದ್ದರು ತಾಯಿ ಮುಂದಿನ ತಿಂಗಳು ತಮ್ಮೂರಿನ ಜಾತ್ರೆಗೆ ಕರೆದೊಯ್ಯುತ್ತೇನೆಂದಿದ್ದಳು ತಾಯಿಗೆ ತನ್ನನ್ನು ಕಂಡರೆ ಎಷ್ಟು ಪ್ರೀತಿ! ಬೆಳಗ್ಗೆ ತನ್ನೊಂದಿಗೇ ಎದ್ದು ಕಾಫಿ ಕಾಯಿಸಿ ಕೊಟ್ಟಿರಲಿಲ್ಲವೇ? ರೊಟ್ಟಿ ಮಾಡಿಕೊಡುತ್ತೇನೆಂದು ಹೇಳಿರಲಿಲ್ಲವೆ?

ಚೆನ್ನಿ ಮತ್ತೆ ರಸ್ತೆಯ ಕಡೆ ನೋಡಿದಳು. ಧೂಳು ತುಂಬಿದ ರಸ್ತೆ ನಿರ್ಜನವಾಗಿತ್ತು. ಅರಳಿಯ ಮರದ ನೆರಳು ಅವಳ ಸುತ್ತ ಬಲೆಯಂತೆ ಹರಡಿತ್ತು ಚೀಲದೊಳಗೆ ದುಡ್ಡಿನ ಪುಟ್ಟ ಗಂಟು ಮುಟ್ಟಿ ನೋಡಿದಳು ಅದೇಕೋ ಅದರ ಮೇಲಿನಾಸೆ ನೆನ್ನೆಯಿದ್ದಷ್ಟು ಈಗಿಲ್ಲ ಕೈಗೆ ಚೀಲ ತೆಗೆದು ಕೊಂಡಳು. ಅವನು ಬರುವ ಸುಳಿವಿಲ್ಲ ಅವನು ಹೊರಟುಹೋಗಿರಬೇಕು ಮೆಲ್ಲಗೆ ಮೆಟ್ಟಿಲುಗಳಿಳಿದು ರಸ್ತೆಗೆ ಬಂದಳು ಅವನಿಗೇನಾಯಿತು? ಬೇಕಂತಲೇ ಬರಲಿಲ್ಲವೆ? ತಾಯಿ ಅದೊಂದು ದಿನ ತನಗೆ ಹೇಳಿರಲಿಲ್ಲವೆ? ಯೆಂಗ್ಸು ಬುದ್ಧಿ ಕೈಗೆ ಮಡಿಕ್ಕೋಬೇಕು...ಆಸೆ-ಮೋಸ ಮಾಡ್ತಾರೆ ಅದ್ಕೆಲ್ಲಾ ಬಗ್ಬಾರ್ದು ಕಣವ್ವ!' 'ಗಂಡಸರ್ತಾವ ಅಂಗೆಲ್ಲಾ ನಗ್ತಾ ನಗ್ತಾ ಮೈ ಕುಣಿಸ್ಕಂಡು ಮಾತಾಡ್ಬಾರ್ದು! ಅವ್ರ ಬುದ್ಧಿ ಒಂದಪ ಇದ್ದಂಗೆ ಇನ್ನೊಂದಪ ಇರಾಕಿಲ್ಲ.' 'ಯೆಂಗ್ಸು ಮರ್‍ಯಾದೆ ಬಿಟ್ಟಿರಾದೂ ನಾಗರೀಕತೆ ಅಲ್ಲವ್ವಾ'

ರಸ್ತೆಯು ಅವಳ ಮುಂದೆ ಮಸಕು ಮಸಕಾಗಿ ಕಂಡಿತು ಕಣ್ಣಲ್ಲಿ ಬಂದ ನೀರನ್ನು ಲಂಗ ಎತ್ತಿ ಒರೆಸಿಕೊಂಡಳು ಮೂಗಿನಲ್ಲಿ ಬಂದುದನ್ನು ಹಿಂಗೈನಿಂದ ಒರೆಸಿಕೊಂಡಳು. ನಿಧಾನವಾಗಿ ಮನೆಯ ಕಡೆ ಹೆಜ್ಜೆ ಹಾಕಿದಳು.

ಹಿಟ್ಟನ್ನು ಕವೆಗಡ್ಡಿಯಿಂದ ತಿರುವುತ್ತಿದ್ದ ಸಿದ್ದಮ್ಮ ಬಾಗಿಲಲ್ಲಿ ಮಗಳು ನಿಂತಿದ್ದನ್ನು ಕಂಡು ಅಚ್ಚರಿಗೊಂಡಳು.

"ಓ....ಇದೇನವ್ವಾ ಬಂದ್ಬುಟ್ಟೆ? ಊರಿಗೆ ಓಗ್ನಿಲ್ವಾ?"

"ತಾನು ಕೇಳಿದ ಪ್ರಶ್ನೆಗೆ ಮಗಳು ಉತ್ತರ ಕೊಡದೆ ಕಣ್ಣಲ್ಲಿ ನೀರು ತಂದುಕೊಂಡಾಗ ಮತ್ತೂ ಅಚ್ಚರಿಗೊಂಡು ಹಿಟ್ಟಿನ ಮಡಕೆಯನ್ನು ಕೆಳಗಿಳಿಸಿ

ಮಗಳ ಹತ್ತಿರ ಬಂದಳು "ಇದ್ಯಾಕವ್ವಾ ಅಳ್ತೀ? ಅವ್ರೇನಾದ್ರೂ ಅಂದ್ರಾ?"

ಚೆನ್ನಿ ತಾಯಿಗೆ ತೆಕ್ಕೆಬಿದ್ದಳು "ನಿನ್ನ ಬಿಟ್ಟಿರಾಕೆ ನಂಗೆ ಆಗಲ್ಲವ್ವಾ. ನಾನೇ ಊರಿಗೋಗ್ನಿಲ್ಲ, ಬಂದ್ಬಿಟ್ಟೆ ನಂಗೆ ಅವ್ರ ಬದ್ಕು ನಾಗರೀಕತೆ ಬ್ಯಾಡಾ ಕಣವ್ವಾ ನಾನು ನಿನ್ತಾವೇ ಇರ್ತೀನಿ"

ಸಿದ್ದವ್ವ ಮಗಳ ತಲೆ ಸವರಿದಳು

"ಅಯ್ಯೋ ಅಷ್ಟಕ್ಕೆಲ್ಲಾ ಕಣ್ಣೀರಾಕ್ಕೋತಾರಾ? ಕಣ್ಣೊರೆಸ್ಕೊ... ನಾಸಿರಾ ಗಂಟ ನೀಯಾಕೆ ಓಗ್ಬೇಕೂ.. ನಾನೆಂಗಿದ್ದೀನೋ ಅಂಗೇ ನೀನೂ ಇರು ಕೊಡು ಚೀಲ ಇತ್ಲಾಗೆ!"

ಚೆನ್ನಿ ಲಂಗ ಎತ್ತಿ ಕಣ್ಣು ಮೂಗು ಒರೆಸಿಕೊಂಡು ತಾಯಿಯ ಕೈಗೆ ಚೀಲ ಕೊಟ್ಟಳು "ಅದ್ರಾಗೆ ಒಂದೀಟು ದುಡ್ಡೈತೆ, ಜೋಪಾನ್ವಾಗಿ ಒಳೀಕ್ಕೆ ಮಡಗು! ಜಾತ್ರೆಗೋಗ್ಬೇಕಾದ್ರೆ ಬೇಕಾಗ್ತೈತೆ."

# "ಆಲ್ ಇಂಡಿಯಾ ರೇಡಿಯೋ ಭವತಿ ಭಿಕ್ಷಾಂದೇಹಿ"

## ೪೦೦ ಕಿಲೋ ಸೈಕಲ್ಸ್

"ಭವತಿ ಭಿಕ್ಷಾಂದೇಹೀ "

ಹತ್ತು ವರುಷದ ಐದು ಗೇಣಿನ ಹರಕು ಪಂಚೆಯ ಹುಡುಗ ಮನೆಗಳನ್ನು ಮುಚ್ಚುವಂತಿದ್ದ ಮರಗಳನ್ನೇ ನೋಡುತ್ತಾ ದೊಡ್ಡ ಕಾಂಪೌಂಡಿನ ಗೇಟನ್ನು ದಾಟಿ ದೊಡ್ಡ-ಪುಟ್ಟ ಮನೆಗಳೊಂದರ ಮುಂದೆ ನಿಂತು ಜುಟ್ಟಿದ್ದ ಬೋಳು ತಲೆಯನ್ನು ಕೆರೆದುಕೊಳ್ಳುತ್ತಾ ಕೂಗಿದ

"ಬಂದೆ ಇರಪ್ಪಾ ಒಂದೆರಡು ನಿಮಿಷ "

ಕೈಯಲ್ಲಿ ಅಲ್ಯೂಮಿನಿಯಂ ಪಾತ್ರೆಯಲ್ಲಿ ಇಣಿಕಿ ನೋಡಿ ಸುಮ್ಮನೆ ನಿಂತಿದ್ದ ಹುಡುಗನಿಗೆ ಪ್ರತಿದಿನದ ಈ ಒಂದೆರಡು ನಿಮಿಷಗಳ ಪರಿಚಯ ಬಹಳ ಚೆನ್ನಾಗಿತ್ತು. ಅಡುಗೆಯ ಮನೆಯಿಂದ ಕಂಚುಗಂಟಲಿನಿಂದ ನಿರರ್ಗಳವಾಗಿ ಹೊರಬರುತ್ತಿದ್ದ ಮಾತು ಕೇಳುತ್ತಾ ನಿಂತ ಆ ಮಾತೂ ಒಲೆಯ ಮೇಲಿದ್ದ ಸಾರಿನಷ್ಟೇ ಖಾರವಾಗಿ ಕುದಿಯುತ್ತಿತ್ತು

"ಹಾಳಾದ್ದು ಎಷ್ಟು ಬೇಗ ಹೊತ್ತಾಗಿಬಿಡುತ್ತೆ. ಆಗ್ಲೆ ಭಿಕ್ಷಾನ್ನದ ಹುಡುಗ ಬರುವ ಹೊತ್ತಾಗೋಯ್ತು....ಬೆಳಗ್ಗೆ ನಾನೆದ್ದಾಗ ನಾಲ್ಕು ಗಂಟೆ ಅಡ್ಗೆಮನೆ ತೊಳ್ದು, ಒಲೆ ಉರಿಹಾಕಿ, ನಾಲ್ಕು ಚೊಂಬು ನೀರು ತಲೇಮೇಲೆ ಸುರ್ಕೊಂಡು ಒದ್ದೆ ಉಟ್ಕೊಂಡು ಪಾತ್ರೆಗಳಿಗೆ ಹುಳಿ ಹಚ್ಚಿ, ಒಲೆ ಸಾರಿಸಿ, ನೀರು ತುಂಬಿಟ್ಕೊಂಡು ಕೆಂಡ ಹೊತ್ಸಿ ಒಲೇ ಮೇಲೆ ಎಸರಿಟ್ಟು, ದೇವರಿಗೆ ಹೂವು ಏರಿಸಿ, ದೀಪ ಹಚ್ಚಿ ಪೂಜೆ ಮಾಡೋದ್ರೊಳ್ಗೆ ಎಂಟುಗಂಟೆ ಆಗಿ ಬಿಡುತ್ತೆ. ಆಮೇಲೆ ಆ ಮುಂಡೇದ್ನ ಎಬ್ಸಿ, ಎದ್ಮೇಲೆ ಮುಖ ತೊಳ್ದು

ಬಂದ್ಮೇಲೆ ಮಡಿ ಪಾತ್ರೆ ಗೀತ್ರೆ ಎಲ್ಲಿ ಮುಟ್ಕೊಂಡ್ಬಿಡ್ತಾನೋಂತ ಅದಕ್ಕೆ ಕಾಫಿ ಬೆರ್ಸಿಕೊಟ್ಟು ತರಕಾರಿ ಹೆಚ್ಕೊಳ್ಳೋ ಹೊತ್ಗೆ ಒಂಬತ್ತಾಗೋಗುತ್ತೆ ಬೇಗ್ಗ ಎದ್ರೆ ಅವಸರ. .ನನ್ಗೂ ವಯಸ್ಸಾಗ್ತಾ ಬಂತು ಊರಿನ ದೇವರ್ಗೆಲ್ಲಾ ಹರಕೆ ಹೊತ್ಕೊಂಡು ಹೆತ್ತ ಈ ಕುಮಾರ ಕಂಠೀರವನ್ನ ಯಾವ ಭೂತಗಣ ಹುಟ್ಕೊತೋ ಅದಕ್ಕೊಂದೊಳ್ಳೆ ಮಡಿವಂತರ ಮನೆ ಹುಡ್ಗಿ ತಂದು ಮದ್ವೆ ಮಾಡಿದ್ರೆ ನನ್ಗೆ ಅರ್ಧ ಕೆಲ್ಸ ತಪ್ಪುತ್ತೆ ಇವನೋ ಒಳ್ಳೇ ಪರದೇಸಿ ಇದ್ದಾಗಿದ್ದಾನೆ ಕತ್ತಿನಿಂದ ಇಳಿದು ಬಿದ್ದಿರೋ ಈಶ್ವರನ ಮಡಿ ಎಣ್ಣೆ ಕಂಡು ಎಷ್ಟು ದಿನ ಆಯ್ತೋ ಆ ತಲೆ ಊರಿನಲ್ಲೇನು ಹಜಾಮ್ರಿಗೆ ಕಡಿಮೇನೆ? ರೋಡಿಗೆ ಒಬ್ಬೊಬ್ಬ ಇರ್ತಾನೆ ಇವನ್ಗೆ ಅದ್ಕೂ ಬರ್ಗಾಲ ಕೆನ್ನೆ ಮೇಲೆ ತುಟೀ ಮೇಲೆ ತೆಂಗಿನ ಜುಟ್ಟು ನಾಬ್ರ ಹಬ್ಬ ಅದ್ಯಾವ್ದೊ ಮೊಹರಂ ಅಂತಾರಲ್ಲ, ಹಾಗಿರೋ ಷರಟು, ಕಂಬೀ ಪ್ಯಾಂಟು ಕೆಟ್ಟ ಅಪಸ್ವರದಲ್ಲಿ ಮೂರ್ಹೊತ್ತೂ ಸಿಳ್ಳೆ ಹಾಕ್ಕೊಂಡು ತಿರ್ಗಾಡೋ ಈ ಬಣ್ಣದ ಬೈರಾಗಿಗೆ ಯಾವ ಮಡಿವಂತರ ಮನೆ ಹೆಣ್ಣು ಕೊಡ್ತಾರೆ ಆ ಕೂಡ್ರಳ್ಳಿ ಭಟ್ಟರ್ಮನೆ ಹುಡ್ಗಿ ಮೊನ್ನೆ ಬಂದಿತ್ತಲ್ಲಾ ಎಷ್ಟು ದಿವಿನಾಗಿತ್ತು ಇದರ ದ್ರಾಬೆ ಮುಖ ನೋಡಿ

'ನಮ್ಮೂರ ಆಲದ್ಮರದ್ಕಟ್ಟೆ ಹತ್ತಿರ ಕೂತ್ಕೊಳ್ಳೋ ಭಿಕ್ಷುಕನ್ಹಾಗಿದ್ದಾನೆ. ನಾನಂತೂ ಮಾಡ್ಕೊಳ್ಳೋಲ್ಲ' ಅಂದ್ಬಿಡ್ತು ಅಂತೂ ನನ್ನ ಗ್ರಹಚಾರ. ಎಷ್ಟತ್ತಾದ್ರೂ ಇವ್ನ ಚಾಕ್ರಿ ತಪ್ಪಿಲ್ಲ ಇನ್ನೊಂದ್ಹೈದ್ನಿಮ್ಷಕ್ಕೆ ಬರ್ತಾನೆ ತಟ್ಟೇಲಿ ಎಲ್ಲಾ ಕಲ್ಸಿ ಕೊಟ್ಬಿಡು. ಚಪ್ಪ ಕೊಡು ಕೈ ತೊಳ್ಕೊಳ್ಳೋಕೆ ಟೈಮಿಲ್ಲ ಹೊತ್ತಾಯ್ತು ಹನ್ನೊಂದು ಗಂಟೆಗೆ ಎಲ್ಲೋ ಇಂಟರ್‌ವ್ಯೂ ಇದೇಂತ, ...ಅಂದ್ಹಾಗೆ ಗೊಣಗುತ್ತಾ ಯಾವ್ದೊ ಗಮನದಲ್ಲಿ ಸಾರಿಗೆ ಎರಡ್ಸಲ ಉಪ್ಪಾಕಿ ಬಿಟ್ನೇನೋ .ಅನ್ನೇನೋ ಏನ್ಹಾಕಿದ್ರೂ....ಕಲಗಚ್ಚ್ಹಾಕಿದ್ರೂ ತಿಂದ್ಬಿಟ್ಟು ಹೋಗ್ತಾನೆ. ನನ್ನ ನಾಲ್ಗೆ ನಮ್ಮತ್ತೆ ರುಚಿರುಚಿಯಾಗಿ ಅಡ್ಗೆ ಮಾಡ್ಹಾಕ್ತಾ ಇದ್ದಿದ್ರಿಂದ ಬಹಳ ಸೂಕ್ಷ್ಮ ..ಆ ಹುಡ್ಗ ಬೇರೆ ಬಾಗ್ಲಲ್ಲಿ ನಿಂತಿದೆ

"ಇಕೊ...ಸರ್ಯಾಗಿ ಹಿಡಿ ಪಾತ್ರೆ...ಥೂ ದೂರ ನಿಂತ್ಕೊಳ್ಳೋ...ಮಡಿ ಮುಟ್ಕೋಬೇಡ. ಹುಂ ಹಾಗೆ. ಅನ್ನ ಸಾರು ಎರ್ಡೂ ಬಿಸಿ....ಹಾಗೇ ಸಾರಿಗೆ ಉಪ್ಪು ಖಾರ ಸಾಕಾ ನೋಡು "

೪೧೦ ಕಿಲೋ ಸೈಕಲ್ಸ್

"ಭವತಿ ಭಿಕ್ಷಾಂದೇಹಿ ..."

ಹುಡುಗ ನಿಂತಲ್ಲೇ ನಿಂತ.

"ಥೂ ಬಿಡ್ರೀ...ಆ ಹುಡ್ಗ ನೋಡಾನು ಬಂದೇಪ್ಪಾ ಒಂದ್ಸಿವ್ಸ... ನೀವು ಯಾವಾಗ್ಲೂ ಹೀಗೆ ನನ್ನ ಸೊಂಟ ಹಿಡ್ಕೊಂಡು ನಿಂತ್ರೆ ಅಲ್ಲಿ ಆಫೀಸ್ನೊತ್ಗೆ ಅಡ್ಗೆ ಆಗ್ಬೇಡ್ವಾ?...ನೀವು ಹೀಗೆ ಎಲ್ರ ಮುಂದೇ ಮಾಡ್ತೀರೀಂತ್ಲೇ ನಾನು ಕಿಟಕೀಗೆ ಬಾಗಿಲಿಗೆ ಕರ್ಟನ್ ಹಾಕಿರೋದು..."

ನಗುವ ಸದ್ದು .ಅಡ್ಗೆ ಆಗ್ದೇದ್ರೆ ಬಿಡು ಚಿನ್ನಾ....ಆಡಷ್ಟು ತಿಂದ್ಕೊಂಡು ಹೋಗ್ತೀನಿ ಕೈ ತುಂಬಾ ಕಣ್ತುಂಬಾ ನೀನು ಸಿಕ್ಕೋದ್ರಿಂದ್ಲೇ ಅರ್ಧ ಹೊಟ್ಟೆ ತುಂಬ್ಹೋಗಿರುತ್ತೆ .

"ಬಿಡೀಪ್ಪ ಪ್ರೆಶರ್ ಕುಕರ್ ಇಳ್ಸಿದ್ಮೇಲೆ ಮುಚ್ಚಳ ಕೂಡ ತೆಗ್ದಿಲ್ಲ. ಅನ್ನ ತೆಗ್ದು, ತರಕಾರಿ ಬೇಳೆ ಸೇರ್ಸಿ ಬೇಗ ಒಂಚಿಷ್ಟು ಹುಳಿ ಮಾಡ್ಬಿಡ್ತೀನಿ ಬಿಡ್ರೀ ..ಗಡ್ಯಾರ ನೋಡಿ ಆಗ್ಲೇ ಹತ್ತು ಗಂಟೆ ಹತ್ತು ನಿಮಿಷ .ಪಾಪ ಆ ಹುಡ್ಗ ಬೇರೆ ಬಾಗ್ಲಲ್ಲಿ ಕಾಯ್ತಾ ಇದೆ"

"ಉಹುಂ ಬಿಡೋಲ್ಲ ನಾನ್ಕೇಳಿದ್ದು ಕೊಟ್ರೇ"

"ಥೂ ಸುಮ್ನಿರಿ "

ಹತ್ತೂವರೆಗ ಕನ್ನಡಿ ಮುಂದ ನಿಂತ್ಕೊಂಡು ಕ್ರಾಪ್ ತೀಡ್ಕೊಂಡು ಮೀಸೆ ಟ್ರಿಮ್ ಮಾಡ್ಕೋತಾ, "ಚಿನ್ನಾ ಎಲ್ಲಿ ಊಟ ತೊಗೊಂಡ್ಬಾ ನೀನೂ ನನ್ನ ಪಕ್ಕಾನೇ ಕೂತ್ಕೋ ಇಲ್ದಿದ್ರೇ ನಂಗೆ ಅನ್ನ ಗಂಟ್ಲಲ್ಲಿ ಇಳ್ಯಲ್ಲ .." ಅಂತ ಮುದ್ದುಗರೀತಾ ಕೂತ್ಕೊಂಡು ಸಾವಕಾಶವಾಗಿ ಎಲ್ಲಾ ಮುಗಿಸ್ಕೊಂಡು ಆಮೇಲೆ "ಅಯ್ಯಯ್ಯೋ ಆಗ್ಲೇ ಹನ್ನೊಂದಾಗ್ತಾ ಬಂತೂ, ದಿನಾ ಆಫೀಸಿಗೆ ಲೇಟಾಗಿ ಹೋದ್ರೇ ಸುಮ್ನೆ ಬಿಡ್ತಾರ್ಯೇನೇ ಮನೇಲಿರೋ 'ಬಾಸ್' ಅಲ್ಲೂ ಇದ್ದಿದ್ರೇ ತುಂಬಾ ಚೆನ್ನಾಗಿರ್ತಿತ್ತು ನೀನು ಯಾಕೇ ಬೇಗ ನಂಗೆ ಊಟ ಹಾಕ್ಬಾರ್ದು?" ಅಂತ ನನ್ಮೇಲೇ ತಪ್ಪು ಹೊರ್ಸಿ....ಸಾಕಪ್ಪಾ ಸಾಕು. ಮದ್ವೆ ಆಗಿ ಎರಡು ವರ್ಷ ಆಗ್ತಾ ಬಂತೂ ಇನ್ನೂ ಹೊಸ್ದಾಗಿ ಮದ್ವೆ ಆದೋರ್ಹಾಗೇ ಆಡಿದ್ರೇ ಸದ್ಯ ಮಗೂ ಹುಟ್ಟಿದ್ಮೇಲಾದ್ರೂ ನಿಮ್ಮಾಟ ಕಡಿಮೆಯಾಗುತ್ತೋ ಏನೋ... ನೋಡ್ಬೇಕು "

"ಬಂದೇ ಇರಪ್ಪಾ ಥೂ .ಬಿಡ್ರೀ ." ಕೊಸರಾಡಿದ ಸದ್ದು.

ಬಳೆ ಸದ್ದು ಕೇಳಿ ತಲೆ ಬಗ್ಗಿಸಿ ನಿಂತಿದ್ದ ಹುಡುಗ ತಲೆಯೆತ್ತಿದ

"ಪಾತ್ರೆ ಸರ್ಯಾಗಿ ಹಿಡಿ ಸ್ಕೂಲ್ಗೆ ಹೊತ್ತಾಗ್ಲಿಲ್ವೇನೋ ಸ್ವಲ್ಪ ಬೇಗ ಬರ್ಬಾರ್ದಾ? ಆವೊತ್ತು ಪೆನ್ ಕೇಳಿದ್ಯಲ್ಲಾ ನಂಗೆ ಮರ್ತೇಹೋಯ್ತು ನೋಡ್ರ, ನಾಳೆ ಕೊಡ್ತೀನಿ ಜ್ಞಾಪಿಸು ." ಆಗಲಿ ಎಂದು ತಲೆಯುಲ್ಲಾಡಿಸಿ ಮುಂದೆ ನಡೆದ ಹುಡುಗನ ಕಿವಿಗೆ ಬಿದ್ದ ಮಾತು

"ಅನ್ನ ಒಂದೇ ತಾನೇ ಆಗಿರೋದು ರೈಟ್ ಮೊಸರನ್ನ ಉಪ್ಪಿನ ಕಾಯಿ ಪ್ಲಸ್ ನೀನೂಂದ್ರೇ ಎಂತಹ ಒಳ್ಳೇ ಕಾಂಬಿನೇಷನ್ "

೪೨೦ ಕಿಲೋ ಸೈಕಲ್ಸ್

"ಭವತಿ ಭಿಕ್ಷಾಂದೇಹಿ "

ಅಳುವ ಸದ್ದು...ಪಾತ್ರೆಗಳ ಸದ್ದು

"ಊಂ ಊಂ . ನೋಡಮ್ಮ ರುಕ್ಕು ನನ್ಪೆನ್ಸಿಲ್ ತೊಗೊಂಡಿದ್ದಾಳೆ"

"ತೂ ಅಳ್ಬೃರ್ಕಿ... ಎಲ್ಲದಕ್ಕೂ ಅಳ್ಬೇಡ್ವೇ . ಮಾತಾಡೋಕೇ ಬರೋಲ್ವಾ?"

"ಅವಳಿಗೊತ್ತಮ್ಮಾ ಅತ್ರೆ ಎಲ್ಲಾ ನಡ್ಯತ್ತೇಂತ "

"ನೀನು ಸುಮ್ನಿರೆ ಜಾನೂ ಸುಮ್ನೆ ಕೀಟ್ಲೆ ಮಾಡ್ಬೇಡ ಕೊಟ್ಬಿಡ್ಬಾರ್ದಾ ಪೆನ್ಸಿಲ್ ಅವಳ್ದು. ?"

"ಹುಂ ಅವಳ್ದು ಅದೂ ಅವ್ಳ ತಾತ್ಮನೆ ಗಂಟು ನಂಗೆ ಕ್ಲಾಸ್ನಲ್ಲಿ ಗಿರೀಶ ಕೊಟ್ಟಿದ್ದು..."

"ಲೇ. ನೋಡೇ. ಪುಟಾಣಿ ತೊಟ್ಲಿಂದ ಹಾಲಿನ ಬಾಟ್ಲು ಎಸೆದ್ಬಿಟ್ಟಿದೆ ....ಮನೆ ತುಂಬ ಗಾಜು ಅಂದ್ಹಾಗೆ ನನ್ನ ಬಿಳೀ ಷರ್ಟ್ ಎಲ್ಲಿ ನಿನ್ನೆ ಇಸ್ತ್ರಿ ಮಾಡಿಟ್ಟಿದ್ದೆ....ಹುಂ ನೋಡಿಲ್ಲಿ ನಿನ್ನ ಮುದ್ದು ಮಕ್ಕಳ ಮಣ್ಣು ಕೈಯಿನ ಗುರ್ತು....ಥೂ. ಏನು ಹಾಳು ಸಂಸಾರವೋ. . ಆಗ್ಲೇ ಹತ್ತೂ ಕಾಲಾಗ್ತಾ ಬಂತೂ. ಬಸ್ಸು ಸಿಗ್ಬೇಕಲ್ಲಾ ಕ್ಯೂ ಒಂದ್ಮೈಲಿ ಇರುತ್ತೆ "

"ನೋಡಿ ಅಂದ್ಹಾಗೆ . ಇವೊತ್ತು ಹದಿನೈದನೇ ತಾರೀಖು ಮಕ್ಕಳ ಫೀಸು ಕಟ್ಬೇಕು...ರುಕ್ಕು ಷೂಸ್ ಅವಳ್ಗೆ ಬಹಳ ಚಿಕ್ಕದಾಗಿಬಿಟ್ಟಿದೆ. ಜಾನೂದು ಯೂನಿಫಾರಂ ತುಂಬಾ ಬಿಗಿಯಾಗಿ ಹರಿಯುತ್ತಾ ಬಂತು ಎಲ್ಲಾ

ಮುಗಿಸ್ಕೊಂಡು ಬರ್ತೀನಿ ಮಗೂನೂ ಎತ್ಕೊಂಡ್ಹೋಗಿ ಹಾಗೆ 'ಅಮ್ಯುಲ್' ನಾಳೆ ಒಂದು ದಿನಕ್ಕೆ ಮಾತ್ರ ಆಗುತ್ತೆ ಬರ್ತಾ ಮರೀದೆ ತನ್ನಿ "

"ಆಫೀಸಿಗ್ಹೋಗೋ ಹೊತ್ಗೇ ಎಲ್ಲಾ ಜ್ಞಾಪ್ಕ ಬರುತ್ತೆ ನಿಂಗೆ ಮುಂಚೆ ಹೇಳೋಕೇನಾಗಿತ್ತು ಏನು ಹಾಳು ಸಂಸಾರವೋ "

"ಅದ್ಯಾಕ್ರೀ ಎಲ್ಲದಕ್ಕೂ ಹಾಳು ಸಂಸಾರ ಅಂತೀರಿ ಯಾಕಟ್ಕೊಂಡ್ರೀ ಹೆಂಡ್ತಿ ಮಕ್ಳ್ನ ಹಾಯಾಗಿ ಒಬ್ರೇ ಇರ್ಬೇಕಾಗಿತ್ತು ಅಷ್ಟು ಭಾರ ಆದ್ರೇ ಹೇಳಿ ನಾನು ಭಿಕ್ಷ ಬೇಡಿಯಾದ್ರೂ ಮಕ್ಕಳ್ನ ಸಾಕೋತೀನಿ "

"ನಿಂದು ಬರ್ತಾ ಬರ್ತಾ ಬಾಯಿ ಜಾಸ್ತಿ ಆಯ್ತು ಆಫೀಸಿಗ್ಹೋಗೋ ಹೊತ್ನಲ್ಲಿ ನನ್ನ ರೇಗಿಸ್ಬೇಡಾ . '

"ಭವತೀ ಭಿಕ್ಷಾಂದೇಹೀ ..

"ಇದೊಂದು ಪ್ರಾರಬ್ಧ ಸಾಲದ್ದಕ್ಕೆ ಅದಕ್ಕೊಂದಿಷ್ಟು ಹಾಕಿ ಕಳ್ಸು..."

ಒಳಗಿನಿಂದ ಬಂದಾಕೆಯ ಹಿಂದೆಯೇ ಬಂದ ಚಿಕ್ಕ ಹುಡುಗಿ

"ಅಮ್ಮಾ ನೀನು ಅಪ್ಪನ್ನ ಯಾಕಮ್ಮಾ ಮದ್ವೆ ಮಾಡ್ಕೊಂಡೆ.. ಇನ್ಯಾರನ್ನಾದ್ರೂ ಮಾಡ್ಕೊಬಾರ್ದಿತ್ತಾ..." ಎಂದಾಗ ಹುಡುಗ ಪಾತ್ರೆ ಹಿಡಿದಾಗ ತಟ್ಟೆಯಲ್ಲಿದ್ದ ಅನ್ನ ಪಾತ್ರೆಗೆ ಸುರಿದಾಗ ಕೈಯ ಮೇಲೆ ಬಿದ್ದ ಕಣ್ಣೀರನ್ನು ಕಂಡು ಚಿಕ್ಕ ಹುಡುಗಿಯು ಕೆನ್ನೆ ಸವರಿ ಮುಂದೆ ನಡೆದ

೪೩೦ ಕಿಲೋ ಸೈಕಲ್ಸ್

"ಭವತೀ ಭಿಕ್ಷಾಂದೇಹೀ "

"ರೀ ನೋಡ್ರೀ ಹೂವು ಮುಡ್ಡಿರೋದು ಸರ್ಯಾಗಿದ್ಯಾ ? ದೋಬಿ ತುಂಬಾ ಸ್ಟಾರ್ಚ್ ಹಾಕ್ಬಿಟ್ಟಿದ್ದಾನೆ ಹಾಳು ಸೀರೆಗೆ. ಎಷ್ಟು ಸಲ ನೆರಿಗೆ ಹಿಡಿದ್ರೂ ಸರ್ಯಾಗೋಲ್ಲ ಆಗ್ಲೇ ಹತ್ತೂ ಇಪ್ಪತ್ತಾಯ್ತು....ಪ್ರೇಯರ್ ಹೊತ್ಗೆ ಇಲ್ದಿದ್ರೇ ಹೆಡ್ ಮಿಸ್ ಬೈಯ್ತಾರೆ...ಆ ಹುಡ್ಗ ಬೇರೇ ಕಾದಿದ್ದಾನೆ..."

"ಎಲ್ಲಾ ಸರ್ಯಾಗಿದ್ಯೇ ..ನೀನು ಹೇಗಿದ್ರೂ ಚೆನ್ನಾಗಿರ್ತೀ ನಂಗೆ... ಸ್ಕೂಲು ಹುಡ್ಗರ ಮುಂದೆ ಯಾಕೆ ಇಷ್ಟೊಂದು ಅಲಂಕಾರ ? .."

"ಹಾಗಲ್ರೀ ಟೀಚರ್ಸ್ ಮಕ್ಕಳ ಮನಸ್ಸಿನ ಮೇಲೆ ಒಳ್ಳೇ ಇಂಪ್ರೆಶನ್ ಕ್ರಿಯೇಟ್ ಮಾಡ್ಬೇಕ್ರೀ. . ಸ್ಮಾರ್ಟ್ ಆಗಿರೋ ಟೀಚರ್ ಅಂದ್ರೇ ಹುಡುಗರಿಗೆ ಯಾವಾಗ್ಲೂ ರೆಸ್ಪೆಕ್ಟ್ ಇರುತ್ತೆ ಗೊತ್ತಾ ನಿಮ್ಮ ಸ್ಟೆನೋಗಳು ಯಾಕೆ ಹಾಗೆ ಅಲಂಕಾರ ಮಾಡ್ಕೊಂಡ್ಬರ್ತಾರೀ ?. "

"ನನ್ಗಂತೂ ಯಾರೂ ಇಂಪ್ರೆಸ್ ಆಗ್ಲಿಲ್ಲ. "

"ನಮ್ ಸ್ಕೂಲ್ಗೆ ಒಂದು ಅಡುಗೂಲಜ್ಜಿ ಬರುತ್ತೆ ವಯಸ್ಸೇನೋ ಇಪ್ಪತ್ತೈದಿರ್ಬೋದೂ ಸ್ಕೂಲ್ಗೆ ಬರೋಕ್ಮುಂಚೆ ಊರ್ನಲ್ಲಿರೋ ದೇವಸ್ಥಾನ ಕ್ಕೆಲ್ಲಾ ನಮಸ್ಕಾರ ಹೊಡ್ದು, ಹಣೇ ತುಂಬಾ ಎಲ್ಲಾ ದೇವ್ರುಗಳ ಬಣ್ಣ ಬಣ್ಣದ ಕುಂಕುಮ. ಗೋಣೀ ಹೆಣೆದಿರೋ ಹಾಗಿರೋ ಜಡೇತುಂಬಾ ನೂರೆಂಟು ಒಣಗಿದ ಹೂವಿನ ದೇವರ ಪ್ರಸಾದ ಕೋಲಿಂದ ಡೈರೆಕ್ಟ್ ಆಗಿ ತೆಗೆದಿರೋ ಮಡಿ ಮುದುರು ಸೀರೆ. ಆದ್ರೇ ಮಾಡೋ ಕೆಲ್ಸ ನೋಡ್ಬೇಕೂ ಬರೀ ಅನಾ ಚಾರವೇ ಆ ಹುಡಗ ನಮ್ಮಾನೆ ಎದ್ರು ಮನೆಯವರ ಸಂಬಂಧ ಅಂತ ನೂರಕ್ಕೆ ಎಪ್ಪತ್ತು ನಂಬ್ರು, ಆ ಹುಡ್ಗಿ ತಂದೆ ಅಮ್ಮಾವ್ರ ದೇವಸ್ಥಾನದ ಪೂಜಾರೀಂತ ನೂರಕ್ಕೆ ಎಪ್ಪತ್ತೈದು, ಡಿ.ಪಿ ಐ ಮನೇ ಸಂಬಂಧದವರ ಫ್ರೆಂಡ್ ಕಸಿನ್ನಂತ ಆ ಹುಡ್ಗ ಮಾಡೋದೆಲ್ಲಾ ಸರಿ... ಒಂದ್ಹತ್ತು ನಿಮ್ಷ ಕ್ಲಾಸ್ ಕ್ವಯಟ್ ಆಗಿ ನೋಡ್ಕೋಳ್ಳೋಕೆ ಬರೋಲ್ಲ. ಅದೇ ನೋಡಿ....ನಾನು ಗೇಟ್ ದಾಟಿ ಒಳ್ಗೆ ಹೋಗ್ತಾನೆ 'ಗುಡ್ ಮಾರ್ನಿಂಗ್ ಮಿಸ್ ಸಾವಿರಾರು. ನನ್ಕ್ಲಾಸ್‌ನಲ್ಲಿ ಪಿನ್ ಡ್ರಾಪ್ ಸೈಲೆನ್ಸ್.. ನಾಸ್ಹೇಳಿದ್ದ ಹೋಮ್‌ವರ್ಕ್ ಎಲ್ಲಾ ರೆಡಿ....ಆಹ್ರೂ ನನ್ಕಂಡ್ರೇ ಪ್ರಾಣ ಬಿಡುತ್ವೆ ಮಕ್ಕಳು."

"ಸಾಕೇ ನಿನ್ನ ಸೆಲ್ಫ್ ಪ್ರೈಸಿಂಗ್ ಕಾಮೆಂಟರಿ. ಪಾಪ ಹುಡ್ಗ ಕಾಯಿದ್ದಾನೆ ಅದಕ್ಕೇನು ಹಾಕ್ತಿಯೋ ಹಾಕಿ ಕಳ್ಸು ..."

"ಬಂದೇ ಇರಪ್ಪಾ" ಕಣ್ಣೆದುರಿಗೆ ಗರಿಮುರಿಯಾದ ಸೀರೆಯುಟ್ಟು, ಹೂ ಮುಡಿದು ಒಂದು ಕೈಯಲ್ಲಿ ಪರ್ಸ್ ಇನ್ನೊಂದ್ಕೈಲಿ ತಟ್ಟೆಯಲ್ಲಿ ಅನ್ನ ತರಕಾರಿಗಳ ಪಲ್ಯ ತಂದು ಅವನ ಪಾತ್ರೆಯಲ್ಲಿ ಹಾಕಿದಾಗ ಹುಡುಗ ಕಿರುನಗೆಯಿತ್ತ.

"ನಾಳೆ ನೀನ್ಕೇಳಿದ ಪುಸ್ತಕ ಎಲ್ಲಾ ಹುಡುಗರ ಕೈಯಲ್ಲಿ ಇಸ್ಕೊಡ್ತೀನಿ ಭಾನುವಾರ ಬೆಳಗ್ಗೆ ಬಾ. ನಿಂಗೆ ಬರ್ದೇ ಇರೋ ಪಾಠಗಳ್ನ ಹೇಳಿಕೊಡ್ತೀನಿ"

ಆಕೆಯ ಹಿಂದೆಯೇ ನೀಟಾಗಿ ಸೂಟುಧಾರಿಯಾದ ಯುವಕ ಕೈಯಲ್ಲಿ ಬೀಗದ ಕೈಹಿಡಿದು ಬಂದ ..ಹುಡುಗ ನಕ್ಕು ಮುಂದುವರಿದ.

೪೪೨ ಕಿಲೋ ಸೈಕಲ್ಸ್

"ಭವತೀ ಭಿಕ್ಷಾಂದೇಹೀ . "

ಮನೆಯ ಮುಂದೆ ಗಿಳಿಹಸಿರು ಬಣ್ಣದ ಕಾರು ಕಾರಿನಲ್ಲಿ ಮುದ್ದಾದ ಎರಡು ಯೂನಿಫಾರಂ ಹಾಕಿಕೊಂಡು ಮಕ್ಕಳು ಕಾರಿನ ಕಿಟಕಿಯಲ್ಲಿ ಮುಂಗಾಲಿನ ಮೇಲೆ ತಲೆಯಿಟ್ಟು ನಾಲಗೆಯನ್ನು ಹೊರಚಾಚಿದ್ದ ಮುದ್ದಾದ ಬಿಳಿ ಜೂಲುನಾಯಿ ಕಾರಿನ ಮುಂದಿನ ಸೀಟಿನಲ್ಲಿ ಟೆರಿಲಿನ್ ಸೂಟುಧಾರಿ ಯಾದ ಮಧ್ಯ ವಯಸ್ಸಿನ ಗೃಹಸ್ಥ ಆಗತಾನೇ ಒಳಗಿಂದ ಬಂದ ಆಕೆಯ ಜೊತೆ ನವಿರಾದ ಪರಿಮಳ ಬೀರುತ್ತಾ, ಹೂವಿನಷ್ಟು ಹಗುರವಾದ ಸೀರೆ ಅಷ್ಟೇ ಹಗುರವಾದ ನಡಿಗೆ, ಮುಖದಲ್ಲಿ ಸೌಮ್ಯನಗೆ

'ಯಾಕಪ್ಪಾ ಇವೊತ್ತು ಇಷ್ಟು ಲೇಟು ಮಾಡ್ದೇ .? ಎಲ್ರೋ ಹೊರ್ಟಿದೀವಿ ನಿಂಗೂ ಸ್ಕೂಲ್ಗೆ ಹೊತ್ತಾಗೋಲ್ವಾ ?.. ."

"ಕಂ ಡಾರ್ಲಿಂಗ್.. ನಂಗೆ ಲೇಟಾಯ್ತು, ನಿನ್ನ ಕ್ಲಬ್ ಹತ್ರ ಡ್ರಾಪ್ ಮಾಡಿ ಹೋಗ್ಬೇಕು, ಮಕ್ಕಳ್ನ ಸ್ಕೂಲ್ ಹತ್ರ ಡ್ರಾಪ್ ಮಾಡ್ಬೇಕು... ಅವನ್ಹತ್ರ ಮಾತಾಡೋದು ಬಿಟ್ಟು ಏನಾದ್ರೂ ಹಾಕಿ ಕಳಿಸ್ಬಾರ್ದಾ ?"

"ಈಗ್ತಾನೇ ಎಲ್ಲಾ ಫ್ರಿಜ್‌ನಲ್ಲಿಟ್ಟು, ಅಡ್ಗೆಮನೆ ಬೀಗ ಹಾಕ್ಕೊಂಡ್ಬಂದೆ ಆಯಾ ಕೈ ಬಹಳ ಚುರುಕು. ಮಗೂಗೆ ಮಾತ್ರ ಎರಡು ಫೀಡಿಂಗ್ ಬಾಟ್ಲು ಹಾಲಿಟ್ಟಿದ್ದೀನಿ ಹೊರ್ಗ ಅಷ್ಟೆ "

"ಲೋ ಬಾರೋ ಇಲ್ಲಿ ...ಯಾವ ಕ್ಲಾಸೋ ನೀನೂ...ಮೂರ್ನೆ ಕ್ಲಾಸಾ ? .ತೊಗೋ ಎಂಟಾಣೆ, ಪುಸ್ತಕಾನೋ ಪೆನ್ಸಿಲ್ಲೋ ತೊಗೋ. ತಿಂಡಿ ತೊಗೊಂಡು ತಿನ್ಬೇಡಾ " ಅಮ್ಮಾವರ ಕೈಯಿಂದ ಬಂದ ಎಂಟಾಣೆ ಬಿಲ್ಲೆಯನ್ನು ನೋಡಿ ಹುಡುಗನ ಮುಖ ಊರಗಲವಾಯಿತು. ಕಣ್ಣಮುಂದೆ ಕಡಲೇಕಾಯಿ, ಗಿಣಿಮೂತಿ ಮಾವಿನಕಾಯಿ... ಚಿಕೆಟ್ಸ್ ಎಲ್ಲಾ ಕುಣಿಯಿತು.

"ಯಾಕೆ ಡಾರ್ಲಿಂಗ್ ದುಡ್ಕೊಟ್ಟೆ...ಖಂಡಿತ ಸಿಕ್ಕಿದ್ದು ತಿಂತಾನೆ

ಅವನು ಯಾಕೋ ಬರ್ತಾ ಬರ್ತಾ ತಿರ್ಪೆ ಬೇಡೋದು ಜಾಸ್ತಿ ಆಯ್ತು ನಮ್ಮಲ್ಲಿ. ಈ ಸಲದ ರೆಕಮೆಂಡೇಶನ್ಸ್‌ನಲ್ಲಿ ರೋಟರಿ ಕ್ಲಬ್‌ನ ಮೀಟಿಂಗ್‌ನಲ್ಲಿ ಹೇಳ್ಬೇಕು.'

ಕಾರು ಬಾಗಿಲು ಹಾಕಿದ ಸದ್ದು. ಸ್ಟಾರ್ಟ್ ಆದ ಸದ್ದು. ಕಣ್ಮರೆಯಾದಾಗ ಹುಡುಗ ಗೇಟು ದಾಟಿದ. ಅವನ ಹೊಟ್ಟೆ ಹಸಿದಿತ್ತು. ಸ್ಕೂಲಿಗೂ ಹೊತ್ತಾಗಿತ್ತು. ಕಾಲುಗಳು ಅವನನ್ನು ಬೇರೆ ಪ್ರಪಂಚಕ್ಕೆ ಕರೆದೊಯ್ದುವು.

# ಹೂವನು ಮುಡಿಬೇಕು

ಊವು ಅರಳಿದ್ಮ್ಯಾಕೆ ಎಣ್ಣಿನ ಮುಡಿಮ್ಯಾಲಿರ್ಬೇಕೊ, ಇಲ್ಲಿದ್ರೆ ದ್ಯಾವ್ರ ಪಾದ ಸೇರ್ಬೇಕೊಂತ ದಾಸ್ರು ದೇವಸ್ತಾನದ ಚಾವ್ಡಿಯಾಗೆ ಏಳಿದ್ದು ಕೇಳಿವ್ನಿ, ಊವಿಗೆ ಅದ್ಕಿಂತ ಏನ್ಬೇಕೊ! ಅದ್ರ ಬದ್ಕು ಸಾರ್ಥಕ ಆಗ್ತೈತೆ ಅಂದಿದ್ರು ಎಣ್ಣನ್ನ ಊವಿಗೆ ಓಲಿಸ್ತಾರಂತೆ ಕತೆ, ಪರಸಂಗ ಬರ್ಯೋರು ನಾನು ಕರ ದಂಡೇ ಮ್ಯಾಗೆ ಕೂತು ಬೆಣ್ಣೆ ತಟ್ತಾ ಎಷ್ಟೋ ಬಾರಿ ಏಚ್ನೆ ಮಾಡಿವ್ನಿ ಓಲಿಕೆ ಸರೀನಾಂತ ಊವು ಮೊಗ್ಗಾಗಿರುತ್ತೆ ಆಮೇಲೆ ಅರ್ಧ ಅರ್ಳಿ ಆಮೇಕೆ ಪೂರ ಅರಡ್ಕಂಡು ಅರಳ್ತಾವೆ ಎಣ್ಣು ಹುಡ್ಗಿಯಾಗಿದ್ದು ಇಷ್ಟೇ ಹುಡ್ಗಿ ಆಗಿ ಎಣ್ಣಂಗಾಗ್ತಾಳೆ ಊವ್ನ ಉಳ ಉಪ್ಟೆ ಮುತ್ಕೊಂತಾವೆ ಎಣ್ಣೈಕ್ಳ ನಮ್ಮೂರ ಮಲ್ಲೀನ ಮುತ್ಕೊಂಡಂಗೆ ಮುತ್ಕೋತಾರೆ. ಊವು ಒಣಗಿದ್ಮೇಕೆ ಜುಟ್ನಿಂದ ಕಿತ್ತು ಎಸೀತಾರೆ ಬಸಮ್ಮ ಕೈಲಾಗ್ದೇ ಇರೋಳೂ, ಅದ್ಕಿಂತ ಗೌಡ್ರು ಮನೆಬಿಟ್ಟು ಓಡ್ಸಿದ್ರಲ್ಲ ಅಂಗೆ ಎಣ್ಣನ್ನ ಎಸೀತಾರೆ. ಒಣಗಿದ ಊವ್ನ ತೆಗೆದ್ದು ಒಸಾ ಊವು ಮುಡ್ಕೊಂತಾರೆ ಎಣ್ಣು ಮುದ್ಕಿ ಆದ್ಮೇಕೆ ಅವಳ್ನ ದೂರ ಆಕಿ ಒಸಾ ಹುಡ್ಗೀನ ಕಟ್ಕಂತಾರೆ ಗೌಡ್ರು ಚಂದ್ರಿನ ಕಟ್ಕೊಂಡಂಗೆ!

ಊವು ದ್ಯಾವ್ರ ಪಾದ ಸೇರ್ಕೊಂಡ್ಮೇಕೆ ಅಲ್ಲೇ ಬಿದ್ದಿರುತ್ತಾ? ಪರ್ಸಾದಾಂತ ದ್ಯಾವ್ರ ಪಾದದಿಂದ ಆವರಿವ್ರ ಕೈಗೂ ಓಗುತ್ತೆ-ಮುಡಿಗೂ, ಮಡ್ಲಿಗೂ ಓಗುತ್ತೆ ಎಣ್ಣೂ ಅಂಗೇನಾಂತಾ! ನನ್ತಲೇಗೆ ಅದು ಬ್ಯಾಗ ಒಳೀನಿಲ್ಲ ಕೈಗೆ ಅಂಟ್ಕಂಡಿದ್ದ ಸೆಗ್ಣೀನಾ ಅಲ್ಲೇ ಇದ್ದ ಉಲ್ಲಿನ್ಮೇಲುಜ್ಜಿ ಕೆರೇ ನಿರ್ನಾಗೆ ಕೈ ತೊಳ್ಕೊಳ್ಳಾಣಾಂತ ಎದ್ದೆ ಆಳು ಲಂಗ ಬೀದಿ ನೆಲ ಗುಡ್ಸುತ್ತೆ ಈಟುದ್ದಾ ಲಂಗ ತಂದವ್ಳೆ ಅವ್ವ ಕೆಲ್ಸದ್ಮನೇಂದ ಒಲಿಯಾಕೆ ನಂಗೆ ಬರೋಲ್ಲ

ಅವ್ವಂಗೆ ಟೇಂ ಇಲ್ಲ 'ಥೂ ! ಇದರವ್ವನಾ !' ಲಂಗಾನ್ನ ಎತ್ತಿ ಮಂಡಿ ಮ್ಯಾಕೆ ಇಡ್ಕೊಂಡು ಕೆರೆ ಕಡೀಕೊರ್ಟ್ಲು.

'ಲೇ ..ಇದೇನೇ ನಿನ್ನ ಸುಮ್ನಾನಾ !–ಬಿಡೇ ಲಂಗಾನ ಕೇಟಕೆ ! ಯಾರ್ಕೊೀಡ್ಲಿಂತ ಎತ್ಕೊಂಡು ನಿಂತಿದ್ದೀಯಾ !" ಲಿಂಗಜ್ಜಿ ಬೆರಣಿ ತಟ್ಟ್ತಿದ್ದುದು ನಿಲ್ಸಿ ಕೂಗಾಕಿದ್ಲು ಅವ್ವ ಯಾವಾಗ್ಲೂ ಅಂಗೇಯ ಒಂದ್ಮಾತಿದ್ರೆ ಸರಿ. ಒಂದ್ಮಾಡಿದ್ರೆ ತಪ್ಪು ?

"ಇಲ್ಯಾರವ್ರೆ ಅಜ್ಜೀ ! ನಾನೂ ನೀನೂ ಇದ್ರೀ ಅಲ್ವಾ ' ನೀನಾನೇ ನೋಡೂದೂ ನೋಡ್ಕಾ !" ನಾನು ಹಲ್ಲು ಕಿರಿದು ನಕ್ಕಾಗ ಲಿಂಗಜ್ಜಿ ಹಣೆ ಚಚ್ಕೊಂಡ್ಲು "ಲಂಗಾ ಬಿಡ್ತಾಳ್ಯ ಎಂಗೇ ! ನಡೀ, ನಿಮ್ಮವನ್ನಾವು ಏಳ್ತೀನಿ '" ಎಂದು ಗದರಿದಾಗ ನಾನು ತೆಪ್ಗೆ ಲಂಗ ಬಿಟ್ಟೆ

"ಅಜ್ಜೀ ಲಂಗ ಬಾಳ ಉದ್ದ ತೊಡಕ್ಕಂಡು ಬಿದ್ರೆ ಎಂಗೆ, ಅಲ್ಲು ಮುರ್‍ದ್ಯಾಕಿಲ್ವಾ ?" ಎಂದು ನಾನು ಕೆನ್ನೆ ಊದಿಸ್ಕೊಂಡಾಗ ಅಜ್ಜಿ ಕೈ ತಿರುಗ್ಸಿದ್ಲು "ಅಲ್ವಾ ಮಂತೆ ಬೋ ಚೆಲ್ವೆ ಸುಂದ್ರಿ ನೀನು ! ನಿನ್ನ ಮುಕಕ್ಕೇನಾದ್ರೂ ಆದ್ರೆ ! ನಡಿ-ನಡಿ ಬಿಸ್ಲು ಓಗಾನಾ !"

ನನ್ನೂ ಎಳ್ಕೊಂಡು ಒಂಟ್ಲು ನಮ್ಮಟ್ಟೀತಾವ ಬರೋತ್ಲೂವೇ ನಮ್ಮವ್ವನ ಎಸ್ರಿಡ್ದು ಕೂಗಾಕಿದ್ಲು

"ಲೇ ಅಕ್ಕಮ್ಮಾ. ಇಕಾ ನಿನ್ಮಗ್ಳು ಕೆರೆಯಾಗೆ ಲಂಗ ಎತ್ಕೊಂಡು ನಿಂತಿದ್ಲು ಕರ್ಕೊಂಡ್ಬಂದಿವ್ನಿ !"

ಅವ್ವ ಕೈಗಂಟಿದ್ದ ಅಸೀ ಇಟ್ನ ಒದರ್ಕೋತಾ ಒರಗ್ಬಂದ್ಲು

"ಏನ್ಮಾಡೋದೇಳು ಲಿಂಗವ್ವಾ, ತಿಳೀದ ಮುಕ್ಳ ಇದು ಇನ್ನೂ ಚಿಕ್ದು ಎಂಗೇಳಾದು ? ತಿಳ್ಕ್ಯಾತಾಳೇಳು ! ಒಳೀಕ್ಬಾರೇ !"

ನಾನು ಬೋ ದೊಡ್ತಪ್ಪು ಮಾಡ್ದಂಗಾಗಿ ಒಳೀಕೊರ್ಟೆ. ಅವ್ವಾ, ಲಿಂಗಜ್ಜಿ ಅದೇನೇನೋ ಗುಸುಗುಸು ಮಾತಾಡ್ಕಂತಿದ್ರು. ಒಲೇಮೇಕೆ ಬಸ್ಸಾರು ಘಮಗುಟ್ತಾ ಇತ್ತು ಅವ್ವಾ ನಾಲ್ಕು ಹಿಟ್ಟನುಂಡೆ ಮುಡ್ಗಿದ್ಲು. ನನ್ನ ನೆಗ್ಗೋಗಿದ್ದಟ್ಟೆಗ್ಗಾಕ್ಕೊಂಡು, ಬಸ್ಸಾರು, ಉಪ್ಪೆಸ್ರು ಆಕ್ಕೊಂಡು ತಿಂತಾ ಇದ್ದಾಗ ಪುಟ್ಟ ಇಸ್ಕೂಲಿನ್ಯಾಗ್ಳಿಗು ತಗ್ಲಾಕ್ಕೊಂಡು ಬಂದ !

ಅಕ್ಕಾ ಇಲ್ನೋಡು, ಯಾಪಾಟಿ ಸೀಮೆಸುಣ್ಣ ತಂದಿವ್ನಿ. ಮಾಸ್ತ್ರು ಇಂಗೋಗಿ ಅಂಗ್ಬರಾದ್ರೊಳ್ಗೆ ಎತ್ಕೊಂಬುಟ್ಟೆ!"

ಬಣ್ಣಬಣ್ಣದ ಸೀಮೆಸುಣ್ಣ ಚೆಂದಾಗೇ ಇದ್ವು. ಆದ್ರೆ ರಾಮಪ್ಪ ಮಾಸ್ತ್ರು ದ್ಯಾವ್ರಂತ ಮನಸ್ರು ಅವರ್ಗೆ ಈ ಪೋಲಿ ನನ್ಮಗ ಮೋಸ ಮಾಡೂದು ತಪ್ಪಲ್ವಾ? 'ಅಂಗೆಲ್ಲಾ ಕದೀಬಾರ್ದು ಕಣ್ಲಾ ಈಗ ಕದ್ರೋರು ನಾಳೆ ದೊಡ್ಕಳ್ಳ ಆಗ್ತಾರೆ ಓಗಿ ಕೊಟ್ಬುಡು ಬೇಕಾದ್ರೆ ಕೇಳಿ ತಗಂಡ್ಬಾ!"

"ಓಗೇ ಓಗೇ–ನಿಂಗೇಂತ ತಂದ್ರೆ ರೋಪಾಕ್ತೀಯಾ ಓಗ್ಬಿಡು–ನಂಗೇ ಆಯ್ತದೆ" ಪುಟ್ಟ ಅರ್ಕಲು ಚಡ್ಡೀ ಜೇಬ್ನಾಗೆ ಮಡೀಕ್ಕಂಡಾಗ ನಂಗೆ ಬೋ ಸಿಟ್ಟು ಬಂತು.

"ತಾಳು, ನಾನೋಗಿ ಮಾಸ್ತ್ರು ತಾವ ಯೋಳ್ಬುಡ್ತೀನಿ! ಇಟ್ಟು ಉಂಡ್ಕಂಡು!" ಎಂದೆ ಅವನ್ಗೆ ಅದೆಂಗೆ ಸುಳ್ಳು ಬತ್ತದೋ ದ್ಯಾವ್ರೆಗೆ ಗೊತ್ತು 'ಹೂ' ಅಂತ ಸುರು ಮಾಡೇಬುಟ್ಟ

ಅವ್ವ ಅವ್ನ ದನಿ ಕೇಳ್ತಿದ್ದಂಗೇ ಒಳೀಕ್ಬಂದ್ಲು. "ಯಾಕೋ ಬಡ್ಕಂತೀ? ಏನಾಯ್ತು?"

"ನೋಡವ್ವಾ ಅಕ್ಕ ಸೀಮೆಸುಣ್ಣ ಮಾಸ್ತ್ರು ನಂಗೊಟ್ಟದ್ರೆ ಕಿತ್ಕೊಳ್ಳಾಕೆ ಬರ್ತಾಳೆ ಕೊಡ್ದಿದ್ರೆ ಕಳ್ಳಾಂತ ಎಲ್ರತ್ತೂ ಯೇಳ್ತಾಳಂತೆ!"

ನಂಗೆ ಅಂಗೇ ಬರಸಿಡ್ಲು ಒಡ್ದಂಗಾಯ್ತು ನೋಡ್ಬೇಕ್ರಿ ಮಂತೆ. ನಾನೇ ಬುದ್ಧಿ ಏಳಿ ಒಳ್ಳೇದ್ಮಾಡೋಕ್ಹೋದ್ರೆ ಸುಮ್ಸುಮ್ನೆ ಸುಳ್ಳೇಳಿ ಬಡ್ಕಂತಾ ನಲ್ಲಾ ಅವ

ಅವ್ವ ನನ್ಮಾತಕ್ಕೆ ಕೈ ಎತ್ಕೊಂಡ್ಬಂದ್ಲು.

"ಏನೇ ಹಲ್ಕಟ್ರಂಡೇ ಅವ್ನ 'ಕಳ್ಳಾ' ಅಂತೀಯಾ. ದ್ಯಾವರ್ಗೆ ಅರ್ಕೆಒತ್ತು ಅವ್ನ ಎತ್ತಿದ್ದೀನಿ ತಿಳ್ಕ ಮುಕ್ಕಣ್ಣೇಸ್ವರನ ಪರ್ಸಾದ ಕಣೇ ಅವ್ನು ಅವ್ನ ಕಳ್ಳಾ ಅಂತೀಯಾ! ನಿನ್ನ ಬಾಯಿಗೆ ಮಣ್ಬೀಳಾ. ನಾಲ್ಗೆ ಉಳಾ ಬೀಳ!" ನನ್ನ ತಲೆಮೇಗೆ ಗುದ್ದಿದಳು. ನಂಗೆ ಕ್ವಾಪ ಬಂತೇ ಒರ್ತು ಅಳಾ ಬರ್ಲಿಲ್ಲಾ ಅಲ್ಲಾ ಅವ್ನು ದ್ಯಾವ್ರೆಗೆ ಅರ್ಕೆ ಒತ್ತು ಉಟ್ಟಿದ್ರೇ ನಾನೇನು ಅಂಗೇ ಬಿದ್ಯಾಗೇ ಬಿದ್ದಿದ್ನಾ? ನಾನೂ ಅವ್ನಂಗುಟ್ದೋಳಲ್ವಾ? ದ್ಯಾವ್ರು ಪರ್ಸಾದ

ದಿಂದ ಉಟ್ಟಿದ್ದೋನೆ ಆದ್ರೆ ಎಂತ ಮನೆ ಆಳ ಅವ್ನು ! ನಂಗೆ ಕ್ವಾಪ ಬಂದ್ರ ನಾಲ್ಗೆ ಅರ್ತ ಆಗ್ತೈತೆ

"ಓ, ಬುಡಪ್ಪಾ, ಅವ್ನು ಯಾವ ಸೀಮೆ ಗಂಡ್ಸು! ಇಸ್ಕೂಲ್ನಿಂದ ಮಾಸ್ತ್ರು ಆತಾಗೆ ಓದಾಗ ಕದ್ಕಂಡ್ಬಂದವ್ನೆ ನಾನು ಓಗಿ ಕೊಟ್ಟುಬಿಟ್ರೆ ಇಲ್ಲೆ ಓದ್ರೀ ಕೇಳ್ಕಂಡು ತಗಂಡ್ಬಾಂದ್ರೆ ಬಾಯಿ ಬಡ್ಕಂತಾನೆ! ನೀನು ಅವನ್ಗೀ ನೊಪ್ಪಾಕ್ಯೊ! ನಿಂಗೆ ತಿಳೀತದಿ!" ಎಂದು ಕೂಗಾಡಿ ಇಟ್ಳು, ಉಪ್ಪಿಸ್ರು ಅಂಗೀ ಬಿಟ್ಬುಟ್ಟು ಎದ್ದೆ

"ನಿನ್ನ ಆಂಕಾರ ನೋಡ್ಡಾ! ಉಣ್ಬುಟ್ಟು ಮನೇಲೀ ಗೆಯ್ತೆ ಮಾಡ್ಕೋ ಒಂಟ್ಲು ಬೀದಿ ಸುತ್ತಾಕೇ!" ಅವ್ವಾ ನನ್ಗೀ ಗದರಿದ್ಳು "ಓಗೋ ಪುಟ್ಟ ಇಟ್ಕಂಡ್ಬುಟ್ಟು ಓಗು." ನೊಂಟದಿಂದ ಐದು ಪೈಸಾ ಅವ್ನ ಕೈಗಾಕಿದ್ಲು–"ನೆಟ್ರಂಗ್ಗಿಲಿ ಏನಾರಾ ಕೊಂಡ್ಕೋ!"

ನಾನು ಅಳಾ ನುಂಕೊಂಡು ಇಟ್ಟುಣ್ಬುಟ್ಟು ಕೈತೊಳ್ಕಂಡು ಇತ್ಲಾ ಬಾಗ್ಲು ತಾವ ಒಂಟಾಗ ಪುಟ್ಟ ಕಿಸಕ್ನೀ ನಕ್ಕ "ಅಂಗೇ ಆಗ್ಬೇಕೂ ನಿಂಗೆ!"

"ಓಗೋ ಕಳ್ಳ, ನಿನಂತ ತಮ್ಮ ಇಲ್ದಿರಾದೇ ಮೇಲು!" ಅಂದ್ಕೊಂಡು ಇತ್ಲ ಬಾಕ್ಲು ತೆಗ್ದಾಕಿ ಒರಗಿದ್ದ ಬಟ್ಟೆಗೋಳ್ನ ಓಗ್ಯಾಕೆ ಕುಂತ್ಕಂಡೆ

ಅವ್ವಾ ಅದ್ಯಾರ ತಾವಾನೋ ಜೋರಾಗಿ ಮಾತಾಡ್ತಾ ಇದ್ಲು "ನೋಡು ಅವ್ವ ಆಳ್ಬಾಯಿ ಎಂಗದೆ! ಗಂಡ್ಸಾಗಾ ಆಗ್ಲಿಂತ ಇವುಳ್ಳ ದ್ಯಾವರ್ಗೆ ಬುಟ್ಬುಟ್ಟು ಅರ್ಕೆ ಒತ್ಕೊಂಡು ಇವ್ನ ಅಡ್ಡಿಡ್ಡಿನಿ ಮನೇಗೆಲ್ಲಾ ಇವ್ನೀ ಗಂಡ್ಸು. ಅವ್ನ ಮುದ್ಮಾಡ್ತೀನಿ ಅಂತ ಅವಳ್ಗೆ ಒಟ್ಟೀ ಉರಿ"

ನಾನು ನೀರು ಮುಕ್ಕೊಂಡು ಕಸಕಾತ್ತ ಅಲ್ಲು ಕಡ್ದೀ ಅವ್ನು ಇನ್ನೊಂದಿನ ಶಿಕ್ಷೀ ಬಿಡ್ತಾನಾ! ಪೂಜಾರಪ್ಪಂಗೇಳಿ ನಾಲ್ಕು ಕೊಡಿಸ್ತೀನಿ ಅಂದ್ಕಂಡೆ, ಅದ್ಸರಿ ಅದೇನು ಅವ್ವ ನನ್ನ ದ್ಯಾವರ್ಗೆ ಬುಟ್ಬುಟ್ಟು ಅನ್ನ ಅಡದ್ಲಾ? ಅಂಗಾರೆ ಅವ್ವಂಗೆ ನಾನು ಬ್ಯಾಡ್ವಾ ಬ್ಯಾಡ್ವೇನೋ ಅದ್ಕೇ ನನ್ಕಂಡ್ರೇ ಆಗಾಕಿಲ್ಲ ಅವಳ್ಗೆ ಅಪ್ಪಯ್ಗೀ ನಂಗೆ ಸರಿ ಅತ್ರ ಕುಂಡಿರಸ್ಕಂಡು ತಲೆ ಸವರ್ತಾನೆ ಅಂಗ್ಡಿಂದ ಬತ್ತಾಸು ತಂದ್ಕೊಡ್ತಾನೆ. ಜಾತ್ರೆ ಹೋದಾಗ ಬಳೆ ರಿಬ್ಬನ್ನು ತಂದ್ಕೊಡ್ತಾನೆ ಅವ್ವಾ ಗದರ್ಕಂಡ್ರೆ "ಸುಮ್ಕಿರೆ! ಅವ್ಳು ಏನಾರ ಅಂದ್ರೆ ನಿನ್ನ ಸುಮ್ಕೆ ಬಿಡಾಕಿಲ್ಲಾಂತಾನೆ ಅಪ್ಪಯ್ಯ ಊರ್ನಾಗಿಂದ

ಒರಾಗಂಟ ನಾನು ಇಂಗೇ ಅನ್ನನ್ನಾವ, ಪುಟ್ಟನ್ನಾವ ಅಸ್ಕಿಸ್ಕಂಡಿರ್ಬೇಕೇಸೋ!
'ಅಪ್ಪಯ್ಯ ನೆನಸ್ಕಂಡಾಗ ಚಿಣ್ಣಿಗೆ ತಿಸಿ ಬತ್ತೈತ ಇಂಗೈನಾಗೆ ಮೂಗು ಕಣ್ಣು ಒರಸ್ಕೊಂಡು ಬಿಟ್ಟಿ ಕಸ ತ್ತ್ರೀಸಿ

ಕಲ್ನಾ, ಚಾನ ಮುಗಿಸ್ . ಲಂಗಕ್ಕೆ ಕೈ ತಿಕ್ಕಿ ಒರಸ್ಕಂಡು ಒರಗ್ಬಂದ ಪಕ್ಕದಟ್ಟೀ ಮಲ್ಲವ್ವ ಅಕ್ಕಿ ಕೇರ್ತಾ ಕುಂತಿದ್ಲು. ಅವಳ್ತಾವ ಓಗಿ ಕುಂತ್ಕಂಡು ಅಕ್ಕೀಗ ನಾನು ಕೈ ಇಕ್ಕಿ

"ಏನೇ ಕೆಲ್ಸಾ ಆಯ್ತೇನೇ? ಆಂಗಾ ಎಲ್ಲಾ ಯಾಕೇ ಈಪಾಟೀ ಒದ್ದೀ ಮಾಡ್ಕಂಡಿದ್ದೀ? ಸೀರ್ಯಾಗಾಪಾ ಇದ್ಯಾ?"

'ಇಲ್ಲ ಕಸನಾ ಬಿಟ್ಟಿ ಒಗ್ದಾಕಿತ್ತಿ ಇದ್ದ" ನಾನು ತಲಿ ತುರಿಸ್ಕಂಡೆ ಮಲ್ಲವ್ವನ್ನೇ ಕೇಳಾದು ದ್ಯಾವರ್ಗ ಬಿಡಾದೂಂದ್ರೇನೂಂತ ಅವ್ವ ನನ್ಯಾಕೆ ಒಟ್ಕೊಂತ

'ಮಲ್ಲವ್ವಾ, ಮಲ್ಲವ್ವಾ ದ್ಯಾವರ್ಗ ಬುಡಾದೂಂದ್ರೇನು?' ಮಲ್ಲವ್ವ ಕೈನಾಗಿನ ಅಕ್ಕಿ ಅಂಗೇ ಉಳ್ಕಂತು

ಮಲ್ಲವ್ವ ನನ್ನೇ ನೋಡಿದ್ಲು

"ಏಯ್, ಸುಮ್ಕಿರು, ನಿಂಗ್ಯಾಕದೆಲ್ಲಾ ಉಸಾಬರಿ!"

"ಏಳವ್ವಾ ನಂಗೇ ನಾನ್ಯಾರ್ತಾವಾನೂ ನೀ ಏಳ್ದೇಂತ ಏಳಾಕಿಲ್ಲ" ನಾನು ಅಂಗೇ ಕುಂತ್ಬುಟ್ಟೆ ಮಲ್ಲವ್ವನ ಕೈನಾಗಿನ ಅಕ್ಕಿ ಮೊರ ಅಂಗೇ ಇತ್ತು 'ಉಸ್' ಅಂತ ಉಸುರ್ಬುಟ್ಟು ಸೆರಗ್ನಿಂದ ಮುಕ ಒರಸ್ಕಂಡ್ಲು

"ಅದೇನ್ ಬೋ ದೊಡ್ಡ ಇಸ್ಯಾ! ಎಣ್ಮಕ್ಳು ದ್ಯಾವ್ರ ಸೇವೆ ಮಾಡ್ಲೀಂತ ದ್ಯಾವರ್ಗೆ ಬುಡಾದು ಮನ ಇರೀಕ್ರು ಅರಸ್ಕಂತಾರೆ ದ್ಯಾವರ್ಗೆ ಬುಟ್ಟ ಹೆಣ್ಮಕ್ಳು ಸತ್ಮೇಕೆ ದ್ಯಾವ್ರ ತಾವಾನೇ ಒಂಟೋಯ್ತಾರಂತ ಸ್ವರ್ಗ ಸಿಕ್ತೈತಂತೆ"

ನಂಗೆ ಒಳೀಲಿಲ್ಲ ದ್ಯಾವ್ರ ಸೇವೆ ಅಂದ್ರೇನು! ಪೂಜಾರಪ್ಪಾನೇ ಸೇವೆ ಮಾಡೂದು ಏನಿದ್ರೂ ಓದ ವರ್ಸಾ ನಾನು ದ್ಯಾವ್ರು ತಲೀ ಮ್ಯಾಲೆ ಒತ್ಕಂಡು, ದ್ಯಾವ್ರ ಕೆರ್ಯಾಗೆ ಮೈತೊಳ್ದು, ಮೈಮ್ಯಾಗೆ ಏನೂ ಆಕ್ಕೊಳ್ದೇ, ಬೆಳ್ದಂಗ್ಳ ರಾತ್ರೀಲಿ, ಬರೀ ಬೇವಿನ್ಸೊಪ್ಪಿಂದ ಮೈ ಮುಚ್ಕಂಡು, ದ್ಯಾವ್ರು

ಎತ್ಕೊಂಡೋಗಿ ಮಂಗ್ಳಾರ್ತಿ ಮಾಡ್ಸಿ, ಊದ್ಬತ್ತಿ ಅತ್ಸಿ ಅಡ್ಬಿದ್ದಿದ್ದೆ. ಅಪ್ಪಾಸ್ನ, ಲಿಂಗಜ್ಜೀನ 'ಇವೆಲ್ಲಾ ಇಂಗ್ಯಾಕೆ-ನೀವೂ ನನ್ನಂಗೆ ಮೈ ತೊಳ್ಕೊಂಡು ದ್ಯಾವ್ರ್ನ ಒತ್ಕೊಳ್ಳೀ !" ಅಂತ ಆಟ ಮಾಡ್ವಾಗ ಅವ್ವ ತೊಡೆ ಜಿಗುಟ್ಬುಟ್ಳು, 'ಸುಮ್ಕೀ ಒತಂಡು ನಡೀ, ಎಚ್ಚಾಟ್ರಾಡಿದ್ರ ತಲೆ ಬುಲ್ಡೀ ಒಡ್ದಾಕ್ಬುಟ್ಟೇನು!' ಸಂಜೊತ್ಗಾಗೆ ಇನ್ನೂ ಮೂವರು ಬಂದಿದ್ರು ಚಂದ್ರಿ, ಎಲ್ಲಕ್ಕ, ರುದ್ರಿ, ತಿಸ್ಸೀ ನನ್ನಂಗೇ ಮೈ ತೊಳ್ಕೊಂಡು ಬರೀ ಬ್ಯಾವಿ ನೊಸ್ಲಿಂದ್ಲೇ ಮೈ ಮುಚ್ಕೊಂಡು ದ್ಯಾವ್ರ್ನ ಒತ್ಕಂಡು ತಿಂಗಳ ಬೆಳಕ್ನಾಗೇ ನಡ್ಕಂಡು ಬಂದಿದ್ರು ಅದೆಂತಾ ದ್ಯಾವ್ರ ನೀವೆ ಅಂದ್ರೆ ಬದ್ಲು ಮೈ ತೋರ್ಸ್ಕಂಡು ಈಭೂತಿ ಅಚ್ಕಂಡು, ಒಸಾ ಒಟ್ಟೆ ಬರೇ ಅಕ್ಕಂಡು ಕಾಯಿ ಅಣ್ಣು ಮಾಡಿಸ್ಕಂಡು, ಧೂಪಾರ್ತಿ ಮಾಡಿಸ್ಕಂಡು, ದ್ಯಾವ್ರಿಗೆ ಅಡ್ಬಿದ್ದು, ಪರ್ಸಾದ ತಿಂದ್ಕಂಡು ಆಡು ಆಗಲ್ನಾಗೇ ಒಗಾದೇ ಚೆಂದ. ದ್ಯಾವರ್ಗೆ ಕಣ್ಣಿಲ್ವ ? ಕಳ್ತನ ಮಾಡ್ಬಂಗೆ ರಾತ್ರೇಲಿ, ತಿಂಗಳ ಬೆಳಕ್ನಾಗೆ ಯಾಕೆ ಮಾಡ್ಬೇಕೂಂತೀನಿ.

"ಓಗು, ಆಡ್ಕೋ ಓಗು ನಾಗಿ ಗಜ್ಗ ಆಡ್ತಾವ್ಳೆ. ಏಚ್ಚೆ ಮಾಡ್ತಾ ಕುಂತ್ಕಂಡ್ರಲ್ಲ ಸೀಸಿನ್ನೂ ಚಿಕ್ಕೋಳು !"

ನಂಗ್ಯಾಕೋ ನಾಗಿ ತಾವ ಆಡಾಕ್ಕೋಗಾಕೆ ಮನ್ಸು ಬರಾದಿಲ್ಲ ನನ್ನ ನೋಡಿ ಯಾವಾಗ್ಲೂ ಮುಸಿ, ಮುಸಿ ನಗ್ತಾಳೆ ಕೆಂಪಿ ತಾವ ಏನೇನೋ ಏಳವ್ಳಂತೆ ನಾನು ದೊಡ್ಡವ್ಳಾದಮ್ಯಾಲೆ ಗೌಡ್ರ್ನ ಮಡೀಕ್ಕಂತೀನಂತೆ. ಅಸ್ಸೀ! ಗೌಡ್ರ ಮುಕ ನೋಡು ಎಂಗೈತೆ! ಆ ಮೀಸೇನೋ, ಕೊಳೆತ ಅಲ್ಲುಗ್ಳೋ, ಕೆಂಗಣ್ಣೋ, ನಂಗೆ ಬ್ರಮ್ಮ ರಾಕ್ಸಸ ನೋಡ್ದಾಂಗಾಗ್ತೈತೆ ನನ್ಕಂಡ್ರೆ ಅವಳ್ಗೆ ಒಟ್ಟೆ ಉರಿ, ನಾನು ಕೆಂಪ್ಗಿದ್ದೀನಿಂತ ಅವ್ಳಂಗೆ ನಂಗೇನೂ ಉಬ್ಬಲ್ಲಿಲ್ಲ ಅವ್ವಾನೆ ಒಂದೊಂದ್ಸಲ ಏಳ್ತಾಳೆ ನನ್ನಲ್ಲು ಒಳ್ಳೇ ಮಣೆ ಪ್ರಾಣೆಸ್ಸಂಗಿದೇಂತ ನಾಗೀ ಅವ್ವಾ ಮಲ್ಲಮ್ಮಾನೇ ಏಳವ್ಳೆ ನನ್ನ ಕಣ್ಣುಗ್ಳು ಬಟ್ಲುಂಗವೇಂತ ಅಜ್ಜೀಗಂತೂ ನನ್ನ ಮೂಗು, ಗಲ್ಲ ಬಲು ಚೆಂದಾಂತೆ, 'ಮಲ್ಲಿನ್ನಾ ನಾನು ಪೂಜಾರಪ್ಪನ್ಮನೆಗೋಗಿ ಉಲ್ಲು ಕಿತ್ಕಂಡ್ಬರ್ಬೇಕು ತುಂಬಾ ಗರ್ಕು ಒಂಪ್ಳತೆ ನಮ್ಮಸಗಳ್ಗೆ ಬಲು ಪಿರೀತಿ ಗರ್ಕೇಂದ್ರ"

ನಾನು ದೇವಸ್ಥಾನದ ಅತ್ರ ಓಡ್ದೆ ದೇವಸ್ತಾನದ ಹಿಂಭಾಗಕ್ಕೆ ಪೂಜಾರಪ್ಪ ಸಿವಣ್ಣೋರ್ಮನೆ. ಪುಟ್ಮನೆ, ಸಿವಣ್ಣೋರ ಎಡ್ತಿ ಪಾರೋತಮ್ಮ

ದ್ಯಾವರಂತ ಎಂಗ್ಸ್ನ. ನಾನು ಉಪ್ಲೂ ಗಿಲ್ಲೂ ಕಿತ್ತಾಕಕ್ಕೆ ಒಂಟಾಗ್ಲೆಲ್ಲಾ ತಂಗ್ಳುಪಂಗ್ಳು, ತಿಂಡಿ, ಕಾಸು ಕೊಡ್ತಾರೆ, ಬಾಯ್ತುಂಬಾ ನನ್ನ ಪಿರೀತಿಯಿಂದ ಮಾತಾಡ್ಸ್ತಾರೆ ಆಕೀ ಬಟ್ಟೆ, ಲಂಗ ಇದ್ರ ಕೊಡ್ತಾರ

"ಏನೇ, ಸಿವ್ಮನ್ವ ಚೆಂದಾಕವ್ಳಾ? ಉಂಡ್ಳಾ? ಒಟ್ನಸೀತಾದಾ?" ಅಂತ ಏನಾರ ಕೇಳ್ತಾರ ಪೂಜಾರಪ್ಪ ಸಿವಣ್ಣೋರೂ ಅಂಗೇಯ ಬಾಯ್ತುಂಬಾ ಮಾತಾಡಿನ್ದೇ ಇದ್ರೂ ನೂವ ನನ್ನ ನೋಡ್ತಾಗ್ಲೆಲ್ಲಾ ನಗ್ತಾರೆ ಕೈಗೆ ಇಭೂತೀನೋ ಊವ್ನೊ ಆಕ್ತಾರ ಪರ್ಸಾದಾಂತ ಪೂಜಾರಪ್ಪನ್ಮನೇಲಿ ನಂಗೇ ಬೋ ಇಸ್ಟಾಂದ್ರೆ ಪಾರೋತನ್ನೋರ ತಮ್ಮ ನೀಲಿರಪ್ನೋರು ಒಂದೊಂದ್ಸಲ ಬತ್ತಾರ ಅಕ್ಕನ್ಮನೇಗ ಅವ್ರು ಪಟ್ಣದಾಗೆ ಅದೇನೋ ದೊಡ್ಡ ಪರೀಕ್ಷ ಕಟ್ಟಿ ಓದ್ತಾವ್ರಂತೆ ಅವ್ರು ಬಂದಾಗ್ಲೆಲ್ಲಾ ನಾನಲ್ಲಿಗೋಯ್ತೀನಿ ಅವ್ರು ನೋಡಾಕೆ ಬೋ ಚೆಂದ ಟೇಂಟ್ ಸಿನಿಮಾದಲ್ಲಿ ನಾನೋಡಿದ್ದ ರಾಜಕುಮಾರ ಇದ್ದಂಗೇ ಅವ್ರೆ ಅವ್ರು ಆಕಾ ಬಟ್ಟೆ ಕೊಕ್ಕ್ರು ಅಂಗೆ ಬೆಳ್ಳಗಿರ್ತೈತೆ ಕಾಲ್ನಾಗೆ ಯಾವಾಗ್ಲೂ ಚಪ್ಲಿ ಮೆಟ್ಕಂಡಿರ್ತಾರ ಒಂದೊಂದ್ಸಲ ಕೈನಾಗೆ ಸಿಕ್ರೇಟೂ ಇಟ್ಕೊಂಡು ನೇದ್ತಾರ ನಮ್ಮಪ್ಪಯ್ಯ ಬಿಡಿ ಅತ್ತಿಸ್ಕಂಡಂಗೆ ಅವ್ರು ನಕ್ರೆ ಬಲು ಚೆಂದ ಅಂಗೇ ಅವ್ರನ್ನೇ ನೋಡಾನಾ ಅನ್ನಿಸ್ತೈತೆ ಒಮ್ಮೊರ್ಸ ಬಂದಾಗ ನಾನು ಉಲ್ಲು ಕೀಳಾಕ್ಕೋಗಿದ್ದಾಗ ಅವ್ರು ನನ್ತಾವಕ್ಬಂದು ಮಾತಾಡ್ಸಿದ್ರು. "ನಿನ್ನೆಸ್ರೇನು? ಎಲ್ರ ಮನೇ ಇತ್ಲಿಗೂ ಒಯ್ತೀಯಾ ಉಲ್ಲು ತರ್ಯಾಕೇಂತ" ನಂಗೆ ಅವ್ರ ತಾವ ಮಾತಾಡ್ನಕ್ಕೆ ನಾಚ್ಕೆ ಆಗೋಯ್ತು ಅಂಗೇ ಓಡಿ ಬಂದ್ಬುಟ್ಟಿದ್ದೆ. ನಾನು ಲಗ್ನ ಆದ್ರೆ ಅಂಗಿರೋರ್ನೆ ಆಗಾದು

ನಾನು ಬಂದದ್ನೋಡಿ ಪಾರೋತಮ್ಮ ನೆಗಾಡಿದ್ರು "ಏನು ನೆನ್ನೆ ಮನ್ನೆ ಬರಾಕಿಲ್ವಾ? ಯಾಪಾಟಿ ಉಲ್ಲು ಸಿದ್ಧಮ್ಮ ಬಂದು ತರ್ಕಂಮೋದ್ಲು ಈಗೆಲ್ಲೋ ಅಸ್ಟಿಸ್ಟು ಐತೇ" ಅಂತ ಪಾರೋ ತಮ್ಮಂಗೆ ಪಾಪ ದ್ಯಾವ್ರು ಒಂದ್ಮಗಾ ಉಟ್ಟಿಸ್ಲಿಲ್ಲಾ. ಇದ್ದಿದ್ರ ಎಂಗೆ ಪಿರೀತಿ ಮಾಡಿ ಸಾಕ್ತಾಂಡಿರೋರೊ! ಅಪ್ಪೇ ಮಕ್ಳಂದ್ರೆ ಪರಾಣಾ ಬಾಡೋದು "ಏನೋ ಬರ್ಲಿಕ್ಕಾಗ್ಲಿಲ್ಲವಾ ಅವ್ವಂಗುಸಾರಿರ್ಲಿಲ್ಲಾ" ಅಂದೆ 'ಊಂ ಮತ್ತೆ ಎಲ್ಲಾ ಕಡೆ ಸೀ ಜರ ಬಾಳ ಐತೆ. ಇವೊತ್ತು ಸಿದ್ಧಮ್ಮ ಪಾತ್ರೆ ತೊಳ್ಳು ಕಸ ಬಳ್ಯಾಕೂ ಬರ್ಲಿಲ್ಲಾ" ಅಂದ್ರು. ಪಾರೋತಮ್ಮನೋರೇ ಎಲ್ಲಾ ಕೆಲ್ಸಾ ಮಾಡ್ಕಂಡಿದ್ರೋ ಏನೋ,

ನಾಸೂ ಉಸಾರಾದ ಮೆಲ್ಲಗೆ ಕೇಳ್ದೆ. "ಅವ್ವಾ, ಏನಾರ ಕೆಲ್ಸ ಇದ್ರೇಳಿ ಮಾಡಿಕೊಟ್ಟುಬಿಟ್ಹೋಯ್ತೀನಿ" ಅಂದ ಪಾರೋತಮ್ಮ ಒಂದ್ಗಳ್ಗೆ ಸುಮ್ಕಿದ್ರು "ಏನಿಲ್ಲ-ಒಂದೀಟು ಮುಸ್ರೆ ಪಾತ್ರೆ ಐತೆ ಮನೆ ಕಸಾ ಬಳಿಯೋದೈತೆ" ಎಂದ್ರು "ಪಾತ್ರೆ ಆಕಿ ತೊಳಕೊಟ್ಟು, ಹಿಂಗೇ ಕಸಾ ಒಡ್ದು ಓಯ್ತೀನಿ" ಅಂದೆ "ಬ್ಯಾಡಾ ಬುಡು ನಾಳೀಕೆ ಸಿದ್ದಮ್ಮ ಬಂದಾಳು" ಅಂದ್ರು "ಏಯ್ ಬುಡವ್ವಾ ಇವೆಲ್ಲಾ ಏನು ದೊಡ್ಡೆಲ್ಸಾ!" ಅಂದು "ನಿಮ್ಮನೇ ಕೆಲ್ಸ ಮಾಡ್ಕೊಟ್ರೆ ಕೈಕಾಲು ಸವುದೋಯ್ತದಾ? ಎಂದೆ

ಪಾತ್ರೆಗಳ್ನ ಗಸಗಸ ತಿಕ್ಕಿ ತಳತಳಾಂತ ಒಳ್ಯೊ ಆಂಗೆ ತೊಳ್ದೆ ಬರ್ಲ್ಲು ತಗೊಂತು ಮನೇನೆಲ್ಲಾ ಚಂದಾಗಿ ಗುಡಸ್ಬಿಟ್ಟೆ ಪಾರೋತಮ್ಮ ಕೆಲ್ಸ ಮಾಡಾದ್ಮೇಲೆ ಒಂದು ಗಾಜಿನ ಲೋಟ ತುಂಬಾ ಬಿಸಿಬಿಸಿ ಕಾಪಿ ಕೊಟ್ರು ನಂಗ ಕಾಪಿ ಅಂದ್ರೆ ಬೋ ಪಿರೀತಿ ಅವ್ವಾ ಮಾಡಾದೇ ಇಲ್ಲ ಮಾಡಿದ್ರೂ ಬೆಲ್ಲ ಆಕ್ಬುಟ್ಟು ಬಟ್ಟ್ಯಾಗೆ ಸೋಸ್ಬುಡ್ತಾಳೆ ಪಾರೋತಮ್ಮ ಕಾಪಿ ಸಕ್ರೆ ಆಕಿ ಚೆಂದಾಗಿ ಮಾಡ್ತೆಕ್ಕೀಡ್ತಾರ ಕಾಪಿ ಕುಡಿತಿದ್ದಂಗೇ ಒಳೀಕ್ಕಿಂದ ಒಂದೀಟು ಅವಲಕ್ಕಿ, ಕೊಬ್ರಿ ಬೆಲ್ಲ ತಂದ್ಕೊಟ್ರು "ಇಲ್ಲೇ ತಿಂದ್ಬುಟ್ಹೋಗೂ ತಮ್ಮಂಗೇಂತ ಮನೇಗೆ ಎತ್ಕಂಡೋಗ್ಬೇಡಾ" ಅಂದ್ರು. ಮಡ್ಲಲ್ಲಿ ಆಕ್ಕಂಡು ಅಲ್ಲೇ ಮೂಲೇಲಿ ತಿಂತಾ ಕೂತೆ ಆಗ ನಂಗನ್ನಿಸ್ತು, ಪಾರೋತಮ್ಮಂಗೆಲ್ಲಾ ತಿಳಿದಿರ್ತೈತೆ ಮುಕ್ಲಿಮ್ಮನ್ತಾವ ಕೇಳಿದ್ನ ಕೇಳಾನಾಂತ ದ್ಯಾವರ್ಗೆ ಬುಟ್ರೆ ಮಕ್ಳಾಗೋಂಗಿದ್ರೆ ಪಾರೋತಮ್ಮ ಯಾಕೆ ಯಾರ್ನೂ ದ್ಯಾವರ್ಗೆ ಬಿಡ್ನಿಲ್ಲ!

ಅವ್ವಾ, ನೀವೊಂದು ಮಗಾ ಎತ್ಕಳ್ಳೀ" ಅಂದೆ

ಪಾರೋತಮ್ಮ ಎಂಗೋ, ಎತ್ಲೋ ನೋಡ್ಕಂಡು ನಕ್ರು "ನಂಗೆ ಬ್ಯಾಡ್ವೇ ನನ್ಮಗಾಂತ ಇವ್ನ ಸಾಕ್ಕಂಡಿದ್ದೀನಿ!" ಅಂತ ನೆಖ್ರುಪ್ಪೋರ ಫೋಟೋ ತೋರ್ಸಿದ್ರು

"ದ್ಯಾವರ್ಗ ಬುಟ್ರೆ ಆಯ್ತವಲ್ಲಾ? ನೀವ್ಯಾಕೆ ಬಡ್ತಿಲ್ಲಾ?" ಎಂದಾಗ ಪಾರೋತಮ್ಮ ನನ್ಕಡೆ ಒಂತರಾ ನೋಡಿದ್ರು "ನಾವು ಅಂಗೆಲ್ಲಾ ಬುಡೂಲ್ಲ ಅಂಗೆಲ್ಲಾ ಮಾಡೋದು ತಪ್ಪು! ಅದ್ಸರಿ, ನಿಂಗೆಷ್ಟು ವರ್ಸಾ?" ಅಂತಂದ್ರು ನಂಗೆ ಸರ್ಯಾಗೆ ತಿಳೀದು ಅವ್ವಾ ಒಂದಪ ಗಿರಿಯಮ್ಮನ್ತಾವ ಏಳ್ತಾ ಇದ್ಲು "ನಾಳೆ ಸ್ರಾವಣಕ್ಕ ಅನ್ನೆಲ್ಡಾಯ್ತು!" ಅದ್ನೇ ಏಳ್ದೆ. ಪಾರೋತಮ್ಮ ನಿಟ್ಟುಸ್ರು

ಬುಟ್ರು 'ಪಾಪ ನೀನು ಒಪ್ಪದಾಂತಾ ಉಡ್ಗಿ ಅನ್ಯಾಯ ಮಾಡಿದ್ಲು ನಿಮ್ಮವ್ವಾ!' ಅಂದ್ರು ಅದೇ ಸಮಯಾಂತ ನಾನು ಕೇಳ್ಬುಟ್ಟೆ "ಅದ್ಯಾಕವ್ವಾ ಅಂಗಂತೀಯ !"

"ಮತ್ತೇನ್ಮಗ್ಳೆ! ಇಲ್ಲ ಗಂಡ್ಸ್ರಗಾ ಆಗ್ಲಿಲ್ಲಾಂತ ನಿನ್ನಂತಾ ಚೆಂದಾಕಿದ್ದ ಎಣ್ಮಗೂನ್ನ ದ್ಯಾವ್ರಿಗೆ ಒಪ್ಸಿ ಬುಟ್ಬುಡಾದಾ ?"

"ಅಂಗಂದ್ರೇನವ್ವಾ ?" ನಾನು ಮುಲವ್ವಸ್ಕೇಳ್ದಾಗ ಅವ್ರು ಏಳ್ಲಿಲ್ಲ!"

ಸಾರೋತಮ್ಮ ನನ್ನಡಿಕೇ ನೋಡಿದ್ರು "ಅಂಗಂದ್ರೆ ನೀನು ದ್ಯಾವ್ರ ಸೇವೆ ಮಾಡ್ಕಂಡಿರ್ಬೇಕೂ ಲಗ್ನ ಗಿಗ್ನ ಆಗಾಂಗಿಲ್ಲ ನನ್ನ ಕೈನಾಗಿದ್ದ ಅವಲಕ್ಕಿ ಬೆಲ್ಲ ಅಂಗೇ ಉಳ್ಕಂತು "ಊಂ, ಅಂಗೇನಿಲ್ಲ ನಾನು ಲಗ್ನ ಆಗೇ ಆಗ್ತೀನಿ" ಅಂದ 'ಊಂ ಅದೇ'ಯಂತೆ ದ್ಯಾವ್ರು'" ಅಂದ್ರು ಸಾರೋತಮ್ಮ 'ನಿನ್ಗ್ಯಾನಾಗೆ ಅದ್ಯಾಕಂಗ್ಯಾಡ್ತಾರೋ! ನಿಮ್ಮವ್ವ ಐದು ಹಣ್ಮಕ್ಳು ಆಡದ್ಲು, ಐದೂ ತೀರ್ಕೊಂಡ್ವು ಆಮ್ಯಾಕೂ ನೀನು ನಿಂಗೂ ಕಾಯ್ಲೇ ಆಗಿ ಬದ್ಕಿದ್ದೇ ಎಚ್ಚಾಯ್ತು ನೀನಾದ್ಮೇಲೆ ಮತ್ತೆ ಮೂರು ಎಣ್ಣು ಎತ್ಲು, ಒಂದೂ ಉಳೀನಿಲ್ಲ. ನಿಮ್ಮಜ್ಜೀಗೆ ನಿಮ್ಮವ್ವಗೊಂದು ಗಂಡಾಗ್ಲೀಂತಾನೆ 'ದ್ಯಾವ್ರಿಗೆ ಅರಕ್ಕೆ, ನಮ್ಮನೇಲಿ ನೀನೊಬ್ಳೇ ಮಗ್ಳು ನಿನ್ಗಂಡನ್ಮನ್ಯಾಗೆ ಅವುರೊಬ್ರೇ ಎಲ್ಲ ಕಡೇ ಆಸ್ತೀನೂ ಆದಾಕೆ ಒಂದ್ಗಂಡು ಬ್ಯಾದ್ವಾಂತ-' ನಿಮ್ಮವ್ವ ಅರಕ್ಕಂದೇಬುಟ್ಲು ಏಗಿದ್ರು ಇವ್ಳು ಕಾಯ್ಲೆ ಬಂದು ನರಳೀ ಉಳ್ಕಂಡಳ್ಳ. ಒಂಗ್ಗಡ್ಮಗಾ ಆದ್ರೆ ಇವ್ಳ್ನ ದ್ಯಾವರ್ಗೇ ಬುಟ್ಬುಡ್ತೀನೀಂತ ಆಮೇಲೆ ನಿನ್ತಮ್ಮ ಪುಟ್ಟ ಉಟ್ಕಂಡ" ಸಾರೋತಮ್ಮ ನೆರಗ್ನಿಂದ ಅಣೇ, ಕತ್ತು ಒರಸ್ಕಂಡ್ರು "ಒಗ್ಲಿ ತಿಂದೋಗು ಯಾರಾರ ಅಣೇ ಬರಾ ಎಂಗಿದ್ಯೋ" ಅಂದ್ರು

ನಂಗೆ ಮನಸ್ಸು ಒಂತರಾ ಆಗೋಯ್ತು ಅಲ್ಲಾ ಮತ್ತೆ ನಾಯೇನೋ ಕಾಯ್ಲೆ ಬೆದ್ಕೊಬೇದೂ ಪುಟ್ಟನ್ಕಂಡ್ರೆ ನಂಗೂ ಪಿರೀತೀ ಐತೆ ನನ್ನ ದ್ಯಾವರ್ಗೆ ಬುಡ್ಡೇ ಇದ್ರ ಪುಟ್ಟ ಉಟ್ತಿರ್ನಿಲ್ಲಾ ? ಉಟ್ಟಾಯ್ತು ದ್ಯಾವರ್ಗೆ ಬಿಡೋಲ್ಲಾಂದ್ರೆ ನನ್ನೇನ್ಮಾಡ್ತಾನೆ' ಅವ್ವನ್ಹತ್ರ ಕೇಳ್ಬೇಕೂ ನನ್ನ ದ್ಯಾವರ್ಗೆ ಬಿಡ್ಬೇಡಾ ನಂಗೂ ಲಗ್ನ ಮಾಡು. ನಂಗಾಸೇಂತ. ಎಲ್ರಂಗೆ ನಂಗೂ ಗಣ್ತಿ ಅಂಗೆ ಗಂಡ, ಮಕ್ಳ್ಯಾಂತ ಆಸೆ ಇದೇಂತ. ಅವಲಕ್ಕಿ ತಿಂದ್ಮುಗ್ಸಿ ಲಂಗ ಎತ್ತಿ

ಬಾಯಿ ಒರಸ್ಕಂಡು ಎದ್ದಾಗ ಪಾರೋತವ್ವ ಏಳಿದ್ರು—"ನೀನು ಎನೇನೋ ತಲೇಗೆ ಅಚ್ಕಾಬ್ಯಾಡಾ ಸಿನ್ಪಾಡಿಗೆ ನೀನು ಆಡ್ಕಂಡಿರು ನಮ್ಮ ಸೇಖರ ಮುಂದಿನ್ವಾರ ಬತ್ತಾನೆ ಅವನ್ಕೈಲಿ ಸಿಮ್ತಂದಗೆ ಏಳ್ತೀನಿ—! ಅಂದ್ರು. ನಂಗೆ ಬೋ ಖುಸಿ ಆಗೋಯ್ತು. ಅಪ್ಪಯ್ಯಂಗೆ ನನ್ಕಂಡ್ರೆ ಪಿರೀತಿ—ನೇಕ್ರಪ್ಪ ಏಳ್ಬುಟ್ರೆ ಕಂಡಿತಾ ಒಪ್ಕಂತಾರೆ

ಕುಣ್ಕಂಡೇ ಅಟ್ಟೆ ಕಾವಕ್ಕೆ ಬಂದೆ ಅವ್ವ ಸೊಪ್ಪು ನೋಸ್ಕಂಡು ಕುಂತಿದ್ಲು "ಎಲ್ಗೋಗಿದ್ದೇ ಮೂದೇವಿ ಅರ್ದ ಇಟ್ಟುಣ್ಬುಟ್ಟು ಓಗಿದ್ಯಲ್ಲೇ ಚಿನಾಲಿ! ಇರಾ ಉಟ್ಕೋಡು! ಮೈ ಕೈ ತುಂಬ್ಕೊಂಡು ಯಾವಾಗ ಬೆಳ್ಯೋದು! ರತ್ನೀನ ನೋಡು ಎಂಗೆ ಬೆಳ್ಕಂಡವ್ಳೆ ಅವಳ್ಗೂ ನಿನ್ನ ವಯ್ಸೇ! ಚೆಂದಾಕೆ ತಿಂದ್ರಲ್ವೇ! ಮೂರೊತ್ತೂ ಮನೆ ಮನೆ ತಿರ್ಗಾಡೋದೇ!"

ನಾನು ಅವ್ವನ್ಮುಂದೆ ಕೂತ್ಕಂಡು ಗಲ್ಲಕ್ಕೆ ಕೈಕೊಟ್ಟು ನೋಡ್ದೆ "ಅವ್ವಾ ಪಾರೋತವ್ನೋರ್ಮನೇಗೋಗಿ ಪಾತ್ರೆ ತೊಳ್ದು ಕಸಾ ಗುಡಿಸ್ಬುಟ್ಟು ಬಂದೆ ಸಿದ್ದವ್ವ ಬಂದಿಲ್ಲ."

ಅವ್ವಾ ನನ್ನ ಮುಂದಲೆ ಸರಿ ಮಾಡಿದ್ಲು "ಸೀರಣ್ಗೆ ತಗಂಡ್ಬಾ. ತಲೆ ಬಾಚ್ತೀನಿ ನೀನು ಕೈಗೇ ಸಿಗಾದಿಲ್ಲ"

ಅವ್ವ ತಲೆ ಬಾಚಿ, ಮುಂದಲೇ ತಿಂಡಿ ಬಿಗಿಯಾಗಿ ಜಡೆ ಅಣದ್ಲು "ಕೂದ್ಲೆಲ್ಲಾ ಉದ್ರೋಗ್ತಾ ಬಂತು ಯಾಪಾಟಿ ಸಣ್ಣ ಆಯ್ತು ನೋಡು ಸೊಂಟದ ತನ್ಕ ಇತ್ತು ನಾಳಿಕೆ ತಲೆ ತೊಳ್ಯೋ ನೀರು ಕಾಯಿಸ್ತೀನಿ." ಅವ್ವನ ಪಿರೀತಿ ನಂಗೆ ಸಿಗಾದು ಪುಟ್ಟ ಇಲ್ದಿದ್ದಾಗ ಮಾತ್ರ. ಅವ್ನು ಎಲ್ಲೋ ಗೋಲಿ ಆಡೋಕ್ಕೋಗಿದ್ದ 'ಕೈಕಾಲು ಮಕ ತೊಳ್ಕಂಡ್ಬಾ!' ಅಂದ್ಲು. ನಾ ನೋಗಿ ನಿರ್ಮಾಗೆ ಕಾಲು, ಕೈ ಮುಖ ತೊಳ್ಕಂಡ್ಬಂದೆ ಅವ್ವ ಮುಂದಲೆ ತೀಡಿ ಗಲ್ಲ ಇಡ್ಕಂಡು ಕಲ್ಸಿದ್ಮುಂಕುಮ ಉಬ್ಬಿನ್ಮಧ್ಯೆ ಇಟ್ಲು ನನ್ನ ಅಂಗೇ ನೋಡಿದ್ಲು ಎರಡ್ಕೆನ್ನೆ ಸವರಿ ನೆಟ್ಕೆ ತೆಗೆದ್ಲು "ನೀನು ದೊಡ್ಡೋಳಾದ್ರೆ ಬೋ ಸುಂದ್ರಿ ಆಗ್ತೀಯೋ"ಂದ್ಲು ನಾನು ನಾಚ್ಕೊಂಡೆ "ಅವ್ವಾ, ಅವ್ವಾ, ನಂಗೆ ಲಗ್ನ ಮಾಡ್ತೀಯಾ?" ಅವ್ವನ ಕೈಬಳೆಗಳ ಜತೆ ಆಡ್ತಾ ಕೇಳ್ದೆ ಅವ್ವನ್ಮುಕ ಗಂಭೀರ ಆಯ್ತು ಕಣ್ಣಾಗೆ ನೀರು ತುಂಬ್ಕಂತು. ನನ್ನ ಎದೆ ಗೊತ್ಕಂಡ್ಲು "ಮಾಡಾನ ಕನವ್ವಾ ಮಾಡಾನ!" ಮೈ ತುಂಬಾ ಒಡ್ವೆ ಆಕಿ, ಭಾರಿ,

ಸೀರೆ ಉಡ್ಸಿ, ಊರೋರ್ನೆಲ್ಲಾ ಕರ್ದು ಮಾಡ್ತೀಸಿ ಕವ್ವಾ!" ನಂಗೆ ಸಂತೋಸ ಆಗೋಯ್ತು. ಎದ್ದು ಕುಣ್ದೆ, "ಅವ್ವಾ ನಂಗೆ ಸೇಕ್ರೆಪ್ಪೋರಂತ ಗಂಡ್ನೇ ತಂದು ಲಗ್ನ ಮಾಡ್ತೀಯಾ? ಬೋ ಚೆಂದಾಕವ್ರಲ್ಲಾ?" ನಾನು ಕೇಳ್ದಾಗ ಅವ್ವ ಬೆಚ್ಚಿದ್ಲು, "ಅಂಗೆಲ್ಲಾ ಮಾತಾಡ್ಬಾರ್ದು ಕವ್ವಾ, ಯಾರಾರು ಕೇಳ್ಕಂಡ್ರೆ ಸೇಕ್ರಪ್ಪೋರ್ಗೆ ಕೆಟ್ಟೆಸ್ರು ಬತ್ತದ!' ನನ್ನ ಸಯುವಾಗಿ ಗದರ್ಕೊಂಡ್ಲು.

ಆವೊತ್ತೆಲ್ಲಾ ನಂಗೆ ಬೋ ಕುಸಿ. ಪುಟ್ಟನ್ನಾತ್ವ ಜಗ್ಳಾನೇ ಆಡ್ನಿಲ್ಲ. ಅವನ್ನ ಮುದ್ದಾಡ್ದೆ. ರಾಜಕುಮಾರ್ನ ಕತೆ ಯೋಳ್ದೆ. ಅವ್ವಾ ಮಾತ್ರ ಒಂದು ತರಾ ಮುಕ ಮಾಡ್ಕೊಂಡೇ ಇದ್ಲು. ರಾತ್ರಿ ನಾನು ಮಲ್ಗಿದ್ದಾಗ ಬಂದು ಕೆನ್ನೆ ಸವ್ರಿ, ತಲೆ ತಡ್ವಿ, ಒದ್ಕೆ ಸರಿಮಾಡಿ ಕಣ್ಣು ಮೂಗು ಒರಸ್ಕಂಡ್ಲು.

ಬೆಳ್ಗಾಗೇಳ್ತಾನೆ ಅವ್ವ ಬಿಸ್ನೀರು ಕಾಯ್ಸಿ ಮಡ್ಗಿದ್ಲು. ಅವ್ಳೇ ತಲೆ, ಮೈ ತಿಕ್ಕಿ ಸುಡ್ತಾ ಇರೋ ನೀರು ಮೈಮ್ಯಾಗೆ ಆಕಿ ಮೈ ತೊಳದ್ಲು. ಒಳಕ್ಕಿಟ್ಟಿದ್ದ ಚೀಟಿ ಲಂಗ ರವ್ಕೆ ಆಕಿದ್ಲು "ಓಗು ತಲೆ ಆರ್ಸ್ಕೊಳ್ಳಿ-ಮನೆ ಬಾಕ್ಲಿಗೆ ನೀರಾಕಿ, ರಂಗೋಲಿ ಬುಡು' ಅಂದ್ಲು. ನಾನು ನೆಗ್ನಿ ನೀರಾಕಿ ಮನೆ ಮುಂದೆ ನೀರಾಕಿ ರಂಗೋಲಿ ಇಡ್ತಾ ಇದ್ದೆ. ದೂರ್ದಾಗೆ ಗಂಟೊತ್ಕಂಡು ಯಾರೋ ಬತ್ತಿದ್ದುದು ಕಾಣಿಸ್ತು. ಕಣ್ಗೆ ಕೈ ಅಡ್ಡ ಇಟ್ಕಂಡು ನೋಡ್ದೆ. ಬಂದೋಳು ಅಜ್ಜಿ. "ಅವ್ವಾ, ಅವ್ವಾ, ಅಜ್ಜೀ ಬಂದ್ಲು!" ಒಳಕ್ಕೋಡ್ದೆ. ಪುಟ್ಟ ಇನ್ನೂ ಮುಸ್ಕು ಆಕ್ಕಂಡೇ ಮನಗಿದ್ದ. ಅವ್ವಾ ಒರಗೆ ಬಂದ್ಲು.

"ಬಾರವ್ವಾ. ಒಂದು ಕಾಜ್ಗ ಆಕ್ಬಾರ್ದಿತ್ತಾ ಬತ್ತೀನೀಂತ!" ಅವ್ವ ಅಜ್ಜೀನ ಕರ್ಕಂಬಂದ್ಲು. ಒಳೀಕೆ ಬರ್ತಾನೇ ಅಜ್ಜಿ ಎಲ್ಲಾ ಕಡೆ ಕಣ್ಣು ಆಯ್ಸಿದ್ಲು. "ಎಲ್ಲಿ ಎಲ್ಲೋಗವ್ನೆ ನಿನ್ನಜಮಾನ?"

ಅವ್ವಾ ಅಪ್ಪಯ್ಯ ಊರ್ಗೋಗೋಗಿದ್ದೇಳಿದ್ಲು. ಅಜ್ಜಿಗೆ ವಯ್ಸಾದ್ರೂ ಕಣ್ಣು, ಕಿವಿ, ಮೂಗು ಬೋ ಸೂಕ್ಷ್ಮ. ನನ್ಕಡೇ ನೋಡಿದ್ಲು "ಏ ಎಣ್ಣೇ ಬಾ ಇಲ್ಲಿ!" ಅಂದ್ಲು. ಅತ್ರ ಓದೆ ನನ್ನ ತಲೆ ಮೈ ತಡವಿದ್ಲು 'ತಗೋ' ಅಂತ ಗಂಟ್ನಾಗ್ನಿಂದ ತಿಂಡಿ ಕೊಟ್ಲು, ಬಳೆ ರಿಬ್ಬನು ಕೊಟ್ಲು, "ಏನೇ ಲಕ್ಕಾ ನಿನ್ಮಗ್ಳು ಬೆಳ್ಕ್ಯೋ ಬದ್ಲು ಸೀದೋಯ್ತಾವ್ಳಲ್ಲೇ. ಒಂದೀಟು ಆಲು ತುಪ್ಪ

ಆಕಿ ಬೆಳೆಸ್ಬಾರ್ದಾ ? ಅನ್ನೆಲ್ರು ತುಂಬಿ ಆದಿನೂರಾಗ್ತೈತೆ ಇನ್ನಾ ಇಂಗೇ ಇರಾದಾ ?" ಎಂದ್ಲು ಅವ್ವ ಸಣ್ಣ ದನೀಲಿ ಏಳಿದ್ಲು -"ಏನವ್ವಾ ಇವ್ಳು ಬೈನಾ ನಂಗೆ ಪುಟ್ಟಂಗೂ ಆಗ್ಬೇಕಲ್ಲಾ ಇವ್ರು ಕೈನಾಗೆ ಅಷ್ಟೇನೂ ದುಡ್ಡು ಬರಾಕಿಲ್ಲ ಆಸೀನಾಲೆಲ್ಲಾ ಮಾರ್ಕೊಂಡು ಬಂದ ಮುಡ್ಡಾಗೆ ಮಾಡೋದಾಗಿದ ಬದ್ಕು ಎಲ್ಲು ಮನೆ ಕಲ್ಸ ಮಾಡ್ತಿನ್ನಿ."

ಅಜ್ಜೀ ಅಂಗೇ ಕುಂತ್ಕಂಡ್ಳು "ನಾ ಯೋಳಾದು ಕೇಳ್ತ್ಯಾ ? ನಂಜೊತೆ ಊರ್ಗ ಕಳ್ಸು ನಾನು ನೋಡ್ತೀನಿ ನ್ಯಾಗೆ ಅದ್ಯಾಕೆ ಇಲ್ಲಿದ್ರೆಂಗೇಂತ!"

ನಾನು ಅವ್ವನ್ನ, ಅಪ್ಪಯ್ಯನ್ನ ಬಿಟ್ಟುಬಿಟ್ಟು ಓಗಾಕಿಲ್ಲ 'ಊಂ ನಾನೇನು ಬರಾದಿಲ್ಲ' ಅಂದ

"ಅದ್ಯಾಕೆ ಬರಾಕಿಲ್ಲ. ಲೌಡಿ ನಾಳೆ ಮೈ ಕೈ ತುಂಬ್ಕೊಂಡು ಗೌಡ್ರು ಇಡ್ಕೊಣ್ಣ ಆಗೋಲ್ವೇನೇ!" ಅಜ್ಜಿ ಹೇಳ್ದಾಗ ನಾನು ಅಂಗೇ ಕಲ್ಲಂಗೆ ನಿಂತ್ಬುಟ್ಟೆ ಅವ್ವಾ ಅಜ್ಜಿ ತಾವ ಕೂರ್ಗಣ್ಣಿಂದ ನೋಡಿದ್ಲು "ಊಂ, ನಾನೇನು ಗೌಡ್ರ ಇಡೇಣ್ಣಾಗೋಲ್ಲ ಚಂದಿ ಅವ್ನೆ, ನಾನು ಲಗ್ಣ ಆಗ್ತೀನಿ ಅವ್ವಾ ಏಳ್ಳೀವ್ನೆ..' ಅಂದ ಅಜ್ಜಿ ಬೊಚ್ಚಾಬಾಯಿ ಬಿಟ್ಕಂಡು ನಕ್ಳು.

"ಗೌಡ್ರೇಣ್ಣಾಗ್ದ್ರೆ ಸಾವಾತ್ರಿ ಆಯ್ತಿಯಾ ಗೊತ್ತಾ ?"

"ಗೌಡ್ರಾ, ಅವ್ರು ನಮ್ಮಪ್ಪಯ್ಯನಂಗವ್ನೆ-ಮುಕ ನೋಡು ಬ್ರಹ್ಮರಾಕ್ಷಸ ಇದ್ದಂಗದೆ ಬೇಕಾರ ನೀನು ಅವ್ನ ಮಡೀಕೋ!" ಎಂದಾಗ ಅಜ್ಜಿ ನಕ್ಕು. ಅವ್ವಾ ನನ್ನಡೇ ನೋಡಿ ಕಣ್ಸನ್ನೆ ಮಾಡಿದ್ಲು "ಓಗು-ಸಾರೋತವ್ಮನ್ಮನೆಗೆ ಸಿದ್ಧವ್ವ ಬಂದಿಲ್ವೇ ಇದ್ರೆ ಏನಾರ ಮಾಡ್ಕೊಟ್ಟಾ-ತಲೀಗೆ ರಿಬ್ಬನ್ನು ಕಟ್ಕೊಂಡೋಗು."

ನಾನು ರಿಬ್ಬನ್ನು, ಬಳೆ ಎಲ್ಲಾ ಎತ್ಕಂಡು ಒರಗ್ಬಂದೆ ಅವ್ವನ್ಮಾತು ಕೇಳಿಸ್ತು. "ನೀನ್ಯಾಕವ್ವಾ ಈಗ್ಲಿಂದ ಆನ್ತ್ರೇಲಿ ಅದೆಲ್ಲಾ ಆಕ್ತಿ ?" ಅಜ್ಜಿ ಹೇಳಿದ್ಲು, "ಮೈ ನೋಡು ಬತ್ತಾ ಇದೆ, ಇನ್ನೊಂದರ್ಸದಾಗೆ ನೆರೆದ್ಬುಟ್ಟಾಳು ನಿನ್ಮಗ್ಳು."

ನಾನು ಮುಂದೆ ಕೇಳ್ಳಿಲ್ಲ ವೆಂಕ್ಟಿ, ರತ್ನೀ, ರುದ್ರೀಗೆ ಬಳೀ ರಿಬ್ಬನ್ನು ತೋರ್ಸಾಕೆ ಒರ್ಟೆ

ರತ್ನಿ ನೋಡಿ ಕುಸಿಪಟ್ಳು "ಚೆಂದಾಗೈತೆ, ಜಾತ್ರೆಗೋದಾಗ ನಾನೂ

ತಗಂತೀನಿ" ಅಂದ್ಲು ಅವರವ್ವ ಚಿನ್ನವ್ವ ನನ್ನ ನೋಡಿ ನಕ್ಕು. "ನೀನು ಬುಡವ್ವಾ. ಈಗ್ಲಿಂದ ಕಮಾಯ್ಸೋದು ಕಲ್ತಿಬುಡು" ಅಂದ್ಲು ನಂಗೆ ಅದ್ರ ಅರ್ತ ತಿಳೀನಿಲ್ಲ ನಾನು ನಕ್ಬಿಟ್ಟೆ 'ಮುಂದಿನೋರ್ಸ ನಂ ರತ್ನೀಗೆ ಲಗ್ನ ಗೊತ್ತಾಗೈತೆ ಅವ್ಳ ಸ್ವಾದರ್ಮಾವನ್ಮಗನ್ಗೇ ಲಗ್ನ ಮಾಡೊ ತ್ತೀವಿ.. ಯಾಕೇ ರತ್ನ ಏಳ್ಳಿಲ್ವಾ ನಿನೀತಳಿಗೆ ?" ಅಂದ್ರು ಓಗವ್ವಾ, ನೀನೊಬ್ಳು ನಾಯೇನು ಯೇಳಾಕಿಲ್ಲ-!" ಅಂದ್ಲು ರತ್ನಿ ಮುಕ ಕೆಂಪಗೆ ಮಾಡ್ಕಂಡು ನಾನೂ ಯೋಳ್ದೆ "ನಮ್ಮವ್ವಾನೂ ನಂಗೆ ಲಗ್ನ ಮಾಡ್ತಾಳಂತೆ" ನನ್ಮಾತು ಕೇಳಿ ಚಿನ್ನವ್ವ ಬಿದ್ದು ಬಿದ್ದು ನಕ್ಳು "ಮಾಡ್ಲಿ ಬುಡು ನಾವೆಲ್ಲಾ ಬಂದೇ ಬತ್ತೀವಿ ನೋಡೇ ನೋಡ್ತೀವಿ "

"ರುದ್ರಿ ನನ್ಬಳೇಗಳ್ನ ನೋಡಿ ಮುಕ ಚಿಕ್ಕದು ಮಾಡ್ಕಂಡ್ಳು, ನಿಂಗ್ಬಿಡವ್ವಾ ಯಾರಾದ್ರೂ ತಂದ್ಕಡ್ತಾರೆ ನಂಗ್ಯಾರು ತತ್ತಾರೆ ?" ನಂಗೆ ಪಾಪ ಅನ್ನಿಸ್ತು. "ಓಗ್ಲಿ ಎಲ್ಡು ಬಳೆ ಕೊಡ್ತೀನಿ ತಗಾ !" ಅಂದೆ ರುದ್ರಿ ಬೆಚ್ಚಿಬಿದ್ಲು-"ಬ್ಯಾಡಾ ಬ್ಯಾಡಾ-ಅವ್ವ ನಂಗೆ ಓದೀತಾಳೆ ನಿನ್ತಾವ ತಗಂಡ್ರೆ !"

"ಅದ್ಯಾಕೆ ?" ಎಂದೆ.

"ಮತ್ತೆ ನೀನು ದ್ಯಾವರ್ಗೆ ಬಿಟ್ಕೋಳಲ್ವಾ ಅದ್ಕೇ!" ರುದ್ರಿ ಏಳ್ದಾಗ ನಂಗೆ ರೋಸ ಬಂತು. "ಅದೆಲ್ಲಾ ಕೇಳ್ಬೇಡಾ ರುದ್ರಿ. ನಂಗೆ ಅವ್ವ ಏಳಪ್ಪೆ ಲಗ್ನ ಮಾಡ್ತಾಳಂತೆ. ನ್ಯೆತುಂಬಾ ಒಡ್ವೆ ಆಕ್ತಾಳಂತೆ. ಭಾರಿ ಸೀರೆ ಉಡ್ಸಿ ಊರ್ನೆಲ್ಲಾ ಕರೀತಾಳಂತೆ." ರುದ್ರಿ ನನ್ಮಾತು ಕೇಳಿ ಅತ್ರಕ್ಕೆ ಕರದ್ಲು "ಇಶ್ವೇ ನಿಂಗೆ ತಿಳೀದು ನಿಂಗೆ ಅಂಗೇಯ ಲಗ್ನ ಮಾಡೋದು ದ್ಯಾವರ್ಗೆ ಕೊಟ್ಟು. ಅವೇಕೆ ಗೆಜ್ಜೆ ಕಟ್ಟಿ ಗೌಡ್ರಿಗೋ, ಸಾವ್ಕಾರಿಗೋ ಒಪ್ಸೋದು ನಮ್ಮವ್ವ ಅಂಗಂತ ಆವತ್ತು ಏಳಿದ್ಲು !"

ನಂಗೆ ಅಳಾ ಬರಾಂಗಾಯ್ತು. ಆದ್ರೂ ಅವಳ್ಮುಂದೆ ಅತ್ರೆ ನಾಗಿ ತಾವ ಏನಾರ ಏಳ್ತಾಳೇಂತ ಅಲ್ಲಿಂದ ಎದ್ದು ಒರಗ್ಬಂದು ಕಣ್ಣು ಮೂಗು ಒರಸ್ಕಂಡೇ. ಅವ್ಳು ಅಂಗೆಲ್ಲಾ ಏಳ್ದಾಗ ನಂಗೆ ಎಂಗೆಂಗೋ ಆಗೋಯ್ತು ನಾನು ನೆಟ್ಗೆ ನಮ್ಮಟ್ಟಿ ತಾವ ಒಲ್ಟೆ.

ಅಜ್ಜಿ ಬಿಸಲ್ನಾಗೆ ಕಾಲ್ಚಾಚ್ಕೊಂಡು ಕುಂತಿದ್ಲು. ನಾ ಬಂದ ತಕ್ಷಣ ಕಣ್ಣೆಂದ್ಲೇ ಕರದ್ಲು.

"ಬಿಸಲ್ನಾಗೆ ಎಲ್ಹೋಗಿದ್ಯವ್ವಾ ?"

"ಬಳೆ ತೊರ್ಸಾಕೆ !" ನಾನೂ ಅವ್ವ ಮಗ್ಲಲ್ಲೇ ಕುಂತ್ಕಂಡೆ

"ಊರ್ನಾಗೆಲ್ಲಾ ತೋರಿಸ್ಬುಟ್ಬಂದ್ಯಾ ? ಚಿನಾಲಿ !" ನನ್ನ ಕೆನ್ನೆ ಸವರಿ ನೆಟ್ಗೆ ತೆಗೆದ್ಲು

"ನಮ್ಮಳ್ಳೀಗೆ ಬತ್ತೀಯಾ ? ಒಳೆ ಐತೆ. ತೋಪೈತೆ !"

"ಊಂ, ನಾಯೇನೂ ಅವ್ವನ್ನ, ಅಪ್ಪಯ್ಯನ್ನ ಬುಟ್ಬುಟ್ಟು ಬರಾಕಿಲ್ಲ !" ನಾನು ಮೂಗೆಳ್ದೆ

"ನಾಯೇನೂ ಪಿರೀತಿ ಮಾಡಾಕಿಲ್ವಾ ? ಮುದ್ಕಿ 'ಬಾ' ಅಂತಾಳೇಂತ ಬಂದೋಗು—ನಾಲ್ಕು ದಿನ ಇದ್ಬುಟ್ಹೋಗೂ—ನಂಗೂ ಬೇಸರ ಕಳೀತೈತೆ" ಅಜ್ಜೀ ನನ್ನ ಕೆದರಿದ್ಕೂದಲ ಬೆರಳ್ನಿಂದ ಬಾಚಿ ಜಡೆ ಅಣದ್ಲು

ನಂಗೆ ಅಜ್ಜಿ ಜೊತೆಗೋಗಾಕೆ ಆಸ ಒಂದ್ಕಡೆ. ಅವ್ವನ, ಅಪ್ಪಯ್ನ ಬಿಟ್ಹೋಗೋಕ್ಕೆ ಬ್ಯಾಸ್ರ ಒಂದ್ಕಡೆ ಅಜ್ಜಿ ಅಳ್ಳೀಲಿ ಒಳೆ ಐತೆ ಈಜೋಡಿ ಬೋದು—ಸೀರ್ನಾಗಾಡ್ಹೋದೂ, ತೋಪ್ನಾಗೆ ತಿರ್ಗಾಡಿ ಕಾಯಿ ಕಸಕಟ್ಟೆ ತಿನ್ಹೋದು ಅಜ್ಜಿ ನನ್ನಾವ ಯಾವ ಕೆಲ್ಸಾನೂ ಮಾಡ್ಸಾಕಿಲ್ಲ ರೇಗಾಡ್ಕೊ ಳ್ಳೋಲ್ಲ—ಒಡ್ಯಾಕಿಲ್ಲ—ಬೆಯ್ಯಾಕ್ಕಿಲ್ಲ ಆದ್ರೆ ಸೇಕ್ರಪ್ಪೋರು ಬತ್ತಾರ ನಾನೊಂ ಟೋದ್ರೆಂಗೆ ? ಅವ್ರು ನನ್ನಾವ ಮಾತಾಡ್ಸಾಂಗಿಲ್ಲ ಅವ್ರ್ನ ನೋಡ್ದಂಗಾಗಾ ಕಿಲ್ಲ ಅಪ್ಪಯ್ಯ ಊರ್ನಾಗಿಲ್ಲ ನನ್ಬುಟ್ಬುಟ್ಟು ಅಪ್ಪಯ್ಯ ಇರ್ತಾನಾ ?

"ಏನು ಎಚ್ನೆ ಮಾಡ್ತಾ ಇದ್ದೀಯವ್ವಾ ?" ಅಜ್ಜಿ ಕೇಳಿದ್ಲು.

"ಅಜ್ಜೀ, ನೀ ಇನ್ನೂ ನಾಕ್ದಿನ ಇರಾಂಗಿದ್ರೆ ಬತ್ತೀನಿ, ಇಲ್ದಿದ್ರಿಲ್ಲ !"

"ಅದ್ಯಾಕೆ—? ನಿನ್ನ ಮಿಂಡ್ಗಾರ ಬತ್ತಾನೇನು ?" ಅಜ್ಜಿ ಮುಸ್ಮುಸಿ ನಕ್ಳು ನಂಗೆ ಕ್ವಾಪ ಬಂದು ಅಜ್ಜೀ ಚಾಚಿದ್ಕಾಲ್ಗೆ ಒಡ್ದೆ

"ನಂಗೊಡೀತೀಯಾ ಲೌಡಿ ? ಅಜ್ಜಿ ನನ್ಕೈಲ ಇಡ್ಕೊಂಡ್ಳು ಅದ್ಯಾಕವ್ವಾ ಕೋಪ ಬರ್ತೈತೆ ನಿಂಗೆ ?"

ನಾಗಿ ನಮ್ಮಟ್ಟೀ ಮುಂದೇ ಅದು ಓದ್ಲು. ಅವ್ವ ಕೈನಾಗೆ ಸೀಬೇಕಾ ಯಿತ್ತು ನನ್ನ ನೋಡಿ ಸೊಟ್ಗೆ ನಕ್ಳು ನಾಗಿ, ರುದ್ರಿ ಇವ್ರೆಲ್ರಿಂದ ದೂರ ಒಂಟೋಗ್ಬೋದು ಅನ್ನಿಸ್ತು.

"ಆಗ್ಲಿ ಅಜ್ಜಿ ನಿನ್ಜೊತೆ ಬತ್ತೀನಿ ಕೈ ಬುಟ್ಬುಡು !" ಅಂಡೆ.

"ನನ್ನವ್ವ ಬಂಗಾರಿ!" ಅಜ್ಜಿ ಕೆನ್ನೆಗೆ ಮುತ್ಕೊಟ್ಳು

ಆದ್ರೆ ಅವ್ವ ಅಜ್ಜೀನ ಕೇಸ್ಲಿಲ್ಲ "ಇದ್ಯಾಕೆ ಇಂಗ್ಬಂದು ಇಂಗೇ ಓಂಟ್ಬುಟ್ಟಿ! ನಾಕ್ದಿನ ಇದ್ದು ಸುದಾರಿಸ್ಕೊಂಡೋಗು। ಇವ್ರು ಊರ್ನಾಗಿಲ್ಲ" ಅಂದ್ಲು ನಂಗೂ ಸಂತೋಸ ಆಯ್ತು ಆಯಾಗಿ ಅಲ್ಲಿ ಇಲ್ಲಿ ತಿರ್ಗ್ಯಾಡ್ಕಂಡು ಕುಣಿದಾಡ್ಕಂಡು ಸುಮ್ಕಿದ್ಬುಟ್ಟೆ

ಆ ಹೊತ್ತು ಬೆಳ್ಗಾಗದ್ದು ಕಣ್ಬುಡಾತಾ ಇದ್ದಂಗೆ ಪುಟ್ಟ ಅಳ್ತಾ ಇದ್ದ ಅವ್ವ ಏನೇನೋ ಆಸೆ ತೋರಿಸ್ತಾ ಇದ್ಲು

"ನಿಂಗೆ ಉರೀಟ್ಬ್ಬ ಮಾಡ್ಕಡ್ತೀನಿ-ಅಂಗ್ಡಿಯಿಂದ ಬತಾಸು ತಂದ್ಕಡ್ತೀನಿ ಬುಗ್ರಿ ಅಗ್ಗ ತಂದ್ಕಡ್ತೀನಿ' ಅಂತ ಪುಟ್ಟ ಸಣ್ದಾಕ್ಕೆ ಅಸಾ ಸಿಳ್ಕೋನಲ್ಲ

'ಊಂ ನಾ ಓಗೋಲ್ಲ ನಾಸಿಲ್ಲೇ ಆಡ್ಕಂಡಿರ್ತೀನಿ!" ಅವ್ನು ಗಂಟ್ಲು ಮಾಡ್ತಾ ಇದ್ದ ಅವ್ವಂಗೆ ಅವ್ನ ಬಾಳ ಓದ್ಸಿ ಆಪೀಸರ್ ಮಾಡ್ಬೇಕೂಂತ ಬೋ ಆಸ ಮಡೀಕ್ಕಂಡಿದ್ಲು ಎಲ್ಡನೇ ಕ್ಲಾಸ್ನಾಗೆ ಓದಾಕೇ ಇಗ್ಗಾ ಮುಗ್ಗ ಆಗ್ತಾ ಇದ್ದ ಅಜ್ಜಿ ಸೊಂಟದಿಂದ ನಾಕಾಣೆ ತೆಗೆದ್ಕೊಟ್ಳು "ಇಕಾ ಇದ್ನ ತಗೊಂಡೋಗಿ ಎಲ್ಡು ಜೇಬ್ನಾಗೂ ಕಳ್ಳೇಕಾಯಿ ತುಂಬ್ಕಂಡು ಸಾಲೆಗೋಗು!"

ಪುಟ್ಟನ ಅಳು ನಿಂತಿತು ಅವ್ವ ನಾನೆದ್ದಿದ್ನೋಡಿ ಏಳಿದ್ಲು. "ಅಂಗೇ ಮುಖ ತಳ್ಕಂಡು ಇವ್ನ ಇಸ್ಕೂಲ್ಗಂಟ ಬುಟ್ಬುಟ್ಬಾ-ಇಲ್ದಿದ್ರೆ ಕೈಗೆ ದುಡ್ಡು ಸಿಕ್ತೂಂತ ಎಲ್ಲಾರ ಆಡ್ಕಂಡು ಕುಂತ್ಬಿಡ್ತಾನೆ!

ನಂಗೂ ಅಸ್ಟೇಯ ನಂಪುಟ್ಟ ಒದ್ಬೇಕು ಸೇಬ್ರವ್ನೋರಂಗಾಗ್ಬೇಕು ಅಂತ ಆಸೆ ಬ್ಯಾಗ ಮುಕ ಅಲ್ಲು ತಿಕ್ಕೊಂಡು ಪುಟ್ಟನ್ನ ಎಳ್ಕಂಡು ಓಂಟೆ ಇಸ್ಕೂಲ್ನಾಗೆ ಅವನ್ನ ಬುಟ್ಬುಟ್ಟು ಮಾಸ್ತರಿಗೇಳ್ಬುಟ್ಟು ಒಕಗ್ತ್ತೀತಿ ನನ್ನ ಕಣ್ಣ ನಾನು ನೆಂಬಾಕ್ಯಾಗ್ನಿಲ್ಲ ಎದುರ್ಗೆ ನೇಕ್ರವ್ನೋರು! ನಂಗೆ ದ್ಯಾವ್ರನ್ನೇ ಕಂಡಂಗಾಯ್ತು ಎದೆ ಒಳಕ್ಕೆ ದೀಪ ಅಡ್ದಂಗಾಯ್ತು. ಕಣ್ಣೊಳ್ಗೆ ತಿಂಗಳ ಬೆಳ್ಕು ಬಂದಂಗಾಯ್ತು. ಪದ್ಸಂಗ್ದಾಗೆ ದ್ಯಾವ್ರು ಪ್ರತ್ಯಕ್ಸ ಆದಂಗೆ ಆಗ್ಬುಟ್ಟಿದ್ರು

"ಏನು ಇಲ್ಲಿ? ನೀನು ಇಸ್ಕೂಲ್ನಾಗೆ ಸೇರಿದ್ಯಾ?"

ನಂಗೆ ಅವರ್ತಾವ ಮಾತಾಡೋಕೆ ಬೋ ನಾಚ್ಕೆ. ಅವ್ರು ಚೆಂದಾಗಿ

ಮಾತಾಡ್ತಾರೆ ನಾನು ಅಳ್ಳೀ ಮುಕ್ಕಂಗೆ ಮಾತಾಡ್ತೀನಿ ಅವರು ನೆಗಾಡದಿಲ್ವಾ!

'ಇಲ್ಲ' ಅನ್ನೋಂಗೆ ತಲೆ ಆಡಿಸ್ಬುಟ್ಟೆ

'ಅದ್ಯಾಕೆ ಮೂಕೀನಾ ನೀನು? ಮಾತಾಡೋಕ್ಬರಾಕಿಲ್ವಾ?' ಅವ್ರು ಕೇಳೀಬುಟ್ರು

"ಬರ್ತೈತೆ!' ಅಂದೆ ಅವ್ರ ತಾವ್ರ ನೋಡ್ಲಿಲ್ಲ ಅವ್ರು ಕಣ್ಣು ನನ್ನ ಕಣ್ಣಲ್ಲಿ ನೋಡ್ಬುಟ್ರೆ ಅಂಗೆ ಮುಂಜ್ಕರ್ಗ್ಹೋದಂಗಾಗ್ತೈತೆ ನಂಗೆ...

"ಬಲು ಬ್ಯಾಗ ಬೆಳದ್ಬುಟ್ಟೆ ನೀನು ಇಟ್ಟುದ್ದಾ ಇದ್ದೀ ಈಗ ಈಟುದ್ದಾ ಆಗೋದಿ" ಅಂದ್ರು. ನನ್ನಡೇ ನೋಡಿ ನಕ್ರು

ನಂಗೆಂಗೋ ಆಯ್ತು ಅಲ್ಲಿಂದ ಓಡಿ ನಮ್ಮಟ್ಟೀ ತಾವಕ್ಬಂದ್ಬುಟ್ಟೆ. ಎದೆ ಡಬಡಬ ಒಡ್ಕಂತಿತ್ತು ಅವ್ವ ನಂಗೆ ಬಿಸಿ ಕಾಪಿನೀರು ಕಾಯ್ಸಿಕೊಟ್ಲು. "ಇದ್ಯಾಕೆ ಮುಕ ಈಪಾಟಿ ಕೆಂಪಾಗೈತೆ!" ಅಜ್ಜಿ ಮುಸಿಮುಸಿ ನೆಗಾಡದ್ಲು. "ಕೆಂಪಾಗ್ದಾಗೇನು, ಯಾವ್ನೋ ಮಿಂಡ್ಗಾರ ಸಿಕ್ಕಿರ್ಬೇಕು!"

ನಂಗೆ ರೋಸ ಬಂದ್ಬುಡ್ತು "ಅಜ್ಜೀ ಅಂಗೆಲ್ಲಾ ಅಂದ್ರೆ ಈ ಅರ್ವಾ ಕಲ್ಲು ತಗೊಂಡು ತಲೆ ಒಡ್ದಾಕ್ಬುಡ್ತೀನಿ ನೋಡು!" ಕೈಗೆ ಕಲ್ಲೆತ್ಕಳ್ಳಾ ಕ್ಹೋದೆ ಅವ್ವ ತಡೆದ್ಲು "ಏಯ್ ಉಸಾರು ಅಂಗೆಲ್ಲಾ ಅಡ್ಗೀಡೀಯಾ! ತಿಂದು ಕೊಬ್ಬು ಜಾಸ್ತಿ ಆಯ್ತೇನೋ!" ಅವ್ವ ಗದರಿದ್ಲು

"ಮತ್ಯಾಕೆ ಅಜ್ಜೀ ಎಲ್ಲಕ್ಕೂ ಅಂಗನ್ನಾದೂ! ನಾಯೇನು ಚಂದ್ರಿ ಅಂಗೆ ಗಂಡ್ಸನ್ನ ಕಂಡ್ರೆ ಕುಣ್ಯಾದು ಕಂಡವ್ಳಾ–ನಾಯೇನು ಚಂದ್ರಿ ಅಂಗೇ ಸೂಳೇನಾ?"

ಅಜ್ಜಿ, ಅವ್ವ ಇಬ್ರೂ ತೆಪ್ಗಾದ್ರು ಇಬ್ರೂ ಒಂದ್ಮಾತೂ ಆಡ್ಲಿಲ್ಲಾ!

"ತಾಳು ಅಪ್ಪಯ್ಯ ಬರೋತ್ಲೂ ಅಜ್ಜಿಗೆ ಅಬ್ಬ ಮಾಡಿಸ್ತೀನಿ" ನಾನು ಅವರ್ತಾವ ನಿಂತ್ಕಳ್ಲಿಲ್ಲ ನನ್ನೆಲ್ಸ ಮಾಡ್ಕಂಡು ಮಂಕ್ರಿ ತುಂಬಾ ಸೆಗ್ಣಿ ಬಾಚ್ಕಂಡು ಬೆಣ್ಣೆ ತಟ್ಟಾಕ್ಕೇ ಒಂಟೆ

"ನೋಡಿದ್ಯಾ ಅವ್ಳ ಪೊಗ್ರು. ಇಂಗೇ ಬುಟ್ರೆ ಇವ್ಳು ನಿನ್ಕೈಗೆಟ್ಕಾಕಿಲ್ಲ!" ಅಜ್ಜಿ ದನಿ ಕೇಳ್ತು.

ಬಂಡೆ ಮ್ಯಾಗೆ ಬೆಣ್ಣೆ ತಟ್ಟಿ, ಒಣಗಿದ್ದೆರಣೆನೆಲ್ಲಾ ಬುಟ್ಟೀನಾಗೇ ಜೋಡಿಸಿ ಮಡಗ್ದೆ ಅದ್ಯಾಕೋ ನಂಗೆ ಅಳಾ ಬರಾಂಗಾಯ್ತು ಅಪ್ಪಯ್ಯೂ ಇಲ್ಲಿ ಅಜ್ಜ ಎಂಗಾಡ್ತಾನ್ನೆ ಅವ್ವ ಎಲ್ಲಕ್ಕೂ ಸುಮ್ನಿರ್ತಾಳೆ–ನಂಗ್ಯಾರೂ ಇಲ್ಲ ನಾನೊಬ್ಳೇ ಒಂಟೀ ಆದೇಕಾಯ್ತು ಅನ್ನಿಸ್ತು. ಅಲ್ಲೇ ಬಂಡೇ ಸಂದೀಲೇ ಕುಂತ್ಕಂಡು ಮಂಡೀಲಿ ಮೂಕ ಮುಚ್ಕಂಡು ಅತ್ತೆ ನಾಲ್ಕು ಬಂಡೇ ಆಚೆ ಬೆಣ್ಣೆ ತಟ್ತಾ ಇದ್ದ ಮುದಮ್ಮ ಅಲ್ಲಿಂದ್ಲೇ ಕೂಗಾಕಿದ್ಲು

"ಯಾಕೆ ಅಳ್ತೀ–ಒಟ್ಟೀನೋವೇನೇ?"

ಮುದ್ದಮ್ಮನ್ತಾವು ಕಷ್ಟಸುಕಾ ಏಳ್ಕಂಡ್ರೂ ಒಂದೇ ಬಿಟ್ರೂ ಒಂದೇ.

"ಊಂ" ಅಂದೆ

"ಕೈಕಾಲು ತೊಳ್ಕಂಡು ದ್ಯಾವಸ್ತಾನಕ್ಕೋಗಿ ಪೂಜಾರಪ್ಪನ್ಕೈಲಿ ಮಂತ್ರ ಆಗಿಸ್ಕೋ ಒಂಟೋಯ್ತೈತೆ!" ಅಲ್ಲಿಂದ್ಲೇ ಕೂಗಿದ್ಲು.

ಲಂಗ ಎತ್ಕೊಂಡು ಕಣ್ಣು, ಮೂಗು ಒರಸ್ಕಂಡು ಅಂಗೇ ಕೂತ್ಕಂಡೆ "ನಾನೆಲ್ಲೂ ಓಗಾಕಿಲ್ಲ ಇಂಗೇ ಕೂತ್ಕಂಡಿದ್ರೆ ಸರೋಗ್ತೈತೆ" ಎಂದೆ ಬಾಡೆ ಬಿಸ್ಲಿಗದ್ಕ ಇತ್ತು ಅಲ್ಲೇ ನೆರಳ್ನಾಗೆ ಕೈಕಾಲು ಮುದರ್ಕಂಡು ಉಬ್ಬಸ್ನೇಲಿ ತಲ ಮಡೀಕ್ಕಂಡು ಮನೀಕ್ಕಂಡ, ಅಂಗೇ ನಿದ್ದೆ ಅತ್ಬುಡ್ತು.

ಸೇಕ್ರಪ್ನೋರು ಬಂದು ಎಬ್ಬಿಸ್ದಾಗ್ಲೇ ಗೊತ್ತಾಗಿದ್ದು ನಂಗ–"ಏಯ್. . ಯಾಕೆ ಇಲ್ಲಿ ಮನಿಕ್ಕಂಡಿದ್ದೀ? ಕಾಯ್ಲೆ ಬತ್ತೈತೆ ನಿದ್ದೆ ಬರಾಂಗಿದ್ರೆ ಅಟ್ಟೀಗೋಗಿ ಮನಗ್ಗು ಜರಾ ಗಿರಾ ಇದ್ರೆ ಪಂಡಿತ್ರ ತಾವ ಔಸ್ದಿ ತಗೋ ಒಗು!" ಅಂದ್ರು ನಾನು ಕನಸ್ನಾಗೆ ಬಂದ್ರು ಅಂದ್ಕಂಡು ಕಣ್ಣುಜ್ಕಂಡು ನೋಡ್ದೆ ನಾನೊಬ್ಬ ಅನಾಗರೀಕ್ಳಂಗೆ ಅವ್ರೆದುರ್ಗೆ ಕಾಲು ಚಾಚ್ಕೊಂಡು ಮನಗ್ಬುಟ್ನಲ್ಲಾ ಅಂತ ಜೀವ ಒಂದಿಡಿ ಆಯ್ತು ಬ್ಯಾಗ ಎದ್ದು ಮೈ ಲಂಗ ದಾಗಿನ ಧೂಳು ಕೊಡವ್ದೆ "ನಂಗೇನೂ ಆಗಿಲ್ಲ ಬೋ ನಿದ್ದೆ ಬಂದ್ಬುಡ್ತು!" ಅಂದೆ ನಂಗೆ ಮೈನಾಗಿನ ರಕ್ತ ಜಲಪಾತ ದುಮ್ಕಿದ್ದಂಗಾಯ್ತು "ಮುಕ ಕೆಂಪಾಗೈತೆ, ಜರಾ ಇರ್ಬೇಕು ಎಲ್ಲಿ!" ಸೇಕ್ರಪ್ನೋರು ನನ್ನಣೇ ಮ್ಯಾಗೆ ಕೈ ಇಟ್ರು ಅಂಗೇ ಕಣ್ಣುಕ್ಕಳ್ಳಾಂಗಾಯ್ತು. ಮೈತುಂಬ ಬೆಳಕಾಯ್ತು.

"ನೋಡ್ದ್ಯಾ ಆಣೇ ಬಿಸಿ ಇದ್ದಾಂಗಿದೆ. ಓಗಿ ನಿಮ್ಮವ್ವನ ಕರ್ಕಂಡೋಗಿ ಪಂಡಿತ್ರ ತಾವ ಓಗು ಗೊತ್ತಾಯ್ತಾ?"

ನಾನು 'ಊಂ' ಅಂತ ತಲೆ ಆಡಿಸ್ಬುಟ್ಟು ಒಂಟೆ. ಅವ್ರು ನನ್ನೇ ನೋಡ್ತಾ ನಿಂತ್ಕಂಡಿದ್ರು ನಾಕೆಜ್ಜೆ ಒಗೋಷ್ಟ್ರಲ್ಲಿ ಅವ್ವ ಎದುರ್ಗೆ ಬಂದ್ಲು "ಎಲ್ಲೋಗಿದ್ದೇ ಚಿನಾಲಿ-ಮುದ್ದಮ್ಮ ಯೇಳಿದ್ಲು ಮನ್ಕಂಬುಟ್ಟವ್ಳೇಂತಾ!" ಅವ್ವ ಗದರ್ಕೊಂಡ್ಳು ಅವ್ಳ ಕಣ್ಣು ನೇಕ್ರಪ್ನೋರತ್ತ ನೋಡಿದ್ವು. "ಆ ಸ್ವಾಮೀತ್ತಾವ ಅಲ್ಲೆ ಒಡ್ಕಂಡು ನಿಂತಿದ್ಯಾ?"

ನೇಕ್ರಪ್ನೋರ ಯಾರಾದ್ರೂ ಏನಂದ್ರೆ ನಾನು ಸುಮ್ನೇ ಬಿಡಾಕಿಲ್ಲ. ಅವ್ರ ಬದ್ಕೀಗೇ ಬೆಂಕಿ ಆಚ್ಬುಟ್ಟೇನು'

"ಏನಿಲ್ಲಾ-ಅವರ್ಯಾಕ ನನ್ತಾನ ಮಾತಾಡ್ತಾರೆ!" ಗೊಣಗ್ದೆ.

"ನೋಡವ್ವಾ, ನಿನ್ಮಗಳಿಗೆ ಜರಾ ಬಂದಂಗೈತೆ, ಪಂಡಿತ್ರ ತಾವ ತೋರ್ಸಿ ಔಸ್ತಿ ಮಾಡ್ಸಾಕ್ಯಾಗಾಕ್ಕಿಲ್ವಾ? ಬಿಸಿಲು ಗಾಳೀನಾಗೇ ಮಲೀಕ್ಕಂಡಿದ್ಲು ನಾನೇ ಎಬ್ಬಿಸ್ದೆ" ಅಂದ್ಲು

"ಬರ್ತೀನಿ ಬುದ್ಧಿ ಅಡ್ಬಿದ್ದೇ"-ಅವ್ವ ಏಳಿದ್ರೂ ನನ್ನ ಕೈ ಇಡ್ದು ಎಳ್ಕಂಡೋಗಿದ್ದು ನೋಡಿದ್ರ ಅಷ್ಟಂಗೆ ಕ್ವಾಪ ಬಂದಿತ್ತೆಂತ ತಿಳೀತಾ ಇತ್ತು. ಇಷ್ಟು ದೂರ ಬಂದ್ಮೇಲೆ ನನ್ನ ಬೆನ್ಮೇಲೆ ಎಲ್ಡು ಗುದ್ದಾಕಿದ್ಲು. "ಚಿನಾಲ್ಮುಂಡೆ ಗಂಡಸ್ರ ತಾವ ಪರ್ಸಂಗ ಆಡ್ಕಂಡು-ಕಾಲು ಚಾಚ್ಕಂಡು ಮನಗ್ತೀಯಾ, ಮನೇಗ್ಬಾ-ಎಮ್ಕ ಮುರಿದ್ಬುಡ್ತೀನಿ"

ನಾನು ಅತ್ಕೊಂಡೇ ಮನೇಗ್ಬಂದ ಜರಾ ಬಂದಾಗೇ ಆಗಿತ್ತು. ಪಂಡಿತ್ರ ತಾವ ಅವ್ವ ಕರ್ಕೊಂಡು ಓಗ್ನಿಲ್ಲ. ಅದ್ರ ಬದ್ಲು ತಲೆಮೇಲೆ ಮೊಟಕಿದ್ಲು "ಮನೇ ಬುಟ್ಟು ಓಗೀಯಾ ಒರ್ಗೆ, ಉಸಾರು!" ಅಂತ ಗದರ್ಕೊಂಡ್ಳು ಅಂಗೇ ಅತ್ಕಂಡೇ ಗೋಣಿಚೀಲ ಆಸ್ಕಂಡು ಮನೀಕ್ಕಂಡೆ ರಾತ್ರಿ ಉಣ್ಲಿಲ್ಲ ಅಜ್ಜೀ ಸುಮ್ಕೆ ಒಂದ್ಕಡೆ ಕುಂತಿದ್ಲು. ಅವ್ವ ಎಲ್ಲಾ ಏಳೋತ್ಲೂ ಅಜ್ಜಿ ಎಲೆಅಡಿಕೆ ಬಾಯಿಗಾಕ್ಕೊಂಡ್ಳು "ಆದ್ಕೇ ನಾಯೋಳಿದ್ದು-ನನ್ಜೊತೆ ಕಳಿಸ್ಬಿಡು ನಾನು ನೋಡ್ಕಂತೀನಿ...!"

ನಾನು ಮುದ್ರಿ ಮಲಗಿಕೊಂಡು ನಿದ್ರೆಓಗ್ಬುಟ್ಟೆ-ರಾತ್ರಿ ಒಂದೊತ್ನಾಗೆ ಇಪ್ರೀತ ಸಳಿ ಇಡಿದ್ಬುಡ್ತು. ಗಡಗಡ ನಡುಗ್ತಾ ಎದ್ದು ಕೂತ್ಕಂಡು ಅಳಾಕ ಸುರು ಮಾಡ್ದೆ. ಅವ್ವ, ಅಜ್ಜ ಎದ್ದು ಬಂದ್ರು. ನಾನು ನಡಗ್ತಾ ಇದ್ದದ್ದು ಕಂಡ್ಬುಟ್ಟು 'ಕೆಟ್ಟ ಗಾಳಿ ಇಡಿದ್ಬುಟ್ಟದೆ' ಎಂದ್ರು-ಪೂಜಾರಪ್ಪನ್ತಾವಕೆ

ಪುಟ್ಟನ್ನ ಓಡ್ಸಿದ್ಲು ಅವ್ವ-ತಾನೇ ಪಂಡಿತ್ರ ತಾವ ಓಡಿದ್ಲು. ನಂಗೇ ಸಳೀ ತಡೀಲಾರ್ದೆ ಗದಗದ ನಡಗ್ತಾ ಇದ್ದೆ "ಅಜ್ಜೀ ಒಂದು ಕಂಬ್ಳಿ ಕೊಡಜ್ಜಿ ಸಳೀ!" ಅಂದೆ, ಅಜ್ಜಿ ನನ್ನ ದುರ್ಗುಟ್ಕೊಂಡು ನೋಡಿದ್ಲು ಏನನಿಸ್ತೋ ಏನೋ ಒಳಗೆದ್ಹೋದ್ಲು ನಾನು ಅವ್ವ ಕಂಬ್ಳೀ ತರ್‍ತಾಳೆ ಅಂತ ಅಂದ್ಕೊಂಡೆ ಆದ್ರೆ ಅವಳು ಕೆಂಪಗೆ ಕಾಯ್ತಾ ಇದ್ದ ದೋಸೆ ಕೈ ಇಡ್ಕೊ ಬಂದ್ಲು ನಾನು ನೋಡ್ತಿದ್ದಂಗೆ ಎಡಗೈ ಹಿಂಗೈ ಮ್ಯಾಲೆ ಬರ ಒತ್ಬಿಟ್ಲು. ನಾನು ಅಯ್ಯೋ ಅಯ್ಯೋಂತ ಚೀರಾಡ್ದೆ ನೆಲದ್ಮ್ಯಾಕೆ ನೊರಳ್ದೆ ತಡೀನಾರ್ದೆ ಉಕ್ಕ್ಯಾಡ್ದೆ-ಸಳಿ ಇತ್ತ ಮೈನೋವ್ನಿಂದ ಉರಿಯಿಂದ, ಬೆವರೋಕೆ ಸುರು ಆಗೋಯ್ತು ಹಿಂಗೈ ಮ್ಯಾಗೆ ಬರೆ ಆಕಿದ್ಜಾಗ ಕೆಂಪ್ಗೆ ಆಗಿತ್ತು ನಾನು ಚೀರಿ ಚೀರಿ ಅತ್ತೆ

ಅನ್ಹೊತ್ಗೆ ಪೂಜಾರಪ್ಪ ಬಂದ್ರು. ಅವ್ವನೂ ಬಂದ್ಲು. ಕೈನಾಗೆ ಏನೋ ಔಸ್ದಿ ಮುಡೀಕ್ಕಂಡಿದ್ಲು ನನ್ನ ಕೈ ಮ್ಯಾಗಿನ ಬರೆ ಕಂಡ್ಕ್ಯ ನಾನು ಅವಳ್ಗೆ ತೋರ್‍ಸಿ ಅತ್ತೆ. ಅವ್ಳ ಕಣ್ಣಾಗೂ ನೀರ್‍ಬಂತು ಅವ್ಳ ನೆರಗ್ನಿಂದ ಕಣ್ಣೊರ್‍ಸಿದ್ಲು ಪಂಡಿತ್ರು ಕೊಟ್ಟ ಔಸ್ದೀನ ಆಲ್ದಾಗಿ ಅಕಿ ಕೊಟ್ಳು ಹಾಲು ಕುಡಿದ್ಮೇಲೆ ಜೀವ ಕೊಂಚ 'ಉಸ್' ಅನ್ನಾಂಗಾಯ್ತು ಪೂಜಾರಪ್ನೋರು ಏನೋ 'ಮಣ ಮಣ' ಮಂತ್ರ ಏಳಿದ್ರು, ಮುಕಕ್ಕೆಷ್ಟು ತೀರ್ಥ ಎಸೆದ್ರು ಅಣೆಗೊಂದಿಷ್ಟು ಇಭೂತಿ, ಕುಂಕ್ಮ ಅಚ್ಚಿದ್ರು ಅರಿದೀ ದಾರ ತೆಗ್ದು ಕೈಗೆ ಕಟ್ಟಿದ್ರು ಏನಾಗ ಕ್ಯಲ್ಲ ಬೆಳಗ್ಗೆ ಅಷ್ಟೊತ್ತಿಗೆ ಸರಿ ಒಗ್ತಾಳೆಂದ್ರು ಅವರಿನ್ನೇನು ಒಲ್ಡೊ ಒಟ್ಟಿಗೆ ನರ್‍ಸ್ಯಾಗಿ ನೇಕ್ರಪ್ನೋರು ಬಂದ್ರು ಬಂದೋರು ಅಂಗೆ ಬಾಕ್ಲಾಗೆ ನಿಂತ್ಕಂಡ್ರು ಚಿಮ್ಣಿ ದೀಪಾಗೆ ನನ್ನ ಕೈ ಮೇಲಿದ್ದ ಬರೆ ನೋಡಿದ್ರು. ಅಣೇಗೆ ಬಳದಿದ್ದ ಇಭೂತಿ ಕುಂಕ್ಮ ನೋಡಿದ್ರು ಪೂಜಾರಪ್ನೋರ್‍ಕಡೆ ನೋಡಿದ್ರು.

"ಅನಾಗರೀಕ್ರು—ಉಡ್ಗೀಗೆ ಜರಾ ಬಂದು ಸಾಯ್ತಾ ಇದ್ರೆ ಔಸ್ದಿ ಕೊಡ್ಸೋ ಬದ್ಲು ಇದ್ನೆಲ್ಲಾ ಯಾಕೆ ಮಾಡ್ತೀರಿ? ನಿಮ್ಗೆಲೇಗೇನೈತೆ? ಉಡ್ಗೀನ ಸಾಯಿಸ್ಬಿಡ್ತೀರಿ ಏನು ಭಾವ ನೀನೂ ಅಂಗೇ ಅಗೋದಿ!" ಅಂತ ರೇಗಾಡಿದ್ರು ಅವ್ವನ್ತಾವ ತಿರುಗಿ ನೋಡಿದ್ರು. "ನೀನೆಂತ ತಾಯಿ ಕಣವ್ವಾ ಕೈ ಬೆಂದೋಗೋ ಅಂಗೆ ಬರೆ ಆಕ್ಸಿದ್ಯಲ್ಲಾ! ಓಗು ಒಂದಿಷ್ಟು ಅಳ್ಳೆಣ್ಣೆ ತೊಗೊಂಡ್ಬಂದು ಅಚ್ಚು" ಅಂತ ರೇಗಾಡಿದ್ರು ಅವ್ವ ಅಳ್ಳೆಣ್ಣೆ ತಂದಚ್ಚಿದ್ಲು.

ಸೇಕ್ರಪ್ಪೋರು ನನ್ತಾವ ಬಂದು ತಲೆ ಸವರಿದ್ರು "ಮನಿಕ್ಕೊಳ್ಳೇ ಆಳ್ಬೇಡಾ ಬೆಳ್ಗೆ ನಾನು ಡಾಕಟ್ರತ್ತಾವ ಕರ್ಕೊಂಡೋಯ್ತೀನಿ' ಅಂದ್ರು

ಪೂಜಾರಪ್ಪೋರು ಒಂದು ಮಾತಾಡ್ದೇ ಎದ್ದು ಒಂಟೇ ಓದ್ರು ಅಜ್ಜಿ 'ಗೊಣಗೊಣ' ಗೊಣಗಿದ್ಲು ಅವ್ವ ಅಂಗೇ ಗರಬಡ್ದೋರಂಗೆ ನಿಂತಿದ್ಲು ಸೇಕ್ರಪ್ಪ ಅವ್ವನ್ನ ದುರದುರ ನೋಡಿದ್ರು "ನೋಡು ನೀನಿಂಗೆ ಆಳೀ ಕಂದಾಚಾರ ಇಟ್ಕಂಡು ಮಗ್ಳ ಬಾಳು ಆಳ್ಮಾಡ್ತೀಯಾ ! ಉಸಾರು ! ನಿನ್ಗಂಡನ್ತಾವ ನಾನು ಮಾತಾಡ್ಬೇಕು ಊರಿಗ್ಯಾವಾಗ ಬರ್ತಾನೇ" ಬಂದ್ರೆ ನನ್ನ ಬಂದು ನೋಡೂನ್ನು !"

ಅವ್ವ ಉಸಿರೆತ್ತೋಕ್ಮುಂಚೆ ಒಂಟೇ ಓದ್ರು

ರಾತ್ರೆಯೆಲ್ಲಾ ಸಳಿ, ಜರ ಒಡೀತು ಬೆಳಕ್ಮಾಡೋತ್ಗೆ ಪ್ನೆ ಬೆವರು ಕಿತ್ಕಂಡು ಜರ ಬುಡ್ತು ಅವ್ವ ನನ್ಪಕ್ಕಾಗೇ ಮನೀಕಂಡಿದ್ಲು ನಂಗೆ ನಿದ್ದೆ ಅತ್ತೈತೇಂತ ಅಜ್ಜಿ, ಅವ್ವ ಮಾತಾಡ್ಕಂತಿದ್ರು

"ಅನ್ಯಾಯ ಮಾಡ್ಬುಟ್ಟೆ ಕನವ್ವಾ ಪುಟ್ಟನ್ಗಿಂತ ಈ ಎಣ್ಮಾಗಾನ ದ್ಯಾವರ್ಗೆ ಬುಟ್ಟಿದ್ದು ತಪ್ಪಾಯ್ತೂಂತ ಅನ್ನಿಸ್ತದೆ ಇನ್ನೇನು ವಯಸ್ಬಂದು ಯಾವಾಗ ನೆರೆದ್ಬುಟ್ಟಾಳೋ ನಂಗೆ ಎದೆ ಒಡ್ಕಂತದೆ" ಅವ್ವ ಅಜ್ಜಿ ತಾವ ಏಳ್ತಾ ಇದ್ಲು

"ಎಯ್ಯ್ ಸುಮ್ನಿರು ದ್ಯಾವರ್ಗೆ ಬುಟ್ಬುಟ್ಮ್ಯಾಲೆ ಅಂಗೆಲ್ಲಾ ಅಂದ್ಕಾ ಬಾರ್ದು. ಮಗ ನಮ್ಮ ಕಣ್ಮುಂದೆ ಸಂದಾಕಿದ್ದಾಳಲ್ಲಾ ನೀನು ಆಗೂ ಈಗೂ ನೋಡಿ ಗೌಡ್ರು ತಾವಾನೇ ಬುಟ್ಬುಡು ಎನ್ರೂ ಒಳ್ಳೇ ದಾಗ್ತೈ ಅವ್ಳೂ ಬಾಳ್ಕಂತಾಳೆ" ಅಜ್ಜಿ ಏಳಿದ್ಲು

"ಅದೆಂಗಾಯ್ತದವ್ವಾ, ಇದಿನ್ನೂ ಬೊಮ್ಮಟೆ-ಸಡ್ಡೀ ಉಡ್ಗಿ-ಗೌಡ್ರಿಗೆ ಅವಳಪ್ಪಯ್ಯನ ವಯ್ಸ್ಸಾಯ್ತಲ್ಲಾ ! ಅದೆಲ್ಲಾ ಸರಿ ಓಗೋಲ್ಲ ಆ ಕಾಲಕ್ಕೆ ನೋಡ್ಕಳೋವಾ " ಅವ್ವೆ ಏಳಿದ್ಲು

"ಊಂ-ಅಂಗೇ ಸುಮ್ನಿರು ಆಗ್ಲೀ ಆ ಸೇಕ್ರಪ್ಪ ಉಡ್ಗಿ ಮ್ಯಾಲೆ ಕಣ್ಣಾಕವ್ನೆ-ಕರ್ಕಂಡು ಪಟ್ಣಕ್ಕೆ ಒಂಟೋಗ್ಲಿ-ಅಲ್ಲಿ ಅವ್ನು ಬಾಳಸ್ತಾನಾ ? ಸಂತೆ ಸೂಳೆ ಮಾಡಾಕ್ಬುಟ್ಟಾನೂ !"

ನಂಗದೆಲ್ಲಾ ಕೇಳಿ ಜರದಾಗೂ ಕೈಕಾಲು ತಣ್ಣಾತು ಎದರ್ಕೊಂಡು

ಬೇಠಾಂಗಾಯ್ತು. ನಾನು ನರಳಿದ್ದು ಕೇಳಿ ಅವ್ವ, ಅಜ್ಜಿ ಮಾತು ನಿಲ್ಲಿಸ್ಬಿಟ್ರು

"ಸುಮ್ಮಿರು ಸದ್ಯ ಕೇಳಿಸ್ಕಂಡಾಳು ಬೋ ಸೂಕ್ಷ್ಮ ಅವ್ಳು ಓದು ಬರಾವು ಇಲ್ದಿದ್ರೂ ಬೋ ಮುಂಡೆ ಅವ್ಳು!"

ಬೆಳಿಗ್ಗೆ ಕಣ್ಬಿಡ್ತಾ ಇದ್ದಂಗೆ ಅಪ್ಪಯ್ಯ ಬಂದ್ರು. ನಂಗೆ ಅಪ್ಪಯ್ಯ ಬಂದ್ರೆ ಬಾಳ ಕುಸಿ. ನಾನು ಮನ್ಗಿರಾದ್ನಂಡು ನನ್ತಾವ ಬಂದು ತಲೆಸವರಿದ್ರು

"ಯಾಕೆ ಮನಗವ್ಳೆ ? ಏನಾಗೈತೆ?"

ಅವ್ವ ಎದರ್ಕೊಂಡೇ ಏಳಿದ್ಲು. "ನಿನ್ನೆ ಜರಾ ಸಳಿ ಬಿಸಲ್ನಾಗೆ ಓಡಾಡ್ತಾಳೆ ಸುಮ್ಕೆ

"ಅವ್ಳು ಓಡಾಡ್ತಾಳೇಂತ ಯೋಳ್ತೀಯಲ್ಲ, ನೀನ್ಯಾಕಿರಾದು ಮನ್ಯಾಗೇ ಕುಂದರಸ್ಕಂಡಿರ್ಬಾರ್ದಾ? ನಿಂಗೂ ಅವ್ಳ್ನ ಕಂಡ್ರೆ ಶಾನೆ ಬೇಸ್ರ ಮಗ ಒಬ್ಬಿದ್ರಾಯ್ತು! ಪಂಡಿತ್ರ ತಾವ ಕರ್ಕಂಡೋಗಿದ್ಯಾ?"

"ಊಂ, ಔಸ್ದಿ ಕೊಟ್ರು. ಈಗ ಎಷ್ಟೋ ಗುಣ ಆಗ್ಯೆತೆ" ಅವ್ವ ಯೋಳಿದ್ಳು ನಾನು ಕಣ್ತೆಗೆದದ್ದು ನೋಡಿ ಅಪ್ಪಯ್ಯ ಕೆನ್ನೆ ಸವರಿದ್ರು "ಯಾಕವ್ವಾ ಬಿಸ್ಲಾಗಾಡಿ ಜರ ತಂದ್ಕಂಡಿ?" ನಂಗಪ್ಪಯ್ಯನ್ನ ಕಂಡು ಕಣ್ಣಾಗೆ ಅಂಗೇ ನೀರು ಬಂತ್ಬುಡ್ತು "ಅಳ್ಬಾರ್ದು ಕಂದಾ, ಸರಿ ಓಯ್ತದೆ ನಾನೇ ಪಂಡಿತ್ರತಾವ ಓಗಿ ಬತ್ತೀನಿ ಓಸಿ ತಾಳು" ಅಪ್ಪಯ್ಯ ನನ್ನೊದ್ಗೆ ಸರಿಮಾಡಿದ್ರು.

ಅಪ್ಪಯ್ಯನ್ಕಂಡ್ರೆ ಅವ್ವಂಗೆ ಬೋ ಭಯ ಕೋಪ ಬಂದ್ರೆ ಅಪ್ಪಯ್ಯ ಕೈಗೇನು ಸಿಕ್ತದೋ ಅದ್ನೇ ತೆಗ್ದು ಅಕ್ಬಿಡ್ತಾರೆ. ಅವ್ವ ಒರ್ಗೆ ಬರ್ನೇ ಇಲ್ಲ.

"ಲೇ, ಎಲ್ಲಿ ಸತ್ತೋದಿ, ಮಗೀಗೆ ಬಿಸಿ ಬಿಸಿ ಏನಾರ ತತ್ತೀಯಾ ಎಂಗೆ? ನಂಗೂ ಏನಾರ ಕೊಡು. ಒಳ್ಗೆ ಮಗ. ಅವ್ವ ಸೇರ್ಕಂಡು ಎಲ್ಲ ನುಂಗ್ತಾ ಇದ್ದೀರೇನು?" ಅಪ್ಪಯ್ಯ ಕೂಗಾಕಿದ್ರು.

ಅವ್ವ ಅಪ್ಪಯ್ಯಂಗೆ ರೊಟ್ಟಿ, ಬಿಸಿ ಕಾಪಿ ತಂದಿಟ್ಳು ನಂಗೆ ಬಿಸಿ ಗಂಜೆ ತಂದು ಕುಡ್ಸಿದ್ಲು ನಾನು ಕುಡೀತ್ತಿದ್ದಂಗೆ ಅವ ಮೆಲ್ಗೆ ಏಳಿದ್ಲು.

"ನಮ್ಮವ್ವ ಬಂದವ್ಳೆ ಅಳ್ಳೀಂದ. ಅಲ್ಲಿ ಆಲು ತುಪ್ಪ, ಮೊಸ್ರು ಸಿಕ್ತೈತೆ. ಇವ್ಳ್ನ ಕರ್ಕೊಂಡೋಗಿ ಆರೈಕೆ ಮಾಡ್ತೀನೀಂತ ಅಂತಾವ್ಳೆ."

ಅಪ್ಪಯ್ಯ ಅಂಗೇ ಯೊಸ್ನೆ ಮಾಡ್ತಾ ಕುಂತ್ಕಂಡ್ರು. "ಊಂ ಎಂಗೆ ಬಡಕಲಾಗೋದ್ಲು ನೋಡು ಎಣ್ಮಗು, ಆ ಮಯೆಸ್ನಾಗೆಂಗಿರ್ಬೇಕೂ! ಕಸ್ಗಂಡೋಗೂಂತೇಳು" ಅಂದಾಗ ನಂಗೆ ಅಪ್ಪಯ್ಯನ್ತಾವ ಕುತ್ಕಂಡು ಅವ್ವಾ, ಅಜ್ಜಿ ಮಾತಾಡ್ಕಂಡಿದ್ಲುಲ್ವಾ ಯೋಳಾನಾ ಅನ್ನಿಸ್ತು ಆದ್ರೂ ಅವ್ವಾ, ಅಜ್ಜೀ ಇದ್ದಾಗ ಯೋಳ್ಬಾರ್ದೂಂತ ಸುಮ್ಕಾದೆ

ಅವ್ವ ಹಿಟ್ಟು ಬೇಯ್ಸಿಟ್ಟು ಕೆಲ್ಸಕೊಂಟ್ಲು. ಅಜ್ಜಿ ಬಿಸಿಲು ಕಾಯ್ಸಾಕೆ ಪಕ್ಕದ್ಮನೆ ಮಾದಮ್ಮನ್ತಾವ ಮಾತಾಡಾಕ್ಕೇಂತ ಒಂಟ್ಲು. ಪುಟ್ಟಿ ಇಸ್ಕೂಲಿಗೆ ಒಂಟೋದ ಅಪ್ಪಯ್ಯ ಅಂಗೇ ಬಿದ್ರಿನ್ಮಂಚದ್ಮೇಲೆ ಮನಿಕ್ಕಂಡಿದ್ರು

ನಾನು ಒರ್ಗೋಗಾಕ್ಕೇಂತ ಎದ್ದೋಗಿ ಅಂಗೇ ಮುಕ, ಮೋರೆ ತೊಳ್ಕಂಡು ಬಂದು ಅಪ್ಪಯ್ಯನ್ತಾವ ಕುಂತ್ಕಂಡೆ.

"ಏಸ್ಬಂಗಾರಿ, ಇಲ್ಲಿಗ್ಯಾಕೆ ಬಂದೀ, ಮುಸಿಕ್ಕೋ ಓಗು. ಪಂಡಿತ್ರು ತಾವ ಓಗಿ ಬತ್ತೀನಿ" ಅಂದ್ರು ಅಪ್ಪಯ್ಯ ಅಂಗೇ ಉಸ್ರು ಬಿಗಿ ಇಡ್ದೆ

"ಅಪ್ಪಯ್ಯ ನಾನಜ್ಜೀ ಜೊತೆ ಅಳ್ಳೀಗೋಕಾಗಿಲ್ಲ ನಾಇಲ್ಲೇ ಇರ್ತೀನಿ"

ಅಪ್ಪಯ್ಯ ನನ್ತಲೆ ಸವರಿದ್ರು "ಓಗು ಎಣ್ಣೇ, ಇಲ್ಲಿ ನಿಂಗೆ ನಾನೇನು ಕೊಟ್ಟೇನು ಎಲ್ಡು ಒತ್ತು ಇಟ್ಟುಂಡ್ಕಂಡಿರ್ಬೇಕೂ ಅವ್ವನ್ಜೊತೆ ಚಾಕ್ರಿ ಮಾಡ್ಬೇಕೂ ಅಳ್ಳೀನಾಗೆ ಅಂಗಲ್ಲಾ. ಒಂದೆಲ್ಡು ತಿಂಗ್ಳು ಇದ್ಬುಟ್ಬಾ."

'ನಾನು ತುಂಬಾ ಚೆಂದಾಕ್ಕಾಯ್ತೀನಾ ?"

"ಮತ್ತೆ ನೀನು ಚೆಲುವೆ ಅಲ್ವಾ? ನೋಡು ಎಂಗಿದ್ದಿ! ನನ್ಮಗ್ಳು ಬೋ ಚೆಲುವೆ ಕಣ್ಲಾ!" ಅಪ್ಪಯ್ಯ ನನ್ನ ಎದೆಗೊತ್ಕೊಂಡ

"ನಿಂಗೆ ನನ್ಕಂಡ್ರೆ ಬೋ ಪಿರೀತಿ ಅಲ್ವಾ್ರ ?"

"ಊಂ ಮತ್ತೇ ನೀನೂಂದ್ರೆ ನನ್ನ ಪರಾಣಾನೇ ಮಗಾ!"

"ಅಂಗಾದ್ರ ನನ್ಯಾಕೆ ದ್ಯಾವರ್ಗೆ ಬುಟ್ಟಿದ್ದು ನೀನೂ! ?" ನಾನು ಅಪ್ಪಯ್ಯನ್ಕೇಳ್ದಾಗ ಅಪ್ಪಯ್ಯ ಅಂಗೇ ಬಂಡೆ ಅಂಗೆ ಕುಂತ್ಬುಟ್ಟ

"ನನ್ನ ದ್ಯಾವರ್ಗೆ ಬುಡ್ಬೇಡಾ ಅಪ್ಪಯ್ಯಾ, ನೀನೇ ಸಾಕ್ಕೋ. ನಾನು ನಾಕು ಮನೆ ಚಾಕ್ರಿ ಮಾಡ್ಕಂಡಿರ್ತೀನಿ. ಆ ಗೌಡ್ರ ತಾವ ಬುಡ್ಬೇಡಾ!"

ಅಪ್ಪಯ್ಯ ನನ್ಮಾತು ಕೇಳಿ ಬೆಂಕಿ ಆಗ್ಬುಟ್ಟ "ಯಾವ ಮುಂಡೆ ಹೇಳದ್ಲು ನಿಂಗೆ ಇದೆಲ್ಲಾ! ನಿನ್ಯಾರು ಗೌಡ್ರ ತಾವ ಬಿಡೂದು?" ಅವ್ನ ಮುಕ

ಕೆಂಪಗೆ ಕಾದ ಕೆಂಡ ಇದ್ದಂಗಿತ್ತು. ಅವ್ವ, ಅಜ್ಜಿ ಏಳಿದ್ರೂಂದ್ರೆ ಅಪ್ಪಯ್ಯ ಅವ್ವನ್ನ ಸಾಯಾ, ಬೀಳಾ ಒಡ್ದಾಕ್ಬಡ್ತಾನೆ.

"ಯಾರೂ ಏಳ್ಳಿಲ್ಲಪ್ಪಯ್ಯ ಅಂಗೇಂತ ಎಲ್ರೂ ಮಾತಾಡ್ಕಂತಾರೆ"

ಅಪ್ಪಯ್ಯ ಅಲ್ಲಿಂದ ಎದ್ದು ಒರ್ಗೆ ಒಂಟೋ ಓದ ಅವ್ನ ಕಣ್ಣಾಗೆ ನಾಕನಿ ನೀರಿತ್ತು

ಅಜ್ಜಿ ಊರ್ಗೋತಾಳೆಂತ ತಿಳ್ದಾಗ ನಂಗೆ ಭಯ ಆಗೋಯ್ತು. ಅಪ್ಪಯ್ಯನ, ಅವ್ವನ್ನ ಎಂಗೆ ಬುಟ್ಟಿರೂದೂಂತ. ಒಳಗೇ ಸಂಕ್ಟ ಆಯ್ತು. ಆದ್ರೆ ಅಪ್ಪಯ್ಯ, ಅವ್ವ ನಗ್ತಾ ನಗ್ತಾನೇ ಇದ್ರು "ನಮ್ಮವ್ವಾ ಅಳ್ಳೀಗೋಗಿ ಚೆನ್ನಾಗುಂಡ್ಕಂಡು, ತಿಂಡ್ಕಂಡು ಆಯಾಗಿರು, ಆಮೇಲೆ ಇದ್ದೇ ಇರಾದೇ!" ಅವ್ವ ನಂಗೆ ತಲೆ ತಿಕ್ಕಿ, ಮೈ ತಿಕ್ಕಿ ಸಿಂಗಾರಿಕಿದ್ಲು ಅಪ್ಪಯ್ಯ ನನ್ನ ಅತ್ರ ಕರ್ದು ಕೆನ್ನೆ ಸವರ್ದ. "ಎಣ್ಣೀ, ಎಲ್ಡು ಮೂರು ತಿಂಗ್ಳಿಂದ್ದು ಬಂದ್ಬುಡವ್ವಾ ನಿನಗೇಂತ ಗೌಡ್ರ ತಾವ ಒಂದೈವತ್ತು ರೂಪಾಯಿ ಇಸ್ಕಂಡು ತಂದಿವ್ನಿ ಇಟ್ಕಾ ಏನಾರ ಬಟ್ಟೆಬರೆ ತಗಾ-!" ನನ್ಕೈನಾಗೆ ದುಡ್ಡಿಟ್ಟಾಗ ಬೆಂಕಿ ಕಂಡಂಗಾಯ್ತು "ಬ್ಯಾಡಾ ಅಪ್ಪಯ್ಯಾ. ಆ ಗೌಡ್ರ ದುಡ್ನ ನಾನು ಮುಟ್ಟಾಕಿಲ್ಲ-!" ಅಂತ ದೂರ ತಳ್ಬುಟ್ಟೆ

"ಇಲ್ಲಾ ಮಗ ಇದು ಸಾಲ ಮಾಡಿವ್ನಿ ಒಂದೀಟು ದುಡ್ಡು ಬರಾತ್ಲೂ ಕೊಟ್ಬಿಡ್ತೀನಿ. .ಇದು ನನ್ನ ದುಡ್ಡು ಕಣ್ಲೇ! ಬೋ ಜೋರಾಗಿದ್ಯವ್ವಾ ನೀನು! ಬೋ ಉಸಾರು ನೀನು!" ಅಪ್ಪಯ್ಯ ನೆಗಾಡ್ದ

ಅಜ್ಜಿ ಗಂಟೊತ್ಕಂಡು ಒಂಟ್ಲು ನಾನೂ ಅವ್ವ ಕಟ್ಕೊಟ್ಟಿದ್ದ ಗಂಟು, ಚೀಲ ಒತ್ಕಂಡು ಅವ್ಳಿಂದೆ ಒಂಟೆ. ನನ್ನ ಕಣ್ಣಾಗೆ ನೀರ್ಬಂತು. ಅವ್ವನ್ನ ಅಪ್ಪಯ್ಯನ್ನ, ಪುಟ್ಟಾನ್ನ ನೋಡ್ತಾ ನೋಡ್ತಾ ಒಂಟೆ.

ಅಜ್ಜಿ, ನಾನು ಬಸ್ಸು ಅತ್ಕಂಡು ಕುಂತ್ಕಂಡ್ವಿ. ಬಸ್ನಾಗೆ ಅಜ್ಜಿಗೆ ಅದ್ಯಾವ್ದೋ ಮುದ್ಕವ್ವ ಸಿಕ್ಬುಟ್ಲು ಬಸ್ನಾಗೆ. "ಇವ್ಯಾರ್ರೂ ? ಅಂತ ನನ್ಕಡೆ ಕೈ ತೋರಿದ್ಲು.

"ನನ್ನ ಮೊಮ್ಮಗ್ಳು ಕನವ್ವಾ!" ಅಜ್ಜಿ ಅಂದ್ಲು.

"ಕಣ್ಣು, ಮೂಗು, ಬಾಯಿ ಎಂಗೈತೆ ನೋಡು. ಯೇಳ್ ಮಾಡಿಸ್ದಂಗೈತೆ-!" ಮುದ್ಕವ್ವ ನನ್ನ ಗಲ್ಲ ಇಡ್ದು ಮುದ್ದಾಡಿದ್ಲು.

ಅಜ್ಜ ಕಿಸಕ್ನೇ ನಕ್ಳು "ಊಂ. ಮಂತೆ ದ್ಯಾವರ್ಗೆ ಬುಟ್ಬುಡ್ದೀವಿ ಕನವ್ವಾ–ಕಣ್ಗೊತ್ಕಂಡು ಅವ್ವ್ನ ಮುಟ್ಕಂಬ್ಯಾಡಾ್ದ ?"

ನಂಗೆ ಅಂಗೇ ಅಜ್ಜೀಗೆ ತಲೆಮೇಲೆ ಗುಮ್ಮಿಕ್ಬುಡಾ್ಲ ಅನ್ನಿಸ್ತು–ಅದ್ಕಳ್ಳಿ ಇಪ್ರೇಳ್ದಾಗೆ ಕೇಳ್ದ್ರಲ್ವಾ ನಾನು ಅಂದ್ಕಂಡೆ

ದಾರೀಲಿ ಮಂಡಕ್ಕಿ ಕೊಂಡ್ಕಂಡೆ, ಕೊಬ್ರಿ ಮಿಟಾಯಿ ಕೊಂಡ್ಕಂಡೆ-ಅಜ್ಜಿ ಎಳಸೀರು ಕೊಂಡ್ಕಟ್ಲು-ಅಳ್ಳಿ ಬರೋತ್ಲೂನೆ ಇಳದ್ವಿ

ಅಳ್ಳಿ ಬರೋತ್ಲೂನೆ ನಂಗೆ ಮನ್ಸು ಅಯ್ಯದಂಗಾಯ್ತು. ಯಾರೂ ನನ್ನ ಇಲ್ಲಿ ಅನ್ನಾಂಗಿಲ್ಲ ಅದ್ಕಳಾಂಗಿಲ್ಲ-ನದೀ, ಕೆರೆದಂಡೇಲಿ ಆಡ್ತಂ ಬೋದು–ಅಜ್ಜ ನನ್ಕೈನಾಗೆ ಒಂದೀಟೂ ಗೆಯ್ಮೆ ಮಾಡ್ಸಾಕಿಲ್ಲ-ಅಲ್ಲಿ ಇಲ್ಲಿ ಸುತ್ಕಂಡು ಆಯಾಗಿರ್ಬ್ಯಾದು.

ಅಳ್ಳೀಲಿ ಅಜ್ಜ ಅಟ್ಟಿ ದೊಡ್ದು. ನಾಲ್ಕು ಅಸ, ಎಲ್ಡೆಮ್ಮೆ ಇಟ್ಕಂಡವ್ರೆ ನಿಂಗಣ್ಮಾವ ಒಲ್ದಾಗೆ ಕೆಲ್ಸಕ್ಕೊಯಾನೆ–ಮಾಲಚ್ಮತ್ತೆ ಮಂನ್ಯಾಗೆ ದುಡೀತಾಳೆ. ಇಬ್ರಿಗೂ ಮಕ್ಳಿಲ್ಲ ಕಂಡ್ಕಂಡ ದ್ಯಾವರ್ಗೆಲ್ಲಾ ಅರ್ಕೆ ಒತ್ಕಂಡವ್ರೆ–

ಅಜ್ಜ ಬೋ ದೊಡ್ಡ ಸಾವ್ಕಾತಿ ಮನ್ಯಾಗೆ, ಎಲ್ಲಾ ಅವಳ್ದೇ. ಅದ್ಕೇ ಅತ್ತೇ ಮಾವ ಅವ್ಳೇಳ್ದಂಗೆ ಕೇಳ್ಕಂಡಿರ್ತಾರೆ. ಎಲ್ಲಿ ಬಿಡ್ಸಾಸು ಕೊಡಾಕ್ಕಿಲ್ಲಾಂತಾಳೇಂತ ನಾನು ಬಂದದ್ಕಂಡು ಮಾವಂಗೆ ಕುಸಿ. ಅತ್ತೆ ಏನೂ ಏಳ್ಳಿಲ್ಲ

"ಲೇ ಮಾಲಚ್ಮಿ-ನಾನು ಮಗ್ಳಿಗೇಳಿ ಕರ್ಕಂಬಂದಿವ್ನಿ ಅರೈಕೆ ಮಾಡ್ತಿವ್ನೀಂತ ಉಸಾರಾಗಿ ನೋಡ್ಕೊ!" ಅಜ್ಜ ಯೋಳ್ದಾಗ ಅತ್ತೆ ತಲೆ ಆಡಿದ್ಲು. ನಂಗೆ ಅತ್ತೆ ಅಜ್ಜೀ ತಾವಿರಾಕ್ಕಿಂತ ಮಾವನ್ಜತೆ ಓಗಾಕಿಷ್ಟ

"ಮಾವಯ್ಯಾ, ನಾನೂ ನಿನ್ಜತೆ ಬಂದು ಒಲ್ದಲ್ಲಿ ಕೆಲ್ಸಾ ಮಾಡ್ಲಾ ?" ಎಂದಾಗ ಅವ್ನು ನೆಗಾಡ್ಪ "ಬಾರವ್ವಾ, ಬಾ, ಚ್ಯಾಡಾಂದವ್ರು ಯಾರು ?"

"ಬಿಸ್ಲಾಗೆ, ಅಂಗೆಲ್ಲಾ ಓಗ್ಬಾರ್ದು–ಸುಮ್ನೆ ಅಟ್ಟೀಲೇ ಇರು!" ಅಜ್ಜ ಏಳ್ದಾಗ ನಾನು ರೇಗಾಡ್ದೆ

"ಅಂಗೆಲ್ಲಾ ಅಂಪ್ರೆ ನಾಳೀಕೇ ನನ್ನ ಕಳಿಸ್ಬುಡು ಅವ್ವನ್ತಾವ!"

"ಇಲ್ಲಿ ಬುಡವ್ವಾ ನಾನಿಲ್ವಾ ಅವ್ನ್ನ ನೋಡ್ಕಾಳ್ಳಾಕೆ-ನೆರಳ್ನಾಗೇ ಏನಾರಾ ಮಾಡಕ್ಕೇಳ್ತೀನಿ!"

ತಂಗೂ ಅದೇ ಬೇಕಾಗಿತ್ತು. ನಂಗೆ ಮನ್ಯಾಗೇ ಕುಂತ್ಕಂಡು ಕೆಲ್ಸ ಮಾಡಾಕೆ ಬ್ಯಾಸ್ರ. ಒರ್ಗೆ ಅಲ್ಲಿ ಇಲ್ಲಿ ತಿರ್ಗಾಡ್ಕಂಡು ಇರಾಕೇ ಬೋ ಕುಸಿ. ದನಾ ಮೈಸಾದು, ಕುರಿ ಮೈಸಾದೂಂದ್ರೆ ಬೋ ಇಸ್ಟ. ಮಾವ ಜತೇಲಿ ಒಲಕ್ಕೋಗಾಕ್ಕೆ ಕಾದ್ಕಂಡು ಕುಂತ್ಕಂಡೆ.

ಅಜ್ಜಿ, ಅತ್ತೆ ಉಪ್ಪಾರ ಮಾಡಿ ಒಟ್ಟೆಂಬಾ ಇಟ್ಟಿಕ್ಕಿದ್ರು-ಅಜ್ಜಿ ಎಲ್ಡು ಮಿಳ್ಳೆ ತುಪ್ಪ ಆಕಿದ್ಲು. ರಾತ್ರಿ ಮನಗಾಕ್ಮುಂಚೆ ಒಂದು ಚಿಕ್ಕ ಚೊಂಬಿನ್ತುಂಬಾ ನೊರೆ ಆಲು ಕೊಟ್ಲು ಕುಡ್ಯಾಕೆ. ಬೆಚ್ಗೆ ದೊಗ್ಗಂಡು ಗೋಣೀ ತಾಟಿನ್ಯಾಗೆ ಮನಿಕ್ಕಂಡಿದ್ದೇ ನಂಗೆ ನೆಪ್ಪು. ಆಮೇಲೆ ಬೆಳ್ಗು ಅರಿದಾಗ್ಲೇ ನಂಗೆ ಎಚ್ರ ಆದದ್ದು.

ಬ್ಯಾಗ ಎದ್ದು ನೀರು ಮುಕ್ಕಂಡು ಮುಕಾ ಮೋರೆ ತೊಳ್ಕಂಡು. ತಂಗ್ಳುಂಡು ಮಾವನ್ಜೊತೆ ನಾನೂ ಒಂಟ್ಬುಟ್ಟೆ.

"ಲೇ ಬಿಸ್ಲಾಗೋದ್ರೆ ಸುಮ್ಕಿರಾಲ್ಲ ನೋಡು. ಎಮ್ಕೆ ಮುರ್ದ್ಕಟ್ಟೀನೂ!" ಅಜ್ಜಿ ಬೆಂಕಿ ಕಾಸ್ತಾನೇ ಕೂಗಾಡಿದ್ಲು.

"ಏಯ್-ಅದ್ಯಾಕಂಗೆ ಬಡ್ಕಂಡೀಯಾ-ನಾನೆಲ್ಲಿ ಅಂಗೆಲ್ಲಾ ಒಯ್ತೀನಿ-ಮಾವನಿಲ್ವಾ ನನ್ನ ನೋಡ್ಕಾಳ್ಳಾಕೆ!" ನಾನೂ ಕೂಗಾಕ್ದೆ.

ಮಾವ ಲಚ್ಚಿತ್ತು ಕೆಂಪಿತ್ತು ಒಡ್ಕಂಡು ಭುಜದ್ಮ್ಯಾಕೆ ನೇಗ್ಲು ತಗಾಕ್ಕಂಡು ಒಂಟ. ನಾನೂ ಅಪ್ಪಿಂದೆ ಕೈನಾಗೊಂದು ಸಣ್ಣ ಕಡ್ಡಿ ಇಟ್ಕಂಡು ನಡ್ದೆ.

ಒಂದೀಟ್ದೂರ ಓಗ್ಬೇಕು. ದಾರೀಲಿ ಎಲ್ಡು ಪಕ್ದಾಗೂ ದೊಡ್ಡ ಉಣಿಸೇ ಮರಗೋಳು. ಆ ನೆರಳ್ನಾಗೆ ನಡ್ಕಂಡು ಓಗಾದೇ ಸೊಗ್ಸು. ಮಾವ್ನಂಗೆ ಇನ್ನೂ ಏಳೆಂಟ್ಜನ ಉಳಾಕೆ ಒಂಟಿದ್ರು.

"ಇವ್ನು ನನ್ನಕ್ಕಯ್ಯನ್ಮಗ್ನು! ನಾಕ್ದಿನ ಇದ್ದೋಗಾಕೆ ಬಂದವ್ನೆ" ಮಾವ ಎಲ್ರ ಮುಂದೇನೂ ಜಂಬ ಏಳ್ಕಂಡ.

ಮರಯ್ಯ, ಮಾವ ಇಬ್ರೂ ಬೋ ಸಿನೇಯಿತ್ರು. ಇಬ್ರೂ ಅಂಗೂ ಇಂಗೂ ಮಾತಾಡ್ತಾ ಓಗ್ತಾ ಇದ್ರು. ಇಂದ್ಗಿಂದ ಎತ್ತಿನ್ಗಾಡಿ ಓಡ್ಕಂಡು ಬತ್ತು. ಅದ್ರಾಗೆ ಚಿಗುರುಮಿಸಾಸೆ ಉಡ್ಗ ಕುಂತಿದ್ದ. ನನ್ಕಡೆ ನೋಡಿ ಕಣ್ಣು ಕುಣಿಸಿ ನಕ್ದ.

"ಲೋ, ಬೋಸುಡಿ ಮಗ್ನೆ ಎಂಗ್ಲಾ ಗಾಡಿ ಒಡ್ಕಂಡು ಬರಾದು. ನನ್ನೊನೆ ಎದುರ್ಕೊಂಡಾಳು!" ಮಾವಯ್ಯ ಗದ್ರಿದ್ರೂ ನೆಗಾನೇ ಇದ್ದ. "ಲೋ ಮರಯ್ಯಾ ನಿನ್ಮಗ ಚೆನ್ನ ಬೋ ಎಚ್ಕಂಡವ್ನೆ-ಒಂದ್ಗಲ್ಲ ನೋಡಿ ಗಂಟಾಕ್ಬುಡು" ಅವ್ನೆಸ್ರು ಚೆನ್ನ-ಚೆಂದಾಕೇ ಅವ್ನೆ-ತುಟಿಗ್ಳ ಕಣ್ಗಳು-ಚಿಗ್ರುಮೀಸೆ-ಒಳ್ಳೇ ಅಂಗಿರಾ ಕೂದ್ಲು. ಸೊಟ್ಟಕ್ಕೆ ನೆಗಾಡೋ ಬಾಯಿ, ಎಣ್ಗೆಂಪು ಬಣ್ಣ-ಒಳ್ಳೇ ಚಿಕ್ಕವ್ವನ್ಮನೆ ಗೂಳಿ ಇದ್ದಂಗವ್ನೆ ಅನ್ನಿಸ್ತು ನಂಗೆ. ಅವ್ನೂ ನನ್ಕಡೇನೇ ನೋಡ್ತಾ ಇದ್ದ. ನಾನೂ ಅಂಗೇ ನೋಡ್ದೆ ಅವ್ನು ನೆಗಾಡ್ದ ನಾನೂ ನೆಗಾಡ್ದೆ-"ಲೋ ಚೆನ್ನಾ-ಇದು ಊರ್ನಿಗಿಂಡ ಬಂದ್ಯೈತೆ-ಗಾಡ್ಯಾಗೇ ಕರ್ಕಂಬಾ-ನಾವಿಬ್ರೂ ಓಗ್ತೀವಿ" ಮರಯ್ಯ ಏಳ್ದಾಗ ಅವ್ನು ನನ್ಪಕ್ದಾಗೇ ಗಾಡಿ ನಿಲ್ಲಿಸ್ಬುಟ್ಟ

"ಏಯ್ ಉಡ್ಗಿ ಅತ್ತೂ-!" ಅಂದ

ಅವನ್ಗೆ ಮರ್ವಾದೆ ಗೊತ್ತಿಲ್ಲ-ನನ್ನ ಉಡ್ಗೀಂತನಲ್ಲಾ-ನಂಗೇನೂ ಎಸ್ರಿಲ್ವಾ ಅನ್ನಿಸ್ತು ಆದ್ರೂ ಅವನ್ಜೊತೆ ಕುಂತ್ಕಂಡು ಗಾಡೀಲಿ ಓಗಾಕ ಚೆಂದಾಗಿರ್ತೈತೆ ಅನ್ನಿಸ್ತು ಅತ್ತಿ ಕುಂತ್ಕಳ್ಳಾಕ್ಕೋದೆ ಆಗ್ಲಿಲ್ಲ ಅವ್ನೇ ಕೈಕೊಟ್ಟು ಅತ್ತಿಸ್ದ "ಎಲ್ಲೋ ಅಳ್ಳಿ ಗಮಾರರೂ ನೀವು. ಗಾಡಿ ಅತ್ತಾಕೂ ಬರಾಕಿಲ್ಲ" ಅಂದ ಇಸ್ಕಂಡಿದ್ದ ಕೈನೂ ಬುಡ್ಲಿಲ್ಲ ಮೆಲ್ಗೆ ಕೇಳ್ದ-"ನಿನ್ನೆಸ್ರೇನು?" ನಾಯೋಳ್ದೆ ಅವ್ನು ನನ್ಕಣ್ಣು, ಕೆನ್ನೆ, ತುಟೀನೇ ನೋಡಿ ಒಂತರಾ ನೆಗಾಡ್ದ ನಂಗೆ ರಕ್ತ ಎಲ್ಲಾ ಮುಕಕ್ಕೆ ತಲೇಗೇ ಬಂದಂಗಾಯ್ತು.

"ಗಾಡಿ ಓಡ್ಸು!" ಅಂದೆ.

"ಇರೂ ಮಾರಾಣೀ, ಓಡಿಸ್ತೀನಿ ನಾನು ಗಾಡೀಲಿ ಕರ್ಕಂಡೋದ್ರೆ ಬಾಡ್ಗೆ ಎಸ್ಟು ಕೊಡ್ತೀಯಾ?" ಮೀಸೆ ಮರೇಲೇ ನಕ್ಕ

"ನನ್ಮಾವ ದುಡ್ಕೊಡ್ತೈತೆ ಕೊಡ್ತೀನಿ. ಅಪ್ಪಯ್ಯ ಕೊಟ್ಟವ್ನೆ" ಅಂದೆ

"ಅಂಗಾರೆ ಕಾಸ್ಬಿಚ್ಚು!" ಅಂದ.

"ಇಲ್ಲಿ ತರ್ನಿಲ್ಲ-ಅಜ್ಜೀ ತಾವ ಮಡ್ಗವ್ನಿ. ನಾಳೆ ಕೊಟ್ಟೇನೂ!" ಅಂದೆ.

"ಅಂಗಾದ್ರೆ ಈವೊತ್ತಿನ್ಕೂಲಿ?" ಅವ್ನು ನನ್ನ ಆಸೆಯಿಂದ ನೋಡ್ದ.

"ಮಾವನ್ಮಾವ ಕೇಳಿಸ್ಕಡ್ತೀನಿ" ಅಂದೆ.

"ಏಯ್-ಅಳ್ಳೀ ಮುಕ್ಕ! ಥೂ-ಏನೂ ತಿಳ್ಯಾಕಿಲ್ಲ!" ರಸ್ತೆ ಪಕ್ಕಕ್ಕೆ

ಉಗುಳಿದ "ಹೇಯ್-ಹೇಯ್!" ಗಾಡಿ ಓಡಿಸ್ದ. ಆಗ್ಲೆ ಮಾವ, ಮರಯ್ಯೈ ಹಟ್ಟಾರ ಒಂಟಿದ್ರು. ಅವ್ರು ದಾಟ್ಕಂಡು ಗಾಡಿ ಓಡ್ತು. ಗಾಡೀಲಿ ಅಂಗೇ ಇಂಗೇ ವೈ ಆಡ್ತಿತ್ತು. ಒಂದಪ ಅವ್ನ ಮೈಮ್ಯಾಗೇ ಬೀಳಾಂಗಾಯ್ತು.

"ಏಯ್-ಏನ್ ಮೈಮೇಲೇ ಬಿದ್ದೀಯಾ-ಉಸಾರೂ!" ಅಂದ

"ನೀ ಗಾಡಿ ನಿಧಾನ ಮಾಡೂ!" ಅಂದೆ

ಅವ್ನು ಬೇಕೂಂತ ಬ್ಯಾಗ ಓಡಿಸ್ದ. ತಿರ್ಗ ಅವ್ನ ಮೈಮ್ಯಾಗೇ ಬಿದ್ದೆ. ಆದ್ರ ಅವ್ನು ಬೈಯ್ಲಿಲ್ಲ. ನಾನು ಬಿದ್ದಾಗ ಅಂಗೇ ಕೈ ಬಳ್ಸಿ ಇಡ್ಕಂಡ

"ಒಳ್ಳೇ ಮಲ್ಗೆ ಹೂವಿದ್ದಂಗಿದ್ಯಲ್ಲೇ ಅಮ್ಮಣ್ಣೀ!" ಅಂದ, ಮುಖಕ್ಕೆ ಮುಖ ತಂದು, "ಇವೊತ್ತು ಗಾಡಿ ಬಾಡ್ಗೆ ಬ್ಯಾಡಾ, ಒಂದ್ಮುತ್ತು ಕೊಟ್ಬಿಡು" ಅಂದ

'ಅಯ್ಯೋ, ಓಗು- ಇಸ್ಸೀ!" ನಾನು ಅವನ್ನ ತಳ್ದೆ. ಅವ್ನು ಇಂದೆ ಮುಂದ ಅಕ್ಕಪಕ್ಕ ನೋಡ್ದ. ಯಾರೂ ಕಣ್ಣಿಗ್ಬೀಳಿಲ್ಲ. ಅಂಗೇ ನನ್ನ ತಬ್ಕೊಂಡು ನನ್ಕೆನ್ನೆಗೆ ಮುತ್ಕೊಟ್ಟ. ನಂಗೆ ಎಂಗೆಂಗೋ ಆಗೋಯ್ತು. ಅವ್ನ ದೂರ ತಳ್ಳಿ ಏಳ್ದೆ

"ನಾಳೇಂದ ನಿನ್ಗಾಡೀಲಿ ಬರಾಕಿಲ್ಲ. ಮಾವನ್ಜೊತೇಗೇ ಬರಾದು!"

"ಅಂಗೇ ಮಾಡು. ಯಾಕೆ ನಾ ಕೊಟ್ಟ ಮುತ್ತು ಚೆಂದಾಕಿರ್ಲಿಲ್ವಾ?"

ನಾನು ಲಂಗದಿಂದ ಕೆನ್ನೆ ಒರಸ್ಕಂಡೆ. "ಥೂ-ಎಂಜಲು!" ಅಂದೆ

ಅವ್ನು ಬಿದ್ದು ಬಿದ್ದು ನೆಗಾಡ್ದ.

"ಇನ್ನೊಂದೇ ಒಂದು ಕೊಡ್ತೀನಿ. ನೀ ಬೋ ಚೆಂದಾಗಿದ್ದೀ!" ಅಂದ.

ನಾನು ದೂರ ಸರ್ಕಂಡೆ

"ಓಗು ಇವೊತ್ತಲ್ದಿದ್ರೆ ನಾಳೆ ಸಿಕ್ಕೇ ಸಿಕ್ತೀಯಾ!" ಜೋರಾಗಿ ಆಡೇಳ್ಕಂಡು ಗಾಡಿ ಓಡೀತಾ ಓದ

ದೊಡ್ಡ ಉಣಿಸೇ ಮರದ್ಹತ್ರ ನಿಲ್ಲಿಸ್ದ. "ಇಳೀ ಅದೇ ನಿಮ್ಮಾವನೋಲ" ಅಂದ. "ನೀ ದೂರ ಓಗು ಇಳೀತೀನಿ" ಅಂದೆ.

ಅವ್ನು ದೂರ ನಿಂತ್ಕಂಡ. ನಾನು ಗಾಡಿಯಿಂದ ಜಗ್ದೆ

"ಏನೂ ಬೋ ತಕರಾರು ಮಾಡ್ತೀಯಾ! ದನಾ ಕಾಯೋ ಗಂಗೀನ ತೋರಿಸ್ತೀನಿ ಬಾ ಎಂಗನ್ನೈ. ಅವ್ನ ಮುಂದೆ ನಿನ್ನ ನಿವಾಳ್ಸಾಕ್ಬೋದು"

ಅವನು ತುಟಿ ಸೊಟ್ಟ ಮಾಡಿ, ಎಲ್ಡು ಬೆರ್ಳು ಬಾಯ್ನಾಗಿಟ್ಟು ಸಿಳ್ಳೆ ಆಕ್ದ ಎಲ್ಡೇ ನಿಮಿಸ್ದಾಗೆ ಗೆಜ್ಜೆ ಸಬ್ದ ಕೇಳಿಸ್ತು ಗಂಗಿ ಓಡಿ ಬಂದಿದ್ಲು. ಕೆಂಪ್ಸೀರೆ, ಬಿಳಿ ರವ್ಕೆ ಆಕ್ಕಂಡಿದ್ಲು ತಲೇ ಮ್ಯಾಕೆ ತುರುಬು ಕಟ್ಕಂಡು ಊವು ಮುಡ್ಕಂಡಿದ್ಲು ಕಣ್ಣು, ಮೂಗು, ಬಾಯಿ ನೆಪ್ಪಾಗಿದ್ರೂ ಕಪ್ಪು ಉಡ್ಗಿ ಮೈ ಕೈ ತುಂಬ್ಕಂಡಿದ್ಲು

"ಏನ್ಸಾಮಿ ?" ಕತ್ತು ಕೊಂಕ್ಸಿ, ಕಣ್ಣು ಒರಳ್ಸಿ ಕೇಳಿದ್ಲು

"ಏನಿಲ್ಲಾ, ದನಗೊಳೇಲ್ಲಾ ಎಲ್ಲಿ ?" ಚೆನ್ನ ಕೇಳ್ದ

"ಓ . ಅಲ್ಲಿ-ಗುಡ್ಡತ್ತಾವ ಐತೆ" ಅಂದ್ಲು

"ನಡೀ-ನಾನು ಬತ್ತೀನಿ ನೋಡಾನಾ !" ಅಂಡ-ನನ್ಕಡೆ ನೋಡಿ ನಕ್ಕ "ನಾನು ಓಗ್ತೀನಿ ನಿಮ್ಮಾವ, ನಮ್ಮಪ್ಪಯ್ಯ ಈಗ ಬಂದ್ಬುಡ್ತಾರೆ-ಇಲ್ಲೇ ಇರೂ !" ಅಂದ

ನಾನಂಗೇ ನಿಂತ್ಕಂಡಿದ್ದಂಗೆ ಗಂಗಿ ಪೊದೆ ಒಳಗೆ ತೂರ್ಕೊಂಡು ಓಡಿದ್ಲು ಅವ್ಳಿಂದೆ ಇವ್ನೂ ಓಡ್ದ, ಅವರಿಬ್ರೂ ಏನ್ಮಾಡ್ತಾರೆ-ಗಂಗೀನೇ ಮಾಸಿ ಅಂದಿದ್ನಲ್ಲಾ ಅವ್ಳೇನು ಮಾಡ್ತಾಳೆ ನೋಡ್ಬೇಕೂ ಅನ್ನಿಸ್ತು ನಾನೂ ಮೆಲ್ಗೆ ಪೊದೆ ಒಳಕ್ಕೇಂದ ಅವರಿಬ್ರನ್ನೂ ಉಡಕೊಂಡು ಒಂಟೆ ಆದ್ರೆ ಅವ್ರು ನನ್ಕಣ್ಣಿಗೆ ಕಾಣಿಸ್ನಿಲ್ಲ ದೂರ್ದಾಗೇ ಕಣಗ್ಲೆ ಹೂವು ಗಿಡದ್ತುಂಬಾ ಅರಳ್ಕಂಡಿದ್ವು ಅದ್ನಾರ ಕಿತ್ಕಳ್ಳಾನಾಂತ ಓದೆ. ಅದು ಎತ್ತರದ ದಿಬ್ಬದ ಮ್ಯಾಗಿತ್ತು ನಾನು ಲಂಗ ಎತ್ಕೊಂಡು ಊವಿಗೆ ಕೈ ಆಕ್ದೆ ಯಾರೋ ನಕ್ಕಂಗಾಯ್ತು ಎಂಗ್ಸಿನ ಧನಿ.

"ಏಯ್-ಸುಮ್ನಿರಿ ಸಾಮಿ ಅಂಗೆಲ್ಲಾ ಮಾಡ್ಬೇಡಿ-ನಂಗೊಂತರಾ ಅಯ್ತದೆ !" ಎಣ್ಣು ದನಿ.

"ಸುಮ್ನಿರು. ನಿನ್ನ ತಿಂದಾಕ್ಬುಡ್ತೀನಾ-ಏನೋ ಕುಸಿ ಪಡಾನಾಂದ್ರೆ !" ಗಂಡು ದನಿ ನಾನು ಮೆಲ್ಗೆ ಡಿಬ್ಬ ಇಳ್ದು ದನಿ ಬಂದ್ಕಡೆ ಓಗಿ ಬಗ್ಗಿ ನೋಡ್ದೆ. ದೊಡ್ಡ ಮುಳ್ಳಿನ ಪೊದೆ ಇಂದ್ಗಡೆ ನೆರಳ್ನಾಗೆ-ಉಲ್ಲಿನ್ಮಾಕೆ ಗಂಗಿ, ಚೆನ್ನ. ಗಂಗಿ ಮೈಮ್ಯಾಗೆ ಸೆರ್ಗೇ ಇರ್ಲಿಲ್ಲ ಚೆನ್ನ ಅವ್ಳ್ನ ತಬ್ಕೊಂಡು ಕುಂತಿದ್ದ. ನಂಗೆ ಏಸ್ಗೆ ತುಳ್ದಂಗಾತು, ಅಲ್ಲಿಂದ ಓಡಿ ಗಾಡಿತಾವ ಬಂದುಟ್ಬೆ.

ದೂರ್ದಾಗೆ ಮಾವ, ಮರಯ್ಯ ಬರಾದು ಕಂಡು ಜೀವ ಉಸ್ ಅನ್ನಿಸ್ತು

"ಇಲ್ಯಾಕೆ ಒಬ್ಳೇ ನಿಂತ್ಕಂಡಿದ್ದೀ ? ಚೆನ್ನ ಎಲ್ಲಿ ?" ಮಾವಯ್ಯ ಕೇಳ್ದ. ನಂಗೆ ಎಲ್ಲಾ ಏಳ್ಬುಡುವಾಂತ ಅನ್ನಿಸ್ತು. ಎಂಗೇಳಾದು ? ಏಳಿದ್ರೆ, ನೀ ಯಾಕೋದೀಂದ್ರೆ !

"ನಂಗೊತ್ತಿಲ್ಲ, ಇಳಿಸ್ಬುಟ್ಟು ಇಲ್ಲೇ ಇರೂಂತೇಳಿ ಬಯಲ್ಕಡೇಗೆ ಓದಾ !" ಅಂದೆ

ಮರಯ್ಯ, ಮಾವಯ್ಯ ನೆಗಾಡ್ಕಂಡ್ರು. "ಒಟ್ಟೆಂಬಾ ಉಣ್ಬುಡ್ತಾನೆ ಕೆಲ್ಸ ಕಿಸ್ಯಾಕಿಲ್ಲ ಇದೇ ನೋಡೂ !" ಮರಯ್ಯ ಯೋಳ್ದ,

ಮಾವಯ್ಯ ನನ್ಕೈಲಿ ಇಡ್ದು ನಡ್ದ. "ಬಾ, ತಾಯೀ, ಓಗಾನ ನಮ್ಮೊಲ ಇಲ್ಲೇ. ಮರಯ್ಯ ಇನ್ನೀಟ್ದೂರ ಓಗ್ಬೇಕೂ !"

ನಾನು ಮಾವಯ್ಯನ ಕೂಡ ಒಂಟೆ, ಬಿಸ್ಲು ಏರಿದ್ರಿಂದ ಮಾವಯ್ಯ ನನ್ಕೆಲಿ ಕೆಲ್ಸ ಮಾಡಿಸ್ಲಿಲ್ಲ. "ಬ್ಯಾಡಾ, ಮಗಾ ನೀ ಮರದ ನೆರ್ಳಾಗೇ ಕುಂತ್ಕಂಡು ನಾ ಮಾಡದ್ನೋಡು. ನಾಳೀಕೆ ಮಾಡ್ವಂತಿ–ಅತ್ತೆ ಬುತ್ತಿ ತತ್ತಾಳೆ ತಿನ್ನೂವಂತೆ !"

ನಾನು ನೆರಳ್ನಾಗೇ ಕುಂತ್ಕಂಡು ಮಾವಯ್ಯ ಮಾಡಾದ್ನೇ ನೋಡ್ತಾ ಕುಂತಿದ್ದೆ. ಎಷ್ಟೋ ಒತ್ತಿನ್ಮೇಗೆ ಚೆನ್ನ ಬಂದು ಗಾಡಿ ಅತ್ಕಂಡು ಓದ್ದು ನೋಡ್ದೆ. ಈಟೋತ್ತನ್ಕ ಏನ್ಮಾಡ್ತಾ ಇದ್ದ ? ನಾನು ಏಚ್ನೆ ಮಾಡ್ತಾ ಕುಂತ್ಕಂಡೆ.

ಇಟ್ಟು, ಎಸರು ಎತ್ಕಂಡು ಅತ್ತೆ ಬಂದ್ಲು ಅವಳ್ತಾವ ಚೆನ್ನ, ಗಂಗಿ ಇಸ್ಯ ಕೇಳಾನ್ಕಂಡೆ. ಆದ್ರೆ ಮಾವಯ್ಯ ಇದ್ದಾಂತ ಸುಮ್ನಾದೆ ಇಟ್ನುಂಡ್ಮೇಲೆ ಕೈಗೆ ನೀರಾಕ್ಕಂಡು ಒಟ್ಟೆ ಭಾರ- ಕಳಿಕ್ಕಳ್ಳಾನಾಂತ ಪೊದೆ ಸಂದಿಗೋದೆ ಮಾವಯ್ಯ ಅತ್ತೇತಾವ ಏಳ್ತಾ ಇದ್ದ

"ಮರಯ್ಯನ್ಮಗ ಚೆನ್ನಂಗ್ಯಾಕೆ ನಮ್ಮುಡುಗೀನಾ ಕೊಡ್ಬಾರ್ದೂಂತ ಕೇಳ್ದ–!"

"ನೀವೇನಂದ್ರಿ ?"

"ಏನೇಳಾದು. ನಮ್ಮಕ್ಕನ ಕೇಳಿ ಯೋಳ್ತೀನೀಂದೆ !"

"ಸದ್ಯ ನಮಗ್ಯಾಕೆ ಆ ಉಸಾಬರಿ. ಚಂದೊಳ್ಳೇ ಎಣ್ಮಗಾನ ದ್ಯಾವರ್ಗೆ

ಕೊಟ್ಟಿವ್ನಲ್ಲಾ ನಿಮ್ಮಕ್ಕ. ಅವ್ನು ಎಂತ ಸೂರ್ಪನ್ಕಿ ಇರ್ಬೇಕೂ-ನಂಗಾರ ಇದ್ವಿದ್ರೆ ಕಣ್ಣೊಕ್ಕಂಡು ಮನೇಲೇ ಮಡೀಕ್ಕಳ್ತಾ ಇದ್ದೆ !"

"ನಾಳೀಕೆ ಮರಯ್ಯಂಗೆ ಯೋಳ್ಬಿಡ್ತೀನಿ ಬ್ಯಾರೆ ಎಲ್ಲಾರ ನೋಡ್ಕಳ್ಳಿ !"

'ಅದೇನೋ ಅಳ್ಳಿ ಜನಾ ಅಡ್ಕಂತಾರೆ, ಚೆನ್ನ, ಗಂಗಿ ಒಳ್ಗೇ ಒಂದಾಗವ್ರೇಂತ "

"ಗಂಗಿ ಯಾವೂರ ಬಸ್ವೀ ಬುಡು. ಒಳ್ಗೇ ಎಣ್ಣು ಲಗ್ಣ ಆದ್ರೆ ಗಂಗಿ ಓಯ್ತಾಳೆ !"

ನಾ ಬಂದದ್ರಿಂದ ಮಾತು ನಿಲ್ಲಿಸ್ಬುಟ್ರು ನಂಗೆ ಮನ್ಸೆಲ್ಲಾ ಕಾಜ್ಗ ಮುಡ್ರೊದಂಗಾಯ್ತು, ಎಲ್ರು ತಾವೇನೂ ನಾನು ದ್ಯಾವರ್ಗೆ ಬುಟ್ಟಿದ್ದಿಡ್ಗೀಂತ ಯಾಕೇಳ್ಬೇಕೂ ಅಂತಾ ತೆಪ್ಪ್ಗ ನಾಯೇನು ಮಾಡಿವ್ನೀಂತ, ಕೇಳ್ಬುಡ್ಬೇಕೂ ಅಂದ್ಕಂಡೆ ನಂಗೆ ಆಗ ಅಪ್ಪಯ್ಯ ಗೆಪ್ತಿಗ್ಬಂದು, ಅಪ್ಪಯ್ಯ ಇರಾಗಂಟ ನಂಗ್ಯಾವ ಬಯನೂ ಇಲ್ಲಾಂದ್ಕಂಡೆ ಸುಮ್ಕಾಗ್ಬುಟ್ಟೆ

ಮಾವಯ್ಯ ಜೊತೆ ದಿನಾಗ್ಲೂ ಓ[illegible]ಕ್ಕೀಯ್ತಾ ಇದ್ದೆ ಚೆನ್ನ ಒಂದೆಲ್ಡು ದಪ ಸಿಕ್ಕಿದ್ದ ಅಸ್ಟೇಯ, ನನ್ನೋಡಿ ಮೀಸೆ ಕುಣಿಸ್ಕಂಡು ನೆಗ್ತಾ ಇದ್ದ "ಏಯ್ ಉಡ್ಗೀ ನನ್ಕೈನಾಗಿ ಸಿಕ್ಲಿಲ್ಲ ನೀನೂ ಸಿಕ್ಕಾಕೋ ನೋಡಾವಾ-!" ಎಂದು ಗೇಲಿ ಮಾಡ್ತಾ ಇದ್ದ ಒಂದಲ್ಡು ತಿಂಗ್ಳು ಕಳೀತು.

ಆವೊತ್ತು ಮಾವಯ್ಯ ಒಲ್ದಾಗೆ ಬೀಜ ನೆಟ್ತಾ ಇದ್ದ "ನಿಂಗದೆಲ್ಲಾ ಒರಾಕ್ಕಿಲ್ಲ-ಸುಮ್ಕೆ ಕುಂತ್ಕೋ" ಓಗೂಂದ. ಅಜ್ಜೀ ಉಪ್ಕಾರ, ಅತ್ತೆ ಆರೈಕೇಲಿ ನಾನು ಮೈ ಕೈ ತುಂಬ್ಕೋತಾ ಇದ್ದೆ ಮೈ ಕೈ ಭಾರ ಆಗಿ ನೋವಾರ್ತ್ನ ಬಂದೋಗಿತ್ತು ಇನ್ನೂ ಒಂದೆಲ್ಡು ತಿಂಗ್ಳು ಇಂಗೇ ಇದ್ರೆ ಉದ್ದ, ಗಾತ್ರ ಆಗ್ಬುಡ್ತೀನೀಂತ ಅನ್ಕಂಡೆ ಒಂದೇ ತಿಂಗ್ಳಾಗೆ, ಆಕ್ಕೋತಾ ಇದ್ಲಂಗ ಮೇಲಾಗೋಗಿತ್ತು. ರವ್ಕೆ ಬಿಗ್ಯಾಗಿ ಕಂಕ್ಳತಾವ ಇಡ್ಕಳ್ತಾ ಇತ್ತು ಮಾವಯ್ಯನ್ಕೇಳ್ದೆ ಮಾವಯ್ಯ "ಇಂಗೇ ಕುಂತ್ರೆ ನಿದ್ದೆ ಬಂದ್ಬುಡುತ್ತೇ...ನಾನು ಇಂಗೇ ಓಗಿ ಸುತ್ತಾಡ್ಕಂಡು ಬತ್ತೀನಿ "

ಏಯ್ ಮಗಾ, ಜೆ[illegible] ದೂರ ಒಗ್ಬೇಡಾ ಕೂಸಾ.. ಬ್ಯಾಗ ಬಂದ್ಬುಡು, ನಾನು 'ಉಂ' ಅಂದು ಕುಣ್ಕಂಡು ಓಡ್ದೆ ಅತ್ತೇ ಅವರೇಬ್ಯಾಳೆ ಸಾರು, ಇಟ್ಟು ತಂದಿದ್ಲು. ಒಟ್ಟಿಂಬಾ ತಿಂದಾಗಿತ್ತು ಕಣ್ಗೆ ಬಿದ್ದೊವ,

ಎಲೆಗೋಳ್ನ ಕಿತ್ತ್ಕಂಡು ಕೈನಾಗೆ ಜೋಡಿಸ್ಕಂಡೆ. ಕಣ್ಗೆದುರ್ಗೇ ದೊಡ್ಡ ಪಾದ್ರಿ ಮಠಪ್ತುಂಬಾ ನೀಲಿ ಊವು ತುಂಬಿ ತುಳಕ್ತಾ ಇತ್ತು ಅಲ್ಲಿ. ಮರದ್ಬುಡ್ದಾಗೆ ಹೂವು ಸುರ್ದೋಗಿರ್ಬೇಕೂ ರಸ್ತೆ ದಾಟ್ಕಂಡು ಓಡ್ದೆ. ನಾನ್ಕಂಡಂಗೇ ಮರದ್ಕೆಳಗೆ ಹೂವು ರಂಗೋಲಿ ಆಕ್ದಂಗೆ ಸುರ್ದೋಗಿತ್ತು. ಒಂದೊಂದೇ ಊವು ತಡಕ್ಕಂಡು ಲಂಗ್ದಾಗೆ ಆಕ್ಕೊಳ್ತಾ ಇದೆ. ದೂರ್ದಾಗೆ. ನನ್ರೆದ್ರುಗೆ ಚೆನ್ನ ಕುಂತಿದ್ದು ನಾ ನೋಡ್ಲೇ ಇಲ್ಲ ಬೀಡಿ ಕಚ್ಕಂಡು ಕುಂತಿದ್ದವ್ನು ಅವ್ನೇ ನನ್ನ ನೋಡಿ ಕೂಗಾಕ್ದ.

"ಏಯ್ ಎಣ್ಣೇ, ಅದೇನು ಒಬ್ಳೇ ಊ ಆರ್ಸಾಕ್ಬಂದಿ ! ನಿಮ್ಮಾವ ಎಲ್ಲಿ ?"

"ಒಲ್ಬಾಗವ್ನೆ ನಾನ್ಯಾತ್ನೇ ಊವು ಮುಡ್ಯಾದು-ಮಾವ ಮುಡ್ಕಂತಾನಾ ?"

"ಪರ್ವಾಗಿಲ್ಲ, ಜೋರಾಗಿದ್ದೀಯಾ !" ಚೆನ್ನ ನಕ್ಕು ಬೀಡಿ ಎಸ್ದ

"ನಿನ್ಗಂಗಿ ಎಲ್ಲಿ ? ಒಬ್ನೇ ಇದ್ದೀಯಲ್ಲಾ !" ನಾನು ಕೇಳ್ದಾಗ ಅವ್ನು ಕಣ್ಕಣ್ಣು ಬುಟ್ಟ ಎದ್ದು ನನ್ತಾವ ಬಂದ

"ಯಾವಾಗ್ನೋಡಿದ್ದೀ ನನ್ನ, ಗಂಗೀನ್ನ ? ಏನೋ ಬೋ ತಿಳ್ಕಂಡಂಗೆ ಮಾತಾಡ್ತೀ !"

"ನಾಯೆಲ್ಲಾ ಕಂಡಿವ್ನಿ. ಆವೊತ್ತು ನೀನೂ, ಗಂಗಿ, ಆ ಪೊದೆ ಇಂಪ್ಗಡೇ ಕುಂತ್ಕಂಡು ಇಸ್ಸೀ-ಒಲ್ಲು !" ನಾನಂದಾಗ ನನ್ನೆ ದುರುದುರ ನೋಡ್ದ. ಅಂಗೇ ನೋಡ್ತಾ ಇದ್ದೋನೂ ಸುಮ್ನೆ ನಕ್ಕ.

"ನೀ ಬೋ ಒಳ್ಳೇವ್ಳು-ಭೂಮಿ ಮ್ಯಾಲೆ ಬಿದ್ದು ಮಣ್ಣಾಗಿರೋ ಊವ ಯಾಕೆ ಆರಿಸ್ಕಂತೀ ? ನಾನು ಮರ ಅತ್ತಿ ಕಿತ್ಕಡ್ತೀನಿ ಇರು "

ನಾನು ನೋಡ್ತಿದ್ದಂಗೆ ಉಟ್ಕಂಡ ಪಂಚೆ ಎತ್ಕಂಡು ಮರ ಅತ್ತೇಬುಟ್ಟ. ಗೊಂಚಲು ಗೊಂಚಲು ಹೂವು ಮೇಲಿಂದ ಕೆಡವ್ದ-ಒಂದ್ರಾಸಿ ಊವು. ಅಟೊಂದೂವು ನಾನು ಕಂಡೇ ಇರ್ನಿಲ್ಲ ಎಲ್ಲಾ ಆಯ್ಕಂಡು ಎದೆಗೊತ್ಕಂಡೆ. 'ಘಂ' ಅಂತ ವಾಸ್ನೆ. ಅತ್ತಿ ಅಂಗೆ ಅಗುರವಾಗಿತ್ತು. ಅಸ್ಟೂ ಊವ್ನು ಕಟ್ಟಿ ಮುಡ್ಕಂಡು ಅದ್ರಾಗೇ ಆರ ಮಾಡ್ಕಂಡು ಆಕ್ಕಂಡ್ರೆ ಏಟು ಚೆಂದಾ ! ಊವ್ನೆಲ್ಲಾ ಬೆರಳ್ನಾಗೆ ಸವರ್ದಿ ಚೆನ್ನ ಇಳಿವ್ಬಂದ.

"ನೋಡಿದ್ಯಾ ಯಾಪಾಟಿ ಊವು ತಕ್ಕಟ್ಟಿದ್ದೀನಿ ಆ ಗಂಗಿ, ಆಳ್ಕೊಂಡೆ-ದಿನಾ ಈಟೊಂದು ಊವು ತಂದ್ಕಟ್ರೂ ಮೂಲೆಗೆಸ್ಯೋಳು. ನೀ ಬೋ ಒಳ್ಳೇ ಉಡ್ಗಿ" ನನ್ನ ಕೆನ್ನೆ ಸವರ್ದ ನಂಗಾಪಾಟಿ ಊವು ಕಿತ್ಕಟ್ಟೋನೂಂತ ಬೋ ಕುಸಿ ನಂಗೆ ಅವ್ನು ಬಾಳ ಒಳ್ಳೇವ್ನು ಅನ್ನಿಸ್ತು.

"ನಾನಿದ್ರಾಗೆ ಆರ ಕಟ್ಕೊಂಡು ಆಕ್ಯೋತೀನಿ-ತಲೆತುಂಬಾ ಮುಡ್ಕೊತೀನಿ" ಅಂದೆ.

"ನಂಗೆ ಊವು ಕಿತ್ಕಟ್ಟಿದ್ದಕ್ಕೆ ಏನು ಕೊಟ್ಟೀಯಾ?" ಚೆನ್ನ ನನ್ನ ಮತ್ತೆ ಕೆನ್ನೆ ಇಂಡ್ದ

"ನೀಯೇನ್ಮಾಡಿದ್ರೂ ಯೇನಾರ ಕೊಡ್ಲೇಬೇಕಾ?" ನಾನು ಕೇಳ್ದಾಗ ಚೆನ್ನ ನೆಗಾಡ್ದ

"ಬೋ ಜಾಸ್ತಿ ಕೇಳಕಿಲ್ಲ ಅವ್ಮಣ್ಣಿ ಆ ಕೆನ್ನೆಗೊಂದು ಮುತ್ಕೊಟ್ಬಿಡೂ" ಅಂದ

"ಅಯ್ಯಾ ಥೂ! ಓಗಾಚೆ!" ಅವ್ನ ದೂರ ತಳ್ದೆ

"ಅಂಗಾರ ಆ ಊವೆಲ್ಲಾ ಅಲ್ಲೇ ಮಡಿಗ್ಬುಟ್ಬೋಗು-" ಅಂದ

ನಂಗೆ ಊವ್ಕಂಡ್ರೆ ಪ್ರಾಣ ಇಟ್ಕಂಡಿದ್ದೆ ಎಲ್ಲಾ ಒತ್ಕಂಡೋಗ್ತಾನೇಂದ್ರೆ ಯಾಕೋ ಬ್ಯಾಸ್ರ ಆಯ್ತು ಎಂಗಿದ್ರೂ ಆ ಕಡೆ ಈ ಕಡೆ ಯಾರೂ ಇರ್ನಿಲ್ಲ ಆ ಕೆನ್ನೆ ಈ ಕೆನ್ನೆಗೊಂದೊಂದು ಮುತ್ಕೊಟ್ರಾಯ್ತು. ಎಷ್ಟು ಸಲ ಮಾವಯ್ಯ ಮುದ್ದು ಮಾಡ್ನಿಲ್ವಾ ಅಂದ್ಕಂಡು ಅವ್ನ ಕರ್ದೆ

"ಓಗ್ಲಿ ಬಾ-ಆ ಕೆನ್ನೆಗೊಂದು, ಈ ಕೆನ್ನೆಗೊಂದು ಅಷ್ಟೇಯಾ!" ಅಂದೆ.

"ಬೋ ಚೌಕಾಸಿ ಮಾಡ್ತೀಯಾ!" ಚೆನ್ನ ನನ್ನತ್ರ ಬಂದು ನನ್ನ ಮುಕಕ್ಕೆ ಮುಕ ತಂದ ನಾನು ಒಂದ್ಕೆನ್ನೆಗೆ ಮುತ್ಕೊಟ್ಟೆ ಇನ್ನೊಂದ್ಕೆನ್ನೆಗೆ ಕೊಡೋಕ್ಮುದಾಗ ಅವ್ನೇ ನನ್ನ ತಬ್ಕೊಂಡು ನನ್ನ ಕೆನ್ನೆ, ಕಣ್ಣು, ಕತ್ತು ಮುತ್ತಿಕ್ಬುಟ್ಟ. ತುಟಿ ಮ್ಯಾಗೂ ಮುತ್ತಿಟ್ಬುಟ್ಟ. ನಂಗೆ ಉಸ್ರೇ ಉಡ್ಗೋಯ್ತು. "ನೀ ಬೋ ಚೆಲ್ವೇ. ನೀ ಬೋ ಚೆಲ್ವೆ ಒಳ್ಳೇ ಮಾವಿನಣ್ಣಿದ್ದಂಗೇ ಇದ್ದೀ-ಅಂಗೇ ತಿಂಡಾಕ್ಬುಡಾಣಾ ಅನ್ಸುತ್ತೆ!" ಅಂತ ಅಂದ ನನ್ನ ಕೆನ್ನೆ ಕತ್ತು, ಮೈಯೆಲ್ಲಾ ಸವರ್ತ "ನೀನು ಮೈ ಕೈ ಇನ್ನೊಂಚ ತುಂಬ್ಕೊಂಡ್ರೆ ಒಳ್ಳೇ ರಸ್ಪೂರಿ ಇದ್ದಂಗಿರ್ತೈತೆ" ತಬ್ಕೊಂಡು ಮುತ್ತು ಕೊಟ್ಟ. ನಾನು ಕೈಕಾಲು

ಒದರ್‍ಕ್ಕೊಂಡು ಅವ್ನ ಕೈನಾಗಿಂದ ಬುಡಸ್ಕಳ್ಳಾಕೆ ನೋಡ್ದೆ ಅವ್ನು ಬಿಗ್ಯಾಗೇ ಇಡ್ಕಂಬುಟ್ಟಿದ್ದ ನಂಗೆ ಬುಡಸ್ಕಳ್ಳಾಕೇ ಆಗ್ನಿಲ್ಲ. ಅಳಾಕೇ ಸುರು ಮಾಡ್ಬುಟ್ಟೆ "ಆಯ್ಯೋ ಅಚೀ ಓಗೂ, ಆಳ್ಕಂಜಿ.. ನಿನ್ನ ತಿಂದಾಕ್ಬುಡ್ತೀನಾ?" ನನ್ನ ದೂರ ತಳ್ಬುಟ್ಟ "ನಮ್ಮಪ್ಪಯ್ಯ ಏಳೋವ್ನೆ ನಿನ್ನ ದ್ಯಾವರ್‍ಗೆ ಬುಟ್ಟವ್ರಂತೆ-ನೀನು ರುಸ್ವಂತೆ ಆಗೋತ್ಲೂ ನಿನ್ನ ಕೇಳ್ಕಂಡು ಬರಾವ್ರ ತ್ರೆಲ್ಲಾರ ಜೊತ್ಗೂ ಮನೀಕ್ವಾಬೇಕಾಗ್ತೈತೆ. ಆಗೇನ್ಮಾಡ್ತೀಯು? ನಾನು ಬತ್ತೀನಿ ಒಂಜನಾ ಸುಮ್ನಿರು। ಆಗ ಅಳಾದು ನೋಡ್ತೀನಿ." ಅವ್ನು ಸರಸರಾಂತ ನಡ್ಕಂಡು ಒಂಟೋದ. ನಾನು ಲಂಗ್ದಾಗೆ ಕಣ್ಣು, ಮೂಗು ವರಸ್ಕಂಡು ಎದ್ದು ನಿಕ್ಕಂಡೆ. ಅದ್ಯಾಕೇ ಅವ್ನು ಕಿತ್ತಾಗಿದೂವೂ ಬ್ಯಾಡಾ ಅನ್ನಿಸ್ತು ಅವುಗಳ್ನ ಅಲ್ಲೇ ಬುಟ್ಬುಟ್ಟು ಮಾವಯ್ಯನ್ತಾವ ಓಡ್ಡೋನಂಗಳಾ ಬಂದ್ಬುಡ್ತು.

ನಾನು ಅಳ್ತಾ ಬಂದುದ್ಕಂಡು ಮಾವಯ್ಯ ಯುದರ್‍ಕೊಂಡ

"ಯಾಕೆ ಕೂಸೂ, ಏನಾಯ್ತು? ಬಿದ್ಯಾ"

"ಮತ್ತೇ, ಮತ್ತೇ.. !" ಅದ್ಯಾಕೋ ಚಿನ್ನ ಮಾಡಿದ್ದೇಳಾಕೇ ನಂಗೇ ನಾಚ್ಕೆ ಆಯ್ತು

"ಇಲ್ಲ ಮಾವಯ್ಯ, ಊವು ಆರಿಸ್ಕಂತಾ ಬಂದ್ಬುಟ್ಟೇ!" ಮಾವಯ್ಯನ ಇಡ್ಕಂಡು ಅತ್ಬುಟ್ಟೆ

"ಓಗ್ಲಿ ಬುಡು. ಆ ಅಳು ಊವಿನಾಸೆ ಬುಟ್ಬುಡು-ನಾನೇ ನಾಳೀಕೆ ತಂದ್ಕೊಡ್ತೀನಿ"

ಅಟ್ಟೇಗ್ಬಂದ್ಮೇಕೂ ವ್ಯೆಯ್ನಿ, ಮನ್ಸು ಕಿರಿಕಿರಿ ಆಯ್ತಾ ಇತ್ತು. ಚಿನ್ನ ಮಾಡಿದ್ನೆಲ್ಲಾ ಯಾರ್‍ತಾವ ಏಳಾದು? ಅಜ್ಜಿ, ಅತ್ತೆ ಇಬ್ರೂ ನನ್ನ ಸುಮ್ನೆ ಬಿಡಾಕಿಲ್ಲ. ಮಾವಯ್ಯ ಗಂಡ್ಸು ಏಚ್ನೆ ಮಾಡಿ. ಅಟ್ಟಿಗ್ಬಂದ್ಕೂಡ್ಲೇ ಅತ್ತೇಗೇಳ್ದೆ

"ವ್ಯೆಯೆಲ್ಲಾ ಕಡ್ತ. ಊವಿನ ಗಿಡದ್ತಾವ ಊವು ಕೀಳಾಕೋಗಿ ಅದೆಂತದ್ದೋ ಗಿಡ ಮುಟ್ಕಂಬುಟ್ಟೆ. ವ್ಯೆ ಕಡೀತದೆ, ತಾನ ಮಾಡ್ಬುಡ್ತೀನಿ!"

"ಅದ್ಕೇನು ಮಾರಾಯ್ತಾಗ್ಯಾಡು!" ಅಂದ್ಲು.

ವ್ಯೆ, ಕಲ್ನಾಗೆ ಉಜ್ಜೀ ಉಜ್ಜೀ ತೊಳ್ಕಂಡೆ ಕೆನ್ನೆಯೂ ತೊಳ್ಕಂಡೆ.

ಆದ್ರೂ ಮೈಯೆಲ್ಲಾ 'ಇಸ್ಸೀ' ಅನ್ನಾಂಗಾಯ್ತು ಮೈ ಒರಸ್ಕಂಡ್ಬಂದಾಗ ಅಜ್ಜಿ ನೆಗಾಡಿದ್ಲು

"ಮೈ ಚಕ್ಕ ಕಿತ್ತೋಗೋಂಗೆ ತಿಕ್ಕೊಂಡಿದ್ದಲ್ಲೇ ಕೂಸು! ಮೊದ್ಲೇ ಕೆಂಪಾಗಿದ್ದೀ–ಈಗಿನ್ನೂ ಕೆಂಪರಂಗಿ ಆಗ್ಬುಟ್ಟೇ ಬುಡು"

ನಾನು ಮನಸ್ಸು ಅಗ್ರ ಮಡ್ಕೊಳ್ಳೋಕೆ ಎಲ್ಲೇ ದಾರಿ ಮಡ್ಗಿರಾದು ಅಳಾದು ಒಂದು, ಇನ್ನೊಂದು ದೇವಸ್ಥಾನಕ್ಕೋಗಿ ದ್ಯಾವರ್ಮುಂದೆ ಕುಂತ್ಕಳ್ಳಾದು. "ಅಜ್ಜೀ, ಗುಡಿಗೋಯ್ತೀನೀ!" ಅಂದಾಗ ಅತ್ತೆ 'ನಾನೂ ಬತ್ತೀನಿ ನಡಿ-' ಅಂದ್ಲು. ಇಬ್ರೂ ದೇವಸ್ಥಾನಕ್ಕೋಗಿ ಸ್ವಾಮಿಗೆ ಕಾಯೊಡ್ದು ಅಡ್ಡ ಬಿದ್ವಿ. ನಾನಂಗೇ ಕಣ್ಮುಚ್ಚಿ ಕುಂತ್ಕಂಡೆ ಒಂದೀಟೊತ್ತು "ಶಿವಾ, ನಂಗೇ ಒಳ್ಳೇ ದಾರಿ ತೋರೂ!" ಅಂತ ಬೇಡ್ಕಂಡೆ "ನನ್ನ ಕ್ಷಮ್ಸು" ಅಂತ ಕೇಳ್ಕಂಡೆ

"ಏನೇ ಅದೂ, ದ್ಯಾವ್ರನ್ನ ಏನ್ಕೇಳ್ಕೋತಾ ಇದ್ದೇ? ಸಾವಿರ ಕುದ್ರೆ ಸರದಾರನ್ನ ಕಳ್ಸು ಲಗ್ನ ಆಗ್ತೀನಿಂತ ಕೇಳ್ಕಂಡ್ಯಾ?" ಅತ್ತೆ ತಮಾಸೆ ಮಾಡಿದ್ಲು

ಮಾರ್ನೇ ದಿನ್ದಾಗ್ನಿಂದ ನಾನು ಮಾವಯ್ಯನ್ಬುಟ್ಟು ಅಕ್ಕಡೆ ಇಕ್ಕಡೆ ಓಗ್ನಿಲ್ಲ ಕೋಲ್ಗೆ ಕೊಕ್ಕೆ ಕಟ್ಟಿ ಮಾವಯ್ನೇ ಒಂದೊರೆ ಊವು ತಗ್ದಾಕ್ದ ನಾನು ಅವ್ನೆಲ್ಲಾ ತಕ್ಕಂಡು ತಲೇಗಿಷ್ಟು ಮುಡಿಕ್ಕಂಡೆ ಆರ ಆಕ್ಕಂಡೆ ಮೈಮ್ಯಾಗೆಲ್ಲಾ ಸುರ್ಕೊಂಡೆ ಆ ಊವಿನ ವಾಸ್ನೆಗೆ ಮೈಯೆಲ್ಲಾ ಅಂಗೇ 'ಘಂ' ಅಂತು ಈಟುದ್ದಾ ಆರ ಕಟ್ಟಿ ದ್ಯಾವರ ಪೋಟೋಕ್ಕೂ ಆಕ್ದೆ. ಅತ್ತೇಗೂ ಕೊಟ್ಟೆ ದೇವಸ್ಥಾನಕ್ಕೂ ಒತ್ಕೊಂಡೋಗಿ ಕೊಟ್ಬುಟ್ಟೆ

ದಿನಾ ಅದೇ ಪರಿಪಾಟ ಆಗೋಯ್ತು ಅಜ್ಜೀ, ಅತ್ತೆ ಉಪ್ಕಾರ, ಮಾವಯ್ಯನ ಊವಿನಂತ ಮನ್ಸು ನಂಗೆ ಅಳ್ಳೀಲೇ ಇರಾಣ ಅನ್ನಿಸ್ಬಿಡ್ತು. ಅಪ್ಪಯ್ಯ ಅವ್ವನ್ನ ಗೆಪ್ತೀನೇ ಬರ್ನಿಲ್ಲ ನಂಗೆ ಆರಾಮಾಗಿದ್ಬುಟ್ಟೆ ದಿನಗಳೋಗಿದ್ದೇ ತಿಳೀನಿಲ್ಲ

ಒಂಜಿನ ಬೆಳಗಾಗೇಳ್ತಾನೆ ಅತ್ತೆ, ಅಜ್ಜಿ ಗುಸಗುಸು, ಪಿಸಿಪಿಸಿ ಮಾತಾಡ್ಕೋತಾ ಇದ್ರು. ನಾನು ಕಿವಿ ನಿಮಿರ್ಕೊಂಡು ಕೇಳ್ದೆ.

"ಚೆನ್ನ, ಗಂಗೀ ಇಬ್ರೂ ಅಳ್ಳೀಲಿಲ್ವಂತೆ. ಚೆನ್ನ ಅವಳ್ನ ಕಟ್ಕೊಂಡೇ

ಎಲ್ಲೋ ಓಡೋಗ್ಬುಟ್ಕಂತೆ ' ಅಂತ ಏನೇನೋ ಯೇಳ್ತಾ ಇದ್ರು. ನಾನೂ ಕೇಳ್ಕಂಡೆ

"ಏಯ್, ಅದೇನ್ ಅಂಗೆ ಕಣ್ಣಣ್ಣ ಬಿಟ್ಕಂಡು ಕುಂತಿದ್ದೀಯಾ? ಎದ್ದೋಗಿ ಮಾರೆ ತೊಳ್ಕೋ!" ಅಜ್ಜಿ ಗದರಿದ್ಲು

ನಾವಾಕಡೆ ಓಗೋತನ್ಲೂವೆ ಅತ್ತೆ ತಾವ ಏಳ್ತಾ ಇದ್ಲು "ಇವ್ನ ಒರಗೆ ಕಳಿಸ್ಬಾರ್ದು ಆಗ್ಲೇ ಮೈ ಕೈ ತುಂಬ್ಕಾತಾ ಅವ್ನೆ ಈಗ್ಲೋ, ಆಗ್ಲೋ ನೆರೆದ್ಬುಟ್ಟ್ರಾಳು ಮನೇಲೇ ಗೆಯ್ಮೆ ಕೊಡಾದ್ಲೇಸೂ!" ಅಂತ

"ಊಂ, ಮತ್ತೇ, ಚಿಕ್ಕನಂಗೆ ರುದ್ರ, ಕಿಸ್ನ ಇವಳಿಂದೆ ಬಿದ್ರೇನ್ಮಾಡಾದೂ ಅವರವ್ವನಾತ್ತಾವಾನೇ ಕಳಿಸ್ಬುಟ್ರೆ ವಾಸಿ!' ಅತ್ತೆ ಅಂತಿದ್ಲು

"ಉಗಾದಿ ಒತ್ಗೇ ನಾನೇ ಓಗ್ತೀನಿ-ಕರ್ಕೊಂಡೋಯ್ತೀನಿ-ಅಲ್ಲೀಗಂಟ ಇಲ್ಲಿ ಉಸಾರಾಗಿದ್ರೆ ಆಯ್ತು!" ಅಜ್ಜಿ ಅಂದ್ಲು.

ಅವತ್ನಿಂದ ನನ್ನ ಎಲ್ಲೂ ಒಬ್ಬನ್ನೇ ಕಳಿಸ್ತಾ ಇರ್ನಿಲ್ಲ ಎಲ್ಲೋದ್ರೂ ಅಜ್ಜೀ ಜೊತ್ಯಾಗೇ ಇರ್ತಾಳೆ ಇಲ್ದಿದ್ರೆ ಅತ್ತೆ ಜಮೀನ್ಗಳು ಅಟ್ಟೆ ಗುಡ್ಸಾದೂ, ಕೊಟ್ಗೆ ಗುಡ್ಸಾದೂ, ಬೆಣ್ಣೆ ಎಂಟೆನ್ಗೆ ತಟ್ಟಾದೂ ಗೋಡೆಗೆ ತಟ್ಟಾದೂ, ಗೋಡೆಗೆ ತಟ್ಟಾದೂ, ಸೊಪ್ಪು ಸದೇ ನೋನೋದೂ ಆಗೋಯ್ತು ಅತ್ತೇ, ಅಜ್ಜಿ! ಇಬ್ರೂ ಇಲ್ದಿದ್ದಾಗ ಚಿನ್ನದ್ಸರದ ನೆವ ಆಕ್ಕೊಂಡು, ಅದ್ನೂ ಕಟ್ಕೊಂಡು ಕೆರ ನದಿ ದಂಡೆಲೆಲ್ಲಾ ತಿರ್ಗಾಡ್ಕಂಡು ಬತ್ತಾ ಇದ್ದೆ

ಸಿವರಾತ್ರಿ ಜಾತ್ರೇಂದ್ರೆ ಬೋದೊಡ್ಡ ಜಾತ್ರೆ. ಅಕ್ಕಪಕ್ಕದ್ರಿಂದ ಬೋ ಜನ ಬತ್ತಾರೆ, ಗಾಸು, ದನಗೋಳು ಬತ್ತಾವೆ ಜನ ಬಣ್ಬಣ್ಣದ್ಬಟ್ಟೆ ಆಕ್ಕೊಂಡು ಒಡ್ವೆ ಆಕ್ಕಂಡು ಬತ್ತಾರೆ, ಅಂಗ್ಡಿಗ್ಳು, ತೂಗು ತೊಟ್ಲು, ಸರ್ಕೋಸ್ಸು, ಬತ್ತಾಸು, ಮಿರಾಯಿ ಅಂಗ್ಡಿಗ್ಳು, ಬಳೆ ರಿಬ್ಬನ್ನಂಗ್ಡಿಗ್ಳೂ ಬಂದ್ಬುಡ್ತಾವೆ-ಆಕಾಶದಿಂದ ಉದರಿದ್ದಂಗೆ. ಮಾವಯ್ಯ ಸಿವರಾತ್ರೀಗಂತ್ಲೇ ನಂಗೋದೀಟು ದುಡ್ಕೊಟ್ಟ ಅಜ್ಜಿ, ಅತ್ತೆ ಇಬ್ಬರ ಜೊತ್ಯಾಗೋಗಿ, ಈಟೊಂದು ಬಳೆ, ರಿಬ್ಬನ್ನು, ಬಣ್ಣದ್ಕುಂಕುಮ, ಕಾಜ್ಗದೂವು, ಕಿವಿಂಗೆ ಚಿಮ್ಮಿ ಓಲೆ, ಜುಮ್ಕಿ ಎಲ್ಲಾ ಕೊಂಡ್ಕೊಂಡೆ. ಕಬ್ಬಿನಾಲು, ಬತ್ತಾಸು, ವಡೆ, ಮಿರಾಯಿ ಕೊಂಡ್ಕೊಂಡು ತಿಂದೆ. ಸರ್ಕೋಸ್ನಲ್ಲಿ ಆನೆ, ನಾಯಿ, ಮಂಗ ನೋಡ್ದೆ. ಗಂಡ್ಸೊಬ್ಬ ತಲ್ಕೆಳ್ಗ ನಡ್ಯಾದ್ನೋಡ್ದೆ. ಎಂಗ್ಸು ಅಗ್ಗದ್ಮೇಲೆ

ನಡ್ಕಂಡೋಗಾದು ನೋಡ್ದೆ. ಓಡಾಡೀ ಕಾಲೆಲ್ಲಾ ಬಿದ್ದೋದ್ವು ಕಾಲು ಊರಾಕಕ್ಕಾ ಆಗ್ನಿಲ್ಲ ಆಪಾಟ ನೋಯ್ತಾ ಇದ್ವು

ಅಟ್ಟಿಗ್ಬಂದೋಳೀ ಒದ್ಗೊಂಡು ಮನಿಗ್ಬುಟ್ಟೆ "ಸಾಕಾಗೋಗ್ಯೆತೆ, ಅಸಿವಾಗಾಕ್ಕಿಲ್ಲ, ಏನೂ ಬ್ಯಾಡಾ" ಅಂದ್ಬುಟ್ಟು ಮುಸ್ಕಕಾಕ್ಕೊಂಡ್ಬುಟ್ಟೆ ಕಣ್ಣಿಗ್ನಿದ್ದೆ ಬಂದದ್ದೇ ತಿಳೀನಿಲ್ಲ ಬೆಳಗಾಗೇಳ್ತಾನೇ ಮೈಯೆಲ್ಲಾ ಭಾರ, ಇಟ್ಟಿನ್ಮೂಟೆ ಆದಾಗಾಗಿತ್ತು. ಸೂರ್ಯ ನಡು ನೆತ್ತಿಗ್ಬಂದಿದ್ದ. ಆಕಳ್ಸಿ, ಮೈಮುರ್ದು ಎದ್ದು ಬಚ್ಚಲಿಗೆ ಒಂಟೆ. ಅತ್ತೇ ನನ್ನೇ ದುರುದುರು ತಲೆಯಿಂದ ಕಾಲ್ನೊರ್ಗ್ಗ ನೋಡಿದ್ಲು. ಅಜ್ಜೀನ್ನೂ ಕರದ್ದು 'ಅಂಗೇ ಇರೂ ಬಂದೇ!' ಒಳಗೋಡಿದ್ಲು ಅತ್ತೆ. ಅಜ್ಜಿ ಅಬ್ಬಪಲ್ಲಿ ಓಡಾಡ್ದಂಗೆ ಓಡಾಡಿದ್ಲು ಅವಳ್ಗೆ ಒಸಪ್ರಾಯ ಬಾದಂಗಾಗಿತ್ತು ನಂಗೆ ಮೈ ಕೈಯ್ಯೆಲ್ಲಾ ಎಂಗೆಂಗೋ ಆಯ್ತಾ ಇತ್ತು. ಅತ್ತೇ ಪಕ್ಕದಟ್ಟೀ ಈಠವ್ವನ್ನ ಕಕ್ಕಂಡ್ಬಂದ್ಲು. ಇಬ್ರೂ ನಂಗಾರ್ತಿ ಎತ್ತಿದ್ರು ಉಪ್ಪು ಮೆಣಸಿನಕಾಯಿ ನಿವಾಳ್ಸಿ ದುಸ್ಟಿತೆಗೆದ್ರು "ರುಸ್ವಂತೆ ಆಗವ್ಳೆ!" ಅಕ್ಕಪಕ್ಕದ್ಮನೆ ಅಟ್ಟೀಗೆಲ್ಲಾ ಸುದ್ದಿ ಅರಡ್ಬುಡ್ತು. ಅತ್ತೆ ಬಿಸ್ನೀರು ಕಾಸಿ, ನೀರಾಕಿ, ಒಸಾ ಸೀರೆ ಉಡ್ಸಿದ್ಲು ಅಲು, ತುಪ್ಪ ಕುಡ್ಸ್ಯಾಕೊಟ್ಲು ಚೆಗ್ನಿ ಮಾಡಿದ್ಲು. 'ಅಂಗಿರ್ಬೇಕು, ಇಂಗಿರ್ಬೇಕು'-ಅಂತ ಯೋಳ್ಕೊಟ್ಲು. ನಂಗೆ ತಿಳೀವಲ್ದು. ಇದ್ಯಾಗೇನ್ಯೆತೆ ಸಂಭ್ರಮಕ್ಕೆ-ಅಬ್ಬಾನಾ, ಅರಿದಿನಾನಾಂತ-!

ನಂಗೆ ಮೆಸ್ಸಿ ಹೇಸ್ಗೆ ಅನ್ನಿಸ್ತು. ಮಾವಯ್ಯ ಪ್ಯಾಟೆಗೋಗಿ ಒಸಾ ಸೀರೆ, ಕುಬ್ಸ ತಂದ, ಬಣ್ಣದ್ಬಳೆ ತಂದ ಅಟ್ಟೀ ಮೂಲೇಲಿ ಗುಡ್ಲಾಕಿದ್ರು. ಈರಯ್ಯನ್ಕೈಗ ಕರಿಬಸನ್ನೈಲಿ ಅವ್ವಂಗೆ, ಅಪ್ಪಯ್ಯಂಗೆ ಯೋಳಿ ಕಳ್ಸಿದ್ರು.

ನನ್ಸೇವೇ ಮಾಡೋದೇ ಅಜ್ಜೀ, ಅತ್ತೆ ಕೆಲ್ಸ ಆಗೋಯ್ತು "ಇಕಾ ಇದು ಉಣ್ಣು, ಆಲ್ಕುಡಿ, ಅಸುವಿನ ತುಪ್ಪದಲ್ಲಿ ಮಾಡಿವ್ನಿ ಇದ್ನ ತಿನ್ನು-!" ಇಂಗೇ ಬೋ ನಸಿನಸಿ ಮಾಡಿದ್ರು ಎಲ್ಡು ದಿನ ಆವ್ರೇಳ್ದಂಗೇ ಕೇಳ್ದೆ ಮೂರ್ನೇ ದಿನ ಅವ್ವ, ಅಪ್ಪಯ್ಯ, ಪುಟ್ಟ ಬಂದ್ರು ಅವ್ವ ನನ್ತಾವ ಬಂದು ತಲೆ ತಡವಿದ್ಲು. "ನನ್ಕಣ್ಣೇ ಬಿದ್ದೀತು ನಿಂಗೆ ಎಂಗೆ ಅರಳ್ಬುಟ್ಟಿದ್ಯವ್ವಾ!" ಅಂದ್ಲು ಅಪ್ಪಯ್ಯ ಚೀಲ್ದಿಂದ ಒಸಾ ಸೀರೆ ತೆಗೆದು ನನ್ಕೈಗಾಕ್ದ ಆಪಾಟ ಉಡುಗೊರೆ ಓದ್ಸಾದು ನೋಡಿ ನಂಗೆ ದಿನಾ ಇಂಗೇ ಇರ್ಬಾರ್ದ್ದಾ ಅನ್ನಿಸ್ತು.

ಒಳೀಕ್ಸೆರ್ಕೊಂಡು ಏನೋ ಮಾತಾಡ್ತಾ ಇದ್ರು ನಂಗೊಂದೂ ಸರೀಗೆ ತಿಳೀದಿಲ್ಲ "ಉಗಾದಿ ಒತ್ಗೆ ಮಾಡಾನ ದೋಯಿಸ್ರ ತಾವ ಒಳ್ಳೇ ಜಿನ ಕೇಳಾದು ಲಗ್ನ ಇಡ್ತಾನ್ದೂ !"

"ಊಂ, ಮತ್ತಿನ್ನೇನ್ಬೇಕೂ, ಬೆಳ್ಳಿ ಡಾಬು, ಕಾಲ್ಗೆ ಬೆಳ್ಳಿ ಚೈನು, ಕತ್ಗೆ ಕಾಸಿನ್ಸರ, ಕೈಗೆ ಗುಲ್ಸು ಆಕ್ತಾರಂತೆ ಎಲ್ಡು ಬಾರಿ ಸೀರೆ ಕೊಡ್ತಾರಂತೆ ಸಾವಿರ ರೂಪಾಯಿ ಕೈಲಿ ಮಡಗ್ತಾರಂತೆ ಎಲ್ಲಾ ಖರ್ಚೂ ಅವರ್ದೇಂತೆ ! ಪುಣ್ಯವಂತೆ ಕನವ್ವಾ !"

ನಾನು ರುದ್ರಿದೋ, ನಾಗಿದೋ ಲಗ್ಣ ಅಂದ್ಕೊಂಡೆ, ಇಬ್ರೂ ನಂಗಿಂತ ದೊಡ್ಡೋರೇ, ಅವರ್ಗೆ ಲಗ್ಣ ಬ್ಯಾಗ ಆಗ್ಬೇಕು. ವರ ಯಾವೂರೋ ಕೇಳ್ಬೇಕು, ಅವ್ವ ಒಬ್ಳೇ ನನ್ಕಡೀಕ್ಬಂದಾಗ ಅಂದ್ಕಂಡೆ

ನಾನೇಟ್ಸನ ಇಂಗಿರಾದೂ ಆದಿನ್ನೈದು ಜಿನ ಆದ್ರೂ ಒರ್ಗ್ಯೇಗಾಕೇ ಬಿಡಾಕಿಲ್ಲ ಒಸ್ಲು ದಾಟಾಕೆ ಬಿಡ್ಲಲ್ಲ ಅಳು ಸೀರೆ ಉಡಾಕೇ ಬರಾಕಲ್ಲ ನೆರ್ಗೆ ಸೆರ್ಗು ಬಿದ್ದು ಬಿದ್ಹೋಯ್ತದೆ. ಕೊನ್ಗೆ ಅಜ್ಜಿ ಒಂದು ಗೋಣಿದಾರ ತೆಗೆದು ಸೊಂಟಕ್ಕೆ ಬಿಗ್ದು ಸೀರೆ ಉಡ್ಸಿದ್ಲು.ಅವ್ವಂಗೆ ಮೇಲೆ ಸಂತೋಷ ಆದ್ರೂ ಒಳೀಕೆ ಕೊರಗ್ತಾ ಇದ್ದಂಗಿತ್ತು ಅಪ್ಪಯ್ಯ ನನ್ತಾವ ಬಂದಾಗಿಂದ ಒಂದು ಮಾತ್ನೂ ಆಡೇ ಇರ್ನಿಲ್ಲ ಪುಟ್ಟ ಪಕ್ಕದ್ಮನೆ ಮರಿ ಜತೆ ಗೋಲಿ ಆಡ್ಕಂಡಿದ್ದ ನಂಗೆ ಏನೋ ಆಸ್ತಿ ಕಳ್ಕೊಂಡಗಾಗಿತ್ತು ಐದು ಜಿನ ಆದ್ಮೇಲೆ ಮಡಿ ನೀರಾಕ್ಕೊಂಡೆ

ಅವ್ವ. ಅಪ್ಪಯ್ಯ ಊರಿಗೊಂಟಾಗ ನಾನೂ ಬತ್ತೀನೀಂತ ಅತ್ತು ಕರ್ದೆ ಅಪ್ಪಯ್ಯ ನನ್ಕಣ್ಣೀರು ನೋಡ್ಲಾರ್ದೇ ತಲೆ ಬಗ್ಸಿ ಒಂಟೇ ಓದ್ರು, ಅವ್ವ ನನ್ನೆನ್ನೆ, ಗಲ್ಲ ಸವರಿದ್ಲು.

"ಬರೂವಂತೆ, ಮಗಾ ನಾಕ್ಜಿನ ಹಾಲೂ, ತುಪ್ಪ ವ್ಯೆಗೆ ಬೀಳ್ಬೇಕೂ. ಅಜ್ಜೀ ತಾವಾನೇ ಇರು ಉಗಾದಿಗೆ ಬಂದ್ಬುಡ್ತೀಯಂತೆ ಅಜ್ಜೀ ಜೊತ "

ನಾತು ಒಳ್ಳೇ ಮಡೀಕ್ಕಂಡಿದ್ಮಾತು ಕೇಳ್ದೆ "ಯಾರ್ಗವ್ವಾ ಮಾಷ್ಟೆ ಆಗ ಅಜ್ಜಿ ತಾವ ಏಳ್ತಾ ಇದ್ದೆಲ್ಲಾ ? ರುದ್ರಿಗಾ ? ನಾಗಿಗಾ ?"

"ಆ ಮಾತು ಬ್ಯಾಡಾ ಕನವ್ವಾ, ನಿಂಗೂ ಮಾಡಾವೇಳು !"

ಅವ್ರ ನನ್ಮೋರೆ ಕಡೆ ನೋಡ್ನೇ ಇಲ್ಲ, ನಾನೂ ಬತ್ತೀನೀ ಅಂತ ಗೋಗರ್ದೆ. 'ಹೋ' ಅಂತ ಅತ್ತೆ.

"ಏಯ್ ಸುಮ್ನಿರು, ನೆರೆದು ನಿಂತಿದ್ದೀಯಾ ಮಗಾ ಅತ್ತೀಗೆ ಅಳ್ತೀಯಲ್ಲಾ !" ಅಜ್ಜಿ ಗದ್ರಿದ್ಲು. ಅವ್ವ, ಅಪ್ಪಯ್ಯ, ಪುಟ್ಟ ಒಂಟೇಓದ್ರು.

ಅಜ್ಜೀ, ಅತ್ತೆ ನನ್ನ ಆರೈಕೆ ಸುರು ಮಾಡ್ಕಂಡ್ರು ದಿನಾ ಮೈ ತೊಳ್ಕೋತಾ ನಂಗೀ ನನ್ನ ಮೈ ಅರಿ ರಾದು ಕಂಡು ಎಂಗೆಂಗೋ ಅಗಾಕು, ಮಾವಯ್ಯ ಅತ್ತೀ ಇಬ್ರೂ ಪ್ಯಾಟೇಗೋಗಿ ನಾನು ಉಡಾಕೆ ಅರ್ತೀ ಸೀರೆ. ಒಳಕ್ಕೆ ಅಕಾ ಲಂಗ, ರವ್ಕೆ ಎಲ್ಲಾ ತಂದ್ರು "ನೀವು ಲಂಗಾ, ಕುಬ್ಸ ಆಕ್ಬಾರ್ದು. ಸೀರೇನೀ ಉಟ್ಕಾಬೇಕೂ" ಅಂದ್ರು ಅತ್ತೀಡು ಅಳೀಪಳೀ ಸೀರೇನು ನಂಗೀ ಬತ್ತು. ಅಲು, ಮೊಸರು, ತುಪ್ಪ ದಂಡಿ ಆಗೋಯಲ್ತು ನಂಗೀ ಒರ್ಗೋಗಾಕೆ ನಾಚ್ಗೆ ಆಯ್ತಾ ಇತ್ತು ನಾನೇ ಓಗ್ತಿರ್ಲಿಲ್ಲ ತಲೇಕೂದ್ಲ ಮಿರ ಮಿರ ಮಿಂಚ ಅಂಗ ಬಾಚ್ಕಂಡು ಜದೆ ಆಕ್ಕೊಂಡು ರಿಬ್ಬನ್ನು ಅಕ್ಕೊಂಡು ಮುಕ ತೊಳ್ದು ಕಣ್ಗೆ ಕಡ್ಗೆ ಅಚ್ಕಂಡು, ಅಣೀಗೆ ಕುಂಕ್ಮದ ಬೊಟ್ಟು ಇಟ್ಕಂಡು, ತೆಲೇ ತುಂಬಾ ಊ ಮುಡ್ಕಂಡು ನನ್ನ ಮುಕ ನೋಡ್ಕಂಡು ನಾನೇ ನಗಾಡ್ತಾ ಇದ್ದ ನಂಗೆ, ನಾನು ಅಜ್ಜೀ ಅತ್ತೆ, ನಾಗಿ, ಶುದ್ರಿ, ಅವ್ವ, ಗಂಗಿ, ಈರವ್ವ, ನಂಗ ತಿಳ್ದಿರೋ ಎಲ್ರಗಿಂತ ನಾನೇ ಚೆಲುವೆ ಅನ್ನಿಸ್ತಾ ಇತ್ತು. ಆಗ ನಂಗೆ ನೆಪ್ಪಿಗೆ ಬರ್ತಾ ಇದ್ದುದ್ದು ನೇಕ್ರಪ್ಪೋರು ಈಗ ಸೇಕ್ರಪ್ಪೋರು ನನ್ನ ನೋಡಿದ್ರೆ ಎಂಗಾಯ್ತದೆ ! ನಂಗೀ ಮೈ ಬಿಸ್ಯಾಗಿ, ನಾಚ್ಕೆ ಆಯ್ತಾ ಇತ್ತು. ಚೆನ್ನ ಮಕಾಡ್ಸಂಗೆ ಸೇಕ್ರಪ್ಪೋರು ಮಾಡಿದ್ರೆ ಎಷ್ಟು ಚೆನ್ನಾ ಅನ್ನಿಸ್ತಾ ಇತ್ತು.

ಬ್ಯಾಗ ಬೋ ನಾಜೂಕು ಕಲಿತ್ಬುಟ್ಟೆ ಓರಣ್ವಾಗಿ ಸೀರೆ ಉಟ್ಕಳ್ಳೂದೂ ಕಲ್ತೆ ಉಗಾದಿ ಎಂಟ್ದಿನ ಇರಾ ಅಂಗೆ ಮತ್ತೆ ಒರ್ಗಾದೆ. ಈ ಸಲ ನಂಗೀ ತಿಳ್ದೋಯ್ತು ನಾನೇ ಅಜ್ಜೀ, ಅತ್ತೀಗೆ ಏಳ್ದೆ. ಅಜ್ಜಿ ಮತ್ತೆ ಈರವ್ವನ್ನಗ ಕರಿಬಸನ್ನ ಕಳ್ಸಿದ್ಲು

ಓಗಿ ಏಳು ಎಲ್ಲಾ ಅಣಿ ಮಾಡ್ಕಾಬೇಕಂತೆ. ಇನ್ನೈದು ದಿನ ಕಳೆದ್ಮೇಲೆ ಬತ್ತಾರಂತೆ ಅಂತ । ಏನೋ ಏಳ್ತಿದ್ಲು.

"ಏನಜ್ಜಿ ಅದೂ ?" ನಾನು ಕೇಳ್ದಾಗ ಅಜ್ಜಿ ಗದರಿದ್ಳು. "ಸುಮ್ನಿರು ನಿಂಗ್ಯಾಕೆ ಆ ಉಸಾಬರಿ, ಇರೀರ್ಗೆ ಬುಟ್ಬುಡು" ಅಂತ.

ನಂಗೆ ಅವ್ವನತ್ರಾವ, ಅಪ್ಪಯ್ಯನತ್ರಾವ ಓಗ್ತೀನಂತ ಒಂದೇ ಕುಸಿ. ನಾನು ಅತ್ತೆಗಿಂತ ಉದ್ದ ಬೆಳ್ಕೊಳ್ತಾ ಇದ್ದೆ. ಅವ್ವನಷ್ಟು ಇರ್ಬೇಕೂ ನಾನೂ

ಅನ್ನಿಸ್ತಿ ಕುಣಿದಾಡ್ಕಂಡು ಬಟ್ಟೆ ಬರೆ ಗಂಟು ಕಟ್ಕೊಂಡು ಅಜ್ಜೀ ಇಂದೆ ಒರ್ಟಾಗ ಮಾವಯ್ಯ, ಅತ್ತೆ ಏಳಿದ್ರು–"ಯೇಳವ್ವಾ ನಿಮ್ಮವ್ವಂಗೆ ಆ ಒತ್ಗೆ ಬತ್ತೀವೀಂತ !" ಅಂದ್ರು

ಬಸ್ಸು ಅತ್ರಾಕೆ ಬಂದಾಗ ಎಲ್ರೂ ನನ್ನತ್ತವಾಸೇ ನೋಡ್ತಾ ಇದ್ರೂಂತ ಅನ್ನಿಸ್ತು. ಒಬ್ಬ ನನ್ನಡೇ ನೋಡಿ ಅಲ್ಕಿರ್ಬಾಗ ನಂಗೆ ಎಂಗೆಂಗೋ ಆಗೋಯ್ತು ಅಜ್ಜಿ ಸೆರಗ್ನಿಂದೆ ಮರಸ ಂಡೆ

ಬಸ್ಸು ನಿಲ್ತಾ ತಾವಾಕೆ ಅಪ್ಪಯ್ಯ ಬಂದ್ಬುಟ್ಟಿದ್ದ ನನ್ನ ನೋಡಿ ಬಾಯಿ ಮ್ಯಾಗೆ ಕೈಯಿಟ್ಕಂಡ

"ಯಾಪಾಟಿ ಬೆಳೆದ್ಬುಟ್ಟವ್ವಾ !" ಅಟ್ಟೀ ತಾವ ಬರ್ತಾಲೇನೇ ಅವ್ವ ಕೆಂಪಾರ್ತಿ ಮಾಡಿದ್ಲು ಬಲ್ಗಾಲಿಟ್ಟು ಒಳೀಕ್ಬಾರವ್ವಾ ! ನಮ್ಮಟ್ಟಿ ಕಳೀನೇ ಬದ್ಲಾಗ್ಬುಟ್ಟಿತ್ತು ಮನೇಗೆಲ್ಲಾ ಸುಣ್ಣ ಬಣ್ಣ ಆಕ್ಸಾಗಿತ್ತು. ಅಟ್ಟಿ ಬಾಗ್ಲಾಗೇ ತೋರ್ಣ ಕಟ್ಟಿದ್ರು ನನ್ನ ಒಸಬ್ಟಂಗೇ ನೋಡ್ಕಂಡ್ರು. ನಂಗೆ ಮೊದ್ಲಂಗೆ ಮನೆಯೆಲ್ಲಾ ಕುಣ್ಕಂಡು ಓಡಾಡೋಂಗೆ ಆಯ್ತು ಅವ್ವ ಬಿಡ್ನಿಲ್ಲ ನೀನು ಸುಮ್ಕಿರವ್ವಾ, ಕೈ, ಮೈ ನೋಯಿಸ್ಕಾಬ್ಯಾಡ ಅನ್ನೋವ್ಳು

ನಾ ಬಂದಿದ್ದೀನಿಂದ ಎಲ್ರಿಗೂ ಗೊತ್ತಾಗೋಯ್ತು ಎಲ್ಲಾ ಬಂದು ನನ್ನ ನೋಡೋರೇ! ಬಾಯಿ ಮ್ಯಾಗೆ ಕೈಯಿಟ್ಕಂಡು ನೋಡಾದೇ ಆಗೋಯ್ತು ಅವ್ವ ಒಳಕ್ಕೋಗಿ ಮಡ್ಕೆ ಮುಸಿ ತಂದು ಕೆನ್ನೆಗೆ ಬಳಿದ್ಲು–"ಎಲ್ರ ಕಣ್ಣೂ ಬೀಳ್ತೈತೆ ಈ ಬೊಟ್ಟು ಇರ್ಲಿ ಬಂಡು." ರುದ್ರಿ ನನ್ನತ್ತವ ಬಂದು ಕಿವೀಲಿ ಯೇಳಿದ್ಲು "ನಿಂಗೆ ಲಗ್ಣಾ ಕಣೇ. ದ್ಯಾವರ್ಗೇ ಕೊಟ್ಟು ನಿನ್ನ ಲಗ್ಣಾ ಮಾಡ್ತಾರೆ–!"

ನಂಗೆ ಎದೆ ಒಳೀಕ್ಕಿದ್ದಾಸೆಯೆಲ್ಲಾ ಪುಸ್ ಅಂದೋಯ್ತು. ಕಲ್ಲು ದ್ಯಾವ್ರುನ್ನ ಲಗ್ನ ಮಾಡ್ಕಾಳ್ಳಾದಾ ? ನೇಕ್ರವ್ರೋರ್ನ ಲಗ್ಣಾ ಆಗ್ಬಾರ್ದಾ ನಾನು ? ಅವ್ವ ಆವೊತ್ತು ಯೋಳಿದ್ಲು ಸರದಾರನಯೋನ್ನ ಲಗ್ನ ಮಾಡ್ತೀ ನೀಂತ

ರುದ್ರಿ ಸುಮ್ಕಿರ್ಕಿಲ್ಲ "ಬುಡವ್ವಾ. ನಿನ್ನ ಇಡ್ಕೋಳು ಯಾರು ? ಗೌಡ್ರ ಉಪ್ಪಾರ, ಉಡುಗೊರೆ ನಿಂಗೆ–ನಮ್ಮ ತುದಿಗಣ್ಣಾಗೂ ನೋಡೋಲ್ಲ ನಿನ್ನೂ ! ಗೌಡ್ರ ಕೈ ಇಡ್ಕೋಳು !"

ನನ್ನ ಎದೆ ಬಡ್ಕೊಳ್ಳಿಯ್ತು ಅವ್ವನ್ತಾವ ಓದೆ "ಏನವ್ವಾ, ಠುಮ್ರಿ ಏಳಾದು ? ನಂಗೆ ಗೌಡ್ರು ಉಪ್ಕಾರಾನಾ !"

ಅವ್ವ ಕೂಡ್ಲೆ ಉತ್ರ ಕೊಡ್ಲಿಲ್ಲ "ಇಲ್ಕಣವ್ವಾ ಅವ್ರೆಲ್ಲಾ ಉಚ್ಚು ಚ್ಚಂಗೆ ನೂತಾಡ್ತಾರೆ ಅದ್ನೆಲ್ಲಾ ನೀನು ಕೇಳ್ಬ್ಯಾರ್ದು !"

ಅಜ್ಜಿ ಬಾಗ್ಲಿಗೆ ಅಡ್ಡ ನಿಂತ್ಲು–"ಯಾರೂ ಓಳೀಗೆ ಬರ್ಬ್ಯಾರ್ದು–ಓಗಿ !" ಅಂವ ಎಲ್ರನ್ನೂ ಕಳಿಸ್ಬುಟ್ಲು ಅಪ್ಪಯ್ಯ ಮೂಲೇಲಿ ಕುಂತಿದ್ರು ಅವರ್ತಾವ ಓಗಿ ಕೇಳ್ದೆ "ಔದೇನಪ್ಪಯ್ಯಾ ಗೌಡ್ರು ಕೈ ಇಡೀತೀನಾ !" ಅಪ್ಪಯ್ಯ ಇಂಗೈನಾಗೆ ಅಣೆ ಒರಸ್ಕಂಡ್ರು

"ಇಲ್ಲ ಣವ್ವಾ, ನೀನು ದ್ಯಾವರ್ಗೆ ಲಗ್ನ ಆಗಾದು ! ಕೈ ಇಡ್ಯಾದು !"

"ಊಂ...ನಂಗೇನೂ ದ್ಯಾವ್ರು ಬ್ಯಾಡಾ–ಎಲ್ರೂ ಲಗ್ನಾ ಆಗಾಂಗೇ ಆಗಾದು !" ನಾನೂ ಆಟ ಇಡ್ದೆ.

ಅಪ್ಪಯ್ಯ ನನ್ನ ಮಾರೇನೇ ಮಿಕ ಮಿಕ ನೋಡಿದ್ರು.

"ನೀನೇನಾರ ಗೌಡ್ರನ್ನ ಲಗ್ನಾ ಗಿಗ್ನಾ ಮಾಡ್ಕೋಂದೀಯಾ. ನೋಡೂ ಏನ್ಮಾಡ್ತೀನೀಂತ !" ನಾನು ಬುಸುಗುಟ್ದೆ. ಅಪ್ಪಯ್ಯ ಅಲ್ಲಿಂದ ಎದ್ದು ಒರ್ಗೆ ಒಂಟೋದ್ರು

"ಬಾರೇ, ಇಲ್ಲಿ ಚಿನಾಲೀ, ಅಪ್ಪಯ್ಯನ ಅಂಗೆ ಬಾಸ್ರಾ ಮಾಡಿ ಕಾಡ್ತೀ ಯೇನೇ! ನಿಂಗೇನೇ ಕಡ್ಮೆ ಮಾಡಿರಾದೂ !" ಅವ್ವ ಕಣ್ಣೆಂಪಗೆ ಮಾಡ್ಕಂಡು ರೇಗಿದ್ಲು. "ನಿಮ್ಮಪ್ಪಯ್ಯ ಸರ್ಯಾಗಿ ಉಂಡು ಒಂದು ತಿಂಗಳ ಮೇಲಾಯ್ತು !"

ನಾನು ಅಂಗೇ ಗತ ಬಡ್ದೋಳಂಗೆ ನಿಂತ್ಬುಟ್ಟೆ ಅಪ್ಪಯ್ಯ ಸರ್ಯಾಗಿ ಉಣ್ತಾ ಇಲ್ವೇ ? ಯಾಕೆ ?

ನಾನು ಅಂಗೇ ಗರ ಬಡ್ದೋಳಂಗೆ ನಿಂತ್ಬುಟ್ಟೆ ಅಪ್ಪಯ್ಯ ಸರ್ಯಾಗಿ ಉಣ್ತಾ ಇಲ್ವೇ ? ಯಾಕೆ ?

"ನೀ ನೆರ್ದಾಗ್ನಿಂದ ನಿಂತೆ ಚಿಪ್ನ ಬಂದೋಗೈತೆ ಅವರ್ಗೆ. ಅವ್ರು ಅಂಗೆ ಇಂಗೇ ಕೇಳಿ ಒಟ್ಟೆ ಉರಿಸ್ಬ್ಯಾಡಾ !" ಅವ್ವ ಆರಾಡಿದ್ಲು. "ಎಲ್ಲಾ ನಿನ್ನೊಳ್ಳೇದಕ್ಕೇ !"

'ಮತ್ತೇ ಏನೊಳ್ಳೇದು ನೀಮಾಡಾದು ? ಪುಟ್ಟಾ ಚೆಂದಾಗಿರ್ಲೀಂತ ನನ್ನಾಕೆ ದ್ಯಾವರ್ಗೆ ಬುಟ್ಟೆ ? ನಂಗ್ಯಾಕೆ ಏನೇನೋ ಮಾಡಿ ಗೌಡ್ರು ಕೈಗಾಕ್ತಿ ? ಅದಾಗೆ ಏನೊಳ್ಳೇದೈತೆ ?"

ನಾನು ಕೇಳ್ವಾಗ ಅವ್ವ ಮುಸುಮುಸು ಅಳಾಕೆ ಅತ್ತಿದ್ಲು.

"ಇಲ್ಲಾ ಕೂಸೂ, ಗೌಡ್ರು ನಿಂಗೆಂತಾ ಯಾಸಾಟಿ ತಂದ್ಕೊಟ್ಟವ್ರೆ. ಬೆಳ್ಳಿ ಕಾಲ್ಚೈನು, ಕಾಲ್ಬಳೆ, ಡಾಬು, ಚಿನ್ನದ ಕಾಗಿನ್ಸರ, ಓಲೆ, ಸರಪಳಿ-ಎಲ್ಲಾ ಭಾರಿ ಸೀರ...ನಿಮ್ಮಪ್ಪಯ್ಯನ ಕೈಗೆ ಒಂದ್ಸಾವ್ರ ಕೈಗಾಕವ್ರೆ ನಿನ್ನ ಲಗ್ಣಾಂತ! ನೋಡ್ಬಾ ತೋರ್ತೀನಿ!" ಅಜ್ಜ ನನ್ಮುಂದೆ ಕೆಂಪು ಬಟ್ಟ್ಯಾಗಿನ ಗಂಟು ತಂದು ತೋರ್ಸಿದ್ಲು. ಆ ವಡ್ವೆ ನೋಡಿ ನಂಗೆ ಬಾಯಾಗೆ ನೀರೂರ್ತು. ಒಂದಕ್ಕಿಂತ ಒಂದು ಏನು ಪೈನಾಗೈತೆ. ಆ ಭಾರಿ ಕೆಂಪು ರೇಸ್ಮೆ ಸೀರಗೆ ವೈತುಂಬಾ ಜರಿ, ಅಳದೀ ರೇಸ್ಮೆ ಸೀರೆಗೆ ಏಟು ದೊಡ್ಡ ಜರತಾರಿ ಅಂಚು! ಕೈನಾಗ ತಗೊಂಡು ಸವರ್ದೆ ಒಡ್ವೆ ಎತ್ತಿ ಕೈನಾಗಿಟ್ಕಂಡು ನೋಡ್ದೆ. ಆಸೆ ಎಲ್ಲಾ ಒಂದು ಈಟೊತ್ತು ಅಷ್ಟೆ ಧೂ ಇದಕಾಗಿ ಅಲ್ವಾ ಜೀವವ ನಡೆಸ್ಬೇಕಾ? ಗಂಜಿ, ಅಂಬ್ಲಿ ಕುಡ್ಕಂಡು ಆಯಾಗಿ ಅಟ್ಟೀಲಿ ಇರ್ಬೋದು. ಮರ್ವಾದೆಯಾಗಿ ಅರಕ್ಲೋ, ವರಕ್ಲೋ ಉಟ್ಕಂಡು ನಗ್ತಾ ನಗ್ತಾ ಇರ್ಬೋದು... ಒಡ್ವೆ, ಸೀರ ಅತ್ಲಾಗೆ ತಳ್ದೆ-"ಊಂ-ನಂಗೇನು ಬ್ಯಾಡಾ-ನೀನೇ ಇಟ್ಕೋ ನೀನೇ ಗೌಡ್ರನ್ನ ಲಗ್ಣ ಆಗು!"

ಅಜ್ಜಗೆ ರೋಸ ಬಂದು ನನ್ನ ತಲೆ ಮೇಗೆ ಕುಟ್ಟಿದ್ಲು. "ಪ್ರಾರಬ್ಧದ ಎಣ್ಣೇ, ನೀನು ಸುಕವಾಗಿದ್ರಾಯ್ತು ನಾವೆಲ್ಲಾ ಸಾಯಾನೇಳು-ನಿಮ್ಮವ್ವ, ನಿಮ್ಮಪ್ಪಯ್ಯ ಸತ್ರೋಗ್ಲಿ ಬಿಡು-ನಿನ್ನ ಮರ್ಯಾದೆಯಿಂದ ಪುಟ್ಟ ಬೀದಿಗೋಗ್ಲಿ! ಕಳವುಂದೆ ನೀ ಮಾತ್ರ ನಿಂಗೆಂಗ್ಬೇಕೋ ಅಂಗಿರೂ!"

ನಾನು ಅಳಾಕೆ ಅತ್ಬುಟ್ಟೆ "ಅಪ್ಪಯ್ಯ, ಅವ್ವ ಸಾಯಾಂಗಿದ್ರೆ ನೀಯಾಕೆ ಬರ್ಕಬೇಕೂಂತೀನಿ? ಪುಟ್ಟನ ಬೀದಿಗ್ಯಾಕೆ ಬುಡ್ಲಿ ಅವ್ವ, ಅಜ್ಜೀ, ನಾನು ಅಳ್ತಾ ಇದ್ದ ಕಂಡು ಅಪ್ಪಯ್ಯ ಒಳೆಕ್ಬಂದ್ರು, ನಮ್ಮ ನೋಡಿ ಕೂಗಾಕಿಷ್ರು. "ಯಾರು ಸತ್ರೂಂತ ಅಳ್ತೀರೇ, ಅಳಿ-ಬಡ್ಕೊಳ್ಳಿ-ನಾನೇ ಮಣ್ಣಾಕ್ಕೋತೀ ಯ್ತೀನಿ-ಒಂದಕಾಕ್ದ್ರೂ ನಿಯತ್ತಿಲ್ಲ!" ಅಪ್ಪಯ್ಯನ್ಕಣ್ಣಾಗೂ ನೀರು ಬಿತ್ತು. "ಓಗವ್ವಾ ನೀನು ಎಲ್ಲಿಗಾನಾ ಓಡೋಗ್ಬುಡು. ನನ್ಕಣ್ಮುಂದೆ ಇರ್ಬೇಡಾ!" ನನ್ಕಡೇ ನೋಡಿದ್ರು-'ಎಂಗಾರ ಸುಕವಾಗಿರು! ತಪ್ಪೆಲ್ಲಾ ನಮ್ದೇ, ನಿನ್ಕೇಳಿ ನಾವು ಮಾಡ್ಬೇಕಿತ್ತು. ನಾವೇಳ್ದಂಗೆ ಕೇಳ್ತೀಂತ ಸುಮ್ನಾ ಗ್ಬುಟ್ವಿ! ಕ್ಷಮಿಸ್ಬು!" ಅಪ್ಪಯ್ಯ ಕೈಯೆತ್ತಿ ಮುಗಿದ್ಬುಟ್ರು, ನಾನಂಗೇ ಅಪ್ಪಯ್ಯನ ಕಾಲು ಇಡಿದ್ಬುಟ್ಟೆ.

"ಬ್ಯಾಡಾ ಅಪ್ಪಯ್ಯಾ--ನೀನಂಗೆ ಮಾಡ್ಬೇಡಾ--ನೀನೇಳ್ದಂಗೆ ಕೇಳ್ತೀನಿ!"

ಅಪ್ಪಯ್ಯ ನನ್ನ ಇಡ್ಕೊತ್ತಿ ನಿಲ್ಸಿ ನನ್ತಲೇ ತಡವಿ ಅಂಗೇ ನನ್ಮಕ ನೋಡಿದ್ರು ಸುಮ್ಕೆ ಅಂಗೇ ನಿಂತ್ಬುಟ್ಬು ನನ್ನ ತಬ್ಕಂಡು.

ಆಜಿನ ಒಬ್ಬನ ಚಾಯಿಯ್ಲೂ ಇಟ್ಬು ರುಚಿಸ್ಲಿಲ್ಲ ಚೆಂದಾಕಿ ಉಂಡೋ ಕೊಂದ್ರೆ ಪುಟ್ಟ ಒಬ್ನೇ. ಅವ್ವ ಪರಮಾನ್ನ ಮಾಡಿದ್ಲು-ಅದ್ನ ಒಬ್ರೂ ಮುಟ್ಲಿಲ್ಲ ಪುಟ್ಟ ಎಲೆ ತುಂಬಾ ಆಕ್ಕಂಡು ತಿಂದ. ಒಬ್ಬರೂ ಉಸಿರೆತ್ಲಿಲ್ಲ. ಎಲ್ರೂ ಮನಗಿದ್ದಾಗ ನಾನಂಗೇ ಯೋಚ್ನೆ ಮಾಡ್ತಾ ಮನಿಕಂಡೆ ಅಳಾದ್ದು ಕಣ್ಗೆ ನಿದ್ದೇನೆ ಬರವೊಲ್ದು ಯಾತ್ಕಣ್ಲಾ ಬೀಳ್ದಂಗೆ ಮೆಲ್ಗೆ ಸೇರ್ರಪ್ನೋರ್ನ ಯಾಕೆ ನೋಡ್ಕಂಬರ್ಬಾರ್ದು, ಪೂಜಾರಪ್ಪನ್ನನೇಗಾದ್ರೂ ಯಾಕೋಗ್ಬಾರ್ದು ಅನ್ನಿಸ್ತು. ಬಾಗಿಲ್ಗೆ ಅಡ್ಡವಾಗಿ ಅಜ್ಜಿ ಮನಗಿದ್ಲು. ಅವಳ ಕಾಲ್ತಾವ ಅವ್ವ ಮನಗಿದ್ಲು. ಅಪ್ಪಯ್ಯ ಉಂಡ್ಕಂಡು ಓದೋರು ಬಂದಿರ್ಲಿಲ್ಲ ನಂಗೊತ್ತು ಕಳ್ಳಂಗಡೀಗೋಗವ್ರೇಂತ ಅಂಗೇ ಅತ್ಕಂಡು ಮನಗ್ದೆ. ನಿದ್ದೆ ಆತ್ಬುಡ್ತು.

ರಾತ್ರಿ ಒಂದೊತ್ನಾಗೆ ಎಚ್ಚರ್ಕೆ ಆಗೋಯ್ತು ಯಾರೋ ಮಾತಾಡ್ತಾ ಇದ್ದಂಗೆ ಕೇಳಿಸ್ತು ಎಚ್ರ ಮಾಡ್ಕಂಡು ಕೇಳ್ದೆ ಅವ್ವ, ಅಪ್ಪಯ್ಯನ ದನಿ. "ನಾವಂಗೆ ಮಾಡ್ಬಾರ್ದಿತ್ತೂ ಕಣೇ, ಅಸಮುಗ, ಕಣ್ಣೀರಾಕಾದು ನಾನೋಡ್ನಾರೇ–ನಾನೂ, ನೀನೂ ಅಳ್ಳೀ ಬಿಟ್ಬು ಒಂಟೋಗೋವಾ ಬಾ . !"

"ಏಯ್ ಸುಮ್ಕಿರೀ ಮತ್ತೇ ದ್ಯಾವರ್ಗೆ ಬುಟ್ಮೇಲೆ ಅಂಗೆಲ್ಲಾ ಮಾಡಿದ್ರೆ ಹಂಸ ನಾಸನ ಆಗೋಗ್ತೈತಂತೆ–ಇರಾದೆ ಒಂದ್ಸಾಗಿ–ಅದೂ ಒಂಟೋದ್ರೆ ಎಂಗೆ! ನಾಕ್ದಿನ ಅರಾಡ್ತಾಳೆ. ಆಮೇಲೆ ಸರಿಓಗ್ತಾಳೆ!"

"ಇಲ್ಲಾ, ನಿಂಗೊತ್ತಿಲ್ಲ. ಅವ್ಳು ಬೋ ಉಸಾರಿ .ಎಲ್ಲಾ ತಿಳೀತೈತೆ, ನಮ್ಮ ನೆಂಟ್ರು, ನಮ್ಮ ವಂಸಾಂತ ಅವ್ಳ್ನ ಅಳ್ಸಾಡ್ಬುಟ್ರೆ ನೋಡೂ ಸಾವಿಬ್ರೂ! ಈಗ್ಲೂ ಒತ್ತಿಲ್ಲ. ನಾನೂ, ನೀನೂ, ಪುಟ್ಟ, ಅವ್ಳು ಅಳ್ಳೀ ಬಿಟ್ಬು ಒಂಟೋಗೋವಾ-ಬಿಕ್ಸೆ ಎತ್ತಿದ್ರೂ ಪರ್ವಾಗಿಲ್ಲ. ಅವ್ಳು ನೆಗಾ ನೆಗಾ ಸಕಕವಾಗಿದ್ದಾಯ್ತೀಳು!"

"ನಿಮಗೇನಾದ್ರೂ ಮಾಡಿದ್ರೆ ನಾನು ಕೆರೆಗೆ ಆಕ್ಕಂತೀನಿ-ಹ್ಯಾವ್ರ ಶ್ಯಾಪ ... ನಿನ ...!"

"ನೋಡು ಒಂದೀಟು ಇಸಾ ಇದ್ರೆ ತಗಂಬಾ, ನೀನೂ, ನಾನೂ, ಅವ್ವೂ ಮೂರ್ಜನಾನೂ ಕುಡಿದ್ಬುಡೋಣ ಪುಟ್ಟಣ್ಣ ನಿಮ್ಮವ್ವ, ನಿಮ್ಮಣ್ಣ ನೋಡ್ಕಂತಾರ"

ಮಾತು ಕೇಳ್ತಾ ಕೇಳ್ತಾ ನಂಗೆದೆ ಒಡೆದೋಯ್ತು ಥೂ ಆಳು ಬಾಳು. ನನ್ಬಾಳು ಜಾವಾನ ಮಾಡ್ಕಳ್ಳಾಕ್ಕೆ, ಅವ್ವ, ಅಪ್ಪಯ್ಯನ್ಬಾಳು ಆಳ್ಕಾಡಾದಾ ! ಪುಟ್ಟನ್ನ ತಬ್ಲೀ ಮಾಡಾದಾ–ನನ್ಬಾಳ್ಗೆ ಬೆಂಕಿಬಿದ್ದು ನೆಗೆದು ಓಗ್ಲಿ, ಅವ್ರಾದ್ರೂ ಸುಕವಾಗಿರ್ಲಿ ಅನ್ನಿಸ್ಬುಡ್ತು

ನಾನು ಅತ್ರೂ ಕರ್ದು ರಂಪ ಮಾಡಿದ್ರೆ ಬ್ಯಾಸ್ರಾ ಮಾಡ್ಕಳ್ಳಾಡೂ ಅನ್ನಿಸ್ತು ನಾನು ಒಟ್ಟಾಗೆ, ಎದೇಗೆ ಬೆಂಕಿ ಇಟ್ಕಂಡು ನೆಗ್ತಾ ನೆಗ್ತಾ ಇರಾದಾದ್ರೆ ಅವ್ರು ಸುಕವಾಗಿರ್ತೀದೂ ಅನ್ನಿಸ್ತು. ನಾಳೆಯಿಂದ ಅಂಗೇ ಇರ್ಬೇಕೂ ಅನ್ನಿಸ್ತು ನಂಗೋಸ್ಕರ ಪಿರಾಣಾ ಕಳ್ಕೊಳ್ಳಾಕೆ, ಬಿಕ್ಸಾ ಬೇಡಾಕೆ ಆಳ್ಳಿ ಬಿಟ್ಟೋಗಾಕೆ ಮುನ್ಸು ಮಾಡೋ ಅಪ್ಪಯ್ಯ, ಅವ್ವಗಾದ್ರೂ ನಾನು ಒಬ್ಳು ಸರ್ಯಾಗಿಷ್ಟು ಅವ್ರನ್ನ ಉಳಿಸ್ಕಾಬೇಕು ನನ್ನ ಒಂದಿಡೀ ಜೀವಕ್ಕೆ ಅವ್ರ ಬದ್ಕು ಆಳ್ಕಾಡಾದಾ ? ಅಂಗೇ ಏಚ್ನೆ ಮಾಡ್ತಾ ಮಾಡ್ತಾ ನಿದ್ದೆ ಅತ್ಬುಟ್ತು. ಕನಸ್ನಾಗೆ ಕರಿ ಮುಖದ ಗೌಡ್ರು ಮಕ್ದುಂಬಾ ಸಿಡುಬಿನ್ಕಲೆ-ಕೆಂಗಣ್ಣು-ಎಲೆ ಅಡ್ಕೆ ಜಗಿದೂ ಜಗಿದೂ ಕೆಂಪಾಗಿರೋ ಅಲ್ಲು, ಬಾಯಿ! ಆ ರಾಕ್ಷಸ! ಬೆಚ್ಚಿ ಎದ್ದಾಗ ಮೈಯೆಲ್ಲಾ ಬೆವರು ಸುರ್ದೋಯ್ತು

ಬೆಳ್ಗೆ ಎದ್ದಾಗ ನೆಗ್ತಾ ನೆಗ್ತಾನೇ ಎದ್ದೆ ಅಜ್ಜೀಗೇಳಿ ಗೌಡ್ರು ಕೊಟ್ಟ ಒಡ್ವೆ ಸೀರೆ ತರಸ್ಕಂಡು ಒಂದೊಂದೇ ಒಡ್ವೆ ಆಕ್ಕಂಡು ನೋಡ್ದೆ. "ನಂಗೆ ಏಟು ಚೆಂದಾಕಿ ಕಾಣ್ತೈತೆ ನೋಡಿದ್ರಾ ?" ಎಲ್ರಿಗೂ ತೋರಿಸ್ದೆ ಅವ್ವ, ಅಪ್ಪಯ್ಯ ಒಬ್ಬರ್ಮಕ ಒಬ್ರು ನೋಡ್ಕಂಡ್ರು

"ಅವ್ವಾ, ನಂಗೆ ಅಂಗೇ ಮೂಗೂತಿ ಕೊಡ್ಸವ್ವಾ!" ಅಂತ ಮುದ್ದು ಗರೆದೆ, "ಅಪ್ಪಯ್ಯಾ, ನೀನೂ ನಂಗೊಂದು ಒಸಾ ಸೀರೆ ಕೊಡ್ಸೂ" ಅಂದೆ. ಅಜ್ಜೀ ದೃಷ್ಟಿ ನಿವಾಳ್ಸಿದ್ಲು. "ನಾನೇಳ್ಲಿಲ್ವಾ, ದ್ಯಾವರು ಎಂಗಾಡ್ಸಿದ್ರೆ ಅಂಗಾಡ್ತದೇಂತ–ಒಳ್ಳೆ ಮುನ್ಸು ಇದ್ದಂಗೆ ಒಗ್ಣು ಮುಗಿಸ್ಬುಡು–? ಬಾ ಕೂಸೂ ಇದ್ನೂ ತಗಾ...!" ಅಜ್ಜೀ ತನ್ನ ಕತ್ನಲ್ಲಿದ್ದ ಗುಂಡಿನ್ಸರಾನೂ ನನ್ನತ್ಗೆ

ಆಕಿದ್ಲು. ಅವ್ವಂಗೆ, ಅಪ್ಪಯ್ಯಂಗೆ ಏನೋ ಅನುಮಾನ, ಒಂದು ಮಾತ್ನೂ ಆಡ್ಲಿಲ್ಲ.

ನನ್ನ ಲಗ್ಣಕ್ಕೆ ಎಲ್ಲ ಅಣಿಯಾಯ್ತು. ಮುತ್ತೈದೇಯರು ಬಂದು ಕುಂಕ್ಮ ಅರಿಸ್ನ ಅಚ್ಚಿದ್ರು. ಆಲೂ ತುಪ್ಪ ತಲೆಗೆ ಅಚ್ಚಿದ್ರು. ಆವ, ನಂಗೆ ನೀರಾಕಿ ಮೈ ತೊಳೆದ್ಲು. ಅರಿದೀ ಸೀರೆ ಉಡ್ಸಿ, ತಲೆಬಾಚಿ, ತಲೇತುಂಬಾ ಊ ಮುಡ್ಸಿ, ಅಣೇಗಿಟ್ಟು, ಆರ್ತಿ ಎತ್ತಿದ್ಲು. ಪುಟ್ಟ ತಂದ ಬೇಪನ್ಸೊಪ್ನ ಮೂರ್ಸಾರಿ ನಿವಾಳ್ಸಿ ಆಕಿದ್ರು. ಅತ್ತೆ, ಮಾವ ನಂಗೇಂತ ಒಸಾ ಸೀರ ಬಳೇ ತಂದಿದ್ರು. ಅಳ್ಳೀಲಿ ನಮ್ಮಟ್ಟಿ ಅಕ್ಕಪಕ್ಕೋರ್ಗೆಲ್ಲಾ ಊಟ ಆವೊತ್ತು ಇತ್ಲಾಗೆ 'ಘಂ' ಅಂತ ವಾಸ್ನೆ.

ಅಲಂಕಾರ ಮಾಡಿ ದ್ಯಾವಸ್ಥಾನಕ್ಕೆ ಕರ್ಕೊಂಡೋದ್ರು. ಅಣ್ಣುಕಾಯಿ ಮಾಡ್ಸಿ, ನನ್ಕೈಲಿ ದಕ್ಷಿಣೆ ಆಕ್ಸಿ, ನಮಸ್ಕಾರ ಮಾಡ್ಸಿದ್ರು. ಪೂಜಾರಪ್ನ ಕೈಗೆ ಪರ್ಸಾದ ಆಕ್ದಾಗ ಅಜ್ಜಿ ಏಳಿದ್ಲು. "ಕೂಸ್ನ ಅರ್ಸಿ ಪೂಜಾರಪ್ನೋರೇ!" ಪೂಜಾರಪ್ಪ ನನ್ನ ತಲೆಮೇಲೆ ಅಕ್ಸತೆ ಆಕಿ ಅರ್ಸಿದ್ರು. ತೀರ್ಥ ಆಕಿದ್ರು. ಪಾರೋತಮ್ಮ ದೂರದಿಂದ ಅಂಗೇ ನೋಡ್ತಾ ಇದ್ರು. ನಾನು ಬೇಕಂತ್ಲೇ ಅವರ್ತಾವ ನೋಡ್ಲಿಲ್ಲ. ಮನೇ ಒಳೀಕ್ಕೆ ಸೇಕ್ರಪ್ನೋರೂ ಇದ್ರೇನೋ!

ಪೂಜೆ ಮುಗ್ಸಿ ಅರಳೀಕಟ್ಟೆ ತಾವ ಕರ್ಕೊಂಡ್ಬಂದ್ರು. ಒಬ್ಬ ಮುತ್ತೈದೆ ಬಂದು ಬಿಳಿ ಮುತ್ತು ಪೋಣ್ಸಿದ ಕರಿದಾರ ಕತ್ಗೆ ಕಟ್ಟಿದ್ರು. ನನ್ನ ಮಗ್ಲಾಗೆ ಬೇವಿನ್ಸೊಪ್ಪು ಕಟ್ಟಿದ್ದ ಕಲ್ಗುಂಡ್ನ ಮಡಗಿದ್ರು. ಎಲ್ಲಾ ಮುತ್ತೈದೇರೂ ನಂಗೆ ಕುಂಕ್ಮ ಅರಸ್ನ ಅಚ್ಚಿ ಊವು ಮುಡ್ಸಿದ್ರು, ತಂಬಿಟ್ಟಾರ್ತಿ ಎತ್ತಿದ್ರು.

ಎಲ್ಲಾ ಮುಗ್ಸಿ ಅಟ್ಟೀತಾವ್ಗೆ ಬಂದೆವು. ಅಟ್ಟೀ ಬಾಕ್ಲಾಗೆ ಗೌಡ್ರ ಆಳು ಕರಿಯ ನಿಂತಿದ್ದ. ಅಜ್ಜೀ ಅವನ್ತಾವ ಓಗಿ ಏನೋ ಪಿಸಿಪಿಸಿ ಮಾತಾಡ್ತಾ ಇದ್ಲು.

ಅಟ್ಟೀಲೆಲ್ಲಾ ತೋರ್ಣ. ಅಬ್ಬಾ ಸಂಬ್ರಮ. ನಾನು ಯಾರ ತಾವನೂ ಮಾತೇ ಆಡ್ಲಿಲ್ಲ. ಒಟ್ಟ್ತುಂಬಾ ಉಣ್ಬಿಟ್ಟು ಅವ್ವನ ತೊಡೇ ಮೇಗೆ ತಲೆ ಇಟ್ಕಂಡು ನಿದ್ದೆ ಮಾಡ್ದೆ. ಮಟಮಟ ಮಧ್ಯಾನ ಅಟ್ಟೀ ಬಾಗ್ಲಿಗೆ ಅಡ್ಡವಾಗಿ ನೆರಳು ಬಿತ್ತು. ತಲೆಯೆತ್ತಿ ನೋಡಿದ್ರೆ ಸೇಕ್ರಪ್ಪ

ನಾನು ಎದ್ದು ಕುಂತ್ಕಂಡೆ. ಅವ್ವ ಬೆದ್ರಿದ್ರು ಅಂಗೇ ಏಳಿದ್ಲು

"ಬನ್ನೀ ಬುದ್ಧೀ–ಒಳೀಕೇ-ಪುಟ್ಟಾ ಸ್ವಾಮೇರ್ಗೆ ಒಂದ್ಲೋಟ ಅಲು ತತ್ತಾ!" ಸೇಕ್ರಪ್ನೋರು ಅಂಗೇ ನಿಂತಿದ್ರು ಒಳೀಕೇ ಬರ್ನಿಲ್ಲ ನನ್ಕಡೇ ದುರುದುರು ನೋಡಿದ್ರು.

"ನೀ ಬರಾಂಗಿದ್ರೆ ಬಾ-ನಂಜೊತೆ-ಪಟ್ಣಕ್ಕೆ ಓಗ್ತಾ ಇವ್ನಿ-ಇಲ್ದಿದ್ರೆ ಇಲ್ಲೇ ಆಳಾಗು!"

ನಂಗೆ ಕೈಕಾಲು ಸಡ್ಲ ಬಂದೋಯ್ತು ಅಪ್ಪಯ್ಯ ಇತ್ಲಿಂದ ಬಂದ್ರು

"ನೀವು ಪಟ್ಣಕ್ಕೋದ್ರೆ ಅವಳೂ ಬರಾಂಗಿದ್ರ ಲಗ್ನ ಆಗಿ ಕರ್ಕಂಡೋಗಿ-ನಾನಡ್ಡೀ ಬರಾಕಿಲ್ಲ-ಅಂಗೇ ಕಳ್ಸಾಕಿಲ್ಲ!"

"ಅಂದ್ರೆ ನಾನು ಲಗ್ನ ಆಗ್ದಿದ್ರೆ ಗೌಡ್ರಿಗೆ ಒಪ್ಪಿಸ್ತೀಯಾ!"

"ಐದು ಸಾವೀ-ಗೌಡ್ರು ಸಾವ್ರ ಕೊಟ್ಟವ್ರೆ-ಮೂರ್ಸಾವ್ರ ಕರ್ಚು ಮಾಡವ್ರೆ-ಒಡವೆ ವಸ್ತ ಕೊಟ್ಟೋವ್ರೆ!"

"ಅಂದ್ರೇ, ನಾನು ಅವರ್ಗಿಂತ ಎಚ್ಚು ದುಡ್ಡು ತಂದು ಅವರ್ಗೆ ಕೊಟ್ಬುಟ್ರೆ ನಾನು ಅವಳ್ನ ಕರ್ಕೊಂಡೋಗ್ಬೋದಾ?"

"ಅದು ಗೌಡ್ರ್ನ ಕೇಳ್ಕಳ್ಳಿ ಇವೊತ್ತು ಸಂಜೇಯಿಂದ ಅವ್ಳು ಗೌಡ್ರ ಸೊತ್ತು!" ಸೇಕ್ರಪ್ನೋರು ಅಂಗೇ ನಿಂತ್ಕಂಡು ಎಚ್ನೀ ಮಾಡಿದ್ರು

"ನನ್ತಾವ ಅಪಾಟ ದುಡ್ಡಿಲ್ಲ ನಾನು ಪಟ್ಣಕ್ಕೋಗಿ ಸಿನೇಯಿತ್ರ ತಾವ ಇಸ್ಕಂಡು ಕಳಸ್ತೀನಿ-ಈಗಿರಾದು ಇಸ್ಟೇ!" ಜೇಬ್ನಿಂದ ಪರ್ಸ್ ತೆಗೆದು ಒಂದೀಟು ದುಡ್ಡು ಅಪ್ಪಯ್ಯನ್ತಾವ ಕೊಟ್ರು

"ಇದ್ಯಾವ ಸೀಮಿಗೆ ಸಾಕು ಗೌಡ್ರು ಸುಮ್ಕಿರಾಕಿಲ್ಲ ಸುಮ್ಕೆ ಓಗಿ ಸೇಕ್ರಪ್ಪಾ- ನೀವಿನ್ನೂ ಚಿಕ್ಕೋರು, ಪ್ರಾಯದೋರು ಇದ್ಕೆಲ್ಲಾ ತಲೆ ಕೆಡಿಸ್ಕಂಬ್ಯಾಡಿ! ಓಗಿ. ನೀವು ಚೆಂದಾಗಿ ಬಾಳಿ ಬದುಕ್ಬೇಕೂ–ಈ ಯಾಪಾರ ಎಲ್ಲಾ ಬ್ಯಾಡಾ-ಓಗಿ ಬುದ್ಧೀ–ನಿಮ್ಪಾದ!" ಅಪ್ಪಯ್ಯ ಯೇಳಿದ್ರು.

"ನೀವು ಅವಳ್ನ ಬಲಾತ್ಕಾರ ಮಾಡಿ ಈ ಕೆಲ್ಸ ಮಾಡಿವ್ರಿ–ನಾನು ಪೋಲೀಸ್ನೋರ್ಗೆ ಏಳ್ತೀನಿ! ನಿಮ್ನ ಜೈಲ್ಗಾಕ್ತಾರೆ!" ಸೇಕ್ರಪ್ಪ ಯೋಳ್ದಾಗ ಅಪ್ಪಯ್ಯ ತಲೆ ಆಡ್ಸಿದ್ರು.

"ಅವ್ರೇ ಒಪ್ಕಂಡವ್ರೆ–ಗೌಡ್ರು ಕೊಟ್ಟಿದ್ನ ಅಕ್ಕಂಡು ಮೆಂಟೀತಾ ಅವ್ರೆ!"

ನೇಕ್ರಪ್ಪ ನನ್ನೇ ದುರುದುರು ನೋಡಿದ್ರು.

"ಔದಾ ?"

ನಾನು ಆವರ್ನಾತ್ವ ನೋಡಿ ತಲೆ ತಗ್ಗಿಸ್ಬಟ್ಟೆ. ದ್ಯಾವ್ರಂತಾ ಮನ್ಸ ನಂಗೋಸ್ಕರ ಅವ್ರು ಬದ್ಕು ಆಳ್ಮಾಡ್ಕೋ ಬಾರ್ದು ಅಪ್ಪಯ್ಯ ಯೋಳಿದ್ದು ನಿಜ ಆವ್ರು ಚೆಂದಾಕಿ ಬಾಳ್ಬೇಕೂ ನಾವು ಪಿರೀತಿ ಮಾಡೋವ್ರು ಚೆಂದಾಕಿದ್ರ ಅದ್ಕಂತಾ ಎಂತ ಸುಕ, ಸಂತೋಸ ಬೇಕು! ನನ್ಕಟ್ಕಂಡು ಎಲ್ರಿಸ್ಗೂ ಎದ್ರಾಕ್ಕಂಡು ಏನ್ಸುಕ ಕಂಡಾರು! ನನ್ನ ಪಾಲಿನ ದ್ಯಾವ್ರು ಎಂಗಾರ ಎಲ್ಲಾರ ಸುಕವಾಗಿರ್ಲಿ

"ನೇಕ್ರಪ್ನೋರೇ ನಾನೇ ಒಪ್ಕಂಡಿವ್ನಿ–ನಿಮ್ಮ ನನ್ನ ದಾವ್ರೂ ಅಂದೊಂಡಿವ್ನಿ" ಮೆಲ್ಲನೆ ಪಿಸು ದನೀಲಿ ಏಳ್ದಾಗ ನೇಕ್ರಪ್ನೋರು ಕಿಡಿಕಿಡಿ ಯಾಗ್ಬಿಟ್ರು "ನಾನು, ನೀನೊಳ್ಳೇವ್ರು ಅಂದ್ಕಂಡಿದ್ದೆ ನಿಂಗೂ ಅಂಗೇಯಾ ಬುದ್ಧೀ! ಊವು ಮುಡ್ಕಂಬೇಕು ಕಾಲ್ನಾಗೆ ಆಕಿ ತುಳೀಬಾರ್ದು-! ಇಲ್ದಿದ್ರೆ ದ್ಯಾವ್ರ ಪಾದಕ್ಕೆ ಆಕ್ಬೇಕು ಇದು ದ್ಯಾವರ ಪಾದದೆಸ್ರಲ್ಲಿ ನಡೀತಾ ಇರೋ ಪಾಪ! ಆಳಾಗ್ಹೋಗು, ನಿಂಗೊಂದು ಒಸಾ ದಾರಿ ತೋರ್ಬೇಕೂಂತ ಬಂದೆ ನಿನ್ನೆಸೇಲಿ ಇದೇ ಒರ್ವಂಗೈತೆ" ನೇಕ್ರಪ್ನೋರು ಒಂಟೋದ್ರು. ನಂಗೆ ಅವ್ರಿಂದೇನೇ ಓಡಿ ಓಗ್ಬುಡಾನ ಅನ್ನಿಸ್ಬುಡ್ತು.

"ಬಂದ್ಬುಟ್ಟೆ ಬುದ್ದಿ ಏಳಾಕೆ ಅವಳ್ನ ಪಟ್ಣಕ್ಕೆ ಕರ್ಕೊಂಡೋಗಿ ಯಾರ್ಗಾದ್ರೂ ಮಾರ್ಕಂತಾನೆ ಚಿಕ್ಕ ಬಸ್ನಿನ ನಿಂಗ ಮಾಡ್ತಿಲ್ವಾ ಅಂಗೆ!" ಮಾವಯ್ಯ ಏಳ್ದ

ನೇಕ್ರಪ್ನೋರು ಅಂತೋರಲ್ಲಾ ಅಂತ ಕೂಗಾನಾ ಅನ್ನಿಸ್ತು ಉಸ್ರು ಬಿಗಿ ಇಡ್ಕಂಡು ಸುಮ್ನಾದೆ

ಚಂಜೆ ಆಗ್ತಿದ್ದಂಗೆ ನಂಗೇನೋ ಭಯ ಎಂಗೆಂಗೋ ಆಗ್ತಿತ್ತು. ಅತ್ತೆ, ಅಜ್ಜಿ ನನ್ನ ಇಡ್ಕಂಡು ಅಲಂಕಾರ ಮಾಡಿದ್ರು. ಚಿಕ್ಕಕೋಣೆ ತುಂಬಾ ಊದಿನ್ಕಡ್ಡಿ ಅತ್ಸಿದ್ರು–ಬಾಕ್ಲಿಗೆಲ್ಲಾ ಊವು ತೂಗಾಡ್ಸಿದ್ರು ಚಂದಾಗಿ ಬಿಸಿ ಬಿಸಿ ಅಲ್ನ ಇರ್ಸಿದ್ರು, ಅಣ್ಣು ಅಂಪಲು ತಂದು ಮಡ್ಗಿದ್ರು. ಕರಿಯ ಕಳ್ಳಿನ ಬುಂಡೇ ಎತ್ಕಂಬಂದ, ಇನ್ನೂ ಏನೇನೋ ತಂದು ಅತ್ತೆ ಕೈಗೆ ಕೊಟ್ಟ.

ಕತ್ಲಾಗ್ತಿದ್ದಂಗೆ ಅಟ್ಟೇಲಿ ಬುಡ್ಡಿ ದೀಪ ಅಚ್ಚಿದ್ರು, ಅಜ್ಜಿ ಅತ್ತೆ ಅವ್ವ, ಅಪ್ಪಯ್ಯ ಎಲ್ರೂ ಪಕ್ಕದ್ಮನೇಲಿ ಮನ್ಯಾಕೇಂತ ಚಾಪೆ ಎತ್ಕಂಡೋಗಿಟ್ಟಂದ್ರು. "ಗೌಡ್ರು ಬತ್ತಾವ್ರೇ !" ಕರಿಯ ಓಡ್ಬಂದೇಳ್ದ, ನಾನು ಕೆಂಪ್ಸೀರೆ ಉಟ್ಕಂಡು, ತಲೇ ತುಂಬಾ ಊವು ಮುಡ್ಕಂಡು ಅಣೇ ತುಂಬಾ ಕುಂಕ್ಮ ಅಚ್ಕಂಡು ಕೈ ತುಂಬಾ ಬಳೆ, ಮೈ ತುಂಬಾ ಒಡ್ವೆ ಆಕ್ಕಂಡು ಕುಂತಿದ್ದೆ ನಂಗೆ ನಾನು ಬದ್ಕೇ ಇಲ್ಲ. ಪ್ರಾಣ ಒಂಟೋಗೈತೆ ಅನ್ನಿಸ್ಬಿಡ್ತು

ಗೌಡ್ರ ದನಿ ಒರ್ಗೆ ಕೇಳಿಸ್ತು. ಆ ಗೊಗ್ಗರು ದನಿ ಕೇಳಿ ಮೈಯೆಲ್ಲಾ ಎಂಜ್ಲಾದಂಗಾಯ್ತು ಒಳೀಕೆ ಬಂದಾಗ ಬುಡ್ಡೀ ದೀವ್ದಾಗ ಪಿಸಾಚಿ ಕಂಡಂಗೇ ಕಂಡ್ರು ನನ್ನ ನೋಡಿ ಅಲ್ಕಿರಿದ್ರು 'ಬೋ ಚೆಂದಾಕಿ ಬೆಳೆದ್ಬುಟ್ಟವ್ಳೆ ಇಟ್ಟುದ್ವಾ ಇಗ್ದ್ಲು-ಅಲೆಲೇ...ಲೇ !" ನನ್ನ ಮೈಮೇಗ ಕಣ್ಣಾಡ್ಸಿದ್ರು ಈಳ್ಯ, ಅಣ್ಣು ತಂದು ಅತ್ತೆ ಗೌಡ್ರ ಮುಂದ ಮಡಗಿದ್ಲು ಅವ್ವ ಅಪ್ಪಯ್ಯ ಎಲ್ಲೂ ಕಾಣಿಸ್ಲಿಲ್ಲ.

'ನೀ ಒಗವ್ವಾ ಅವ್ಳೇ ಕೊಡ್ತಾಳೇ ಈಳ್ಯ !" ಗೌಡ್ರು ಏಳ್ದಾಗ ಅತ್ತೆ ಒರಗೋಗ್ತಾ ನನ್ನ ಕಿವೀಲಿ ಏಳಿದ್ಲು. 'ಸುಮ್ನೆ ಗಲಾಟೆ ಮಾಡ್ಬೇಡಾ ಗೌಡ್ರು ಹೇಳ್ದಂಗೇ ಕೇಳು !"

ಅವ್ವ ಅಟ್ಟೆ ಬಾಕ್ಲ ಮುಂದೆ ಮಾಡ್ಕಂಡೋದಾಗ ಗೌಡ್ರು ಬಾಕ್ಲ ಆಕಿ ನನ್ತಾವ ಬಂದ್ರು ಅತ್ರ ಬಂದಂಗೆ ಕಳ್ಳಿನ ವಾಸ್ನೆ ಮೂಗಿಗ ಬಡೀತು. "ಒಳ್ಳೇ ಚೆಂದೊಳ್ಳೆ ಅಣ್ಣು ನೀನು. ಒಸಾ ಉಡ್ಗೀಯಾಂದ್ರ ನಂಗ ಪಿರಾಣಾ !" ನನ್ನ ಕೈ ಇಡ್ದು ಎಳ್ದಾಗ ಕೈನಾಗಿನ ಬಳೆ ಒಡ್ಕಂತು ನಾನು ಅವ್ರ ಕೈಯಿಂದ ಬಿಡಿಸ್ಕಳ್ಳಾಕೆ ಒದ್ದಾಡ್ದೆ. ಕೊಸರಾಡ್ದೆ ಕಿರಿಚಿದ್ರೆ ಅತ್ತೆ ಅಜ್ಜಿ ಬಂದ್ಬುಟ್ಟಾರೂಂತ ಎಚ್ಚರ್ಕೆ ಆಯ್ತು ಅವ್ರು ಇಡ ಂಡ ಕೈನೇ ಕಚ್ಚಾಕ್ಬುಟ್ಟೆ ಗೌಡ್ರ ನೆರಳು ಭೂತದಂಗೆ ಗೋಡೆ ಮೇಲೆ ಬಿದ್ದಿತ್ತು. "ಕಚ್ತೀಯೇನ ಲೌಡಿ-ನಿನ್ನಪ್ಪ ಇಸ್ಕೊಂಡವ್ನೆ ಆಪಾಟ ದುಡ್ಡು !" ಗೌಡ್ರು ನನ್ನ ಬನ್ಮೇಲೆ ಗುದ್ದಿದ್ರು ನಂಗೆ ಪರಾಣಾನೇ ಓಗೊಂಗೆ ನೋವಾಯ್ತು ಕೂಗಾಕ್ಕೋದಾಗ ಗೌಡ್ರು ಬಾಯಿ ಅದಮಿಟ್ಕಂಡ್ರು "ಉಸಾರು ಉಸಿರೆತ್ತಿದ್ರೆ ಮೆಟ್ರ ಇಸ್ಕಾಕಿ ಪ್ರಾಣ ಕಳೆದ್ಬುಟ್ಟೇನು !" ಅವರು ಒತ್ತಿ ಇಡ್ದಾಗ ಬಾಯಿ ಅಲ್ಲೆಲ್ಲಾ ಮುರ್ದೋದಂಗಾಯ್ತು. ಇದು ಪಿಸಾಚೀನೇ! ಭೂತರಾಯ್ನೇ ! ನಾನು ಬಿಡಿಸ್ಕಳ್ಳಕ್ಕೋ

ದಂಗೂ ಗೌಡ್ರು ನನ್ನ ಬಿಗಿಯಾಗಿ ಇಡ್ಕಂಡು, ಬೆಕ್ಕಿನ ಕೈನಾಗೆ ಸಿಕ್ಕಿದ್ದ ಗುಬ್ಬಿ ಮರಿ ಅಂಗಾಗೋದೆ! ನಾನು ಸೇಕ್ರಪ್ಪೋರ ಜತೆ ಒಂಟೋಕ್ಬೇಕಾಗಿತ್ತು. ಥೂ, ಈ ಆಳು ನಾಯಿ ಸಾವಾಸಕ್ಕಿಂತ ಅದೇ ಮೇಲು ಅನ್ನಿಸ್ತು. ಗೌಡ್ರು ಸೀರೆ ಕಿತ್ತಾಕಿದ್ರು ತಲೀ ಊವು ಕಿತ್ತಾಕಿದ್ರು ಇನ್ನೇನು ನನ್ಮೇಲೆ ಬೀಳ್ಬೇಕೂ ಸೌದೆ ಸೀಳಾಕಿಟ್ಟಿದ್ದ ಕುಡುಗೋಲು ಕಣ್ಣಿಗ್ಬಿತ್ತು ಅಂಗೇ ಇಂದೇ ಇಂದೇ ಓಗಿ ಕುಡುಗೋಲ್ನ ಕೈಗೆತ್ಕಂಡೆ

"ಓಗೋ, ಆಳ್ಮಂಡೇಮಗ್ನೇ ನನ್ನ ಮುಟ್ಟಿದ್ರೆ ಕಡ್ದಾಕ್ಬುಟ್ಟೇನು!" ನಾನು ಚಂಡಿ ಆಗೋಗಿದ್ದೆ ಗೌಡ್ರು ಅದ್ನ ಕಂಡು ಎದರಿದ್ರೂ ತೋರಲಿಲ್ಲ. ಅತ್ರ ಅತ್ರ ಬಂದ್ರು 'ಬ್ಯಾಡಾ ಕೆಳಗಾಕೂ, ನಿಂಗೆ ನಾಲ್ಕು ಸೇರು ಚಿನ್ನ ಬಂಗಾರ ಕೊಡ್ತೀನಿ ಬಂಗ್ಲೇ ಕಟಿಸ್ಕಡ್ತೀನಿ ! ನನ್ಮಾತ ಮೆಲ್ಗೆ ಬಂದು ಕೈನಾಗಿನ ಕುಡ್ಲು ಕಿತ್ಕೊಳ್ಳಾಕೆ ಬಗ್ದಾಗ ಕುಡ್ಗೋಲೆತ್ತಿ ತಲೆಮೇಲಾಕ್ಬುಟ್ಟೆ. ರಕ್ತ 'ಚಲ್' ಅಂತ ಆರ್ತು ಆ ಬುಡ್ಡಿ ದೀಪ್ದಾಗೆ ಗೌಡ್ರ ಮುಕ ಪಿಸಾಚಿ ಅಂಗೇ ಗೌಡ್ರ ತಲೆ ಪಿಶಾಚಿ ತಲೇ ಅಂಗೇ ಕಾಣ್ತಾಯಿತ್ತು ಅದ್ನ ನೋಡಿ ನಂಗೆ ಕೈಕಾಲು ನಡ್ಕ ಬಂದ್ಬುಡ್ತು. ಏನ್ಮಾಡ್ಬುಟ್ಟೆ! ಕೊಲೆ! ಮಾಡ್ಬುಟ್ಟೆ! ಕೈಲಿದ್ದ ಕುಡ್ಲು ರಕ್ತ ನನ್ನ ಕೈ ರಕ್ತ, ದೂರ್ದಾಗೆ ನೆಲದ್ಮ್ಯಾಕೆ ಬಿದ್ದಿದ್ದ ಸೀರೆ ಕೆಂಪು ರಕ್ತವಂಗೆ ಕಾಣ್ತಾ ಇತ್ತು ಗೌಡ್ರು ತರಿದಾಕಿದ ಕನ್ಕಾಂಬ್ರ ಊವು ಕೆಂಪು ರಕ್ತ. ಅಂಗೇ ತಲೆ 'ಧೀಂ' ಅಂದ್ಬುಡ್ತು. ಕೆಟ್ಟ ದನೀಲಿ ಕಿರಿಚ್ಕಂಡ್ಬುಟ್ಟೆ. ಕಣ್ಣು ಕತ್ಲು ಬಂದ್ಬುಡ್ತು. ಬಾಕ್ಲು ತಳ್ಳಿ ಒಳೀಕೆ ಕರಿಯ, ಅತ್ತೆ ಮಾವ, ಅಪ್ಪಯ್ಯ, ಅಜ್ಜ ಬಂದಾಗ ನಾನು ಅಂಗೇ ನಿಂತಿದ್ದೆ. ಅವ್ರ ಮುಕಾ ಎಲ್ಲಾ ಮುಂಜಿನಂಗಾಯ್ತು ಅಂಗೇಯ ಬಿದ್ಬುಟ್ಟೆ. ಆಮೇಲೇನಾಯ್ತು ನಂಗೇ ತಿಳೀನೇ ಇಲ್ಲ

ಈಗ ನಾನೊಬ್ಳು ಉಚ್ಮಂಡೆ. ಅಲ್ಲೀ, ಇಲ್ಲಿ ತಿರ್ಗ್ಯಾಡ್ಕಂಡು ಉಚ್ಚು ಚ್ಯಾಗೇ ಆಡ್ತೀನಿ ಒಂದೊಂದಪ ಸೇಕ್ರಪ್ಪ ಗೆಪ್ತಿ ಬಂದಾಗ ಅವ್ರ ಮಾತೂ ಗೆಪ್ತಿಗೆ ಬರುತ್ತೆ. ಊವು ಮುಡ್ಯಾಕಿರಾದು ಕಾಲ್ನಾಗೆ ತುಳ್ಯಾಕಲ್ಲ. ಊವು ದ್ಯಾವ್ರ ಪಾದ ಸೇರ್ಬೇಕು-! ನಾನೂ ದ್ಯಾವ್ರಿಗೆ ಸೇರ್ಬೋಳೇ ಅದ್ಕೇಯಾ ದೇವಸ್ಥಾನದಲ್ಲೇ ಮನ್ಗಾಡು, ಅವ್ರ ಮುಂದೇನೇ ಬಿಕ್ಸಾ ಬೇಡೂದು. ಎಲ್ಲೋದ್ರೂ ಅಲ್ಲೇ ಬಿಳಾದು. ನಾನು ಪಾವರ್ಗೆ ಖಿಟ್ಬೋಳು. ಒಂದೊಂದಪ

ನನ್ಮುಟ್ಟ್ನ ಕಡೇ ನೋಡ್ದಾಗ ಅಲ್ಲೇನೂ ಇಲ್ಲ  ಅಪ್ಪ ನೇಣಾಕಂತಿದ್ದ. ಅವ್ವ ಭಾವೀ ಆರಿದ್ಲು  ಎಲ್ಲಾ ಕುಸ್ದೋಗ್ಗತೆ ಎಲ್ಲ್ಯೋದ್ರೋ ಎಲ್ಲಾ ! ನನ್ನ ಬುಟ್ಟ್ಬುಟ್ಟು ದ್ಯಾವರ್ಗೆ ಒಪ್ಪಿಸ್ಬುಟ್ಟು....ಒಂಟೋಗವ್ರೆ ಅಂತ್ಕ್ಯಾತೀನೀ. ಅಳ್ಳೇಲಿ ಸಿಕ್ಕ ಊವೆಲ್ಲಾ ಕಟ್ಕಂಡು ಮುಡ್ಕ್ಯಾತೀನಿ. ಇಲ್ಲ ದ್ಯಾವರ ಅತ್ರ ತಂದುಕೊಡ್ತೀನಿ-ಆಗ ನಗು ಬರ್ತೈತೆ. ನಗ್ತಾನೇ ಇರ್ತೀನಿ...ನಗ್ತಾ ನಗ್ತಾ ಅಳಾ ಬರ್ತೈತೆ. ಅಳ್ತಾನೇ ಇರ್ತೀನಿ  ಎಲ್ಲೋ ದೂರ್ದಾಗೆ ಸೇಕ್ರಪ್ಪ ದ್ಯಾವರಂಗೆ ಆಕಾಸ್ದಲ್ಲಿ ಕಾಣಸ್ಕಂಡಾಗ ಅವ್ರಿಂದೆ ಓಡ್ತೀನಿ-ಕೆರೆ ನೀರ್ನಾಗೆ ಅವ್ರ ಮುಕ ಕಂಡಂಗಾಗಿ ಅವ್ರ ಇಂದೇನೇ ಓಡ್ತೀನಿ. ಕೆರೆ ನೀರು ತಣ್ಣಗಿದ್ರೇನೂ ಕೊಚ್ಚೆ ಇದ್ರೇನು ನಂಗೆ ಬೇಕಾಗಿರೋದು ನನ್ನ ದ್ಯಾವ್ರು-ಅವರ್ನ ತಡಕಾಡ್ತಾ ತಳ ಸೇರ್ತೀನಿ.

# ಅಜ್ಜಿ-ಮಾಡೆಲ್ 70

ರಿಟೈರ್ ಸೂಪರಿಂಟೆಂಡಿಂಗ್ ಇಂಜಿನಿಯರ್ ರಾಮರಾಯರು ರೈಲಿನಿಂದಿಳಿದು ಮನೆಗೆ ಮೂರು ತಿಂಗಳ ನಂತರ ಬಂದಿಳಿದಾಗ ವಿಸ್ಮಯದಿಂದ ಮೂಗಿನ ಮೇಲೆ ಬೆರಳಿಟ್ಟರು. ಮೂರು ತಿಂಗಳ ಸತತ ತೀರ್ಥಯಾತ್ರೆಯ ತಿರುಗಾಟದಲ್ಲಿ ತನ್ನ ಮನೆಯ ಗುರುತೇ ತನಗೆ ಮರೆತು ಹೋಯಿತೇ ಎಂದು ತಿರುಪತಿಯಲ್ಲಿ ಮುಡಿಕೊಟ್ಟು ಉಳಿದಿದ್ದ ಬರಿಯ ತಲೆಯನ್ನು ಸವರಿಕೊಂಡರು. "ಸಾರ್, ದುಡ್ಡು ಸಾರ್" ಎಂದು ರಿಕ್ಷಾದವನು ಕೇಳಿದಾಗಲೇ ರಾಯರಿಗೆ ತಾವಿಳಿದಿರುವುದು ಭೂಮಿಯ ಮೇಲೇ ಎಂದು ಅರಿವಾಯಿತು.

"ಏನಯ್ಯಾ ..ಇದು ಬೆಂಗಳೂರು ತಾನೆ ?..."

ರಿಕ್ಷಾದವನು ರಾಯರನ್ನು ಅಡಿಯಿಂದ ಮುಡಿಯವರೆಗೆ ನೋಡಿದ. ರೈಲ್ವೆ ಸ್ಟೇಷನ್ನಿನಲ್ಲಿ ಇಳಿದಾಗಲೇ ಖಚಿತ ಮಾಡಿಕೊಳ್ಳಬೇಕಾದ ಪ್ರಶ್ನೆ ಇದು. ರಾಯರು ಗಂಟಲು ಸರಿಮಾಡಿಕೊಂಡರು.

"ಇದು ಸೆಕೆಂಡು ಕ್ರಾಸು ತಾನೇ ?"

ಅದನ್ನೂ ಕೇಳುವ ಅಗತ್ಯವಿರಲಿಲ್ಲ. ಅದೇ ಮನೆಯ ಕಾಂಪೋಂಡು ಗೋಡೆಯ ಮೇಲೆ ಬರೆದಿತ್ತು. ರಿಕ್ಷಾದವನು ಅದನ್ನು ಓದಿ "ಹೌದು ಸಾರ್ .. ಇದೇ ಸೆಕೆಂಡ್ ಕ್ರಾಸು..." ಎಂದು ಅನಕ್ಷರಸ್ಥರಿಗೆ ಹೇಳುವ ಧೋರಣೆಯಲ್ಲಿ ಹೇಳಿ ರಾಯರು ತೆಪ್ಪನೆ ಬಾಡಿಗೆಯ ಹಣ ಅವನ ಕೈಗಿತ್ತು ಮನೆಯ ಕಡೆ ನೋಡುತ್ತಾ ನಿಂತಲ್ಲೇ ನಿಂತರು. ನಿಜ, ತಮ್ಮ ಮನ ಇದ್ದ ಜಾಗವೇ ಇದು. ಆದರೆ ಎದುರಿಗಿರುವುದು ತಮ್ಮ ಮನೆಯೆಂದು ಹೇಳಿಕೊಳ್ಳುವ ಧೈರ್ಯವಾಗಲಿಲ್ಲ. ಗೇಟಿನ ಬಳಿಯೇ ಇಟ್ಟಿದ್ದ ಸಾಮಾನುಗಳ ಮುಂದೆ ಮಂಕಾಗಿ ನಿಂತು ಮತ್ತೆ ಮತ್ತೆ ನೋಡಿದರು.

ಮೂರು ತಿಂಗಳ ಹಿಂದೆ ಇದ್ದ ಹೆಂಚಿನ ಮಹಡಿಯ ಮನೆ ಮಾಯವಾಗಿ

ಕಾಮನ ಬಿಲ್ಲಿನ ಬಣ್ಣಗಳನ್ನೆಲ್ಲಾ ಕದ್ದು ವೈಭವಿಸುತ್ತಾ ನಿಂತಂತಿದ್ದ ಬಂಗಲೆ.... ನವಿಲುಗರಿಯಂತೆ ರಂಗುರಂಗಾಗಿ ಹರಡಿಕೊಂಡಿದ್ದ ಪೋರ್ಟಿಕೋ, ಮನೆಯ ಸುತ್ತಮುತ್ತ ಕಿಟಕಿಗಳವರೆಗೆ ಅರೆ ಮುಚ್ಚಿರುವ ಬಣ್ಣ ಬಣ್ಣದ ಹೂವಿನ ಕುಂಡಗಳು ಕಿಟಕಿಯೊಳತಂದ ಗಾಳಿಗೆ ನವಿರಾಗಿ ಹಾರಾಡುತ್ತಿದ್ದ ತೆಳ್ಳನೆ ತೆರೆಗಳು. ಗೇಟಿನಿಂದ ಮನೆಯ ಮುಂಬಾಗಿಲಿನವರೆಗೆ ಇಕ್ಕೆಲದಲ್ಲಿ ಮೆದುವಾಗಿ ಬೆಳೆದ ಹಚ್ಚಹಸುರು ಹುಲ್ಲಿನ ನಡುವೆ ಕಿರಿದಾದ ಕೆಂಪು ಕಾಲುದಾರಿ. . ಬಲಗಡೆಯ ಮೂಲೆಯಲ್ಲಿ ನೀರು ತುಂಬಿದ್ದ ತೊಟ್ಟಿ–ತಾವು ಪೂಜೆಗೆಂದು ಆರಿಸುತ್ತಿದ್ದ ಪಾರಿಜಾತದ ಮರದ ಬದಲು ಅರೆನಗ್ನಳಾದ ಯಾವುದೋ ಸ್ತ್ರೀ ಶಿಲ್ಪ.. ಹೂವು ತುಂಬಿ ತುಳುಕುತ್ತಿದ್ದ ಸಂಪಿಗೆಯ ಮರದ ಬದಲು ಬಿಸಿಲು ಬಾರದಂತೆ ಅಗಾಧವಾಗಿ ಹರಡಿದ್ದ ಬಣ್ಣದ ದೊಡ್ಡ ಹಲಗೆಗಳ ಛತ್ರಿ... ಕೋತಿಗಳು ತುಂಬಿರುತ್ತಿದ್ದ ಸೀಬೆಯ ಮರದ ಬದಲು ಒಂದು ಕಲ್ಲಿನ ಬೆಂಚು

ಪಂಚವಟಿಯಂತಿದ್ದ ತನ್ನ ಮನೆ ತೋಟ ಮಾಯವಾಗಿ ಈ ಥಿಯೇಟರ್ ತೋಟ ಹೇಗೆ ಬಂತು...?

ತಾವಿಲ್ಲದಿದ್ದಾಗ ಭೂಕಂಪವಾಗಿ ಬೆಂಗಳೂರು–ತನ್ನ ಮಗಳು ಭಾಮಾ ಇದ್ದ ಬಾಸ್ಟನ್ ಅದಲು ಬದಲಾಯಿತೇ ಆಗಿರಲಾರದು...ಎಲ್ಲ ಮನೆಗಳೂ ಹಾಗೇ ಇವೆ ತನ್ನ ಮನೆ ಮಾತ್ರ ! ರಾಜಿ ಯಾರಿಗಾದರೂ ಮನೆ ಮಾರಿ ಬಿಟ್ಟಳೋ ? ತಾವು ಕಾಶಿ ವಿಶ್ವನಾಥನ ದರ್ಶನದಲ್ಲಿದ್ದಾಗ ತನಗೆ ಜೊತೆ ಯಿರುವುದರಿಂದ ಒಂದು ತಿಂಗಳು ಮುಂಚೆಯೇ ಭಾರತಕ್ಕೆ ಹೊರಟಿರುವುದಾಗಿ ಬರೆದಿದ್ದಳು ತಾನು ಅವಳಿಗೆ ಬರೆದಿದ್ದ ಕಾಗದದಲ್ಲಿ ತಾವು ತೀರ್ಥಯಾತ್ರೆ ಮುಗಿಸಿಯೇ ಮನೆಗೆ ಹಿಂತಿರುಗುವುದಾಗಿ ಬರೆದಿದ್ದರು...ಅದು ಸೇರಿತೋ ಇಲ್ಲವೋ ಅವಳಿಗೆ...

ಸಮವಸ್ತ್ರದ ಯುವಕನೊಬ್ಬನು ಎದುರಿಗೆ ನಿಂತಾಗಲೇ ರಾಯರು ಹಿಮಾಲಯದ ತಪ್ಪಲಿನಿಂದ ಬೆಂಗಳೂರಿಗೆ ಇಳಿದುದು

'ನಮಸ್ಕಾರ ಸಾರ್ ' ರಾಯರು ಮಿಕಿಮಿಕಿ ನೋಡಿದರು. ಖಾಕಿ ಸಮವಸ್ತ್ರವನ್ನು ಧರಿಸಿ ತಲೆಯನ್ನು ನುಣುಪಾಗಿ ಹಿಂದಕ್ಕೆ ಬಾಚಿ. ಕಾಲಿಗೆ ಕ್ಯಾನ್‌ವಾಸ್ ಶೂಗಳನ್ನು ಧರಿಸಿ ಎದುರಿಗೆ ನಿಂತಿದ್ದ ಖಾಸ್ ಬಂಗಲೆಯ ಕಾವಲುಗಾರನಂತಿದ್ದವನನ್ನು.

"ಗುರುತು ಸಿಗಲಿಲ್ವೆ ಸಾರ್. .! ಎಂದು ತಲೆ ಕೆರೆದುಕೊಂಡು ಹಲ್ಲು ಬಿಟ್ಟು ನಕ್ಕಾಗ ರಾಯರಿಗೆ ಥಟ್ಟನೇ ಗುರುತು ಸಿಕ್ಕಿತು.. .ರಂಗ...! ಹರಕಲು ಬನಿಯನ್ ನಿಕ್ಕರ್ ಧರಿಸಿ, ಆಗಾಗ್ಗೆ ಬರಿಗೈಯಿಂದ ತಲೆಯನ್ನು ಒರಟೊರಟಾಗಿ ಕೆರೆದುಕೊಂಡು ಓಡಾಡುತ್ತಿದ್ದ ಮನೆಗೆಲಸದ ರಂಗನ ಅವತಾರ ಬದಲಾಗಿದ್ದರೂ ಅವನು ನಕ್ಕಾಗ. ಸಂಪಿಗೆ ಮರದಿಂದ ಬಿದ್ದು ಮುಂದೆ ಮುರಿದಿದ್ದ ಹಲ್ಲು ರಾಯರಿಗೆ ಅವನ ಗುರುತು ಹಿಡಿಸಿತು

"ಲೋ...ರಂಗಾ . . ಇದೇನೋ ...ಇದು ಮನೆ ! . ನಂದೆ ತಾನೇ ?" ರಾಯರು ಕೇಳಬಾರದಿದ್ದನ್ನೇ ಕೇಳಿದರು.

"ಹೌದು ಸಾರ್...ಅಮ್ಮಾವರು ಅಮೇರಿಕಾದಿಂದ ಬಂದ್ ಮ್ಯಾಕೆ ಮನೇಗೆಲ್ಲಾ...ಬಣ್ಣ ಕಟ್ಸಿ ಕಂಡೀಸನ್ ಮಾಡಿಸವ್ರೆ.. ನಂಗೂ ಅವರೇ ಈ 'ಡಿರ್' ಕೊಟ್ರು..."

ರಂಗ ರಾಯರ ಸಾಮಾನುಗಳನ್ನೆಲ್ಲ ಎತ್ತಿಕೊಂಡು ರಾಯರು ಬಾಯಿ ಬಿಡುವುದರೊಳಗಾಗಿ ಒಳಗೆ ನಡೆದಿದ್ದ. ರಾಯರು ಸಾಕುನಾಯಿಯಂತೆ ಅವನನ್ನು ಹಿಂಬಾಲಿಸಿದರು ತಮಗೇ ಹೊಸದಾದ ವರಾಂಡದಲ್ಲಿ ಎಡ ಗಾಲಿಟ್ಟು ಪ್ರವೇಶಿಸಿದರು.

"ಕುಂತ್ಕೊಳ್ಳಿ ಸಾರ್. ನಿಮ್ದು ಸಾಮಾನೆಲ್ಲಾ ನಿಮ್ಮ ರೂಮ್ನಾಗೆ ಮಡಗಿಬಿಡ್ತೀನಿ...ಮೀನಮ್ಮಾ......ಅದೇ ಆಳೇ ಮೀನಾಕ್ಷಮ್ಮ ಬೋ ಪಸಂದಾಗಿ ಬ್ರೆಡ್ಡು ಬೆಣ್ಣೆ ಬ್ರೇಕ್‌ಪಾಸ್ ಮಾಡ್ತವ್ರೆ.. ಆಮೇಕೆ ಕಾಪಿ ತಿಂಡಿ ಮುಗ್ಸಿ ಅಮ್ಮಾವ್ರು ನೋಡ್ಕೊಂಬೀದೂ ಈಗ್ತಾನೇ ಎದ್ದು "ಲಿಸ್ಟ್" ತೊಗೊತಾ ಅವ್ರೆ .!" ರಂಗ ತಾನು ಕಲಿತಿದ್ದ ಇಂಗ್ಲಿಷ್ ಪದಗಳನ್ನು ನಿರ್ದಾಕ್ಷಿಣ್ಯವಾಗಿ ಉಪಯೋಗಿಸುತ್ತಿದ್ದ.

ತನ್ನ ಮನೆಯಲ್ಲಿ ತಾನೇ ಅತಿಥಿ ..ತನ್ನ ಹೆಂಡತಿಯನ್ನು ತಾನ್ನೇ ನೋಡಲು ಮಾಣಿರನೆಯುವನ ಸವ್ಮತಿ .! ರಾಯರಿಗೆ ತಾನು ತೀರ್ಥಯಾತ್ರೆಯಲ್ಲೇ ಇದ್ದಿದ್ದರೆ ಚೆನ್ನಾಗಿತ್ತು ಎನ್ನಿಸಿತು ಕೈಯಲ್ಲಿ ಹಿಡಿದಿದ್ದ ತೀರ್ಥ ಪ್ರಸಾದದ ಚೀಲವನ್ನು ಕೆಳಗಿಡುವುದರಲ್ಲಿ ಎದುರಿಗೆ ತಟ್ಟೆಯಲ್ಲಿ ಬ್ರೆಡ್ಡು, ಬೆಣ್ಣೆ, ಕಾಫಿ ಹಿಡಿದು ಬಂದಾಕೆಯನ್ನು ನೋಡಿ ರಾಯರಿಗೆ ಮತಿಗೆಟ್ಟು ಹೋಯಿತು....ತನ್ನ ಮನೆಯ ಅಡಿಗೆಯವಳು....ಮೀನಾಕ್ಷಮ್ಮ, ಕಚ್ಚೆ ಸೀರೆ

ರಾಯರು ಬಿಟ್ಟಕಣ್ಣು ಬಿಟ್ಟಂತೆ ನೋಡಿದರು. . ಮಗಳ ರೂಪಿನಲ್ಲಿದ್ದ ಮಡದಿಯನ್ನು, ಮಡದಿ ತಾನೆ? "ಇವರೇ ಏನೋ! ಅಮ್ಮಾವ್ರು ?" ಎಂದು ರಂಗನನ್ನು ಕೇಳಲು ತುಟಿಯವರೆಗೆ ಬಂದಿತ್ತು

"ಇದೇನೂಂದ್ರೇ ನನ್ನ ಗುರ್ತು ಸಿಕ್ಕಲಿಲ್ವೇ ?" ಕಷ್ಟದಿಂದ ಇಂಗ್ಲಿಷಿನ ಧಾಟಿಯಲ್ಲಿ ಕನ್ನಡದ ಪ್ರಶ್ನೆ

ರಾಯರು ತೊದಲಿದರು

, "ರಾಜಿ ಇ ಇದೇನೂ ನಿ ನಿನ್ನ ಗು ಗು ಗುರುತು ಸಿ...ಸಿ ..ಗುವುದೇ _ ಇ ಲ್ಲ ನೀ–ನೀನು–ಯು–ಯು–ಯಾರೋ ಅಂ...ತಿದ್ದೆ.. ಈ ಇ–ಇ ಳಿ–ವವ–ಯಸ್ಸಲ್ಲಿ . ಈ ." .

"ಶ್ . ಸಾಫ್ಟ್ ಆಗಿ ಮಾತಾಡಿ . ಮಗು ಅತ್ತು ಈಗ್ತಾನೇ ಮಲ್ಗಿದೆ "

ರಾಯರಿಗೆ ನವಚೇತನದ ಮಿಂಚು ಹರಿದಂತಾಯಿತು

"ರಾಜೀ .ಎಂಥ ಕೆಲ್ಸ ಮಾಡಿಬಿಟ್ಯೇ! ನಂಗೆ ತಿಳ್ಯಬಾರ್ದಿತ್ತಾ ? ನಂಗೆ ಗೊತ್ತೇ ಆಗಲಿಲ್ಲ. ನನ್ನ ಬುದ್ಧಿಗಷ್ಟು... ಹೀಗೇಂತ ತಿಳಿದಿದ್ರೆ ನಾನು ತೀರ್ಥ ಯಾತ್ರೆಗೇ ಹೋಗಿರ್ತಿರ್ಲಿಲ್ಲ ನಿಧಾನ್ವಾಗಿ ಇಬ್ರೂ ಹೋಗ್ಬೋದಿತ್ತು..." ಎದೆ ತುಂಬಿ ಬಂದು ನುಡಿದರು

"ಏನೂಂದ್ರೇ .. ನೀವೂ ಹೇಳ್ತಾ ಇರೋದೂ...! ನಿಮ್ಮ ಬುದ್ಧಿಗಷ್ಟು! ಅದ್ಕೇ ಅಲ್ವೇ ನಿಮ್ಮನ್ನ ರಿಟೈರ್ ಮಾಡ್ಸಿದ್ದೂ ಕೆಲ್ಸದಿಂದ... ಇದೂ ಭಾವಾ ಮಗೂಂದ್ರೇ ನಿಮ್ಮ ಮೊಮ್ಮಗ್ಳು !"

"ಭಾವಾದೂ ..!!" ರಾಯರು ಹತ್ತಿರದಲ್ಲಿದ್ದ ಕುರ್ಚಿಯಲ್ಲಿ ಕುಸಿದರು

"ಭಾವಾಗೆ ಮಗೂ ಹುಟ್ದಾಗಿಂದ ಒಂದ್ನಿಮಿಷ ಪುರುಸೊತ್ತಿಲ್ಲ ಒಂದಿನ ಪಾರ್ಟಿ, ಮತ್ತೊಂದು ದಿನ ಪಿಕ್‌ನಿಕ್ಕು, ಇನ್ನೊಂದಿನ ಕ್ಲಬ್ಬೂ... ಪಾಪ! ಮಗೂನ ಏನು ನೋಡ್ಕೊಂಡಾಳೂ...ಇನ್ನೂ ಓಡಾಡ್ಕೊಂಡಿರೋ ವಯಸ್ಸು. ಅದೂ ಅಲ್ದೇ...ಮಗೂನ ನೋಡ್ಕೊಳ್ಳೋಕೆ ಯಾರೂ ಒಳ್ಳೇ ಬೇಬಿ ಸಿಟ್ಟರ್ಸ್ ಸಿಗೋಲ್ಲ... ಅದ್ಕೇ ನಾನು..."

"ಅಲ್ಕಣೇ...ಅವ್ಳ ಮಗು ಅವಳತ್ರ ಇಲ್ದೇ...ಅಮ್ಮನ್ನ ನೆನಸ್ಕೊಂಡು

ಅತ್ರೀ ಏನ್ಮಾಡೋದೇ ! ಪ್ಲೇನ್ ಹತ್ಸಿ ಅಲ್ಲಿಗೇ ವಾಪಸ್ ಕಳಿಸೋಕ್ಕಾಗುತ್ತ್ಯೇ . ?"

"ಅದ್ನ ಯೋಚಿಸಿಲ್ವಾ ನಾನೂ ನಂಗೂ ಗೊತ್ತ್ತಾಂವ್ರೇ. .ಮಗೂಗೆ ಎಂಥ ವಾತಾವರಣ ಬೇಕೂ, ಅದರ ಕಣ್ಣಿಗೆ ಯಾವುದು ಹಿತ ಅಂತ ನಂಗೆ ತಿಳೀದೇ ಅಮೆರಿಕಾದಲ್ಲಿ ಭಾಮನ ಮನೆ ಹೆಚ್ಚುಕಡಿಮೆ ಹೀಗೇ ಇರೋದೂಂವ್ರ !"

"ಅದ್ಸರಿ ಕಣೇ...ಮನೇನೆಲ್ಲಾ ಹೀಗೆ ರೀಮಾಡಲ್ ಮಾಡಿದ್ಯಲ್ಲಾ ನಿಂಗೆ ದುಡ್ಡೆಲ್ಲಿತ್ತು ನಿನ್ನಳಿಯ ಡಾಲರ್ ಲೋನ್ ಕೊಟ್ನೇನೇ ?"

"ಬಹಳ ಚೆನ್ನಾಗಿದ ನೀವೂ ಮಾತಾಡೋದೂ...!" ಮಡದಿ ಕಾಡಿಗೆ ಹಚ್ಚಿದ್ದ ಕಣ್ಣುಗಳನ್ನರಳಿಸಿದಳು

"ಅಲ್ಲಾಂದ್ರೇ ನಿಮಗಂತೂ ಸರ್ವೀಸಿನಲ್ಲಿದ್ದಾಗ ಬರೀ ಬೀದಿ ರಿಪೇರಿ, ಬ್ರಿಡ್ಜ್ ರಿಪೇರಿ ಮಾಡಿಕೊಡೋದ್ರಲ್ಲೇ ಬುದ್ಧಿಯೆಲ್ಲಾ ಖರ್ಚಾಗಿ ಹೋಯ್ತು ಇನ್ನು ಖರ್ಚಾಗದೇ ಕಡೇ ತನ್ಕಾ ಉಳಿದದ್ದು ಅಂದ್ರೇ ನಿಮ್ಮ ಪ್ರಾವಿಡೆಂಟ್ ಫಂಡು . ಗ್ರಾಚುಯಿಟೀ.. ನನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಹಾಕಿದ್ರಲ್ಲಾ. ನೀವು ಮೂವತ್ತು ವರ್ಷದಲ್ಲಿ ಮಾಡೋಕ್ಕಾಗದ್ದೇ ಇದ್ದದ್ದು.. ನಾನು ಮೂವತ್ತೇ ದಿನದಲ್ಲಿ ಮಾಡಿಸಿದ್ದೀನಿ ನೋಡಿ '' ಎಂದು ಕೊರಳು ಕೊಂಕಿಸಿದಾಗ ರಾಯರು ತಾವು ಈಗ ಇನ್ನು ಮೇಲೆ ನೋಡಬೇಕಾದುದ್ದು ಮನೆಯ ಹೊಸ ಅವತಾರವನ್ನೋ ಅಥವಾ ಮಡದಿಯ ಹೊಸ ಅವತಾರವನ್ನೋ ಅಥವಾ ಮಡದಿಯ ಹೊಸ ಅವತಾರವನ್ನೋ ಎಂದ. ತೆಪ್ಪನೆ ಕುಳಿತು ಯೋಚಿಸುತ್ತಿದ್ದಾಗ ತೊಟ್ಟಿಲಿನ ಮಗು ಎದ್ದು ಅತ್ತ ಸದ್ದು ಕೇಳಿ ರಾಯರಲ್ಲಿ ತೀರ್ಥಯಾತ್ರೆಯಲ್ಲಿ ಕಳೆದುಹೋಗಿದ್ದ ವಾಂಛಲ್ಯ ಮಮತೆ ಉಕ್ಕಿ ಬಂದು, ತೊಟ್ಟಿಲಿನಲ್ಲಿದ್ದ ಮಗುವನ್ನೆತ್ತಿ ಮುದ್ದಿಟ್ಟರು.

# ಅಭಿನಯ

ಉರಿಯುತ್ತಿದ್ದ ದೀಪಗಳೆಲ್ಲಾ ತಟ್ಟನೆ ಆರಿದವು ಆ ಕತ್ತಲಿನ ಲೋಕವೇ ಬೇರೆ ತನ್ನ ಎದುರಿಗಿದ್ದ ಕುರ್ಚಿ ಅವಳನ್ನು ಮುಕ್ಕಾಲು ಮರೆ ಮಾಡಿದ್ದರೂ ಆ ಮಬ್ಬುಗತ್ತಲೆಯಲ್ಲಿ ತನ್ನನ್ನು ಮತ್ತಾವ ಬೇರೆ ಸ್ವಪ್ನ ಲೋಕಕ್ಕೆ ಕರೆದೊಯ್ಯುತ್ತಿದೆ? ಕಣ್ಣುಗಳು ಅವಳನ್ನು ಬಿಟ್ಟು ಬೇರೆಲ್ಲೂ ಕೇಂದ್ರೀಕರಿಸಲು ಸಾಧ್ಯವಾಗುತ್ತಿಲ್ಲ. ಉಟ್ಟಿದ್ದ ತಿಳಿಗೆಂಪು ಸೀರೆಯು ನ ಮೇಲೆ ರಭಸದಿಂದ ತಿರುಗುತ್ತಿದ್ದ ಪಂಖದಿಂದಾಗಿ ಅರುಣಗಾಗದ ಅಲೆಗಳಂತೆ ಉಬ್ಬಿಳಿಯುತ್ತಿತ್ತು ಆ ಮಸುಕು ಬೆಳಕಿನಲ್ಲಿ, ತಿಂಗಳ ಬೆಳಕಿನಲ್ಲಿ ಕಾಣುವ ಅಮೃತಶಿಲೆಯಲ್ಲಿ ಕೆತ್ತಿದಂತಿದ್ದ ಅವಳ ಮಾಟವಾದ ಕೊರಳು, ಅದರ ಮೇಲೆ ಅಲೆಅಲೆಯಾಗಿ ನಿಂತಿದ್ದ ಕರಿಗೂದಲು, ಆ ಅಲೆಗೂದಲಿಂದ ಅಲ್ಪಸ್ವಲ್ಪವಾಗಿ ಕಾಣುತ್ತಿದ್ದ ಪುಟ್ಟ ಕಿವಿಗಳು, ಅವುಗಳಿಂದ ತೂಗಿಬಿದ್ದ ಹೊನ್ನ ಗೊಂಚಲು, ಅವಳು ಪಕ್ಕದಲ್ಲಿ ಕುಳಿತಿದ್ದವರ ಜೊತೆ ಮಾತಾಡುವಾಗ, ತಲೆಯಲುಗಿಸಿದಾಗ ನೀರಿನಲ್ಲಿ ಪ್ರತಿಬಿಂಬಿಸುವ ಹೊಂಬಿಸಿಲ ಕಿರಣದಂತೆ ಹೊಳೆಯುತ್ತಿತ್ತು

"ಓಹ್, ಏನು ಚೆಲುವು, ಸೊಬಗು! ಮಧುರ! ಸೃಷ್ಟಿಕರ್ತ ಕಲೆಯ ಚೆಲುವೆಲ್ಲಾ ಇವಳಿಗೇ ಮುಕ್ತಹಸ್ತದಿಂದ ನೀಡಿದಂತಿದೆ ಕುರ್ಚಿಯ ಮೇಲೆ ಒರಗಿದ್ದ ಆ ಕೈಗಳು ಬಿಳಿಯ ರೇಶಿಮೆಯ ಪ್ರತೀಕ, ಅವಳುಟ್ಟಿರುವ ರೇಶಿಮೆಯ ಸೀರೆಗಿಂತ ನುಣುಪು ಆ ಕೈಗಳು ಒಮ್ಮೆ ಬಗ್ಗಿ ನುಣುಪನ್ನು ಪರಿಶೀಲಿಸ ಬೇಕೆಂಬ ಚಪಲ, ಒಮ್ಮೆ ವಿನಾಕಾರಣವಾಗಿ ಹಿಂದಿರುಗಿ ನೋಡಿದಾಗ ತನ್ನ ಮಿಂಚು ಮೈಯಲ್ಲಿ ಮಿಂಚು ಹೊಳೆದಂತಾಗುತ್ತಿದೆ ಆ ಮೂಗು ನುಣ್ಣಗಿಲ್ಲ. ಆ ಪುಟ್ಟಮಧು ಬಟ್ಟಲಂತಿದ್ದ ತುಟಿಗಳು

ತಾನು ದುಂಬಿ, ಅವಳು ವಸಂತದ ಅರೆಬಿರಿದ ಹೂವಾಗಬಾರದೇಕೆ?

ಥಿಯೇಟರಿನ ಮಂದಗತ್ತಲಲ್ಲಿ ಅವಳು ಮುಂಜಾವಿನ ಕನಸಿನಂತೆ ಮಿಂಚು

ಮಂಜಾಗಿ ಕಂಡಾಗ ತಾನು ಮಧುಮಾಸದ ದುಂಬಿಯಂತೆ ಮೈಮರೆತಾಗ...

ತೆರೆಯ ಮೇಲೆ ಅವನು ಕಂಡದ್ದು, ಅವಳು ಹೂದೋಟದಲ್ಲಿ ವಿಹರಿಸು ತ್ತಿದ್ದಾಗ ಅವನು ಅವಳನ್ನು ಕಂಡು ಮೂಕನಾಗಿ ನಿಂತಾಗ, ಅವಳು ಅವನನ್ನು ಕಂಡು ಯಾವ ಜನ್ಮದ ಮೈತ್ರಿಯನ್ನೋ ಕಂಡಂತೆ ನೋಡಿದಾಗ, ಅವರಿಬ್ಬ ರಲ್ಲೂ ಜನ್ಮಜನ್ಮದ ಸೋಂಕೋ, ಒಬ್ಬರನ್ನೊಬ್ಬರು ನೋಡುತ್ತಾ ಮೈ ಮರೆಯುತ್ತಾರೆ ಹಾಗೆಯೇ ತಾನೂ ಇವಳೂ ತನ್ನನ್ನು ಕಂಡು ಒಮ್ಮೆ ಹಾಗೆಯೇ ತುಂಬುಗಣ್ಣಿನಿಂದ ನೋಡಿದರೆ ತನ್ನ ಮನಸ್ಸು ಗಾಳಿಯಲ್ಲಿ ತೇಲಿ ಬಿಟ್ಟ ತುಂಡು ಮೋಡದಂತೆ ತೇಲಿಹೋಗುತ್ತಿದೆ

ಅವನು ತೆರೆಯ ಮೇಲೆ ಅವಳ ಕೊರಳನ್ನಪ್ಪಿ ನಿಂತಂತೆ ತಾನೂ ಇವಳ ಕೊರಳನ್ನು ತನ್ನ ಬಾಹುಬಂಧನದಲ್ಲಿ ಬಳಸಿ ನಿಂತರೆ. ಅವನಂತೆ ತಾನೂ ಇವಳ ಏರಿಳಿವ ಎದೆಯಲ್ಲಿ ಮುಖ ಹುದುಗಿಸಿಟ್ಟು ತನ್ನ ಸುತ್ತಮುತ್ತಲಿನ ಪ್ರಪಂಚವನ್ನೇ ಮರೆತರೆ. ಆದನ್ನೆಲ್ಲಾ ಮೆಲುಕು ಹಾಕಿದಾಗ, ಮಧುರ ರಸಧಾರೆಯಲ್ಲಿ ಮಿಂದ ಒಂದು ಹೊಸ ಅನುಭವನಾಗುತ್ತಿದೆ

ತೆರೆಯ ಮೇಲೆ ಕಾಣುತ್ತಿದ್ದ ಆ ಹಚ್ಚಹಸುರಿನ ವನಶ್ರೀ ಕಿರಿದಾದ ಕಣಿವೆ...ಅದರಲ್ಲಿ ನುಗ್ಗಿ ಹರಿವ ತಿಳಿನೀರು, ಬೀಸುವ ಸುಳಿಗಾಳಿ, ಬಂಡೆಯ ಮೇಲೆ ಅವರಿಬ್ಬರೂ ಒರಗಿ ತಮ್ಮಿಬ್ಬರ ಪ್ರತಿಬಿಂಬವನ್ನು ತಿಳಿನೀರಿನಲ್ಲಿ ಕಂಡು ನಗುತ್ತಿದ್ದಾರೆ ಅವನ ಬಾಹುಗಳಲ್ಲಿ ಅವಳು ಪ್ರಪಂಚಮರೆತಿದ್ದಾಳೆ ಉನ್ಮಾದದ ಕೊನೆಯ ಹಂತವಾಗಿ ಅವರಿಬ್ಬರ ತುಟಿಗಳೂ ಹತ್ತಿರ ಬಂದಾಗ ಮರದಿಂದ ಬಿದ್ದ ಹೂಗೊಂಚಲೊಂದು ನೀರಿನಲ್ಲಿ ಕಾಣುತ್ತಿದ್ದ ಅವರಿಬ್ಬರ ಪ್ರತಿಬಿಂಬ ಗಳನ್ನು ಕದಡಿಬಿಡುತ್ತಾ ಇದೆ ಹಾಗೇ ತಾನೂ, ಇವಳೂ ಅಂತಹುದೇ ಕಣಿವೆ ಅದೇ ಪ್ರಕೃತಿ, ಆದೇ ಬಂಡೆ, ಆದೇ ಪ್ರತಿಬಿಂಬ. ಕಣ್ಣಲ್ಲಿ ಕಣ್ಣು, ತುಟಿಗೆ ತುಟಿ, ಊಹುಂ ಯಾವ ಹೂಗೊಂಚಲೂ ತಮ್ಮಿಬ್ಬರ ರಸಭಂಗ ಮಾಡಲಾರದು.

ಅವನು ಅಲ್ಲಿ ಸೋತು ಆರಾಮಾಸನದಲ್ಲಿ ಒರಗಿದ್ದಾನೆ ಅವಳು ಬಂದುದು ತಿಳಿದೂ ತಿಳಿಯದಂತೆ ಕುಳಿತಿದ್ದಾನೆ ಅವಳು ಸೋಗೆ ನಡೆಯಿಂದ ಅವನ ಹಿಂದೆ ಬಂದು ನಿಂತು ಅವನ ತಲೆಗೂದಲಲ್ಲಿ ಕೈಯಾಡಿಸಿ "ಯಾಕೆ ನನ್ನ ಹಕ್ಕಿ ಏನು ಕನಸು ಕಾಣುತ್ತಿದೆ?" ಎನ್ನುತ್ತಾಳೆ ಅವನು ಅವಳ ಮೇಲೊರಗಿ ಅವಳ ಕೈ ತನ್ನ ಕೈಯಲ್ಲಿರಿಸಿ "ನನ್ನ ಕನಸು ನನಸು ಎಲ್ಲಾ ನೀನಾಗಿರುವಾಗ

ನಾನೇನು ಕನಸು ಕಾಣಬಲ್ಲೆ ?" ಎಂದು ಕೇಳುತ್ತಾನೆ ಹಾಗೇ ತಾನೂ ಆಫೀಸಿನಿಂದ ಸೊರಗಿ ಬಂದು ಹಾಗೇ ಒರಗಿದಾಗ ಇವಳು ಸೊಬಗಿ, ತನ್ನ ಹಿಂದೆ ಒಂದು ನಿಂತು, ತನ್ನ ತಲೆಯ ಮೇಲೆ ಕೈಯಾಡಿಸಿ, ಹಾಗೆಯೇ ಕೇಳಿದರೆ ಆಗ . ಕನಸೇನು, ನವನೇನು...ಅದೇ ಜೀವನ, ಅದೇ ಬದುಕು, ಅದೇ ಸ್ವರ್ಗ, ಅದೇ ಮೋಕ್ಷ

ಅವಳಿಗೂ ಅವನಿಗೂ ಏನೋ ವೈಮನಸ್ಸು ಅವನಿಗೂ ಅವಳಿಗೂ ವಾಗ್ಯುದ್ಧ ಅವಳ ಕಣ್ಣಲ್ಲಿ ನೀರು ಕಂಡ ಕೂಡಲೇ ಅವನು ಮೆತ್ತಗಾಗು ತ್ತಾನೆ ಅಳುತ್ತಿದ್ದ ಅವಳನ್ನು ಆಲಂಗಿಸಿ ಕೆನ್ನೆಗೆ ಕೆನ್ನೆಯಿಟ್ಟಾಗ ಕಣ್ತುಂಬಿ ಬಂದರೂ ನಗುತ್ತಾಳೆ ಬಿಸಿಲು ಮಳೆ ಕರೆದ ಹಾಗೆ, ಅವರ ಪ್ರೇಮದ ಕಾಮನಬಿಲ್ಲೊಂದು ಹೆಣೆದಾಗ ತಾನೂ ಹಾಗೆಯೇ ಇವಳೊಂದಿಗೆ ಕಲಹವಾಡಿ ದಾಗ, ಅವಳ ಕಣ್ಣಲ್ಲಿ ನೀರು ಮಿಡಿದಾಗ ಇವಳನ್ನು ಹಾಗೆಯೇ ಮುದ್ದಿಸಿ ಇವಳ ಕಣ್ಣಲ್ಲಿ ಬಿಸಿಲು ಮಳೆ ಕಂಡು ಕಾಮನಬಿಲ್ಲು ಕಂಡು ಮೈಮರೆತರೆ...

ಅವನು ಅಲ್ಲಿ ಹಾಸಿಗೆಯ ಮೇಲೆ ನಿದ್ರೆ ಬಂದಂತೆ ನಟಿಸಿ ಮಲಗಿದ್ದಾನೆ. ಅವಳು ಕೈಯಲ್ಲಿ ಕಾಫಿ ಹಿಡಿದು ಬಂದು ಹಣೆಯ ಮೇಲೆ ಮುತ್ತೊಂದನ್ನಿಟ್ಟು ಎಬ್ಬಿಸಿ ಕಾಫಿ ನೀಡುತ್ತಾಳೆ ಅವನು ಅದನ್ನು ಗುಟುಕರಿಸಿ ಮುಖ ಹಿಂಡು ತ್ತಾನೆ. ಅವಳು ನಕ್ಕು ಏಕೆಂದು ಕೇಳಲು ಅವನು ಅದು ಕಹಿಯೆನ್ನುತ್ತಾನೆ. ಅವಳು ತುಂಟ ನಗೆ ಬೀರಿ ಅವನ ಕೈಯಿಂದ ಕಾಫಿಯನ್ನು ತೆಗೆದುಕೊಂಡು ಕೊಂಚ ಕುಡಿದು ಕೊಡುತ್ತಾಳೆ ಅವನು ಆಗ ಕಾಫಿ ಅಮೃತವೆಂದು ಹೇಳು ತ್ತಾನೆ ತಾನು ಕುಡಿಯುವ ಕಾಫಿಯನ್ನೂ ಇವಳು ಪ್ರತಿದಿನವೂ ಹೀಗೆ ಅಮೃತಪ್ರಾಯವಾಗಿ ಮಾಡಿಕೊಟ್ಟರೆ ತಾನು ಕಾಫಿಯೊಂದನ್ನೇ ಕುಡಿದು ಚಿರಂಜೀವಿಯಾಗಬಹುದಾದರೆ..

ಹೀಗೆ ಪರಸ್ಪರ ಭೇಟಿ, ನೋಟದಲ್ಲೇ ಪ್ರೇಮಾಲಾಪ, ಪ್ರಣಯಗೀತೆ ಮುಗಿಲೆತ್ತರಕ್ಕೆ ಏರಿದಾಗ, ಮೂರನೆಯವನ ಪ್ರವೇಶ, ಅವಳನ್ನು ಕದ್ದು ನೋಡುತ್ತಾನೆ ಅವಳ ಮನಸ್ಸು ಕದಿಯಲು ಹೋಗಿ ನಿರಾಶನಾಗುತ್ತಾನೆ. ಅವಳಿಂದ ವರ್ಜಿತನಾದ ಮೇಲೆ ಅವಳ ಮೇಲೆ ಸೇಡು ಕ್ರೋಧ ಮನೆಮಾಡು ತ್ತವೆ. ಅವಳೊಬ್ಬಳೇ ಇರುವ ಸಮಯ ಸಾಧಿಸಿ ಅವಳನ್ನು ಬಲಾತ್ಕರಿಸಲು

ಹೋಗುತ್ತಾನೆ, ಆಕಸ್ಮಿಕವಾಗಿ ಅತ್ತ ಕಡೆ ಬಂದ ಆವಳ ಪ್ರೇಮಿ ಆ ಖಳನಿಂದ ಪಾರುಮಾಡುತ್ತಾನೆ ಅವಳಿಗಾಗಿ ಹೋರಾಡಿ ಗಾಯಗೊಂಡ ಅವನನ್ನು ಅವಳು ದೇವರು ಎಂದು ಭಾವಿಸುತ್ತಾಳೆ ಅವನ ಕಾಲ ಬಳಿ ಕುಸಿಯುತ್ತಾಳೆ

ತಾನೂ ಹಾಗೆಯೇ ಜೀವನದಲ್ಲಿ ಯಾವ ಮೂರನೆಯವನಿಗೂ ಪ್ರವೇಶ ಕೊಡುವುದಿಲ್ಲ ಜೀವನದಲ್ಲಿ ಎಡರುತೊಡರು ಬಂದು ಅವಳ ಪ್ರೇಮವನ್ನು ಭಗ್ನಗೊಳಿಸಲು ಬಂದಾಗ ಅವುಗಳೊಂದಿಗೆ ಹೋರಾಡಿ ಅವಳನ್ನು ತನ್ನ ಹೃದಯ ಮೂರ್ತಿಯಾಗಿಟ್ಟುಕೊಂಡರೆ...

ವಿರಾಮ ಕಾಲದ ದೀಪಗಳು ಜಗ್ಗನೇ ಹತ್ತಿದಾಗ ತಾನು ಕನಸಿನ ಲೋಕದಿಂದ ಎಚ್ಚೆತ್ತಿದ್ದು, ತನ್ನ ಮಾನಸಿಕ ಆಂದೋಲನ, ಮುಖದಲ್ಲಿ ಪ್ರತಿಬಿಂಬಿಸಿದರೆ, ತನ್ನ ಪಕ್ಕದಲ್ಲಿ ಇರುವವರು ನೋಡಿದರೆ ಬೆವತ ಮುಖವನ್ನು ಕರವಸ್ತ್ರದಿಂದ ಮುಚ್ಚಿಕೊಳ್ಳುತ್ತಾ "ಥೂ ಎಷ್ಟು ಸಕೆ ಒಳಗೆ " ಎಂದೆನ್ನುತ್ತಾ ಹೊರಗೆ ಎದ್ದು ಹೋಗುತ್ತಾನೆ ಸಿಗರೇಟು ಪ್ಯಾಕೊಂದನ್ನು ಕೊಂಡು ಒಡಲಲ್ಲಿ ಅಗ್ನಿಯಾಗಿ ಉರಿಯುತ್ತಿದ್ದ ಬಯಕೆಯನ್ನು ಹೊಗೆಯಾಗಿ ಮಾರ್ಪಡಿಸಿ ಹೊರಗೆಡಹಲು ಪ್ರಯತ್ನಿಸುತ್ತಾನೆ ಆದರೆ ಸಿಗರೇಟಿನ ಹೊಗೆ ಗಂಟಲಿಗೆ ಇಳಿದಾಗ ಒಳಗಿನ ಅಗ್ನಿ ಬಡಬಾಗ್ನಿಯಾಗಿ ಉರಿಯುತ್ತಾ ಇದೆ ಸುರುಳಿಸುರುಳಿಯಾಗಿ ಹೊರಗೆ ಬಂದ ಹೊಗೆಯು ಬಿಳಿಯ ತುಂಡು ಮೋಡದಂತೆ, ಅದರೊಡನೆ ತನ್ನ ಅವಳದೇ ಆದ ಭಾವನಾ ಲೋಕ, ತಾನೂ ಅವಳೂ ತಾವಿಬ್ಬರೇ ಆ ಗುಜು ಗುಜು ಗುಂಪಿನಲ್ಲೂ ತಾನೂ ಏಕಾಂಗಿಯಾಗಿ ತನ್ನ ಭಾವುಕತೆಯ ಮಡಿಲಲ್ಲಿ ಜನರ ಕಂಗಳಿಂದ ಮರೆಯಾಗಿದ್ದಾನೆ ತಾನು ಚಿತ್ರಕ್ಕೆ ಹೊರಡುವ ಮುನ್ನ ಕನ್ನಡಿಯ ಮುಂದೆ ಮುಕ್ಕಾಲು ಗಂಟೆ ಕಳೆದಿರಲಿಲ್ಲವೆ ? ತಾನು ಯಾರಿಗೆ ಕಡೆಮೆ ? ತನಗಿಂತ ಯಾರು ಹೆಚ್ಚು? ತನ್ನ ತಿದ್ದಿದ ಕಣ್ಣು, ಮೂಗು, ಬಾಯಿ, ತಲೆಯ ಮೇಲೆ ಕಿರೀಟಪ್ರಾಯವಾದ ತೀಡಿ ಬಾಚಿದ್ದ ಗುಂಗುರು ಕೂದಲಿನ ಕ್ರಾಪು, ವಿಶಾಲವಾದ ಹಣೆ, ಅಧಿಕಾರವನ್ನೆತ್ತಿ ತೋರುವ ನಿಡಿದಾದ ಮೂಗು, ಮಾದಕ ನಗೆಯನ್ನು ಅಡಗಿಸಿಟ್ಟಿರುವ ಗೀರು ಮೀಸೆಯ ಕೆಳಗಿನ ಮಾಟವಾದ ದರ್ಪದ ತುಟಿಗಳು ಕೀಟಲೆ ತುಂಬಿದ ಕಂಗಳು, ಭವ್ಯ ನಿಲುವು ಧರಿಸಿದ್ದ ಕರಿಯ ಟೆರಿಲಿನ್ ಷರಾಯಿ ಮತ್ತು ಗರಿಗರಿಯಾದ ಬಿಳಿಯ ಟೆರಿಕಾಟ್ ಷರಟು....ಕಾಲಿನಲ್ಲಿ ಮಿರುಗುವ

ಶೂ ಕೈಯಲ್ಲಿ ಚಿನ್ನದ ಸರಪಳಿಯು ಕೈಗಡಿಯಾರ ನವಿರಾಗಿ ಕತ್ತಿನ ಸುತ್ತಲೂ ಹಾಕಿದ ಪೌಡರಿನ ಸುವಾಸನೆ ಹುಂ ಕಾಲೇಜಿನ ದಿನಗಳಲ್ಲಿ ತಾನು 'ರೋಮಿಯೊ' ಎಂದು ಹೆಸರು ಪಡೆದಿರಲಿಲ್ಲವೇ ? ಈಗಲೂ ಆಫೀಸಿನಲ್ಲಿ ಎಷ್ಟು ಮಂದಿ ತರುಣಿಯರು ತನ್ನನ್ನು ಬಲೆಗೆ ಬೀಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ ಪ್ರಯತ್ನಿಸುತ್ತಾ ಇಲ್ಲ ! ಅವರ ಕಾತುರತೆ ತನ್ನಿಂದ ಅವರ ಸೌಂದರ್ಯ ಬಿಂಕ ಬಿನ್ನಾಣಗಳನ್ನು ಹೊಗಳಿಸಿಕೊಳ್ಳಲು ಕಾಯುವ ಹಂಬಲ, ತಾನು ಮನಸ್ಸು ಮಾಡಿದರ ಆ ನಸುಗೆಂಪು ಸೀರೆಯಂತಹ ನೂರಾರು ಮಂದಿ ತರುಣಿಯರನ್ನು ಬಲೆಗೆ ಹಾಕಿಕೊಳ್ಳಬಹುದು,

ಬಾಗಿಲು ಮುಚ್ಚಿದ ಶಬ್ದದಿಂದ ಎಚ್ಚೆತ್ತು ಹತ್ತಿ ಉರಿಯುತ್ತಿದ್ದ ಎರಡನೇ ಸಿಗರೇಟನ್ನು ಕಾಲಿನಡಿಯಲ್ಲಿ ಹೊಸಕಿ ಒಳಗೆ ನಡೆಯುತ್ತಾನೆ ಮತ್ತೆ ಆ ನಸು ಕತ್ತಲಿನ ಲೋಕಕ್ಕೆ

ಅವರಿಬ್ಬರೂ ಅಲ್ಲಿ ನೀರಿನಲ್ಲಿ ದೋಣಿಯಲ್ಲಿ ಇಬ್ಬರೇ ಹೋಗುತ್ತಿದ್ದಾರೆ. ಅವನಿಗೆ ಆಗದವರು ದೋಣಿಯಲ್ಲಿ ತೂತು ಮಾಡಿದ್ದಾರೆ ಹೊಂಗನಸು, ಹಗಲುಗನಸಿನಲ್ಲಿ ಮೈ ಮರೆತು ಇಬ್ಬರೂ ಅದನ್ನು ಗಮನಿಸಿಲ್ಲ ದೋಣಿಯಲ್ಲಿ ನೀರು ತುಂಬಲಾರಂಭಿಸಿದಾಗ ಕನಸೊಡೆದು ವಾಸ್ತವತೆಯನ್ನರಿತಾಗ ದೋಣಿ ಅರ್ಧ ಮುಳುಗಿರುತ್ತದೆ ಅದು ಮಗುಚಿ ಅವಳು ನೀರಿನಲ್ಲಿ ಮುಳುಗುತ್ತಾಳೆ . ಅವನೂ ನೀರಿನಲ್ಲಿ ಮುಳುಗಿ ಇಬ್ಬರೂ ಜಲ ಸಮಾಧಿಯಾಗುವ ಮುನ್ನ ಅವಳನ್ನು ದಂಡೆಗೆ ತರುತ್ತಾನೆ. ಮೃತ್ಯುವಿನ ದವಡೆಯಲ್ಲಿ ಸಿಲುಕಲಿದ್ದ ಪ್ರೇಯಸಿಯನ್ನು ನಿಟ್ಟಿಸುತ್ತಾನೆ

ತಾನೂ ಹಾಗೆಯೇ ಇವಳನ್ನೇ ನಿಟ್ಟಿಸುವಾಗ ತನ್ನ ಮನಸ್ಸಿನಲ್ಲಿ ಯಾವ ಮಧುರ ಭಾವನೆಗಳು ತೋರಬಹುದು ? ಈ ಜೀವ ಪ್ರತಿಮೆಯನ್ನು ಕಡೆದ ಶಿಲ್ಪಿಯನ್ನು ಅಭಿನಂದಿಸುತ್ತಿರಬಹುದೇ ? ದೇವಲೋಕದ ಶಾಪಗ್ರಸ್ತ ಅಪ್ಸರೆಯಂತಿದ್ದವಳು ಜಲದಲ್ಲಿ ಮುಳುಗಿ ಮರಣವನ್ನಪ್ಪುವುದೆಂದರೇನು ?... ಕವಿ ಕಲ್ಪನೆಯ ಸುಂದರ ಕಾವ್ಯವೇ ಮೂರ್ತಿವೆತ್ತಂತಾಗಿರುವ ಇವಳಿಗೆ ಸಾವೆಂದರೇನು ಇವಳನ್ನು ಎಂದಿಗೂ ತನ್ನಿಂದ ದೂರ ಮಾಡಲು ಸಾಧ್ಯವಿಲ್ಲ. ತಮ್ಮ ಬಾಳದೋಣಿಯಲ್ಲಿ ಯಾವ ತೂತೂ ಬಿರುಕೂ ಆಗಲು ಬಿಡುವುದಿಲ್ಲ. ತುಂಬು ಹೊಳೆಯಂತೆ ಇರಬೇಕು. ತಿಳಿ ನೀರಿನಲ್ಲಿ ತೇಲುವ ದೋಣಿಯಂತಿರ

ಬೇಕು. ಹಾಡುವ ಹಾರುವ ಹಕ್ಕಿಯಂತೆ ಇರಬೇಕು. ಬೆಳದಿಂಗಳ ರಾತ್ರಿಯಂತೆ. ಚೈತ್ರದ ಹಗಲಂತೆ...

ತೆರೆಯ ಮೇಲೆ ಕಾಣುತ್ತಿದ್ದಂತಹ ಭವ್ಯ ಬಂಗಲೆಯಲ್ಲಿ ತಾವಿಬ್ಬರೇ ಒಟ್ಟಿಗೇ ಅವರಂತೆಯೇ ಹಾಯಾಗಿ ಇರುವುದಾದರೆ . ಅವರಂತೆಯೇ ತಾವಿಬ್ಬರೂ ಕಾರಿನಲ್ಲಿ ಗಾಳಿಗೆ ಮೈಗೊಟ್ಟು ಬೆಟ್ಟ ಬಯಲುಗಳಲ್ಲಿ ನಲಿದಾಡಿದರ ...ಅವಳಂತೆಯೇ ಇವಳು ಒಂದೊಂದು ದಿನ ಒಂದೊಂದು ರೀತಿಯ ಲ್ಲಿ ಅಲಂಕರಿಸಿಕೊಂಡು ತನ್ನ ಮುಂದೆ ಸುಳಿದಾಡಿದರೆ . ಅವನಂತೆಯೇ ತಾನೂ ಅವಳ ಹಿಂಬಾಲಿಸಿ ಅವಳ ಸೌಂದರ್ಯೋಪಾಸಕನಾದರೆ.. ಅವಳು ಜೇನು, ತಾನು ಸಿಹಿ. ಅವಳು ಚಂದ್ರ, ತಾನು ಚಂದ್ರಿಕೆ, ಅವಳು ಹೂವು, ತಾನು ಕಂಪು...ಹೀಗೆ ಒಬ್ಬರಿಗಾಗಿ ಒಬ್ಬರು, ಒಬ್ಬರಿಂದಾಗಿ ಮತ್ತೊಬ್ಬರು ಆದರೆ ...ಎಂತಹ ಸೊಗಸು, ಜೀವನ

ಅಲ್ಲಿ ಅವರಂತೆಯೇ ತಮ್ಮಿಬ್ಬರ ಕನಸೆಲ್ಲಾ ನನಸಾಗಿ ಸುಖಾಂತವಾದರೆ ಹಾಡುತ್ತಾ, ನಲಿಯುತ್ತಾ ಎಲ್ಲರಿಂದ ದೂರವಾಗಿ, ಬಹು ದೂರವಾಗಿ, ತಾವಿಬ್ಬರೇ ಆದರೆ...

ಪ್ರಾರಂಭವಾದ 'ಜನಗಣಮನ'ದಿಂದ ತಾವಾಗಿಯೇ ತನ್ನ ಕಾಲುಗಳು ಸ್ಥಿರವಾಗಿ ನಿಲ್ಲುತ್ತವೆ ಕೈಗಳು ತಾವಾಗಿಯೇ ಎದೆಯ ಮೇಲೆ ಒಂದನ್ನೊಂದು ಕಟ್ಟಿಕೊಳ್ಳುವುವು ಕನಸಿನ ಲೋಕ ಹಿಂದೆ, ಬಹಳ ಹಿಂದೆ ಮುಂಜಾವಿನ ಕನಸಿನಂತೆ ಮನದಲ್ಲಿ ಮಾಗುತ್ತಾ ಬರುತ್ತಿದೆ ನಸುಗೆಂಪು ಸೀರೆಯ ಚೆಲುವೆ ಸಾವಿರ ಜನದಲ್ಲಿ ಒಬ್ಬಳಾಗುತ್ತಾಳೆ ತೆರೆಯು ಚಿತ್ರ ರಹಿತವಾದ ಬಿಳಿಯ ಪರದೆಯಾಗುತ್ತದೆ ತಟ್ಟನೆ ದೀಪಗಳೆಲ್ಲಾ ಮತ್ತೆ ಉರಿಯತೊಡಗುತ್ತವೆ ಮನದಲ್ಲಿ ಕವಿದಿದ್ದ ಬಯಕೆ, ಆಸೆ, ಆಕಾಂಕ್ಷೆ, ಆ ಮಾದಕತೆ ಉನ್ಮಾದವೆಲ್ಲಾ ಮಂಜಿನಂತೆ ಕರಗಿಹೋಗುತ್ತಾ ಇದೆ ತಾನು ಯಾರು ? ಎಲ್ಲಿರುವೆ ? ಎಂಬ ಅರಿವು ಮೆಲ್ಲನೆ ತನ್ನನ್ನು ವಾಸ್ತವ ಜಗತ್ತಿಗೆ ತರುತ್ತಿದೆ ತನ್ನ ಪಕ್ಕದಲ್ಲಿ ನಿಂತಿದ್ದ ಮುದ್ದಾದ ಮಡದಿಯು ಕಡೆಗೆ ತಿರುಗಿ "ಚಿತ್ರ ಹೇಗಿತ್ತು ?" ಎಂದು ಕೇಳುತ್ತಾನೆ ಅವಳು ಮುಗುಳ್ನಗುತ್ತಾ 'ಅಭಿನಯ ಬಹಳ ಚೆನ್ನಾಗಿತ್ತು' ಎಂದು ಹೇಳುತ್ತಾಳೆ. ತನ್ನ ಮಡದಿಯ ಕೈ ಹಿಡಿದು "ಬಾ ಚಿನ್ನ , ಹೋಗೋಣ ಮನೆಗೆ" ಎನ್ನುತ್ತಾನೆ.

ಇದೇ ಲೇಖಕಿಯ ನಮ್ಮ ಪ್ರಕಟಣೆಗಳು

ಮರೆವು

ಅಭಿನಯ

ಹಕ್ಕಿ ಹಾರುತಿದೆ

ಒಲವಿನ ಬದುಕು

ಪ್ರೀತಿಸಿ ನೋಡು

ಸೌಂದರ್ಯ ಸಂಕಿರಣ


ವರ್ಧಮಾನ ಪ್ರಕಾಶನ

ಬೆಂಗಳೂರು

Cover Ptd by : Bhaskar Printers, B-53 Ph. 75467